₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಶನಿವಾರ 22.02.2025** **ಸಂಪುಟ:** 10 **ಸಂಚಿಕೆ:** 39 **ಪುಟಗಳು:** 12 **ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್**

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೇರಳ, ವಿದರ್ಭ ರಣಜಿ ಫೈನಲ್‌ಗೆ

ರಣಜಿ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿ ಇತಿಹಾಸ ಸೃಷ್ಟಿಸಿದ ಕೇರಳ, ಮುಂಬಯಿ ವಿರುದ್ಧ ಗೆದ್ದ ವಿದರ್ಭ

ಸೊಂಪಾದ ಪುಟಗಳು

ಬಾಲಿವುಡ್‌ನಲ್ಲಿ ನೈಜಕಥೆಗಳ ಭೂಕಂಪನ

ವೀಕೆಂಡ್ ವಿತ್ ಮೋಹನ್ ಮೋಹನ್ ವಿಶ್ವ 6

ಆಂತರಿಕ ರಿಪುಗಳು ಅರಿಷಡ್ವರ್ಗವಾದರೆ, ಬಾಹ್ಯ ರಿಪುಗಳಾರು ಬಲ್ಲಿರಾ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ ಡಾ. ಸಾಧನಾ ಶ್ರೀ 7

ರಾಮಕೃಷ್ಣ ಹೆಗಡೆ ಮತ್ತು ನನ್ನ ಅನುಬಂಧ ಪೂರ್ವಜನ್ಮದ ಬಂಧ!

ಅಂತಾರಾಷ್ಟ್ರೀಯ ಖ್ಯಾತಿಯ ಭರತನಾಟ್ಯ ಕಲಾವಿದೆ

ಪ್ರತಿಭಾ ಪ್ರಹ್ಲಾದ್‌ರ ವಿಶೇಷ ಸಂದರ್ಶನ 7

ದಾರಿದೀಪೋಕ್ತಿ

ನಿಮ್ಮ ಬಗ್ಗೆ ಬೇರೆಯವರು ಯಾವುದೇ ಅಭಿಪ್ರಾಯವನ್ನು ಹೊಂದಿರಲು ಸ್ವತಂತ್ರರು. ಅದನ್ನು ಬದಲಿಸಲು ನಿಮ್ಮಿಂದ ಸಾಧ್ಯವಿಲ್ಲ. ಅಷ್ಟಕ್ಕೂ ಅವರು ನಿಮ್ಮ ಬಗ್ಗೆ ಯಾವ ಅಭಿಪ್ರಾಯ ಹೊಂದಿದ್ದರೂ ಅದು ನಿಮ್ಮ ಸಮಸ್ಯೆ ಅಲ್ಲ.

ವಕ್ರತುಂಡೋಕ್ತಿ

ಅಡುಗೆ ಮಾಡುವುದು ಒಂದು ಅದ್ಭುತ ಕಲೆ. ಇದನ್ನು ಬೇರೆಯವರು ಮಾಡಿದರೇ ಚೆಂದ.

ಕಾಶ್ ಪಟೇಲ್ ಎಫ್‌ಬಿಐ ನಿರ್ದೇಶಕ



ವಾಷಿಂಗ್ಟನ್: ಅಮೆರಿಕದ ತನಿಖಾ ಸಂಸ್ಥೆ ಫೆಡರಲ್ ಬ್ಯುರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ನಿರ್ದೇಶಕರಾಗಿ ಭಾರತ ಮೂಲದ ಕಾಶ್ ಪಟೇಲ್ ನೇಮಕಗೊಂಡಿದ್ದಾರೆ. ಸೆನೆಟ್‌ನಲ್ಲಿ ನಿರ್ದೇಶಕರ ಹುದ್ದೆಗೆ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಪಟೇಲ್ ಪರ 51 ಮತ್ತು 49 ವಿರೋಧ ಮತಗಳನ್ನು ಪಡೆದಿದ್ದರು. ಈವರೆಗೆ ಎಫ್‌ಬಿಐ ಮುಖ್ಯಸ್ಥರಾಗಿದ್ದ ಕ್ರಿಸ್ಟೋಫರ್ ವ್ರೇ ಅವರ ಜಾಗಕ್ಕೆ ಪಟೇಲ್ ನೇಮಕ ಗೊಂಡಿದ್ದಾರೆ. ಇವರ ಅವಧಿ 10 ವರ್ಷ ಇರಲಿದೆ. ಕಾಶ್ ಪಟೇಲ್ ತಂದೆ-ತಾಯಿ ಗುಜರಾತ್ ಮೂಲದವರು.

ಮಾತಂದ್ರೆ ಮಾತು

ಕೇಂದ್ರ ಸರಕಾರಕ್ಕೆ ಇನ್ನೂ ನಾಲ್ಕು ವರ್ಷಗಳ ಅಧಿಕಾರವಧಿ ಇದೆ. ದೇಶ ಇನ್ನಾದರೂ ಅಭಿವೃದ್ಧಿ ಕಾಣಲು ಸಚಿವ ನಿತಿನ್ ಗಡ್ಕರಿ ಪ್ರಧಾನಿಯಾದರೆ ಒಳಿತು. ದೇಶವನ್ನು ಒಬ್ಬರೇ ನಡೆಸಲು ಸಾಧ್ಯವಿಲ್ಲ.

- ಸಂತೋಷ್ ಲಾಡ್ ಕಾರ್ಮಿಕ ಸಚಿವ

ಫನ್‌ತರಂಗ

- ರಘುಪತಿ ಶೃಂಗೇರಿ -



ಮೋದಿ ವಿರುದ್ಧ ಬಿಡೆನ್ ಸರಕಾರ ಸಂಚು: ಟ್ರಂಪ್ ಹೇಳಿಕೆಯಿಂದ ಸಂಚಲನ

ಅಮೆರಿಕ ಹಣದ ಬಗ್ಗೆ ತನಿಖೆ?

ದೆಹಲಿ: 'ಭಾರತದಲ್ಲಿ ಬೇರೊಂದು ಸರಕಾರವನ್ನು ಅಸ್ತಿತ್ವಕ್ಕೆ ತರುವ ಉದ್ದೇಶದಿಂದ, ಜೋ ಬೈಡನ್ ಸರಕಾರವು 21 ಮಿಲಿಯನ್ ಅಮೆರಿಕನ್ ಡಾಲರ್ ಹಣ ನೀಡಿದೆ' ಎಂಬ ಅಮೆರಿಕ ಅಧ್ಯಕ್ಷ ಡೊಲಾಲ್ಡ್ ಟ್ರಂಪ್ ಅವರ ಹೇಳಿಕೆ ಭಾರತದಲ್ಲಿ ಭಾರೀ ಕೋಲಾಹಲಕ್ಕೆ ಕಾರಣವಾಗಿದ್ದು, ಈ ಕುರಿತು ತನಿಖೆ ನಡೆಯುವ ಸಂಭವ ಇದೆ.

ಈ ವಿಚಾರವಾಗಿ ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ನಡುವೆ ವಾಕ್ಸಮರ ಶುರುವಾಗಿದ್ದು, ಡೊನಾಲ್ಡ್ ಟ್ರಂಪ್ ಉಲ್ಲೇಖಿಸಿರುವ ಬೇರೊಂದು ಸರಕಾರ ಯಾರದ್ದು? ಎಂಬ ಪ್ರಶ್ನೆ ಉದ್ಭವವಾಗಿದೆ.

ಅಂತಾರಾಷ್ಟ್ರೀಯ ಅಭಿವೃದ್ಧಿಗಾಗಿನ ಅಮೆರಿಕದ ಏಜೆನ್ಸಿಯ (ಯುಎಸ್‌ಎಐಡಿ) ನಿಧಿ ವಿಚಾರವಾಗಿ ಕಾಂಗ್ರೆಸ್ ವಿರುದ್ಧ ತೀವ್ರ ಟೀಕಾಪ್ರಹಾರ ನಡೆಸಿರುವ ಬಿಜೆಪಿ, 'ರಾಹುಲ್ ಗಾಂಧಿ ಅವರು ಪ್ರಧಾನಿ ಮೋದಿ ಅವರನ್ನು ಸೋಲಿಸಲು ವಿದೇಶಿ ಶಕ್ತಿಗಳ ನೆರವು ಪಡೆದುಕೊಳ್ಳುತ್ತಿದ್ದಾರೆ' ಎಂದು ಆರೋಪಿಸಿದೆ.

ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, 'ಟ್ರಂಪ್ ಅವರು 2012ರ ಯುಎಸ್‌ಎಐಡಿ ಬಗ್ಗೆ ಮಾತನಾಡುತ್ತಿದ್ದು, ಆಗ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಅಸ್ತಿತ್ವದಲ್ಲಿತ್ತು. ಕಾಂಗ್ರೆಸ್ ತನ್ನದೇ ಸರಕಾರವನ್ನು ಉರುಳಿಸಲು ಅಮೆರಿಕದಿಂದ ಹಣಕಾಸು ನೆರವು ಪಡೆಯಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದೆ. ಒಟ್ಟಿನಲ್ಲಿ ಯುಎಸ್‌ಎಐಡಿ ವಿರುದ್ಧದ ಡೊನಾಲ್ಡ್ ಟ್ರಂಪ್ ಅವರ ಸಮರ, ಭಾರತದ ರಾಜಕಾರಣದಲ್ಲಿ ತೀವ್ರ ಸಂಚಲನ ಮೂಡಿಸಿದೆ.

ಟ್ರಂಪ್ ಹೇಳಿದ್ದೇನು?

ಭಾರತದಲ್ಲಿ ಚುನಾವಣೆಗಾಗಿ 21 ಮಿಲಿಯನ್ ಡಾಲರ್ ಕಳುಹಿಸಲಾಗಿದೆ. ಈ ದುಡ್ಡಿನ ಬಗ್ಗೆ ನಮ್ಮಲ್ಲಿ ಯಾರಿಗೂ ಮಾಹಿತಿಯೇ ಇಲ್ಲ. ಇದೊಂದು ಕಿಕ್‌ಬ್ಯಾಕ್ ಯೋಜನೆ ಎಂಬುದು ನನ್ನ ಅನುಮಾನ. ಭಾರತದಲ್ಲಿ ಮತದಾನ ಪ್ರಮಾಣ ಹೆಚ್ಚಿಸುವುದು ಅಮೆರಿಕದ ಜವಾಬ್ದಾರಿಯಲ್ಲ. ಭಾರತೀಯರು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಷ್ಟು ಸಮರ್ಥರಿದ್ದಾರೆ. ಅವರ ಚುನಾವಣೆ ಬಗ್ಗೆ ನಾವೇಕೆ ತಲೆಕೆಡಿಸಿಕೊಳ್ಳಬೇಕು. ನಮ್ಮಲ್ಲಿಯೇ ಸಾಕಷ್ಟು ಸಮಸ್ಯೆಗಳಿವೆ. ಅವರ ಬಳಿ ಸಾಕಷ್ಟು ಹಣವಿದೆ. ಅಲ್ಲಿ ಮತದಾನ ಪ್ರಮಾಣ ಹೆಚ್ಚಳಕ್ಕೆ ಅಮೆರಿಕನ್ ನಾಗರಿಕರ ತೆರಿಗೆ ಹಣ ಬಯಸುವುದು ತಪ್ಪಲ್ಲವೇ..? ಅಮೆರಿಕದ ಹಣ ಅಮೆರಿಕನ್ನರ ಅಭಿವೃದ್ಧಿಗಾಗಿ ಇದೆ ಎಂದು ಅಮೆರಿಕದ ಅಧ್ಯಕ್ಷರು ಹೇಳಿದ್ದಾರೆ.

ವಿದೇಶಿ ಹಸ್ತಕ್ಷೇಪ ಕಳವಳಕಾರಿ: ಜೈಸ್ವಾಲ್

ದೇಶದಲ್ಲಿನ ಕೆಲವು ಚಟುವಟಿಕೆಗಳಿಗೆ ಯುಎಸ್‌ಎಐಡಿ ಧನಸಹಾಯ ಲಭಿಸಿರುವ ವಿಷಯ ಬಹಿರಂಗಗೊಂಡಿರುವುದು ತೀವ್ರ ಆಘಾತ ಉಂಟುಮಾಡಿದೆ ಮತ್ತು ತನ್ನ ಆಂತರಿಕ ವ್ಯವಹಾರಗಳಲ್ಲಿ ವಿದೇಶಿ ಹಸ್ತಕ್ಷೇಪದ ಬಗ್ಗೆ ಕಳವಳಕ್ಕೆ ಕಾರಣವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ಅಮೆರಿಕದ ಏಜೆನ್ಸಿಗಳ ಚಟುವಟಿಕೆಗಳು ಮತ್ತು ಹಣಕಾಸಿನ ನೆರವಿಗೆ ಸಂಬಂಧಿಸಿದಂತೆ ಅಮೆರಿಕ ಸರಕಾರ ನೀಡಿರುವ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗಳು ಮತ್ತು ಅಧಿಕಾರಿಗಳು ಪರಿಶೀಲಿ ಸುತ್ತಿದ್ದಾರೆ. ಯುಎಸ್‌ಎಐಡಿಗೆ ಸಂಬಂಧಿಸಿದಂತೆ ಅಮೆರಿಕವು ನೀಡಿರುವ ಮಾಹಿತಿಯನ್ನು ನಾವು ಗಮನಿಸಿದ್ದೇವೆ. ಇವು ನಿಸ್ಸಂಶಯವಾಗಿ ಬಹಳ ಕಳವಳದ ವಿಚಾರ ಎಂದಿದ್ದಾರೆ.

ಅಮೆರಿಕದ ಅಧ್ಯಕ್ಷರು ಸಂಪೂರ್ಣ ಜವಾಬ್ದಾರಿಯೊಂದಿಗೆ ಬಹಿರಂಗಪಡಿಸಿರುವ ಮಾಹಿತಿಯನ್ನು ನೋಡಿ ದಿಗ್ಭ್ರಮೆಗೊಂಡಿದ್ದೇನೆ. ದೇಶದ ಪ್ರಜಾಪ್ರಭುತ್ವ ಮತ್ತು ಚುನಾವಣಾ ವ್ಯವಸ್ಥೆಯ ಪಾವಿತ್ರ್ಯತೆಗೆ ಧಕ್ಕೆ ಉಂಟುಮಾಡುವ ಪ್ರಯತ್ನದ ಭಾಗ ಇದು.
- ಜಗದೀಪ್ ಧನಕರ್, ಉಪರಾಷ್ಟ್ರಪತಿ

ನೆರವು ಭಾರತಕ್ಕೆ ಅಲ್ಲ ಬಾಂಗ್ಲಾಕ್ಕೆ: ಖೇರಾ

ಯುಎಸ್‌ಎಐಡಿ ₹182 ಕೋಟಿ ನೆರವನ್ನು ಬಾಂಗ್ಲಾದೇಶಕ್ಕೆ ನೀಡಿದೆಯೇ ಹೊರತು ಭಾರತಕ್ಕಲ್ಲ ಎಂದು ಪತ್ರಿಕೆಯೊಂದು ಕೆಲವು ದಾಖಲೆಗಳನ್ನು ಒದಗಿಸಿ ವರದಿ ಮಾಡಿದೆ. ಇದರ ಬೆನ್ನಲ್ಲೇ ಕಾಂಗ್ರೆಸ್ ಪಕ್ಷವು ಬಿಜೆಪಿ ಮೇಲೆ ಹರಿಹಾಯ್ದಿದ್ದು, ಸುಳ್ಳು ಸುದ್ದಿ ಹಬ್ಬಿಸಿದ್ದಕ್ಕೆ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದೆ. ಕಾಂಗ್ರೆಸ್ ನೇತೃತ್ವದ ಹಿಂದಿನ ಸರಕಾರಗಳನ್ನು ಅಸ್ಥಿರಗೊಳಿಸಲು ವಿದೇಶದಿಂದ ಹಣಕಾಸಿನ ನೆರವು ಪಡೆದಿದ್ದ ಬಿಜೆಪಿ ಇದೀಗ ಗಮನ ಬೇರೆಡೆ ಸೆಳೆಯಲು ಈ ಸಂಕಥನ ಹೆಣೆದಿದೆ ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಆರೋಪಿಸಿದ್ದಾರೆ. ಅಮೆರಿಕ ನೆರವು ನೀಡಿರುವುದು ಬಾಂಗ್ಲಾದೇಶಕ್ಕೆ ಎಂಬುದನ್ನು ಅಧಿಕೃತ ದಾಖಲೆಗಳು ಸಾಬೀತುಪಡಿಸಿವೆ. ಮೋದಿ ಅವರ ಆತ್ಮೀಯ ಸ್ನೇಹಿತ ಟ್ರಂಪ್ ಬಹುಶಃ ಅರಿತೋ ಅಥವಾ ಅರಿಯದೆಯೋ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಹೇಳಿದ್ದಾರೆ.

ಅಪಘಾತದ ಹಿನ್ನೆಲೆ ಹಣ ಬಿಡುಗಡೆ ವಿಳಂಬ: ಸಚಿವೆ

ವಾರದೊಳಗೆ ಗೃಹಲಕ್ಷ್ಮಿ ಹಣ

ಬೆಂಗಳೂರು: ರಸ್ತೆ ಅಪಘಾತದಿಂದಾಗಿ ವಿಶ್ರಾಂತಿಯಲ್ಲಿದ್ದುದ್ದರಿಂದಾಗಿ ಗೃಹಲಕ್ಷ್ಮಿ ಯೋಜನೆಯ ಹಣ ಸಂದಾಯವಾಗಲು ವಿಳಂಬವಾಗಿದೆ. ಈಗಾಗಲೇ ಅಧಿಕಾರಿಗಳಿಗೆ ಆದೇಶ ನೀಡಿದ್ದು, ಇನ್ನೊಂದು ವಾರದಲ್ಲಿ ಫಲಾನುಭವಿಗಳ ಖಾತೆಗೆ ಹಣ ಸಂದಾಯವಾಗಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದ್ದಾರೆ.

ಬೆಳಗಾವಿಯ ಗೃಹ ಕಚೇರಿಯಲ್ಲಿ ಮಾತನಾಡಿದ ಅವರು, ತಾಲೂಕು ಪಂಚಾಯಿತಿ ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಬಿಡುಗಡೆ ಮಾಡಲಾಗುವುದು. ಇದುವರೆಗೆ ಬೆಂಗಳೂರಿನ ಕೇಂದ್ರ ಕಚೇರಿ ಮೂಲಕ ಹಣ ಬಿಡುಗಡೆ ಮಾಡಲಾಗುತ್ತಿತ್ತು. ಇದನ್ನು ವಿಕೇಂದ್ರೀಕರಣ ಮಾಡುವ ನಿಟ್ಟಿನಲ್ಲಿ ತಾಲೂಕು ಪಂಚಾಯಿತಿ ಮೂಲಕ ಹಣ ಬಿಡುಗಡೆ ಮಾಡಿ, ನಂತರ ನಮ್ಮ ಇಲಾಖೆಯ ಶಿಶು ಯೋಜನಾಭಿವೃದ್ಧಿ ಅಧಿಕಾರಿಗಳ (ಸಿಡಿಪಿಒ) ಖಾತೆಗೆ ಹಣ ವರ್ಗಾವಣೆ ಮಾಡಲಾಗುತ್ತದೆ. ಇನ್ನೊಂದು ವಾರದಲ್ಲಿ ಹಣ ಬಿಡುಗಡೆ ಮಾಡುವಂತೆ ಸೂಚಿಸಿದ್ದೇನೆ ಎಂದರು.

ಪ್ರತಿಪಕ್ಷದವರಿಗೆ ಮಾತನಾಡುವುದನ್ನು ಬಿಟ್ಟರೆ ಬೇರೆ ಏನೂ ಬರುವುದಿಲ್ಲ. ಗ್ಯಾರಂಟಿ ಯೋಜನೆಗಳಿಂದ ಸರಕಾರ ದಿವಾಳಿಯಾಗುತ್ತದೆ ಎಂದು ಹೇಳಿಕೊಂಡೇ ನಮ್ಮ ಯೋಜನೆಗಳನ್ನು ಕಾಪಿ ಮಾಡಿಕೊಂಡು ಬೇರೆ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿದ್ದಾರೆ.
- ಲಕ್ಷ್ಮಿ ಹೆಬ್ಬಾಳ್ಕರ್ ಸಚಿವೆ

ಪಿಎಂ ಕಿಸಾನ್ ಹಣ

ಸೋಮವಾರ ಬಿಹಾರದ ಬಾಗಲ್ಪುರದಲ್ಲಿ ನಡೆಯಲಿರುವ ರೈತ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಪಿಎಂ ಕಿಸಾನ್ ಸಮ್ಮಾನ್ ಯೋಜನೆಯ 19ನೇ ಕಂತಿನ ಹಣ ಬಿಡುಗಡೆ ಮಾಡಲಿದ್ದಾರೆ. ಒಟ್ಟು 22,000 ಕೋಟಿ ರು. ವರ್ಗಾವಣೆ ಮಾಡಲಾಗುತ್ತಿದ್ದು, 9.8 ಕೋಟಿ ರೈತರು ನೇರ ಲಾಭ ಪಡೆಯಲಿದ್ದಾರೆ ಎಂದು ಕೇಂದ್ರ ತಿಳಿಸಿದೆ.

ಅಪಘಾತ: ಕುಂಭಮೇಳಕ್ಕೆ ತೆರಳಿದ್ದ ಐವರ ಸಾವು

- ವಾರಾಣಸಿ ಸಮೀಪ ಶುಕ್ರವಾರ ನಸುಕಿನ ಜಾವ ಅಪಘಾತ
- ಹೆದ್ದಾರಿ ಬದಿಯಲ್ಲಿ ನಿಂತಿದ್ದ ಲಾರಿಗೆ ಕ್ರೂಸರ್ ಡಿಕ್ಕಿ
- ಘಟನೆಯಲ್ಲಿ ಏಳು ಮಂದಿಗೆ ಗಂಭೀರ ಗಾಯ

ಬೀದರ್: ಉತ್ತರ ಪ್ರದೇಶದ ವಾರಾಣಸಿ ಸಮೀಪ ಶುಕ್ರವಾರ ನಸುಕಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬೀದರ್‌ನ ಐದು ಜನ ಸ್ಥಳದಲ್ಲೇ ಮೃತಪಟ್ಟಿದ್ದು, ಏಳು ಜನ ಗಂಭೀರ ವಾಗಿ ಗಾಯಗೊಂಡಿದ್ದಾರೆ. ನಗರದ ಲಾಡಗೇರಿ ನಿವಾಸಿಗಳಾದ ಲಕ್ಷ್ಮಿ (57), ನೀಲಮ್ಮಾ (62), ಸಂತೋಷ ಕುಮಾರ (45), ಸುನೀತಾ (40), ಕಲಾವತಿ (40) ಮೃತಪಟ್ಟವರು. ಸುಲೋಚನಾ, ಸುಜಾತಾ, ಕವಿತಾ, ಅನಿತಾ, ಖುಷಿ, ಗಣೇಶ, ಸಾಯಿ, ಭಗವಂತ ಹಾಗೂ ಶಿವಾ ಗಾಯಗೊಂಡವರು.

ಫೆ.18ರಂದು ಕ್ರೂಸರ್ ವಾಹನದಲ್ಲಿ ಬೀದರ್‌ನಿಂದ 14 ಜನ ಪ್ರಯಾಗರಾಜ್‌ಗೆ ತೆರಳಿದ್ದರು. ಕುಂಭ ಮೇಳದ ಪುಣ್ಯಸ್ನಾನ ಮಾಡಿ, ವಾರಾಣಸಿಗೆ ಭೇಟಿ ಕೊಟ್ಟು ಹಿಂತಿರುಗುವಾಗ ವಾರಾಣಸಿಯ ರೂಪಾಪುರ ಬಳಿ ಹೆದ್ದಾರಿ ಬದಿಯಲ್ಲಿ ನಿಂತಿದ್ದ ಲಾರಿಗೆ ಕ್ರೂಸರ್ ಡಿಕ್ಕಿ ಹೊಡೆದಿದ್ದು, ಸ್ಥಳದಲ್ಲೇ ಐವರು ಮೃತಪಟ್ಟಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

ಮೃತಪಟ್ಟವರ ಕುಟುಂಬಕ್ಕೆ ಸಚಿವ ಈಶ್ವರ ಖಂಡ್ರೆ ಐದು ಲಕ್ಷ ರು. ಪರಿಹಾರ ಘೋಷಿಸಿದ್ದಾರೆ. ಕುಂಭ ಮೇಳಕ್ಕೆ ಹೋದ ಕನ್ನಡಿಗರ ಪೈಕಿ ಈವರೆಗೂ 18 ಜನ ಮೃತಪಟ್ಟಿದ್ದಾರೆ.

ಬೆಟ್ಟದ ಸುತ್ತ ದಟ್ಟ ಹೊಗೆ ಕಿಡಿಗೇಡಿಗಳ ಕೃತ್ಯ ಶಂಕೆ

ಚಾಮುಂಡಿ ಬೆಟ್ಟ ಧಗ ಧಗ

ಮೈಸೂರು: ಚಾಮುಂಡಿ ಬೆಟ್ಟದಲ್ಲಿ ಶುಕ್ರವಾರ ಮಧ್ಯಾಹ್ನ ಬೆಂಕಿ ಅವಘಡ ಸಂಭವಿಸಿದ್ದು, ನೂರಾರು ಗಿಡಮರಗಳು ಸುಟ್ಟು ಹೋಗಿವೆ. ಕಿಡಿಗೇಡಿಗಳು ಬೆಂಕಿ ಹಾಕಿರಬಹುದು ಎಂದು ಶಂಕಿಸಲಾಗಿದೆ. ಬೆಂಕಿಯು ವ್ಯಾಪಕವಾಗಿ ಹರಡಿದ್ದು, ಅಗ್ನಿಶಾಮಕದಳದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಬೆಟ್ಟದ ಸುತ್ತ ದಟ್ಟ ಹೊಗೆ ಕಾಣಿಸಿಕೊಂಡಿದೆ. 'ಬೀಡಿ, ಸಿಗರೇಟು ಸೇದುವವರು ಬೆಂಕಿಕಡ್ಡಿ ಹಚ್ಚಿ ಸರಿಯಾಗಿ ಆರಿಸದೆ ಬಿಸಾಡಿದ್ದರಿಂದ ಬೆಂಕಿ ಹತ್ತಿಕೊಂಡಿರುವ ಸಾಧ್ಯತೆಯಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಒಟಿಟಿ ವೇದಿಕೆಗೆ ಮಾರ್ಗಸೂಚಿ

ದೆಹಲಿ: ಸಾಮಾಜಿಕ ಮಾಧ್ಯಮದಲ್ಲಿ ಅಸಭ್ಯ ಸರಕು ಪ್ರಸರಣವನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರಕಾರವು ಕಾನೂನಿನಡಿ ನಿಷೇಧಿಸಲ್ಪಟ್ಟ ಸರಕುಗಳನ್ನು ಪ್ರಸಾರ ಮಾಡುವುದರ ವಿರುದ್ಧ ಒಟಿಟಿ ಪ್ಲಾಟ್‌ಫಾರ್ಮ್‌ಗಳಿಗೆ ಎಚ್ಚರಿಕೆ ನೀಡಿದೆ. ಯಾವುದೇ ಕಂಟೆಂಟ್ ಪ್ರಸಾರ ಮಾಡುವಾಗ ವಯಸ್ಸಿನ ಆಧಾರದ ಮೇಲೆ ವರ್ಗೀಕರಣ ಸೇರಿದಂತೆ ಐಟಿ ನಿಯಮಗಳು-2021ರ ಅಡಿಯಲ್ಲಿ ಸೂಚಿಸಲಾದ ನೀತಿ ಸಂಹಿತೆಗೆ ಕಟ್ಟುನಿಟ್ಟಾಗಿ ಬದ್ಧವಾಗಿರಬೇಕು ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಒಟಿಟಿ ಪ್ಲಾಟ್‌ಫಾರ್ಮ್‌ಗಳು ಮತ್ತು ಸ್ವಯಂ ನಿಯಂತ್ರಕ ಸಂಸ್ಥೆಗಳಿಗೆ ಮಾರ್ಗ ಸೂಚಿಯಲ್ಲಿ ತಿಳಿಸಿದೆ.

ಸಿಎಂ ಕ್ಲೀನ್‌ಚಿಟ್ ವಿರುದ್ಧ ಅಪೀಲು

ಬೆಂಗಳೂರು: ಮುಡಾದ ಅಕ್ರಮ ನಿವೇಶನ ಪಡೆದ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಲೋಕಾಯುಕ್ತ ತನಿಖಾಧಿಕಾರಿಗಳಿಂದ ಕ್ಲೀನ್ ಚಿಟ್ ಸಿಕ್ಕಿದ್ದರೂ, ಮತ್ತೊಮ್ಮೆ ಕಾನೂನಿನ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ. ಲೋಕಾಯುಕ್ತ ತನಿಖಾಧಿಕಾರಿಗಳ ಬಿ ರಿಪೋರ್ಟ್ ವರದಿ ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ದೂರುದಾರ ಸ್ನೇಹಮಯಿ ಕೃಷ್ಣ ಅವರು ಮುಂದಿನ ವಾರ ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯ ಇಲ್ಲವೇ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮುಂದಾಗಿದ್ದಾರೆ. ಇದಕ್ಕಾಗಿ ವಕೀಲರು ಲೋಕಾಯುಕ್ತ ತನಿಖಾ ಅಧಿಕಾರಿಗಳು ಉಲ್ಲೇಖಿಸಿರುವ ಅಂಶಗಳನ್ನು ಅಧ್ಯಯನ ಮಾಡುತ್ತಿದ್ದಾರೆ ಎನ್ನಲಾಗಿದೆ.

ನಿಗಮ ಅಧ್ಯಕ್ಷರಿಗೆ ಸಂಪುಟ ದರ್ಜೆ ಸ್ಥಾನ ಪ್ರಶ್ನಿಸಿ ಅರ್ಜಿ

ಕ್ಯಾಬಿನೆಟ್ ರ‍್ಯಾಂಕ್: ಹೈ ನೋಟಿಸ್

ಬೆಂಗಳೂರು: ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರನ್ನು ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರು ಹಾಗೂ ಸದಸ್ಯರನ್ನಾಗಿ ನೇಮಿಸಿ ಸಂಪುಟ ದರ್ಜೆ ಸ್ಥಾನಮಾನ ಹಾಗೂ ಸೌಲಭ್ಯ ಒದಗಿಸಿರುವ ಕ್ರಮ ಸಂವಿಧಾನಬಾಹಿರ ಎಂದು ಆರೋಪಿಸಿ ಸಲ್ಲಿಸಿರುವ ಅರ್ಜಿಯ ಸಂಬಂಧ ಪ್ರತಿಕ್ರಿಯೆ ನೀಡುವಂತೆ ರಾಜ್ಯ ಸರಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಬೆಂಗಳೂರು ನಿವಾಸಿ ಸೂರಿ ಪಾಯಲ ಎಂಬುವವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ವಿಭಾಗೀಯ ಪೀಠ, ಸರಕಾರಕ್ಕೆ ನೋಟಿಸ್ ಜಾರಿ ಮಾಡಿ, ಪ್ರಕರಣದಲ್ಲಿ ಪ್ರತಿವಾದಿಗಳಾಗಿರುವ ಸಂಪುಟ ದರ್ಜೆಯ ಸ್ಥಾನಮಾನ ಹೊಂದಿರುವ ಶಾಸಕರಿಗೆ ಹ್ಯಾಂಡ್ ಸಮನ್ಸ್ ನೀಡಿದೆ.

ಅರ್ಜಿಯಲ್ಲಿ ಸಾಂವಿಧಾನಿಕ ಮತ್ತು ಪ್ರಜಾಪ್ರಭುತ್ವದ ಪ್ರಾಮುಖ್ಯತೆಗೆ ಸಂಬಂಧಿಸಿದ ಅಂಶಗಳು ಎದುರಾಗಿದ್ದು, ಸಂವಿಧಾದ ಪರಿಚ್ಛೇದ 191ರ ಉಲ್ಲಂಘನೆ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಅಲ್ಲದೆ, ಪ್ರತಿವಾದಿಗಳಾಗಿರುವ ಶಾಸಕರು ಲಾಭದಾಯಕ ಹುದ್ದೆ ಹೊಂದಿದ್ದು, ಅಧಿಕಾರದಲ್ಲಿ ಮುಂದುವರಿಯುವುದು ಸಂವಿಧಾನದಕ್ಕೆ ವಿರುದ್ಧ. ಈ ಎಲ್ಲ ಅಂಶಗಳಿಗೂ ಪರಿಹಾರ ಕಂಡುಕೊಳ್ಳಬೇಕಾಗಿದೆ. ಇದಕ್ಕಾಗಿ ರಾಜ್ಯ ಸರಕಾರದಿಂದ ಸಮಗ್ರ ಪ್ರತಿಕ್ರಿಯೆ ಅತ್ಯಗತ್ಯವಿದ್ದು, ನೋಟಿಸ್ ಜಾರಿ ಮಾಡಲಾಗುತ್ತಿದೆ ಎಂದು ತಿಳಿಸಿದ ನ್ಯಾಯಪೀಠ, ವಿಚಾರಣೆಯನ್ನು ಮಾರ್ಚ್ 27ಕ್ಕೆ ಮುಂದೂಡಿತು. ಅಲ್ಲದೆ, ಮಾರ್ಚ್ 18ರ ಅಂತ್ಯದೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಬೇಕು ಎಂದು ತಿಳಿಸಿತು. → 4

ವಾಲ್ಮೀಕಿ ನಿಗಮ ಪ್ರಕರಣದ ವಿಚಾರಣೆ

ಬಿ. ನಾಗೇಂದ್ರ ವಿರುದ್ಧದ ವಿಚಾರಣೆ ಮುಂದೂಡಿಕೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿ ಶಿಷ್ಟ ಪಂಗಡಗಳ ಅಭಿ ವೃದ್ಧಿ ನಿಗಮದ ಹಣ ಅಕ್ರಮ ವರ್ಗಾ ವಣೆ ಆರೋಪ ಸಂಬಂಧ ಮಾಜಿ ಸಚಿವ ಬಿ. ನಾಗೇಂದ್ರ ವಿರುದ್ಧ ಹಣ ಅಕ್ರಮ ವರ್ಗಾ ವಣೆ ತಡೆ ಕಾಯಿದೆಯಡಿಯ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ವಿಚಾರಣೆ ಹೈಕೋರ್ಟ್ ಫೆ.27ಕ್ಕೆ ಮುಂದೂಡಿದೆ.



ಜಾರಿ ನಿರ್ದೇಶನಾಲಯ ದಾಖಲಿಸಿರುವ ಪ್ರಕರಣ (ಇಸಿಐಆರ್) ಮತ್ತು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೆಗೆದುಕೊಂಡಿರುವ ಕಾಗ್ನಿಜೆನ್ಸ್ ರದ್ದು ಕೋರಿ ಮಾಜಿ ಸಚಿವ ಬಿ.ನಾಗೇಂದ್ರ, ಹೈಕೋರ್ಟ್‌ಗೆ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲ ಯವು ಅರ್ಜಿದಾರ ನಾಗೇಂದ್ರ ವಿರುದ್ಧ ನಡೆಸುತ್ತಿರುವ ವಿಚಾರಣೆ ಫೆ.27ರವರೆಗೆ ಮುಂದೂಡಿತು.

ಏನಿದು ಪ್ರಕರಣ?

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಬಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ 95 ಕೋಟಿ ಹಣ ವರ್ಗಾಯಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ನಾಗೇಂದ್ರ ಹಾಗೂ ಮತ್ತಿತರರ ವಿರುದ್ಧ ಇಸಿಐಆರ್ ದಾಖಲಿಸಿ ತನಿಖೆ ಕೈಗೊಂಡಿತ್ತು. ನಂತರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ವಿಶೇಷ ನ್ಯಾಯಾಲಯವು ಕಾಗ್ನಿಜೆನ್ಸ್ ತೆಗೆದುಕೊಂಡು 2024ರ ಅ.5ರಂದು ಆದೇಶಿಸಿತ್ತು. ಅದನ್ನು ಪ್ರಶ್ನಿಸಿ ನಾಗೇಂದ್ರ, ಹೈಕೋರ್ಟ್ ಮೆಟ್ಟಲೇರಿದ್ದಾರೆ.

ವಿಚಾರಣೆ ವೇಳೆ ನಾಗೇಂದ್ರ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿ, ಪ್ರಕರಣ ಸಂಬಂಧ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ಅನುಸಾರ ವಿಶೇಷ ನ್ಯಾಯಾಲಯವು ಕಾಗ್ನಿಜೆನ್ಸ್ ತೆಗೆದುಕೊಂಡಿದೆ.

ವಿದ್ಯಾರ್ಥಿಗಳ ದಾಖಲಾತಿ ಕುಸಿತ, ಗಡಿಭಾಗದಲ್ಲಿ ಮುಚ್ಚುತ್ತಿರುವ ಕನ್ನಡ ಶಾಲೆಗಳು, ಶಿಕ್ಷಣ ಇಲಾಖೆ ಮೌನ

ಕಾಗವಾಡದಲ್ಲಿ ಮತ್ತೊಂದು ಶಾಲೆಗೆ ಬೀಗ

ವಿನಾಯಕ ಮಠಪತಿ

ಬೆಳಗಾವಿ: ಒಂದು ಕಡೆ ಮಹಾರಾಷ್ಟ್ರ ಸರಕಾರದ ದಬ್ಬಾಳಿಕೆ ಮತ್ತೊಂದು ಕಡೆ ರಾಜ್ಯದ ಶಿಕ್ಷಣ ಇಲಾಖೆ ದಿವ್ಯ ನಿರ್ಲಕ್ಷ್ಯ. ಈ ಎರಡರ ಮಧ್ಯೆ ಸಿಲುಕಿ ಗಡಿ ಭಾಗದ ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುತ್ತಿದ್ದು, ಶಾಲೆಯ ಆವರಣದಲ್ಲಿ ಜಾನುವಾರುಗಳು ಅಧಿಕೃತವಾಗಿ ಹಾಜರಿ ಪಡೆದು ವಿಶ್ರಾಂತಿ ಪಡೆಯುವ ಶೋಚನೀಯ ಸ್ಥಿತಿ ಬಂದೊದಗಿದೆ.

ಮಹಾರಾಷ್ಟ್ರಕ್ಕೆ ಹೊಂದಿಕೊಂಡ ಕಾಗವಾಡ ತಾಲೂಕಿನ ಉಪ್ಪಾರವಾಡಿ ಪ್ರಾಥಮಿಕ ಶಾಲೆ ಬಾಗಿಲು ಬಂದ್ ಆಗಿದೆ. ಗ್ರಾಮದ ಕನ್ನಡ ಮಕ್ಕಳ ಪಾಲಿಗೆ ಆಸರೆಯಾಗಿದ್ದ ಶಾಲೆಯು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ತುತ್ತಾಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ. ಯಾವ ಶಾಲೆಯಲ್ಲಿ ಮಕ್ಕಳು ಪಾಠ ಕೇಳಬೇಕಿತ್ತೋ ಅದೇ ಶಾಲೆಯಲ್ಲಿ ದನಕರುಗಳು ವಿಶ್ರಾಂತಿ ಪಡೆಯುವ ಸ್ಥಿತಿ ನಿರ್ಮಾಣವಾಗಿದೆ.

1972ರಲ್ಲಿ ಪ್ರಾರಂಭವಾದ ಸರಕಾರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಈವರೆಗೂ ಸಾವಿರಾರು ವಿದ್ಯಾರ್ಥಿಗಳು ಕಲಿತು ತಮ್ಮ ಬದುಕು ರೂಪಿಸಿಕೊಂಡದ್ದಾರೆ. ಈಗ ಅದೇ ಶಾಲೆ ಈ ಗ್ರಾಮದ ಮಕ್ಕಳಿಗೆ ಬಾಗಿಲು ಬಂದ್ ಮಾಡಿಕೊಂಡಿದೆ. ಈ ಕುರಿತು ಅಧಿಕಾರಿಗಳನ್ನು ಕೇಳಿದರೆ ಗ್ರಾಮದ ಮಕ್ಕಳು ಶಾಲೆಗೆ ಬರುತ್ತಿಲ್ಲ, ಆ ಕಾರಣಕ್ಕೆ ಶಾಲೆಯನ್ನು ತಾತ್ಕಾಲಿಕವಾಗಿ ಬಂದ್ ಮಾಡಿರುವುದಾಗಿ ಹೇಳುತ್ತಾರೆ. → 4

ಕಾಗವಾಡ ತಾಲೂಕಿನ ಉಪ್ಪಾರವಾಡಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ಜಾನುವಾರುಗಳನ್ನು ಕಟ್ಟಿರುವುದು.

ಕಂಡಕ್ಟರ್ ಮೇಲೆ ಮರಾಠಿಗರ ಪುಂಡಾಟ

ಬೆಳಗಾವಿ: ಮರಾಠಿ ಮಾತನಾಡಲು ಬರುವುದಿಲ್ಲ ಎಂದು ಹೇಳಿದ್ದಕ್ಕೆ ಬಸ್ ನಿರ್ವಾಹಕ ಹಾಗೂ ಚಾಲಕರ ಮೇಲೆ ಯುವಕರ ಗುಂಪು ಹಲ್ಲೆ ಮಾಡಿದ ಘಟನೆ ತಾಲೂಕಿನ ಸಣ್ಣ ಬಾಳೇಕುಂದ್ರಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ. ಗಾಯಗೊಂಡ ನಿರ್ವಾಹಕ ಮಹಾದೇವ ಹುಕ್ಕೇರಿ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಡಿಸಿಪಿ ರೋಹನ್ ಜಗದೀಶ್ ಆಸ್ಪತ್ರೆಗೆ ಭೇಟಿ ನೀಡಿ ಚಾಲಕ ಹಾಗೂ ನಿರ್ವಾಹಕರಿಂದ ಮಾಹಿತಿ ಸಂಗ್ರಹಿಸಿದರು. → 5

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಉಪ್ಪಾರವಾಡಿ ಸರಕಾರಿ ಶಾಲೆಯಲ್ಲಿ ಮಕ್ಕಳ ಹಾಜರಾತಿ ಕಡಿಮೆಯಾಗಿದೆ. ಕೇವಲ ಇಬ್ಬರು ವಿದ್ಯಾರ್ಥಿಗಳು ಇದ್ದ ಕಾರಣಕ್ಕೆ ತಾತ್ಕಾಲಿಕವಾಗಿ ಶಾಲೆ ಬಂದ್ ಮಾಡಲಾಗಿದ್ದು, ಮಕ್ಕಳಿಗೆ ಬದಲಿ ವ್ಯವಸ್ಥೆ ಮಾಡಿದ್ದೇವೆ. ಮುಂಬರುವ ದಿನಗಳಲ್ಲಿ ಪೋಷಕರ ಮನವೊಲಿಸಿ ಮಕ್ಕಳ ಹಾಜರಾತಿ ಹೆಚ್ಚಿಸುವ ಮೂಲಕ ಶಾಲೆ ಪ್ರಾರಂಭಿಸುತ್ತೇವೆ.
- **ಎಂ.ಆರ್.ಮುಂಜೆ** ಕ್ಷೇತ್ರ ಶಿಕ್ಷಣಾಧಿಕಾರಿ, ಕಾಗವಾಡ

ಗಡಿಭಾಗದ ಕನ್ನಡ ಶಾಲೆಗಳನ್ನು ಮುಚ್ಚುವ ಮೂಲಕ ಗ್ರಾಮೀಣ ಭಾಗದ ಮಕ್ಕಳ ಭವಿಷ್ಯವನ್ನು ಹಾಳು ಮಾಡಲಾಗುತ್ತಿದೆ. ಶಾಲೆಯಲ್ಲಿ ದನ, ಕರುಗಳನ್ನು ಕಟ್ಟಿದ್ದು ಅಧಿಕಾರಿಗಳ ಕಾರ್ಯವೈಖರಿಗೆ ಹಿಡಿದ ಕನ್ನಡಿಯಾಗಿದೆ. ಕೂಡಲೇ ಸರಕಾರಿ ಶಾಲೆಯನ್ನು ಪ್ರಾರಂಭಿಸಿ ಮಕ್ಕಳ ನೆರವಿಗೆ ಬರಬೇಕು ಎಂಬುದು ನನ್ನ ಮನವಿ.
- **ಶಿವಾನಂದ ಸೌದಾಗರ** ಸ್ಥಳೀಯ ನಿವಾಸಿ

ಸಮಾಚಾರ ಸಣ್ಣದಲ್ಲ

ಬೆಸ್ಕಾಂ ಕಚೇರಿ ಮುಂದೆ ಪ್ರತಿಭಟನೆ

ತಿಪಟೂರು: ತಾಲೂಕಿನ ಕಳೆದ 20 ದಿನಗಳಿಂದ ತೋಟದ ಮನೆಗಳಿಗೆ ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆಗೂ ವಿದ್ಯುತ್ ಸಮರ್ಪಕವಾಗಿ ನೀಡದ ಕಾರಣ ಫೆ 24ರಂದು ಬೆಳಗ್ಗೆ 11ಗಂಟೆಗೆ ಬೆಸ್ಕಾಂ ಕಚೇರಿ ಮುಂಭಾಗ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗುವುದು ಎಂದು ತೋಟದ ಮನೆಗಳ ಹಿತ ರಕ್ಷಣಾ ಸಮಿತಿ ಸಂಚಾಲಕ ವಿನಯ್ ಮಡೇನೂರುತಿಳಿಸಿದ್ದಾರೆ. ಅಸಮರ್ಪಕ ವಿದ್ಯುತ್ ಸರಬರಾಜುನಿಂದ ತೋಟದ ಮನೆಗಳ ಹತ್ತಿರ ಮೋಟರ್ ಪಂಪ್‌ಸೆಟ್, ಕೇಬಲ್ ಕಳ್ಳತನ ಮತ್ತು ಚಿರತೆ ಕಾಟ ಹೆಚ್ಚಾಗಿದ್ದು ಭಯದ ವಾತಾವರಣದಲ್ಲಿ ಬದುಕಬೇಕಿದೆ. ಎಲ್ಲಾ ರೈತ ಮಿತ್ರರು ತಿಪಟೂರು ಬೆಸ್ಕಾಂ ಕಚೇರಿ ಮುಂಭಾಗಕ್ಕೆ ಆಗಮಿಸಿ ಹೋರಾಟಕ್ಕೆ ರೈತರು ಬೆಂಬಲ ನೀಡಬೇಕೆಂದು ತಿಳಿಸಲಾಗಿದೆ.

ಫೆ. 24ರಂದು ಕೆಡಿಪಿ ಸಭೆ

ತುಮಕೂರು: ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಫೆಬ್ರವರಿ 24ರಂದು ಬೆಳಗ್ಗೆ 10.30 ಗಂಟೆಗೆ 2024-25ನೇ ಸಾಲಿನ 3ನೇ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭು ತಿಳಿಸಿದ್ದಾರೆ.

ಯುವ ಪ್ರವರ್ತಕರ ಆಯ್ಕೆಗೆ ಅರ್ಜಿ ಆಹ್ವಾನ

ತುಮಕೂರು: ಬೆಂಗಳೂರು ನಿಮ್ಹಾನ್ಸ್ ಎಪಿಡೀಮಿಯಾಲಜಿ ವಿಭಾಗ ಜನ ಆರೋಗ್ಯ ಕೇಂದ್ರ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಅನುಷ್ಠಾನಗೊಂಡಿರುವ ಯುವ ಸ್ಪಂದನ ಕಾರ್ಯಕ್ರಮದಡಿ ಕಾರ್ಯನಿರ್ವಹಿಸಲು ಹೊಸದಾಗಿ ಯುವ ಪ್ರವರ್ತಕರ ಆಯ್ಕೆಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಪಾವಗಡ, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು, ಸಿರಾ ಹಾಗೂ ಮಧುಗಿರಿ ಸೇರಿದಂತೆ 6 ತಾಲ್ಲೂಕುಗಳಿಗೆ ಯುವ ಪರಿವರ್ತಕರ ಆಯ್ಕೆ ಮಾಡಲಾಗುವುದು. ಯಾವುದೇ ಪದವಿ ಹಾಗೂ ಮೇಲ್ಪಟ್ಟ ವಿದ್ಯಾರ್ಹತೆ ಹೊಂದಿರುವ 21 ರಿಂದ 35 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಮೂಲ ದಾಖಲೆಗಳೊಂದಿಗೆ ಫೆಬ್ರವರಿ 28ರೊಳಗಾಗಿ ಸಹಾಯಕ ನಿರ್ದೇಶಕ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣ, ತುಮಕೂರು ಇವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 8549890509 / 9513073714ನ್ನು ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕ ರೋಹಿತ್ ಗಂಗಾಧರ್ ತಿಳಿಸಿದ್ದಾರೆ.

ಫೆ.28ರಂದು ಸಾರ್ವಜನಿಕ ಸಭೆ

ತುಮಕೂರು: ಮಹಾನಗರಪಾಲಿಕೆಯ 2025-26ನೇ ಸಾಲಿನ ಆಯವ್ಯಯ ಸಿದ್ಧಪಡಿಸುವ ಕುರಿತು ಫೆಬ್ರವರಿ 28ರಂದು ಮಧ್ಯಾಹ್ನ 3.30 ಗಂಟೆಗೆ ಮಹಾನಗರಪಾಲಿಕೆ ಸಭಾಂಗಣದಲ್ಲಿ 2ನೇ ಸಾರ್ವಜನಿಕ ಸಭೆ ಏರ್ಪಡಿಸಲಾಗಿದೆ. ಮಹಾನಗರಪಾಲಿಕೆ ವ್ಯಾಪ್ತಿಯ ಸಂಘ ಸಂಸ್ಥೆಗಳ ಪದಾಧಿಕಾರಿ, ಹೋಟೆಲ್ ಅಸೋಸಿಯೇಷನ್, ಛತ್ರಗಳ ಮಾಲೀಕರ ಸಂಘ, ಸಿನಿಮಾ ಮಂದಿರಗಳ ಮಾಲೀಕರ ಸಂಘ, ಶಿಕ್ಷಣ ಸಂಸ್ಥೆಯ ಸಂಘಗಳ ಸಂಘ, ನರ್ಸಿಂಗ್ ಹೋಮ್ಸ್ ಸಂಘಗಳ ಪದಾಧಿಕಾರಿ, ವಕೀಲರ ಅಸೋಸಿಯೇಷನ್, ನಾಗರಿಕ ಹಿತರಕ್ಷಣಾ ಸೇವಾ ಸಮಿತಿ, ಸರ್ಕಾರೇತರ ಸಂಘ ಸಂಸ್ಥೆ, ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಸಭೆಗೆ ಹಾಜರಾಗಿ ಸಲಹೆ/ಸೂಚನೆಗಳನ್ನು ನೀಡಿ, ಆಯವ್ಯಯವನ್ನು ಪ್ರಗತಿಶೀಲವಾಗಿ ರೂಪಿಸಲು ಸಹಕರಿಸಬೇಕೆಂದು ಪಾಲಿಕೆ ಆಯುಕ್ತ ಬಿ.ವಿ.ಅಶ್ವಿಜ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ನಮಸ್ತೆ ಚಿಕ್ಕಬಳ್ಳಾಪುರ ಮತ್ತೆ ಶುರು | ಶಾಸಕ ಪ್ರದೀಪ್ ಈಶ್ವರ್ ಅಹವಾಲು ಆಲಿಕೆ

ನಿವಾಸಿಗಳ ಕಷ್ಟ ಪರಿಹರಿಸುವೆ

ಚಿಕ್ಕಬಳ್ಳಾಪುರ: ಹಲವು ತಿಂಗಳ ಸುದೀರ್ಘ ವಿರಾಮದ ಬಳಿಕ ಶಾಸಕ ಪ್ರದೀಪ್ ಈಶ್ವರ್ ಶುಕ್ರವಾರ ಮತ್ತೊಮ್ಮೆ 28ನೇ ವಾರ್ಡಿನಲ್ಲಿ 'ನಮಸ್ತೆ ಚಿಕ್ಕಬಳ್ಳಾಪುರ' ಕಾರ್ಯಕ್ರಮ ಪುನರಾರಂಭಿಸಿದರು.

ಶುಕ್ರವಾರ ಬೆಳಿಗ್ಗೆ 6.30ಕ್ಕೆ ನಗರದ 28 ನೇ ವಾರ್ಡಿನಲ್ಲಿ ನಮಸ್ತೆ ಚಿಕ್ಕಬಳ್ಳಾಪುರ ಕಾರ್ಯಕ್ರಮದ ಭಾಗವಾಗಿ ನಗರಾಡಳಿತ ಸಿಬ್ಬಂದಿಯೊಂದಿಗೆ ಮನೆಮನೆ ಭೇಟಿ ಆರಂಭಿಸಿದ ಶಾಸಕರು ನಗರವಾಸಿಗಳ ಕಷ್ಟಗಳನ್ನು ಆಲಿಸಿದರು. ಪ್ರತಿ ಮನೆಗೂ ಭೇಟಿ ನೀಡಿದ ವೇಳೆ ಬಿ ಖಾತಾ ಆಂದೋಲನದ ಬಗ್ಗೆ ಜಾಗೃತಿ ಮೂಡಿಸಿದರು.

ಶಾಸಕರ ಭೇಟಿಯ ವೇಳೆ ಸ್ವಚ್ಛತೆ, ಅನೈರ್ಮಲ್ಯತೆ, ನೀರಿನ ಸಮಸ್ಯೆ,ವಿದ್ಯುತ್ ಸಮಸ್ಯೆ, ಪೆನ್ಷನ್ ಸಮಸ್ಯೆ ಪರಿಹರಿಸುವಂತೆ ಶಾಸಕರಿಗೆ ನಗರವಾಸಿಗಳು ಮನವಿ ಮಾಡಿಕೊಂಡರು.ಸ್ಪಂಧಿಸಿದ ಅವರು ಕೂಡಲೇ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ದೊಡ್ಡಭಜನೆ ಮನೆ ಬಳಿಯಿರುವ ಗೋಲ್ಡ್ನ ಗ್ಲೀಮ್ಸ್ ಕಾಲೇಜಿಗೆ ಭೇಟಿ ನೀಡಿದ್ದ ವೇಳೆ ವಿದ್ಯಾರ್ಥಿಗಳಿಗೆ ಚೆನ್ನಾಗಿ ಓದಿ ಉನ್ನತ ದರ್ಜೆಯಲ್ಲಿ ಪಾಸಾಗುವ ಮೂಲಕ ಕಾಲೇಜಿಗೆ ಕೀರ್ತಿ ತರಬೇಕು ಎಂದರು.

ಡಿವೈನ್‌ಸಿಟಿ ಸಭೆ:

ನಗರದ ತಿಪ್ಪೇಹನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಡಿವೈನ್‌ಸಿಟಿಯ ಕ್ಲಬ್‌ಹೌಸ್‌ನಲ್ಲಿ ಅಲ್ಲಿನ ನಿವಾಸಿಗಳು,ನಗರಸಭೆ ಅಧಿಕಾರಿಗಳು,ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು,ನಗರಸಭೆ ಸದಸ್ಯರ ಸಭೆ ನಡೆಸಿದ ಶಾಸಕ ಪ್ರದೀಪ್ ಈಶ್ವರ್ ಈ ಬಡಾವಣೆ ನಿವಾಸಿಗಳ ಹತ್ತಾರು ವರ್ಷದ ಖಾತಾ ಸಮಸ್ಯೆಯನ್ನು ಆಲಿಸಿ ಶೀಘ್ರವೇ ಪರಿಹರಿಸುವ ಭರವಸೆ ನೀಡಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಶಾಸಕರು. ಇಲ್ಲಿರುವ 269 ನಿವೇಶನಗಳ ಪೈಕಿ 197 ನಿವೇಶನಗಳಿಗೆ ಮೊದಲ ಹಂತದಲ್ಲಿ ಖಾತೆ ನೀಡುವ ಬಗ್ಗೆ ಯೋಜನಾ ಪ್ರಾಧಿಕಾರದ ಆಯುಕ್ತರು,ಅಧ್ಯಕ್ಷರು,ಡಿವೈನ್ ಸಿಟಿ ಮಾಲಿಕರ ಸಮಕ್ಷಮ ಚರ್ಚೆ ಮಾಡಲಾಗಿದೆ. ಎಲ್ಲರಿಗೂ ಒಳಿತಾಗುವ ಹಾಗೆ ಚಿಂತನೆ ಮಾಡಲಾಗಿದೆ ಎಂದರು.

ಶಾಸಕ ಪ್ರದೀಪ್ ಈಶ್ವರ್ ಶುಕ್ರವಾರ ಮತ್ತೊಮ್ಮೆ 28ನೇ ವಾರ್ಡಿನಲ್ಲಿ ನಮಸ್ತೆ ಚಿಕ್ಕಬಳ್ಳಾಪುರ ಕಾರ್ಯಕ್ರಮ ಪುನರಾರಂಭಿಸಿದರು.

ಎಂ.ಸಿ.ಸುಧಾಕರ್ ಗುರುಗಳು:

ಚಿಂತಾಮಣಿಯಲ್ಲಿ ಶುಕ್ರವಾರ ನಡೆಯುತ್ತಿರುವ ಬೃಹತ್ ರಕ್ತದಾನ ಶಿಬಿರ, ಮತ್ತು ಮಾಜಿ ಸಚಿವ ಚೌಡರೆಡ್ಡಿ ಅವರ ಜನ್ಮದಿನೋತ್ಸವ ಯೋಜನಾಬದ್ಧವಾಗಿ ರೂಪಿಸಿದ್ದು,ಅಲ್ಲಿಗೆ ಭೇಟಿ ನೀಡಿ ಅವರ ಆಶೀರ್ವಾದ ಪಡೆಯುತ್ತೇನೆ.ನನ್ನ ರಾಜಕೀಯ ಬದುಕಿಗೆ ದೊಡ್ಡ ತಿರುವು ಕೊಟ್ಟವರು ಡಾ.ಎಂ.ಸಿ.ಸುಧಾಕರ್ ಮತ್ತು ಚೌಡರೆಡ್ಡಿ ಕುಟುಂಬ.ಇದರಲ್ಲಿ ಕೃಷ್ಣಬೈರೇಗೌಡರ ಕೊಡುಗೆಯೂ ಇದೆ. ಗಿನ್ನಿಸ್ ರೆಕಾರ್ಡ್ ಮಾಡುವಂತೆ ರಕ್ತದಾನ ಶಿಬಿರ ನಡೆಸುವ ಡಾ.ಬಾಲಾಜಿ ಅವರ ಶ್ರಮಕ್ಕೆ ಬೆಲೆಯಿರಲಿದೆ ಎಂದರು.

ವದಂತಿ ನಂಬಬೇಡಿ

ಕಾಂಗ್ರೆಸ್ ಸರಕಾರ ಬಡವರಿಗೆ ಅನುಕೂಲ ಆಗಲಿ ಎಂದು ಪ್ರಾರಂಭಿಸಿರುವ ಬಿ ಖಾತಾ ಅಭಿಯಾನದ ಬಗ್ಗೆ ಕೆಲವರು ಸುಖಾಸುಮ್ಮನೆ ವದಂತಿಗಳನ್ನು ಹಬ್ಬಿಸುತ್ತಿದ್ದಾರೆ.ಇದಕ್ಕೆ ಯಾರೂ ಕಿವಿಗೊಡಬೇಡಿ.90 ದಿನಗಳ ನಂತರ ಈ ಅವಕಾಶ ಮತ್ತೆ ದೊರೆಯುವುದಿಲ್ಲ.ನಿಮ್ಮ ನಿವೇಶನ, ಮನೆ, ಆಸ್ತಿಗಳಿಗೆ ಅಧಿಕೃತದಾಖಲೆ ನೀಡುವ ಈ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳಿ, ಯಾರನ್ನೋ ನಂಬಿ,ದಲ್ಲಾಳಿಗಳ ಮಾತಿಗೆ ಅವಕಾಶ ಕಳೆದುಕೊಂಡರೆ ಅದಕ್ಕೆ ನೀವೇ ಜವಾಬ್ದಾರರು ಎಂದು ಶಾಸಕರು ಮನವಿ ಮಾಡಿದರು.

ಫಸಲ್ ಭೀಮಾದಡಿಯಲ್ಲಿ ರಾಮನಗರಕ್ಕೆ 2.60 ಕೋಟಿ

ರಾಮನಗರ: ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಅವರು ಸತತ 8ನೇ ಬಾರಿಗೆ ಮಂಡಿಸಿರುವ ಬಜೆಟ್‌ನಲ್ಲಿ ಆರೋಗ್ಯ, ರಕ್ಷಣೆ, ಕೃಷಿ ಉತ್ಪಾದಕತೆ, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಸಂಸದ ಡಾ. ಮಂಜುನಾಥ್ ಹೇಳಿದರು.

ನಗರದ ಜಿಲ್ಲಾ ಪಂಚಾಯತ್‌ನ ಮಿನಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕೃಷಿಗೆ ಆದ್ಯತೆ ನೀಡಿರುವ ಬಜೆಟ್‌ನಲ್ಲಿ ಪ್ರಧಾನ ಮಂತ್ರಿ ಧನ ಧಾನ್ಯ ಯೋಜನೆಯಡಿ 1.70 ಕೋಟಿ ರೈತರಿಗೆ ನೆರವು ನೀಡಲಾಗುತ್ತಿದೆ. ರೈತರಿಗೆ ವಾರ್ಷಿಕ 6,000 ರೂ.ಗಳ ನೇರ ನೆರವು ನೀಡಲಾಗುತ್ತಿದೆ. ರಾಗಿ, ಭತ್ತ ಸೇರಿದಂತೆ 23 ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿ ಮಾಡಿದೆ. ಫಸಲ್ ಭೀಮಾ ಯೋಜನೆಯಡಿ ರಾಮನಗರ ಜಿಲ್ಲೆಯಲ್ಲಿ 2.60 ಕೋಟಿ ರೂ.ಗಳನ್ನು ಕ್ಲೈಮ್ ಮಾಡಲಾಗಿದೆ ಎಂದರು.

ಚನ್ನಪಟ್ಟಣ ಹಾಗೂ ರಾಮನಗರ ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು 51 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಬಿಡದಿ ರೈಲ್ವೆ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದವರು ತಿಳಿಸಿದರು.

ಹಾರೋಹಳ್ಳಿಯಲ್ಲಿ ಇಎಸ್‌ಐ ಆಸ್ಪತ್ರೆ ಸ್ಥಾಪಿಸಲಾಗುವುದು ಎಂದು ಹೇಳಿದರು.

ರಾಮನಗರದ ಜಿಪಂ ಮಿನಿ ಸಭಾಂಗಣದ ಪತ್ರಿಕಾಗೋಷ್ಠಿಯಲ್ಲಿ ಸಂಸದ ಡಾ. ಮಂಜುನಾಥ್ ಮಾತನಾಡಿದರು.

ಬೆಂಗಳೂರು ಉತ್ತರ ತಾಲೂಕಿನ ಕಾಚೋಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಪ್ರಭಾರ ಅಧ್ಯಕ್ಷರಾಗಿ ಟಿ ಸಂಪತ್ ಕುಮಾರ್ ಆಯ್ಕೆಯಾದರು. ಈ ಹಿಂದಿನ ಅಧ್ಯಕ್ಷರಾಗಿದ್ದ ಸರೋಜಮ್ಮ ದಾಸಪ್ಪನವರ ತೆರವಾದ ಸ್ಥಾನಕ್ಕೆ ಸಂಪತ್ ಕುಮಾರ್ ಅವರನ್ನು ಪಂಚಾಯಿತಿಯ ಸದಸ್ಯರ ಒಮ್ಮತದಿಂದ ಆಯ್ಕೆ ಮಾಡಲಾಯಿತು. ಈ ವೇಳೆ ಮಾಜಿ ಜಿಪಂ ಸದಸ್ಯ ಉಮೇಶ್, ತಾಪಂ ಮಾಜಿ ಅಧ್ಯಕ್ಷ ಅಶೋಕ್ ಹಾಜರಿದ್ದರು.

ಕೇಂದ್ರ ಬಜೆಟ್‌ನಲ್ಲಿ ಪರಿಶಿಷ್ಟರಿಗೆ ಏನಿದೆ?

ತುಮಕೂರು: ತುಮಕೂರು-ದಾವಣಗೆರೆ ಮಾರ್ಗದ ರೈಲ್ವೆ ಯೋಜನೆ ಮತ್ತು ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ನಿಧಾನಗತಿಯಲ್ಲಿ ಸಾಗಿದೆ. ವಿವಿಧ ಹಂತವಾರು ಭೂಸ್ವಾಧೀನ ಪ್ರಕ್ರಿಯೆ ಆಗಿಲ್ಲವೆಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಅಸಮಧಾನ ವ್ಯಕ್ತಪಡಿಸಿದರು.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಆಗುತ್ತಿರುವ ಸಮಸ್ಯೆ ಕುರಿತಂತೆ ಮಾಧ್ಯಮದರೊಂದಿಗೆ ಮಾತನಾಡಿ, ಭೂಸ್ವಾಧೀನಕ್ಕೆ ಎಲ್ಲೆಲ್ಲಿ ಸಮಸ್ಯೆಗಳಿವೆ? ಯಾವ ಕಾರಣದಿಂದ ನಿಂತಿವೆ ಎಂಬುದನ್ನು ಸಭೆಯಲ್ಲಿ ಪರಿಶೀಲಿಸಿ ಮಾಹಿತಿ ಪಡೆದಿದ್ದೇನೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ. ಹೇಮಾವತಿ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿಲ್ಲ. ಕುಣಿಗಲ್ ಸೇರಿ ಜಿಲ್ಲೆಯ ನಾಲ್ಕು ಏತ ನೀರಾವರಿ ಸಮಸ್ಯೆಗಳ ಬಗ್ಗೆ ಪರಿಶೀಲಿಸಿದ್ದೇನೆ. ಭದ್ರಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ 160 ಎಕರೆ ಭೂಸ್ವಾಧೀನ ಆಗಬೇಕಿದೆ. ಕೆಐಎಡಿಬಿ ಯೋಜನೆಯಡಿ 12 ಸಾವಿರ ಎಕರೆ ಭೂಮಿಯಲ್ಲಿ ಇಂಡಸ್ಟ್ರಿಯಲ್ ಹಬ್ ನಿರ್ಮಾಣವಾಗಲಿದ್ದು, ಈ ಬಗ್ಗೆ ಸಭೆಯಲ್ಲಿ ಪ್ರಗತಿ ಪರಿಶೀಲಿಸಲಾಗಿದೆ ಎಂದು ತಿಳಿಸಿದರು.

ಈ ವರ್ಷ 4 ಲಕ್ಷ ಕೋಟಿ ರೂ. ಹೆಚ್ಚು ಬಜೆಟ್ ಗಾತ್ರ ಇದೆ. ಆಯವ್ಯಯದ ಬಗ್ಗೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದೇನೆ ಎಂದರು. ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳು ಹಾಗೂ ಡ್ರಗ್ಸ್ ದಂಧೆಯಲ್ಲಿ ತೊಡಗಿರುವವರನ್ನು ಗಡಿಪಾರು ಮಾಡಲಾಗಿದೆ ಎಂದು ಹೇಳಿದರು.

ಬಿಜೆಪಿಗೆ ತುರುಗೇಟು

ರಾಜ್ಯ ಸರಕಾರ ಪರಿಶಿಷ್ಟರ ಹಣಕ್ಕೆ ತಾರತಮ್ಯ ಮಾಡುತ್ತಿದೆ ಎಂದು ಆರೋಪಿಸಿ ಬಿಜೆಪಿಯವರು ಪ್ರತಿಭಟನೆ ನಡೆಸುತ್ತಿರುವ ಕುರಿತು ಪ್ರತಿಕ್ರಿಯಿಸಿ, ಕೇಂದ್ರ ಸರಕಾರದ ಬಜೆಟ್‌ನಲ್ಲಿ ಪರಿಶಿಷ್ಟರಿಗೆ ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ರಾಜ್ಯ ಬಿಜೆಪಿ ಮುಖಂಡರು ನೋಡಿಕೊಳ್ಳಲಿ ಸಾಕು. ದೇಶದ 50 ಲಕ್ಷ ಕೋಟಿ ರೂ. ಬಜೆಟ್‌ನಲ್ಲಿ ಶೇ.24 ಎಸ್ಸಿ ವರ್ಗದವರಿಗೆ ಕೊಡಬೇಕಲ್ಲವೇ? ಉತ್ತರ ಪ್ರದೇಶ, ಪಂಜಾಬ್‌ನಲ್ಲಿ ಶೇ.35 ಎಸ್‌ಸಿ ಜನರಿದ್ದಾರೆ. ಇದಕ್ಕೆ ಬಿಜೆಪಿಯವರು ಉತ್ತರಿಸಬೇಕು ಎಂದು ಹೇಳಿದರು.

ಎತ್ತಿನಹೊಳೆ ಯೋಜನೆ ಸಂತ್ರಸ್ತರ ಪ್ರತಿಭಟನೆ

ಹಾಸನ: ಬಯಲು ಸೀಮೆಯ ಜಿಲ್ಲೆಗ್ಗಳಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಎತ್ತಿನಹೊಳೆ ಯೋಜನೆಗೆ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಅರಣ್ಯ ಇಲಾಖೆಯ ಕಿರುಕುಳ ತಡೆಗಟ್ಟಬೇಕು ಎಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದಿಂದ ರೈತರು ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಜಿಲ್ಲೆಯ ಸಾವಿರಾರು ರೈತರು ತಮ್ಮ ಭೂಮಿ ಕಳೆದುಕೊಂಡಿದ್ದಾರೆ. ಐದಳ್ಳ ಕಾವಲು, ನಾಯಕನಕೆರೆ ಕಾವಲು ಸುತ್ತಮುತ್ತಲಿನ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು 2022 ರಲ್ಲೇ ಅವಾರ್ಡ್ ನೋಟಿಸ್ ನೀಡಿದ್ದರೂ, ಇದುವರೆಗೂ ಸೂಕ್ತ ಪರಿಹಾರ ನೀಡಿಲ್ಲ ಎಂದು ದೂರಿದರು.

ಹಲವು ವರ್ಷಗಳಿಂದ ಸಾಗುವಳಿ ಮಾಡಿ ಮಂಜೂರಾತಿ ಚೀಟಿ ಪಡೆದು, ಪಹಣಿಯಲ್ಲಿ ಹೆಸರು ಬರುತ್ತಿದ್ದ ಭೂಮಿಗೆ ವಿಶೇಷ ಭೂಸ್ವಾಧೀನಾಧಿಕಾರಿ ಕಾರ್ಯಾಲಯದವರು ದಾಖಲೆ ಪರಿಶೀಲಿಸಿ ಅವಾರ್ಡ್ ನೋಟಿಸ್ ನೀಡಿದ ಮೇಲೆ, ಅರಣ್ಯ ಇಲಾಖೆಯವರು ಬೇಲೂರು ಶಿವಪುರ ಕಾವಲು 30ಕ್ಕೂ ಹೆಚ್ಚು ಜನರಿಗೆ ಭೂಪರಿಹಾರ ನೀಡುವುದನ್ನು ತಡೆಹಿಡಿದಿದ್ದಾರೆ. ಇದರಲ್ಲಿ ಬಹುತೇಕರು ದಲಿತ ಸಮುದಾಯಕ್ಕೆ ಸೇರಿದವರಾಗಿದ್ದು, ಈ ಭೂಮಿ ಅರಣ್ಯ ಇಲಾಖೆಗೆ ಸೇರಿದ್ದೆಂದು ಇಲಾಖೆ ತಕರಾರು ಎತ್ತಿರುವುದನ್ನು ಖಂಡಿಸಿದರು.

ಶಿವಪುರ ಕಾವಲಿನ ಸನಂ 80/2 ರಲ್ಲಿ 1.32 ಎಕರೆ ಭೂಮಿಯನ್ನು ಎತ್ತಿನಹೊಳೆ ಯೋಜನೆಗೆ ನೀಡಿ, ಪರಿಹಾರ ಸಿಗದೆ ನೊಂದು ವಡ್ಡರಹಳ್ಳಿ ಗ್ರಾಮದ ರಂಗಸ್ವಾಮಿ ಎಂಬ ರೈತ ಇದೇ ಎತ್ತಿನಹೊಳೆ ಕಾಲುವೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಭೂ ಪರಿಹಾರ ಸಿಗದೆ ರೈತರು ಅತ್ಯಂತ ಸಂಕಷ್ಟದಲ್ಲಿದ್ದಾರೆ. ಮುಂದೆ ಆಗಬಹುದಾದ ಅನಾಹುತ ತಪ್ಪಿಸಲು ಜಿಲ್ಲಾಧಿಕಾರಿ ಅವರು ಕೂಡಲೇ ಮಧ್ಯಪ್ರವೇಶ ಮಾಡಿ ರೈತರಿಗೆ ಪರಿಹಾರ ಕೊಡಿಸಬೇಕು ಮತ್ತು ಅನಗತ್ಯವಾಗಿ ರೈತರಿಗೆ ಕಿರುಕುಳ ಕೊಡುವ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಎಚ್.ಆರ್. ನವೀನ್ ಕುಮಾರ್, ಸಿದ್ದರಾಜು, ಗಂಗಾಧರ, ಉದಯಕುಮಾರ, ಗೋವಿಂದರಾಜು, ರಂಗಸ್ವಾಮಿ, ಪುಟ್ಟರಾಜು ಮೊದಲಾದವರಿದ್ದರು.

ಎತ್ತಿನಹೊಳೆ ಆಗಸ್ಟ್‌ಗೆ ಪೂರ್ಣಗೊಳಿಸಿ

ತುಮಕೂರು: ಜಿಲ್ಲೆಯಲ್ಲಿ ಎತ್ತಿನಹೊಳೆ ಯೋಜನೆಯನ್ನು ಆಗಸ್ಟ್ ಮಾಹೆಯೊಳಗೆ ಪೂರ್ಣಗೊಳಿಸಬೇಕೆಂದು ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ. ಪರಮೇಶ್ವರ್ ಸೂಚನೆ ನೀಡಿದರು.

ಎತ್ತಿನಹೊಳೆ, ರೈಲ್ವೆ, ಹೇಮಾವತಿ, ಕೆಐಎಡಿಬಿ, ಭದ್ರಾ ಮೇಲ್ದಂಡೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಎತ್ತಿನಹೊಳೆ ಯೋಜನೆಗಾಗಿ ಈವರೆಗೂ 2679 ಎಕರೆ ಭೂಸ್ವಾಧೀನವಾಗಿದ್ದು, ಯೋಜನೆಗೆ ಅವಶ್ಯವಿರುವ ಉಳಿದ 438 ಎಕರೆ ಭೂಮಿಯನ್ನು 4 ತಿಂಗಳೊಳಗಾಗಿ ಸ್ವಾಧೀನಪಡಿಸಿಕೊಂಡು ಎತ್ತಿನ ಹೊಳೆ ಯೋಜನೆಗೆ ಹಸ್ತಾಂತರಿಸಬೇಕೆಂದು ವಿಶೇಷ ಭೂಸ್ವಾಧೀನಾಧಿಕಾರಿ ಮಂಜುನಾಥ್ ಜಿ.ಎನ್. ಅವರಿಗೆ ಸೂಚನೆ ನೀಡಿದರು.

ಲಭ್ಯವಿರುವ ಅನುದಾನವನ್ನು ಭೂಮಾಲೀಕರಿಗೆ ಪಾವತಿಸಿ ಎತ್ತಿನ ಹೊಳೆ ಯೋಜನೆಯನ್ನು ಆಗಸ್ಟ್ ಮಾಹೆಯೊಳಗೆ ಪೂರ್ಣಗೊಳಿಸಬೇಕೆಂದು ಕಾರ್ಯನಿರ್ವಾಹಕ ಇಂಜಿನಿಯರ್ ಮುರಳೀಧರ್ ಅವರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಯೋಜನೆಯಡಿ ಜಿಲ್ಲೆಯಲ್ಲಿ 150 ಕಿ.ಮೀ. ಗುರುತ್ವಾ ಕಾಲುವೆಯನ್ನು ಹೊಂದಿದ್ದು, ಇದರಲ್ಲಿ 115 ಕಿ.ಮೀ. ವರೆಗಿನ ಕಾಮಗಾರಿ ಮುಕ್ತಾಯ ಹಂತದಲ್ಲಿದೆ. ಉಳಿದ 24 ಕಿ.ಮೀ.ನಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ 3 ಕಡೆ ಅರಣ್ಯ ಪ್ರದೇಶದ ಸಮಸ್ಯೆಯಿದ್ದು, ಅಧಿಕಾರಿಗಳೊಂದಿಗೆ ಚರ್ಚಿಸಿ ಸರಿಪಡಿಸಲಾಗುವುದು ಎಂದು ತಿಳಿಸಿದರು.

ತುಮಕೂರು-ರಾಯದುರ್ಗ ಯೋಜನೆಗಾಗಿ 1361 ಎಕರೆ ಪ್ರದೇಶವನ್ನು ರೈಲ್ವೆ ಇಲಾಖೆಗೆ ಈಗಾಗಲೇ ಹಸ್ತಾಂತರಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ರೈಲ್ವೆ ಯೋಜನೆಯ ವಿಶೇಷ ಭೂಸ್ವಾಧೀನಾಧಿಕಾರಿ ರೇಣುಕಾ ಪ್ರಸಾದ್ ಜಂಬಗಿ ಸಭೆಗೆ ಮಾಹಿತಿ ನೀಡಿದರು.

ಈಗಾಗಲೇ 770 ಎಕರೆ ಭೂಮಿ ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಶಿರಾ ಮತ್ತು ತುಮಕೂರಲ್ಲಿ ಮಾತ್ರ 61 ಎಕರೆ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಭೂ ಮಾಲೀಕರಿಗೆ ಪರಿಹಾರ ನೀಡಲು 20 ಕೋಟಿ ಅವಶ್ಯಕತೆಯಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಅಪರ ಜಿಲ್ಲಾಧಿಕಾರಿ ಡಾ.ಎನ್. ತಿಪ್ಪೇಸ್ವಾಮಿ, ಉಪವಿಭಾಗಾಧಿಕಾರಿ ಗೌರವ್ ಕುಮಾರ್ ಶೆಟ್ಟಿ, ಎತ್ತಿನ ಹೊಳೆ, ಭದ್ರಾ ಮೇಲ್ದಂಡೆ, ರೈಲ್ವೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿ ಖಾತಾ ಅಭಿಯಾನ: 2ನೇ ದಿನಕ್ಕೆ 871 ಅರ್ಜಿ

ಚಿಕ್ಕಬಳ್ಳಾಪುರ: ನಗರದ ನಿವಾಸಿಗಳ ಅನಧಿಕೃತ ಆಸ್ತಿಗಳಿಗೆ ಕಾನೂನಾತ್ಮಕವಾಗಿ ದಾಖಲೆ ಒದಗಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಬಿ ಖಾತಾ ಅಭಿಯಾನದ ಎರಡನೇ ದಿನವಾದ ಶುಕ್ರವಾರ 871 ಮಂದಿ ಮಾತ್ರ ಪೂರ್ಣ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಿದ್ದಾರೆ

ಚಿಕ್ಕಬಳ್ಳಾಪುರ ನಗರದಲ್ಲಿ ಮೊದಲ ದಿನವಾದ ಗುರುವಾರ ಉತ್ತಮ ಸ್ಪಂದನೆ ದೊರೆತಿದ್ದರೂ ಎರಡನೇ ದಿನ ಕ್ಷೀಣಿಸಿದೆ.90 ದಿನಗಳ ಅವಧಿಯಲ್ಲಿ ಕನಿಷ್ಟ 8000 ಖಾತೆಗಳನ್ನಾದರೂ ಮಾಡಬೇಕೆಂಬ ಸಂಕಲ್ಪ ಮಾಡಿರುವ ಶಾಸಕ ಪ್ರದೀಪ್ ಈಶ್ವರ್ ಅವರಿಗೆ ಎರಡು ದಿನದ ಮುಕ್ತಾಯಕ್ಕೆ 1587 ಅರ್ಜಿಗಳಷ್ಟೇ ಸಲ್ಲಿಕೆ ಕೊಂಚ ಸಮಾಧಾನ ತಂದಿದೆ.

ಜಿಲ್ಲಾ ಕೇಂದ್ರದಲ್ಲಿಯೇ 14 ಸಾವಿರಕ್ಕೂ ಹೆಚ್ಚು ನಿವೇಶನ, ಮನೆ, ಆಸ್ತಿಗಳಿಗೆ ಖಾತೆಗಳಿಲ್ಲವಾಗಿದೆ.ಇದರ ಮಹತ್ವ ಅರಿಯದ ನಗರವಾಸಿಗಳು ವದಂತಿಗಳಿಗೆ ಕಿವಿಗೊಟ್ಟು ಖಾತೆ ಮಾಡಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ ಎಂಬ ಸುದ್ದಿಯಿದೆ. ಇದರಿಂದ ಬೇಸರಗೊಂಡಿರುವ ಶಾಸಕ ಪ್ರದೀಪ್ ಈಶ್ವರ್ ನಗರದಲ್ಲಿಯೇ ಬೀಡುಬಿಟ್ಟು ಖಾತೆ ಮಾಡಿಸಿಕೊಳ್ಳುವಂತೆ ಮನವೊಲಿಸುತ್ತಿದ್ದಾರೆ.

ಬಿಖಾತಾ ಅಭಿಯನದ ಸ್ಥಳದಲ್ಲಿ ಶಾಸಕ ಪ್ರದೀಪ್ ಈಶ್ವರ್.

IN THE COURT OF THE CIVIL JUDGE AND J.M.F.C AT GOWRIBIDANUR
Crl mis no 144/2024.

Between: Srinivasa R S/o Late Ramappa, aged about 50 years Residing at Kurudi village, Hossur Hobli, Gowribidanur taluk Chikkaballapur district.
....Petitioner

And
The Thasiladar Registrar of Births and deaths Gowribidanur Town Gowribidanur Taluk .
....Respondent

Petition under section 13(3) of Karnataka registration of Birth and Death's Act 1969

Whereas, the above named petitioner have instituted the above said petition under section 13(3) Karnataka Birth's and Death's Registration Act of the direct the respondent to enter the date of death of petitioners mother Late Smt. Muddamma W/o Late Ramappa died on 28-08-2001 at Kurudi village, Hossur Hobli, Gowribidanur taluk, Chikkaballapur district hence the direct the respondent to issue the same to the petitioner, any persons interested in, opposing the above said petition may appear before 05/03/2025 this Hon'ble court in person or by pleader on at 11-00 AM and file objection to the same failing which the petition will be disposed of Ex-Parte.

Given under my hand and seal of court this 31st day of Jan. 2025.

By order of the court
Shirastedar,
Administerial officerPrl civil judge and jmfc court Gowribidanuru.
Advocate for petitioner
K.B.Anil, Thimmesh, Koratagere.

IN THE COURT OF THE CIVIL JUDGE AND J.M.F.C. AT KORATAGERE
C.Mis No: 21/2025

PETITIONERS:- 1. Nanjundappa.R. S/o Late Rajappa Aged about 40 years. Shubha.B.N. W/o Nanjundappa.R. 2 Aged about 32 years, R/o Pathaganahalli Village, Kolala Hobli, Koratagere Taluk. Tumakuru Dist.
V/s
RESPONDENT:- Tahasildar, Registrar of Birth and Death, Koratagere Taluk, Koratagere.

PUBLIC NOTIFICATION

Whereas the petitioners have filed the above petition to obtain the death certificate of the 1" petitioner Father and 2nd Petitioner Brother-in-law by name Rajappa S/o Late Bajjanna was died on 18-10-1997 at Pathaganahalli Village, Kolala Hobli, Koratagere Taluk, Tumakuru Dist. If anybody has any objection or right with respect to the above said fact and petition may filed objection in the above said case by personally or by counsel. The case is posted on 22/03/2025 at 11-00a.m. Otherwise the said matter will be disposed accordance with law.

Given under my hand and the seal of the court on this 23 day of 01 2025 at Koratagere.

By the order of Court
Shirastedar,
Civil Judge & JMFC AT KORATAGERE.
Advocate for Petitioners
S.K. Madhusudana,
Advocate/Notary Koratagere.

ಜಿಲ್ಲಾಡಳಿತದಿಂದ ಸಂತಕವಿ ಸರ್ವಜ್ಞ ಜಯಂತಿ | ಸಂಸದ ಮಲ್ಲೇಶ್ ಬಾಬು ಚಾಲನೆ

ಕೀಳರಿಮೆ ಬಿಟ್ಟು ಸರಕಾರದ ಸೌಲಭ್ಯ ಪಡೆಯಿರಿ

ಕೋಲಾರ: ರಾಜ್ಯದಲ್ಲಿ ಕುಂಬಾರ ಸಮಾಜದ ಕಡಿಮೆ ಜನಸಂಖ್ಯೆ ಇದ್ದಾರೆ. ಸರಕಾರಗಳು ಗುರುತಿಸಿಲ್ಲ ಎಂಬ ಕೀಳರಿಮೆ ಬಿಟ್ಟು ಸಿಗುವ ಸೌಲಭ್ಯಗಳನ್ನು ಪಡೆಯಲು ಸಂಘಟಿತರಾಗಬೇಕು ಎಂದು ಸಂಸದ ಎಂ ಮಲ್ಲೇಶ್ ಬಾಬು ಹೇಳಿದರು.

ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಗುರುವಾರ ಜಿಲ್ಲಾಡಳಿತದಿಂದ ಆಯೋಜಿಸಿದ್ದ ಸಂತಕವಿ ಸರ್ವಜ್ಞ ಜಯಂತಿಯಲ್ಲಿ ಮಾತನಾಡಿದರು.

ಯಾವುದೇ ಸಮುದಾಯಕ್ಕೆ ಜನಸಂಖ್ಯೆ ಮುಖ್ಯವಲ್ಲ, ಸೌಲಭ್ಯ ಪಡೆಯುವ ಶಕ್ತಿಯನ್ನು ರೂಪಿಸಿಕೊಳ್ಳಬೇಕಿದ್ದು ಸಮುದಾಯದ ಬಂಧುಗಳಿಗೆ ವಿಚಾರ ಮುಟ್ಟಿಸಿದರೆ ಅಷ್ಟೇ ನಿಮ್ಮ ಜೊತೆಗೆ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಮಾಜದ ಒಳಿತಿಗಾಗಿ ಏನಾದರೂ ಆಗಬೇಕಾದರೆ ನಿಮ್ಮೊಂದಿಗೆ ಸದಾ ಸಿದ್ದ ಎಂದರು.

ಎಂಎಲ್ಸಿ ಇಂಚರ ಗೋವಿಂದರಾಜು ಮಾತನಾಡಿ, ಕುಂಬಾರಿಕೆ ವೃತ್ತಿಯಲ್ಲಿ ಜೇಡಿ ಮಣ್ಣಿನ ಮಹತ್ವ ಕಳೆದುಕೊಂಡಿದ್ದು ಎಲ್ಲೋ ಕೆಲವು ಕಡೆ ಅಷ್ಟೇ ಮಣ್ಣು ಸಿಗುವ ಪರಿಸ್ಥಿತಿ ಬಂದಿದೆ. ಆಧುನಿಕತೆ ಬೆಳೆದಂತೆಲ್ಲಾ ಮಣ್ಣಿನ ಮಹತ್ವ ಕಳೆದುಕೊಂಡಿದ್ದು ಈ ಸಮುದಾಯ ಬೇರೆ ಆದಾಯದ ಮೂಲಗಳನ್ನು ಕಂಡುಕೊಳ್ಳಬೇಕಾಗಿದೆ. ನಾನು ಸಣ್ಣ ಸಮುದಾಯಗಳ ಧ್ವನಿಯಾಗಿ ಅಧಿವೇಶನದಲ್ಲಿ ಮಾತಾಡುತ್ತೇನೆ ಎಂದು ನುಡಿದರು.

ಕೋಲಾರದಲ್ಲಿ ನಡೆದ ಸರ್ವಜ್ಞ ಜಯಂತಿಯಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಜಯಂತಿ ಸಮಿತಿ ಪ್ರಧಾನ ಕಾರ್ಯದರ್ಶಿ ಡಾ.ಕೆ. ಕಲ್ಲಂಡೂರು ನಾಗರಾಜ್ ಮಾತನಾಡಿ, ರಾಜ್ಯದಲ್ಲಿ ಕುಂಬಾರ ಸಮಾಜ 15 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇದ್ದರೂ ಸರಕಾರ ಕೇವಲ 5 ಲಕ್ಷ ತೋರಿಸಿದೆ. ಕುಂಬಾರ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿ 75 ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕು. ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಸರ್ವಜ್ಞ ಭವನ ಆಗಬೇಕು. ಕುಂಬಾರ ಸಮುದಾಯ 2ಎ ಮೀಸಲಾತಿಯಲ್ಲಿ 118 ಬಲಿಷ್ಠ ಜಾತಿ ಜತೆ ಸ್ಪರ್ಧೆ ಮಾಡುವುದು ಹರಸಾಹಸ ಪಡಬೇಕಿದ್ದು ಹೀಗಾಗಿ ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದಿದೆ. ಕೆಟಗಿರಿ 1ಎ ಮೀಸಲಾತಿಗೆ ಸೇರಿಸಬೇಕು ಎಂದು ಮನವಿ ಮಾಡಿದರು.

ಆಚರಣಾ ಸಮಿತಿ ಅಧ್ಯಕ್ಷ ತಬಲ ನಾರಾಯಣಪ್ಪ ಮಾತನಾಡಿದರು. ಸಮುದಾಯದಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಯಿತು. ತಹಸೀಲ್ದಾರ್ ಡಾ.ನಯನ, ಕುಂಬಾಕಲಾ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಕೆ.ವಿ.ಶ್ರೀನಿವಾಸ್, ಮುಖಂಡರಾದ ಮಾಲೂರು ಅಪ್ಪಿ ರಾಜು, ರಾಜು ಶ್ರೀನಿವಾಸಪ್ಪ, ನಂದೀಶ್, ಕೆಂಬೋಡಿಶ್ರೀನಿವಾಸ್, ರೆಡ್ಡೆಪ್ಪ, ಜ್ಞಾನಮೂರ್ತಿ, ಚಿಕ್ಕರೆಡ್ಡಪ್ಪ, ಡಾ.ಸಹನಾನಾಗರಾಜ್, ಸರೋಜ, ನಿರೂಪಕಿ ಮಾಲೂರು ಗಾಯಿತ್ರಿ ಇದ್ದರು.

ಪಿಯುಸಿ ಪರೀಕ್ಷೆ: ಸಾಧನಗಳಿಗೆ ನಿಷೇಧ

ತುಮಕೂರು: ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯು ಮಾರ್ಚ್ 1ರಿಂದ 20ರವರೆಗೆ 35 ಪರೀಕ್ಷಾ ಕೇಂದ್ರದಲ್ಲಿ ನಡೆಯಲಿದ್ದು, ಮೊಬೈಲ್ ಫೋನ್, ರಿಸ್ಟ್ ವಾಚ್, ಬ್ಲೂಟೂತ್ ಸೇರಿದಂತೆ ವಿದ್ಯುನ್ಮಾನ ಸಾಧನಗಳನ್ನು ಪರೀಕ್ಷಾ ಕೊಠಡಿಗೆ ತರುವುದನ್ನು ನಿರ್ಬಂಧಿಸಬೇಕು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗುವುದು ಎಂದು ತಿಳಿಸಿದರು. ಪ್ರತಿ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾ ಕಣ್ಗಾವಲು ವ್ಯವಸ್ಥೆಯಿರುವ ಬಗ್ಗೆ ದೃಢಪಡಿಸಿಕೊಳ್ಳಬೇಕು. ಪ್ರತಿ ಕೇಂದ್ರದ ಚಟುವ ಟಿಕೆಗಳನ್ನು ಜಿಲ್ಲಾಡಳಿತದ ಕಚೇರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಚೇರಿ ಯಲ್ಲಿ ವೆಬ್ ಕಾಸ್ಟಿಂಗ್ ಮೂಲಕ ನಿಗಾವಹಿಸಲಾಗುವುದು ಎಂದು ತಿಳಿಸಿದರು. ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಮೂಲಕ ಯಾವುದೇ ಲೋಪದೋಷಗಳಿಲ್ಲದಂತೆ ಪರೀಕ್ಷೆ ನಡೆಸಲು ಅಧಿಕಾರಿಗಳಿಗೆ ನಿರ್ದೇಶಿಸಿದರು. ಜಿಪಂ ಸಿಇಒ ಜಿ. ಪ್ರಭು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಅಪರ ಜಿಲ್ಲಾಧಿಕಾರಿ ಡಾ: ಎನ್.ತಿಪ್ಪೇಸ್ವಾಮಿ, ಡಿಡಿಪಿಯು ಬಾಲಗುರುಮೂರ್ತಿ, ಶಿಕ್ಷಣ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಸಮಾಚಾರ ಸಣ್ಣದಲ್ಲ

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಮಂಡ್ಯ: ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ನಿಮಿತ್ತ ಫೆ.22 ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಸುಭಾಷ್ ನಗರ, ಅಶೋಕ ನಗರ, ವಿ.ವಿ. ರೋಡ್, ಹೊಸಹಳ್ಳಿ, ವಿನಾಯಕ ಬಡಾವಣೆ, ನೂರು ಅಡಿ ರೋಡ್, ನೆಹರು ನಗರ, ಹೊಸಹಳ್ಳಿ, ದ್ವಾರಕನಗರ, ಗಾಂಧಿನಗರ,ರಾಮ ನಗರ, ಕಾವೇರಿ ನಗರ 1 2 ನೇ ಹಂತ, ಚಂದ್ರ ದರ್ಶನ, ಚಾಮುಂಡೇಶ್ವರಿ ನಗರ, ಅನ್ನಪೂರ್ಣೇಶ್ವರಿ ನಗರ, ಶಂಕರನಗರ, ಇಂಡುವಾಳು, ಕಿರಗಂದೂರು, ಕಲ್ಲಹಳ್ಳಿ. ಕ್ಯಾತುಂಗೆರೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಸಹಕಾರ ಸಂಘದ ಅಧ್ಯಕ್ಷರಾಗಿ ರವೀಂದ್ರ

ಮಂಡ್ಯ: ಮಂಡ್ಯ ತಾಲೂಕು ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ಆರ್‌ಎಪಿಸಿಎಂಎಸ್ ನಿರ್ದೇಶಕ ಕೆ.ಸಿ.ರವೀಂದ್ರ ಮತ್ತು ಉಪಾಧ್ಯಕ್ಷರಾಗಿ ಸಿ.ಬಿ. ಕೃಷ್ಣೇಗೌಡ ಅವಿರೋಧ ಆಯ್ಕೆಯಾದರು. 11 ಮಂದಿ ನಿರ್ದೇಶಕರ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಸಾಲಗಾರರ ಕ್ಷೇತ್ರದಿಂದ ಚುನಾಯಿತದಾಗಿದ್ದ ಕಲ್ಲಹಳ್ಳಿ ಗ್ರಾಮದ ಕೆ.ಸಿ.ರವೀಂದ್ರ ಮತು ಚಿಕ್ಕಮಂಡ್ಯ ಗ್ರಾಮದ ಸಿ.ಬಿ.ಕೃಷ್ಣೇಗೌಡ ಆಯ್ಕೆಯಾಗಿದ್ದಾರೆ. ನೂತನ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ನಂತರ ಅಭಿನಂಧಿಸಲಾಯಿತು. ತರುವಾಯ ಮಾತನಾಡಿದ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಂ.ಕೃಷ್ಣ, ಸದರಿ ಸಹಕಾರ ಸಂಘದ ವ್ಯಾಪ್ತಿಯ ಗ್ರಾಮಗಳಾದ ಕಲ್ಲಹಳ್ಳಿ, ಹೊಸಹಳ್ಳಿ, ಚಿಂದಗಿರಿ ದೊಡ್ಡಿ, ಚಿಕ್ಕಮಂಡ್ಯ, ದೇವೇಗೌಡದೊಡ್ಡಿ ಮತ್ತು ಮಂಡ್ಯ ನಗರ ವ್ಯಾಪ್ತಿಯ ನಿರ್ದೇಶಕರು ಸರ್ವಾನುಮತದ ಆಯ್ಕೆಗೆ ಸಹಕಾರನೀಡಿದ್ದಾರೆ ಎಂದು ತಿಳಿಸಿದರು. ಆಡಳಿತ ಮಂಡಳಿಯ ನಿರ್ದೇಶಕರಾದ ಬೋರೇಗೌಡ, ಎನ್.ನಾಗರಾಜು, ಗೌರಮ್ಮ, ಸುನಂದ, ಡಿ.ಮೋಹನ್, ಎಂ.ಆರ್.ಸಂದೀಪ್, ರತ್ನಶಿವರಾಜ್, ಧರ್ಮೇಂದ್ರ, ರೇವಣ್ಣ ಹಾಗೂ ಮಾಜಿ ಅಧ್ಯಕ್ಷರಾದ ಬೋರೇಗೌಡ, ಎಂ.ರಮೇಶ್ ಪುಟಲಿಂಗೇಗೌಡ ಹಾಗೂ ಆರ್‌ಎಪಿಸಿಎಂಎಸ್ ಅಧ್ಯಕ್ಷ ಯು.ಸಿ.ಶೇಖರ್, ಪಿ.ಎಲ್.ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸೋಮಶೇಖರ್, ಹೊಸಹಳ್ಳಿ ಶಿವಲಿಂಗೇಗೌಡ ಇದ್ದರು.

ಉಪ್ಪಾರ ಸಮಾಜದ ಅಭಿವೃದ್ಧಿಗೆ ಸಹಕಾರ

ಕೆಆರ್ ನಗರ: ದೇವಸ್ಥಾನ ಮತ್ತು ಉಪ್ಪಾರ ಸಮಾಜದ ಅಭಿವೃದ್ಧಿ ಕೆಲಸಗಳಿಗೆ ಸಹಕಾರ ನೀಡುವುದಾಗಿ ಪುರಸಭಾ ಅಧ್ಯಕ್ಷ ಶಿವು ನಾಯಕ್ ಹೇಳಿದರು. ಪಟ್ಟಣದ ಉಪ್ಪಾರ ರಾಮಮಂದಿರದ ಆವರಣದಲ್ಲಿರುವ ಸೂರ್ಯನಾರಾಯಣ ದೇವಸ್ಥಾನದ ನಾಲ್ಕನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಹಿಂದುಳಿದ ಸಮಾಜಗಳು ಮಕ್ಕಳಿಗೆ ಶಿಕ್ಷಣ ನೀಡಬೇಕು, ಮಕ್ಕಳು ವಿದ್ಯಾವಂತರಾದರೆ ಮನೆ ಮತ್ತು ಸಮಾಜ ಅಭಿವೃದ್ಧಿಯಾಗಲಿದೆ. ನಾನು ಸಮಾಜದ ಅಭಿವೃದ್ಧಿ ಕೆಲಸಗಳಿಗೆ ಸದಾ ಸ್ಪಂದಿಸುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಪುರಸಭಾ ಸದಸ್ಯರಾದ, ಶಂಕರ್, ಉಮೇಶ್, ಉಪಾಧ್ಯಕ್ಷರಾದ ವಸಂತಮ್ಮ ಕೃಷ್ಣೇಗೌಡರ ಪುತ್ರ ವಿನಯ್, ಸಮಾಜದ ಯಜಮಾನರ ಕೇಶವ್ ಮೂರ್ತಿ, ಅಧ್ಯಕ್ಷ ಟಿ ಕೃಷ್ಣ, ಕಾರ್ಯದರ್ಶಿ ರಂಗರಾಜ್, ಸಂಘಟನಾ ಕಾರ್ಯದರ್ಶಿ ಕೆ ಟಿ ಜಯರಾಮ್ ನವಗ್ರಹ ದೇವಸ್ಥಾನದ ಅಧ್ಯಕ್ಷ ಕೆ ಪಿ ಅಶ್ವಥ್ ನಾರಾಯಣ, ಸಂಘದ ಸದಸ್ಯರಾದ ದಯಾನಂದ್, ರಾಜಣ್ಣ, ರಾಘವೇಂದ್ರ, ವೆಂಕಟೇಶ್ವ, ನವೀನ್, ಗುರುಪ್ರಸಾದ್, ಈಶ, ಚಂದು,, ಎನ್ ರಾಮು, ಸುರೇಶ್, ಯೋಗೇಶ್ ಕುಮಾರ್, ಗೀತಾ ಮಹಿಳಾ ಸಮಾಜದ ಅಧ್ಯಕ್ಷೆ ಅಂಬುಜ, ಮಾರುತಿ ಯುವಕರ ಸಂಘದ ಅಧ್ಯಕ್ಷ ಗೌತಮ್ ಜಾದವ್, ಪುರಸಭಾ ಮಾಜಿ ಸದಸ್ಯ ಯೋಗಾನಂದ ಇದ್ದರು.

ಉದಯಗಿರಿ ಗಲಾಟೆ ಆರೋಪಿಗಳಿಗೆ ನೆರವು

ಮೈಸೂರು: ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣದಲ್ಲಿ ಬಾಗಿಯಾಗಿ ಬಂಧನಕ್ಕೊಳಗಾಗಿರುವ ಆರೋಪಿಗಳಿಗೆ ನೆರವಾಗಲು ಸಾಮಾಜಿಕ ಕಾರ್ಯಕರ್ತ ಅಬ್ದುಲ್ ರಜಾಕ್ ಮುಂದೆ ಬಂದಿದ್ದಾರೆ. ಶುಕ್ರವಾರ ಮೈಸೂರಿಗೆ ಆಗಮಿಸಿದ ರಜಾಕ್ ಮಾಧ್ಯಮಗಳೊಂದಿಗೆ ಮಾತನಾಡಿ, ಪೊಲೀಸರ ಮೇಲೆ ಯಾರೇ ಹಲ್ಲೆ ಮಾಡಿದ್ದರೂ ತಪ್ಪೇ, ಇದಕ್ಕಾಗಿ ನಾನು ಬಹಿರಂಗವಾಗಿ ಕ್ಷಮೆಯಾಚಿಸುತ್ತೇನೆ ಎಂದರು. ಈ ಪ್ರಕರಣದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನರ ಮೇಲೆ ಕೇಸು ದಾಖಲಾಗಿದೆ. ಇದರಲ್ಲಿ ಸಣ್ಣ ಪುಟ್ಟ ಹುಡುಗರು, ಅಮಾಯಕರು ಇದ್ದಾರೆ. ಇವರನ್ನು ಬಿಡಿಸುವ ಸಲುವಾಗಿ ವಕೀಲರನ್ನು ನೇಮಕ ಮಾಡಲು ಬಂದಿದ್ದೇನೆ ಎಂದರು. ಉದಯಗಿರಿಯಲ್ಲಿ ಮುಂದೆ ಒಂದು ಶಾಂತಿ ಸಭೆ ಮಾಡೋಣ. ಭವಿಷ್ಯದಲ್ಲಿ ಇಂತಹ ಘಟನೆಗಳು ನಡೆಯದ ರೀತಿಯಲ್ಲಿ ನೋಡಿಕೊಳ್ಳೋಣ, ಪ್ರವಾದಿಯವರ ಬಗ್ಗೆ ಕೆಟ್ಟದಾಗಿ ಮಾತನಾಡಿದರೆ ಯಾರಿಗೆ ಆದರೂ ಕೋಪ ಬರುತ್ತದೆ ಎಂದು ಹೇಳಿದರು.

{ಸಂತೋಷ್ ಲಾಡ್ } ಸಚಿವ

ಈ ದೇಶದಲ್ಲಿ ಬಿಜೆಪಿ ಇರಲೇಬಾರದು ಎಂಬುದು ನನ್ನ ಅಭಿಪ್ರಾಯ. ಆದರೆ, ಅವರಿಗೆ ಜನಮನ್ನಣೆ ದೊರೆತು ಅಧಿಕಾರ ನಡೆಸುತ್ತಿದ್ದಾರೆ. ಇನ್ನಾದರೂ ದೇಶದ ಅಭಿವೃದ್ಧಿಗಾಗಿ ಉಳಿದ ಅವಧಿಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಪ್ರಧಾನಿಮಂತ್ರಿ ಯಾಗಲಿ.

ಚಾಮರಾಜನಗರದಲ್ಲಿ ಚಾವಿವಿ ಉಳಿಸುವಂತೆ ಆಗ್ರಹಿಸಿ ಭಾರತೀಯ ವಿದ್ಯಾ ರ್ಥಿ ಸಂಘದ ವತಿಯಿಂದ ಪ್ರತಿಭಟನೆ

ಎಸ್ಸಿ, ಎಸ್ಟಿ, ಒಬಿಸಿ ವಿದ್ಯಾರ್ಥಿಗಳಿಗೆ ಅನ್ಯಾಯ

ಚಾಮರಾಜನಗರದಲ್ಲಿ ಚಾವಿವಿ ಉಳಿಸುವಂತೆ ಆಗ್ರಹಿಸಿ ಭಾರತೀಯ ವಿದ್ಯಾ ರ್ಥಿ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ: ಚಾಮರಾಜನಗರ ವಿಶ್ವವಿದ್ಯಾನಿಲಯವನ್ನು ಉಳಿಸುವಂತೆ ಆಗ್ರಹಿಸಿ ಭಾರತೀಯ ವಿದ್ಯಾ ರ್ಥಿ ಸಂಘದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಸಂಘದ ಜಿಲ್ಲಾ ಸಂಯೋಜಕ ಪರ್ವತ್ ರಾಜ್ ಅವರ ನೇತೃತ್ವದಲ್ಲಿ ಸಮಾವೇಶ ಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿ ಹೊರಟು ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು. ನಂತರ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾಹುಡೇದ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಭಾರತೀಯ ವಿದ್ಯಾರ್ಥಿ ಸಂಘದ ಜಿಲ್ಲಾ ಸಂಯೋಜಕ ಪರ್ವತ್‌ರಾಜ್ ಮಾತನಾಡಿ, ಚಾಮರಾಜನಗರ ವಿಶ್ವವಿದ್ಯಾನಿಲಯವನ್ನು ಕಳೆದ ಬಿಜೆಪಿ ಸರಕಾರ ಮಂಜೂರು ಮಾಡಿತ್ತು. ಜಿಲ್ಲೆಯಲ್ಲಿ ಎಸ್ಸಿ, ಎಸ್ಟಿ, ಒಬಿಸಿಗಳು ಹೆಚ್ಚಾಗಿದ್ದು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸಿತು. ಆದರೆ, ಒಂದು ವಿಶ್ವವಿದ್ಯಾನಿ ಲಯ ನಡೆಸಲು 300-350 ಕೋಟಿ ಅಗತ್ಯವಿದ್ದು ಅಷ್ಟು ಹಣ ಇಲ್ಲ ಎಂಬ ಕಾರಣ ನೀಡಿ ಸರಕಾರ ರಾಜ್ಯದ 7 ವಿವಿಗಳನ್ನು ಮುಚ್ಚಲು ಮುಂದಾಗಿರುವುದು ಸರಿಯಲ್ಲ ಎಂದರು.

ಕಪ್ಪುಬಾವುಟ ಎಚ್ಚರಿಕೆ:

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಮರಾಜನಗರಕ್ಕೆ ಬಂದ ವೇಳೆ ಸಂಘದ ವತಿಯಿಂದ ಕಪ್ಪುಬಾವುಟ ಪ್ರದರ್ಶನ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಪ್ರಕಾಶ್, ಯಶೋಧ, ಪ್ರಿಯ,ಶ್ವೇತ, ವೆಂಕಟೇಶ್, ಹರೀಶ್, ರಂಗಸ್ವಾಮಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇಂದು ಚಾಮರಾಜನಗರ ವಿವಿ ಉಳಿಸಿ ಅಭಿಯಾನ

ಚಾಮರಾಜನಗರ: ಚಾಮರಾಜನಗರ ವಿಶ್ವವಿದ್ಯಾನಿಲಯವನ್ನು ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ವಿಲೀನ ಮಾಡಲಿದ್ದು ಚಾಮರಾಜನಗರ ವಿವಿ ಉಳಿಸಿ ಅಭಿಯಾನಕ್ಕೆ ಇಂದು ಚಾಲನೆ ನೀಡಲಾಗುವುದು ಎಂದು ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಹೇಳಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ.ವಿದ್ಯಾರ್ಥಿಗಳು, ಪೋಷಕರು, ಪ್ರಗತಿಪರ ಸಂಘಟನೆಗಳ ಮುಖಂಡರೊಂದಿಗೆ ಚಾಮರಾಜನಗರ ವಿವಿ ಉಳಿಸಿ ಅಭಿಯಾನ ಕುರಿತು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬೆಳಗ್ಗೆ 10.30ಕ್ಕೆ ಸಭೆ ಕರೆಯಲಾಗಿದ್ದು ಚರ್ಚಿಸಿ ನಂತರ ಅಭಿಯಾನಕ್ಕೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಜಿಲ್ಲೆಯಲ್ಲಿ ಎಸ್ ಸಿ, ಎಸ್ಟಿ, ಒಬಿಸಿ, ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆ ಯಲ್ಲಿದ್ದಾರೆ. ಚಾಮರಾಜನಗರ ವಿಶ್ವವಿದ್ಯಾನಿಲಯದಿಂದಾಗಿ

ಜಿಲ್ಲೆಯು ಶೈಕ್ಷಣಿಕವಾಗಿ ಹೆಚ್ಚಿನ ಪ್ರಗತಿ ಸಾಧಿಸಿದೆ. ಸರಕಾರ ಹಣಕಾಸಿನ ಸಮಸ್ಯೆಯಿಂದಾಗಿ ಚಾಮರಾಜನಗರ ಸೇರಿದಂತೆ ರಾಜ್ಯದ 9 ವಿವಿಗಳನ್ನು ಮುಚ್ಚಲು ಮುಂದಾಗಿದೆ. ಇದರಿಂದ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ತೊಂದರೆಯಾಗಲಿದೆ ಎಂದರು.

ವಿವಿಯನ್ನು ವಿಲೀನ ಮಾಡುವ ಬದಲು ಸಾಕಷ್ಟು ಅನುದಾನ ನೀಡಿ ಅಭಿವೃದ್ಧಿಪಡಿಸಬೇಕು. ವಿವಿಯಲ್ಲಿ ಪ್ರಸ್ತುತ 100ಕ್ಕೂ ಹೆಚ್ಚು ಬೋಧಕ ಬೋಧಕೇತರ ವರ್ಗದ ಸಿಬ್ಬಂದಿ ಇದ್ದು ಮುಚ್ಚಿದರೆ ಅವರಿಗೆ ತೊಂದರೆಯಾಗುತ್ತದೆ ಎಂದು ತಿಳಿಸಿದರು.



ವೆಂಕಟರಮಣಸ್ವಾಮಿ ಮಾತನಾಡಿದರು.

ಈ ಸಭೆಗೆ ವಿದ್ಯಾರ್ಥಿಗಳು, ಪೋಷಕರು, ಪ್ರಗತಿಪರ ಸಂಘಟನೆಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕು ಎಂದು ಮನವಿ ಮಾಡಿದರು.

ಸಿಎಂ ಮನವಿ:

ಮುಂದಿನ ತಿಂಗಳು ಜಿಲ್ಲೆಯ ಮಹದೇಶ್ವರಬೆಟ್ಟಕ್ಕೆ ಬರುವ ಸಿಎಂ ಸಿದ್ದರಾಮಯ್ಯ ಅವರ ಬಳಿಯೂ ವಿಶ್ವವಿದ್ಯಾಲಯ ಉಳಿಸುವಂತೆ ಮನವಿ ಸಲ್ಲಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ದಲಿತ ಸಂಘರ್ಷ ಸಮಿತಿ ಡಿ.ಜಿ.ಸಾಗರಬಣದ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ, ಕನ್ನಡಪರ ಹೋರಾಟಗಾರ ನಿಜಧ್ವನಿ ಗೋವಿಂದರಾಜು, ರಂಗಸ್ವಾಮಿಕಾಗಲವಾಡಿ, ಕೆಂಪರಾಜು, ಗೌರಿಶಂಕರ್, ರಾಜಣ್ಣ ಹಾಜರಿದ್ದರು.

ಬ್ಯಾಂಕ್ ವ್ಯವಹಾರದ ಬಗ್ಗೆ ಜಾಗೃತಿ ಮೂಡಿಸಿ

ಮೈಸೂರು: ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕ್ ವ್ಯವಹಾರಗಳ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಿ ಸೈಬರ್ ಕ್ರೈಂನಂಥ ಕೃತ್ಯಗಳ ಬಗ್ಗೆ ಪ್ರತಿಯೊಂದು ಬ್ಯಾಂಕ್ ಗಳು ಗಮನ ವಹಿಸಬೇಕು ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜೇಂದ್ರ, ಒಡೆಯರ್ ಹೇಳಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಡಿಸಿಸಿ ಹಾಗೂ ಡಿಎಲ್ ಆರ್ ಸಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಪ್ರತಿಯೊಂದು ಬ್ಯಾಂಕ್‌ಗಳು ಪ್ರತಿ ಜಿಲ್ಲೆಗಳಲ್ಲಿ ಕ್ಯಾಂಪೇನ್ ಗಳನ್ನು ನಡೆಸಬೇಕು. ಹೊಸ ಹೊಸ ಯೋಜನೆಗಳ ಮೂಲಕ ಸಾರ್ವಜನಿಕರ ಕನಸುಗಳಿಗೆ ಜೀವವನ್ನು ತುಂಬಬೇಕು ಎಂದು ಹೇಳಿದರು.

ಹೆಚ್ಚು ಸಮಯವನ್ನು ಬ್ಯಾಂಕ್ ವ್ಯವಹಾರಗಳನ್ನು ನೀಡುವುದರ ಮೂಲಕ ಹೆಚ್ಚು ಅಂಕಿ ಸಂಖ್ಯೆಗಳ ಡೇಟಾವನ್ನೂ ಸಂಗ್ರಹ ಮಾಡಬೇಕು. ಜಿಲ್ಲಾ ಬ್ಯಾಂಕ್‌ವಾರು ಯಾವ ಯಾವ ಬ್ಯಾಂಕ್ ಗಳು ಕೃಷಿಗೆ , ಶಿಕ್ಷಣಕ್ಕೆ , ವಸತಿಗಳಿಗೆ, ವೈಯಕ್ತಿಕ ಲೋನ್ ಕೊಡಿಸುವುದರ ಮೂಲಕ ಎಷ್ಟು ಗುರಿ ತಲುಪಿದೆ ಎಂಬುದನ್ನು ವಿವಿಧ ಜಿಲ್ಲಾ ಬ್ಯಾಂಕ್‌ವಾರು ಮಾಹಿತಿ ಪಡೆದರು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜೇಂದ್ರ, ಒಡೆಯರ್ ಡಿಸಿಸಿ ಹಾಗೂ ಡಿಎಲ್ ಆರ್ ಸಿ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ, ಲೀಡ್ ಬ್ಯಾಂಕ್ ಮ್ಯಾನೇಜರ್ ನಾಗೇಶ್ ವಿ. ಎನ್, ವಿವಿಧ ಬ್ಯಾಂಕ್ ಗಳ ಮ್ಯಾನೇಜರ್ ಗಳು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಕೊಡುಗೆಯಾಗಿ ಹೈಮಾಸ್ಕ್ ಲೈಟ್

ಕೆ.ಆರ್.ಪೇಟೆ: ತಾಲೂಕಿನ ಬೂಕನಕೆರೆ ಹೋಬಳಿ ಕಾಶಿ ಮುರಕನಹಳ್ಳಿ ಗ್ರಾಮದ ಕಾಂಗ್ರೆಸ್ ಯುವ ಮುಖಂಡ ಎಂ. ಪಿ ಪ್ರೀತಮ್ ಗೌಡ ಹಾಗೂ ಅಶೋಕ್ ನೇತೃತ್ವದಲ್ಲಿ ಪುರಸಭಾ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಕೆ.ಬಿ ಮಹೇಶ್ ಅವರ ಹುಟ್ಟು ಹಬ್ಬ ಆಚರಿಸಲಾಯಿತು.

ಬಳಿಕ ಮಾತನಾಡಿದ ಕಾಂಗ್ರೆಸ್ ಮುಖಂಡ ಎಂ.ಪಿ ಪ್ರೀತಮ್ ಗೌಡ, ನಮ್ಮ ನಾಯಕರಾದ ಕೆ.ಬಿ.ಮಹೇಶ್ ಅವರ 60ನೇ ವರ್ಷದ ಹುಟ್ಟುಹಬ್ಬದ ನೆನಪಿಗೆ ಗ್ರಾಮಕ್ಕೆ ಒಂದು ಲಕ್ಷ ರು. ಮೌಲ್ಯದ ಹೈ ಮಾಸ್ಕ್ ಲೈಟ್ ಉಡುಗೊರೆಯಾಗಿ ನೀಡಲಿದ್ದಾರೆ. ಇದೇ ವೇಳೆ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ, ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಸಿದ್ದೇವೆ ಎಂದರು.

ನಾಗರಿಕ ಸಮಾಜಕ್ಕೆ ಕೆ. ಬಿ.ಮಹೇಶ್‌ರಂಥ ಹೃದಯವಂತ ನಾಯಕರು ಬೇಕಾಗಿದ್ದಾರೆ. ಜಿಲ್ಲಾ ಹಾಲು ಒಕ್ಕೂಟದ ಚುನಾವಣೆಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ಡಾಲು ರವಿ ಮತ್ತು ಎಂ.ಬಿ ಹರೀಶ್ ಅವರ ಆಡಳಿತ ಅವಧಿಯಲ್ಲಿ ಹಾಲು ಉತ್ಪಾದಕರ ಅಭಿವೃದ್ಧಿಗೆ ಶ್ರಮ ವಹಿಸಲಿ ಎಂದು ಶುಭಕೋರಿದರು.

ಪುರಸಭಾ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಕೆ.ಬಿ ಮಹೇಶ್ ಅವರ ಹುಟ್ಟು ಹಬ್ಬ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖಂಡ ಕಾಶಿ ಮುರುಕನಹಳ್ಳಿ ಅಶೋಕ್ , ಮನ್ ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ ಹರೀಶ್ ,ತಾ. ಪಂ ಮಾಜಿ ಸದಸ್ಯ ಬಿ.ಟಿ ವೆಂಕಟೇಶ್,ಕಾಂಗ್ರೆಸ್ ಮುಖಂಡ ಈಶ್ವರ್ ಪ್ರಸಾದ್,ಗಂಜಿಗೆರೆ ಶಶಿಧರ್,ಪಿ ಎಲ್ ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ,ಬೂಕನಕೆರೆ ಅಡಿಕೆ ಮಹೇಶ್,ಬಲ್ಲೇನಹಳ್ಳಿ ರಮೇಶ್, ಇತರ ಮುಖಂಡರಿದ್ದರು.

ಕ್ಯಾನ್ಸರ್ ನಿರೋಧಕ ಲಸಿಕೆ ವಿತರಣೆ

ಮಡಿಕೇರಿ: ರೋಟರಿ ಮಡಿಕೇರಿ ವತಿಯಿಂದ ನಗರದ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿಯರಿಗೆ ಗರ್ಭಕಂಠದ ಕ್ಯಾನ್ಸರ್ ನಿರೋಧಕ ಲಸಿಕೆ ವಿತರಿಸಲಾಯಿತು.

ನಗರದ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮೈಸೂರಿನ ಮದರ್‌ಹುಡ್ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಸೋನಿಯಾ ಮಂದಪ್ಪ, ಗರ್ಭಕಂಠದ ಕ್ಯಾನ್ಸರ್ ಮಹಿಳೆಯರನ್ನು ಕಾಡುತ್ತಿರುವ ಅತಿ ಮಾರಕ ಕಾಯಿಲೆಯಾಗಿದ್ದು, ಪ್ರತಿ 8 ನಿಮಿಷಕ್ಕೆ ಒಬ್ಬ ಮಹಿಳೆ ಕ್ಯಾನ್ಸರ್ ನಿಂದ ಸಾವನ್ನಪ್ಪುತ್ತಿದ್ದಾರೆ. ಇದು ಬಾರದಂತೆ ತಡೆಗಟ್ಟಲು ಲಸಿಕೆಯ ಅನಿವಾರ್ಯತೆ ಇದೆ. ಇದೇ ಕಾರಣಕ್ಕೆ 9 ರಿಂದ 14 ವಯಸ್ಸಿನ ಮಕ್ಕಳಿಗೆ ಹೆಚ್‌ಪಿವಿ ಲಸಿಕೆ ನೀಡಲಾಗುತ್ತಿದ್ದು, ಈ ಬಗ್ಗೆ ಮಕ್ಕಳಲ್ಲಿ ಹಾಗೂ ಪೋಷಕರಲ್ಲಿ ಅರಿವು ಮೂಡಿಸುವುದು ಅಗತ್ಯವಾಗಿದೆ ಎಂದರು.

ಸುಮಾರು 2 ಸಾವಿರ ರೂ. ವೆಚ್ಚದ ಈ ಲಸಿಕೆಯನ್ನು ರೋಟರಿ ಸಂಸ್ಥೆ ವಿದ್ಯಾರ್ಥಿಗಳಿಗೆ ನೀಡುತ್ತಿರುವುದು ಶ್ಲಾಘನೀಯ. ಕೊಡಗಿನಲ್ಲಿ ಇದು ಮೊದಲ ಕಾರ್ಯಕ್ರಮವಾಗಿದೆ. ವಿದ್ಯಾರ್ಥಿನಿಯರು ಹಾಗೂ ಪೋಷಕರು ಯಾವುದೇ ಭಯ ಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ಉಪ ಪ್ರಾಂಶುಪಾಲೆ ಕೆ.ವಿ.ಶಶಿಕಲಾ ಮಾತನಾಡಿ, ಯುವ ಶಕ್ತಿಯನ್ನು ಜಾಗೃತಗೊಳಿಸಿ, ಪ್ರೋತ್ಸಾಹಿಸುವ ಕಾರ್ಯ ರೋಟರಿ ಸಂಸ್ಥೆಯಿಂದ ಆಗುತ್ತಿದೆ. ಈ ಸಂಸ್ಥೆ ಆರೋಗ್ಯವಂತ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿರುವುದು ಶ್ಲಾಘನೀಯವೆಂದರು.

ರೋಟರಿ ಮಡಿಕೇರಿ ವತಿಯಿಂದ ನಗರದ ಸರಕಾರಿ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿಯರಿಗೆ ಗರ್ಭಕಂಠದ ಕ್ಯಾನ್ಸರ್ ನಿರೋಧಕ ಲಸಿಕೆ ವಿತರಿಸಲಾಯಿತು.

ರೋಟರಿ ಜಿಲ್ಲಾ ಮಾಜಿ ಗವರ್ನರ್ ಸುರೇಶ್ ಚಂಗಪ್ಪ ಮಾತನಾಡಿ, ಆರೋಗ್ಯದ ಬಗ್ಗೆ ರೋಟರಿ ಹೊಂದಿರುವ ಕಾಳಜಿ ಶ್ಲಾಘನೀಯ. ಯಾವುದೇ ಮೌಢ್ಯಗಳು ಇದ್ದರೆ ಅದನ್ನು ಬಿಟ್ಟು ವಿದ್ಯಾರ್ಥಿಗಳು ಮುಂದೆ ಬರಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಗವರ್ನರ್ ಡಾ.ರವಿ ಅಪ್ಪಾಜಿ, ರೋಟರಿ ಮಡಿಕೇರಿ ಅಧ್ಯಕ್ಷ ಸುದಯ್ ನಾಣಯ್ಯ,ರೋಟರಿ ವೃತ್ತಿಪರ ನಿರ್ದೇಶಕ ಅನಿಲ್ ಕೃಷ್ಣಾನಿ, ಸದಸ್ಯೆ ಮಲ್ಲಿಗೆ ಪೈ, ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು. 50 ವಿದ್ಯಾರ್ಥಿನಿಯರು ಲಸಿಕೆ ಪಡೆದುಕೊಂಡರು.

ಒಳ್ಳೆಯ ಕಾರ್ಯಗಳಿಂದ ಆತ್ಮತೃಪ್ತಿ: ಶ್ರೀಗಳು

ಭಾರತೀನಗರ: ನಾವು ಮಾಡುವ ಒಳ್ಳೆಯ ಕಾರ್ಯಗಳಿಂದ ಆತ್ಮತೃಪ್ತಿ ಸಿಗುತ್ತದೆಯೇ ಹೊರತು ಇನ್ನೊಬ್ಬರಿಗೆ ಕೆಡಕು ಬಯಸುವುದರಿಂದಲ್ಲ ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥಸ್ವಾಮಿ ಹೇಳಿದರು.

ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಗ್ರಾಮದಲ್ಲಿ ಶ್ರೀಕಾಲಭೈರವೇಶ್ವರಸ್ವಾಮಿ ನಂದಿರಥ ಮತ್ತು ರಥದ ತಂಗುದಾಣ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಧರ್ಮದ ಪರಂಪರೆಯನ್ನು ನಾವು ಉಳಿಸಿ ಬೆಳೆಸಿಕೊಂಡು ಹೋಗಬೇಕು. ಪ್ರತೀಯೊಬ್ಬರು ಧರ್ಮದಿಂದ ನಡೆದಾಗ ಮಾತ್ರ ನಮಗೆ ಮುಕ್ತಿ ಸಿಗಲು ಸಾಧ್ಯ. ಕೆಡಕು ಬಯಸುವರು ಎಂದಿಗೂ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಹಾಗಾಗಿ ಗ್ರಾಮದಲ್ಲಿ ನಡೆಯುವ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಪ್ರತಿಯೊಬ್ಬರು ಕೈಜೋಡಿಸಬೇಕೆಂದು ಹೇಳಿದರು.

ಇದೇ ವೇಳೆ ಡಿಸಿಸಿ ಬ್ಯಾಂಕ್ ನಿರ್ದೇಶಕ ಎಚ್.ಸಿ.ಕಾಳೇಗೌಡ, ಕರ್ನಾಟಕ ಟ್ರ್ಯಾನ್ಸ್‌ಪೋರ್ಟ್ ಮಾಲೀಕ ಕುದುರಗುಂಡಿ ನಾಗೇಶ್, ಗ್ರಾ.ಪಂ ಅಧ್ಯಕ್ಷ ಕೆ.ಎನ್.ಶಿವಲಿಂಗೇಗೌಡ, ನಿವೃತ್ತ ಪ್ರಾಂಶುಪಾಲ ಡಿ.ಎ.ಕೆರೆ ಮಾಯಪ್ಪ, ಪತ್ರಕರ್ತ ಅಣ್ಣೂರು ಸತೀಶ್, ಚಿಕ್ಕರಸಿನಕೆರೆ ಯಜಮಾನ್ ಶಿವಲಿಂಗಯ್ ಅವರನ್ನು ಅಭಿನಂದಿಸಿ ಗೌರವಿಸಲಾಯಿತು.

ಚಿಕ್ಕರಸಿನಕೆರೆ ಹಾಗೂ ದೊಡ್ಡರಸಿನಕೆರೆ ಶ್ರೀಕಾಲಭೈರವೇಶ್ವರ ಸ್ವಾಮಿ ಬಸಪ್ಪ, ಸಣ್ಣಕ್ಕಿರಾಯಸ್ವಾಮಿ ಬಸವಪ್ಪ, ಏಳೂರಮ್ಮ, ಕಾಳಮ್ಮ ಪೂಜೆಗಳು, ಚಿಕ್ಕಮ್ಮನ ಪೆಟ್ಟಿ ದೇವರುಗಳೊಂದಿಗೆ ಡಾ. ಶ್ರೀನಿಶ್ಚಲಾನಂದನಾಥಸ್ವಾಮಿಗಳ ಮೆರವಣಿಗೆ ನಡೆಯಿತು.

ಡಾ.ನಿಶ್ಚಲಾನಂದನಾಥಸ್ವಾಮಿ ನಂದಿರಥ ಉದ್ಘಾಟಿಸಿದರು.

ವೇದಿಕೆಯಲ್ಲಿ ನಾಡಗೌಡರ ಡಿ.ಎಚ್.ಶಿವಕುಮಾರ್, ಮುಖಂಡರಾದ ರಘು, ಡಿ.ಎಚ್.ಅಮರ್, ಡಿ.ಎಂ.ರಾಜು, ಹೆಗ್ಡೆ ಡಿ.ಬಿ.ಮಾಯೀಗೌಡ, ಎಂ.ಕೆ.ಈರಯ್ಯ, ಡಿ.ಕೆ. ಮಾಯೀಗೌಡ, ಕರಿಯಪ್ಪ, ಪ್ರಸನ್ನ, ಚಿಕ್ಕಹುಚ್ಚಯ್ಯ, ಪ್ರದೀಪ್, ನಂದೀಶ, ಶಿವು, ಮಹೇಶ, ಬಿಳೀಗೌಡ, ಸುರೇಶ, ಚೇತು, ಶರತ್ ಉಪಸ್ಥಿತರಿದ್ದರು.

ಕೆಮ್ಮಣ್ಣುನಾಲೆ ಕಾಮಗಾರಿ ಶೀಘ್ರ ಆರಂಭ

ಮದ್ದೂರು: ಮದ್ದೂರು ಕೆರೆ ಅಚ್ಚುಕಟ್ಟು ಭಾಗದ ಕೆಮ್ಮಣ್ಣು ನಾಲಾ ವ್ಯಾಪ್ತಿಯ ರೈತರು ಭತ್ತ, ಅಲ್ಪಾವಧಿ ಬೆಳೆಗಳನ್ನು ಹಾಕದಂತೆ ರೈತರ ಸಭೆ ವೇಳೆ ತಿಳಿಸಿರುವುದಾಗಿ ಶಾಸಕ ಕೆ.ಎಂ. ಉದಯ ತಿಳಿಸಿದರು.

ಸೋಮನಹಳ್ಳಿ ಗ್ರಾಮದ 40 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಉಪ್ಪಾರದೊಡ್ಡಿ ಗ್ರಾಮದಲ್ಲಿ 40 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಕೆಮ್ಮಣ್ಣು ನಾಲಾ ಆಧುನೀಕರಣಕ್ಕೆ ಈಗಾಗಲೇ ಹಣ ಬಿಡುಗಡೆಯಾಗಿದ್ದು ಸರ್ವೆ ಕಾರ್ಯದ ಬಳಿಕ ಕಾಮಗಾರಿ ಆರಂಭ ಗೊಳ್ಳಲಿರುವುದಾಗಿ ಹೇಳಿದರು.

ಮದ್ದೂರು ಪಟ್ಟಣದ ಖಾರಾಬಿ ಬಯಲು ಮತ್ತು ವೈದ್ಯನಾಥಪುರ ವ್ಯಾಪ್ತಿಯಲ್ಲಿ ನೀರುಣಿಸುವ ಬೈರನ್ ನಾಲಾ ಮತ್ತು

ಸೋಮನಹಳ್ಳಿಯಲ್ಲಿ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಎಂ.ಉದಯ ಚಾಲನೆ ನೀಡಿದರು.

ವೈದ್ಯನಾಥಪುರ ನಾಲೆಗಳಿಗೆ ಚನ್ನೇಗೌಡನದೊಡ್ಡಿ ಬಳಿ ಬೀಸುಕೋಡಿಯಿಂದ ನೀರು ಹರಿಸಲು ಈಗಾಗಲೇ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಹೇಳಿದರು.

ಕೆಮ್ಮಣ್ಣುನಾಲೆ ಆಧುನೀಕರಣ ಕಾಮಗಾರಿ ಶೀಘ್ರವೇ ಆರಂಭವಾಗಲಿದ್ದು ತ್ವರಿತ ಗತಿಯ ಕೆಲಸದೊಟ್ಟಿಗೆ ಜೂನ್ ಮಾಸಾಂತ್ಯದೊಳಗೆ ಮುಕ್ತಾಯಗೊಳ್ಳಲಿದ್ದು ರೈತರ ಸಹಕಾರ ಅತಿ ಮುಖ್ಯವೆಂದರು.

ಈ ವೇಳೆ ಸೋಮನಹಳ್ಳಿ ವಿ.ಎಸ್.ಎಸ್.ಎನ್.ಬಿ. ಅಧ್ಯಕ್ಷ ಹಾಗೂ ಗ್ರಾ.ಪಂ. ಮಾಜಿ ಅಧ್ಯಕ್ಷ ಸಿ.ಟಿ.ಶಂಕರ್, ಗ್ರಾ.ಪಂ. ಅಧ್ಯಕ್ಷೆ ಗಾಯಿತ್ರಿ, ಉಪಾಧ್ಯಕ್ಷೆ ಐಶ್ವರ್ಯ, ಸದಸ್ಯರಾದ ಪ್ರೀತಮ್, ಅಪೂರ್ವ ಹಾಗೂ ಸ್ಥಳೀಯ ಮುಖಂಡರು ಹಾಜರಿದ್ದರು.

ಚಾಕು ಇರಿತಕ್ಕೆ ವ್ಯಕ್ತಿ ಸಾವು

ನಾಗಮಂಗಲ: ಗೂಡ್ಸ್ ಆಟೋ ಓವರ್ ಟೇಕ್ ವಿಚಾರಕ್ಕೆ 7 ಜನರ ಯುವಕರ ಗುಂಪೊಂದು ವ್ಯಕ್ತಿಗೆ ಚಾಕು ಇರಿದು ರಕ್ತಸ್ರಾವದಿಂದ ಸಾವನ್ನಪ್ಪಿರುವ ಘಟನೆ ಮೈಸೂರು ರಸ್ತೆಯ ಸಾಮಕಹಳ್ಳಿ ಸಮೀಪದ ಕೆಂಪನಕೊಪ್ಪಲು ಗೇಟ್ ಬಳಿ ನಡೆದಿದೆ.

ಬಚ್ಚಿಕೊಪ್ಪಲು ಗ್ರಾಮದ ಕುಮಾರ್(43) ಯುವಕರ ಗುಂಪಿನಿಂದ ಚಾಕು ಇರಿತಕ್ಕೊಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದ ದುರ್ದೈವಿ. ಮೈಸೂರು ಹೆದ್ದಾರಿ ಮೂಲಕ ಗ್ರಾಮಕ್ಕೆ ಹೋಗುವಾಗ ಗೂಡ್ಸ್ ಆಟೋ ವನ್ನು ಓವರ್ ಟೇಕ್ ವಿಚಾರವಾಗಿ ಆಟೋದಲ್ಲಿದ್ದ ಯುವಕರೊಂದಿಗೆ ಜಗಳವಾಗಿತ್ತು. ನಂತರ ತಮ್ಮ ಊರಿಗೆ ತೆರಳಿದ್ದರು. ಆದರೆ ಘಟನೆಯಿಂದ ಕೋಪಗೊಂಡಿದ್ದ ಪಾಂಡವಪುರದ ಕಾಳೇನಹಳ್ಳಿಯ ಏಳು ಜನ ಯುವಕರ ಗುಂಪು ಗುರುವಾರ ಮೈಸೂರು ರಸ್ತೆಯ ಕೆಂಪನಕೊಪ್ಪಲು ಗೇಟ್ ಬಳಿ ಚಾಕುವಿನಿಂದ ಇರಿದಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಗ್ರಾಮಾಂತರ ಠಾಣೆಯ ಪಿಎಸ್‌ಐ ರಾಜೇಂದ್ರ ಪರಿಶೀಲನೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ಕೆರೆಗಳ ಒತ್ತುವರಿ ತೆರವುಗೊಳಿಸಿ: ಎಡಿಸಿ

ಮೈಸೂರು: ಎಲ್ಲ ಕೆರೆಗಳನ್ನು ಕಡ್ಡಾಯವಾಗಿ ಅಳತೆ ಮಾಡಿ, ಒತ್ತುವರಿಯನ್ನು ಕೂಡಲೇ ತೆರವುಗೊಳಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ನಿರ್ದೇಶನ ನೀಡಿದರು. ಜಿಲ್ಲಾ ಸರಕಾರಿ ಕೆರೆ ಸಂರಕ್ಷಣಾ ಕಾರ್ಯಪಡೆ ವತಿಯಿಂದ ನಡೆದ ಕೆರೆಗಳ ಸಂರಕ್ಷಣೆ ಕುರಿತ ಸಭೆಯಲ್ಲಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ , ಮಾರ್ಚ್ ತಿಂಗಳಿನೊಳಗೆ ಅಳತೆಗೆ ಬಾಕಿ ಉಳಿದಿರುವ ಕೆಲಸ ಮುಗಿಸಿ ಎಂದು ಸೂಚಿಸಿದರು. ಒತ್ತುವರಿ ತೆರವುಗೊಳಿಸದಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ನಿರ್ದ್ಯಾಕ್ಷಿಣ್ಯವಾಗಿ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕಾರ್ಯಪಡೆ ಸಭೆಯಲ್ಲಿ ಜಿಲ್ಲಾ ನ್ಯಾಯಾಧೀಶರಾದ ದಿನೇಶ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣಂರಾಜು, ಜಿಲ್ಲಾಮಟ್ಟದ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಸ್ಮಶಾನದ ರಸ್ತೆಗಾಗಿ ಅಹೋರಾತ್ರಿ ಧರಣಿ

ತಿ.ನರಸೀಪುರ: ತಾಲೂಕಿನ ಬನ್ನೂರು ಟೌನ್ ಸುಭಾಷ್ ನಗರದ ಆದಿಜಾಂಬವರ ಸ್ಮಶಾನಕ್ಕೆ ರಸ್ತೆಯನ್ನು ಕಲ್ಪಿಸಿಕೊಡುವಂತೆ ಆಗ್ರಹಿಸಿ ಬನ್ನೂರಿನ ಪುರಸಭೆಯ ಮುಂಭಾಗದಲ್ಲಿ ಅಹೋರಾತ್ರಿ ಧರಣಿ ನಡೆಸಲಾಯಿತು.

ಡಾ.ಬಾಬು ಜಗಜೀವನ್ ರಾಂ ಜನಕಲ್ಯಾಣ ಸಂಘ, ದಲಿತ ಸಂಘರ್ಷ ಸಮಿತಿ , ಬನ್ನೂರಿನ ಡಾ. ಬಾಬುಜಗಜೀವನ್ ರಾಮ್ ಯುವಕರ ಸಂಘ, ಕಟ್ಟಡ ಕೂಲಿ ಕಾರ್ಮಿಕ ಸಂಘದ ಬೆಂಬಲದಿಂದ ಪ್ರತಿಭಟನೆ ನಡೆಸಿ, ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಜನಕಲ್ಯಾಣ ಸಂಘದ ಅಧ್ಯಕ್ಷ ಮಲೆಯೂರು ಶಂಕರ್ ಮಾತನಾಡಿ, ಸುಮಾರು 20 ವರ್ಷದಿಂದ ಮಾದಿಗ ಸಮಾಜದವಗೆ ಸ್ಮಶಾನಕ್ಕೆ ಹೋಗಲು ರಸ್ತೆ ಮಾಡಿ ಕೊಡುವಂತೆ ಒತ್ತಾಯಿಸಿ ಹೋರಾಟ ನಡೆಸಿದ ಪ್ರತಿಫಲವಾಗಿ ಕಾವೇರಿ ನದಿ ದಡದಲ್ಲಿರುವ ಸ್ಮಶಾನದ ಅಭಿವೃದ್ಧಿಗೆ ಸಮಾಜಕಲ್ಯಾಣ ಸಚಿವ ಡಾ. ಎಚ್ .ಸಿ.ಮಹದೇವಪ್ಪ 20 ಲಕ್ಷ ರೂ. ಅನುದಾನ ಮಂಜೂರು ಮಾಡಿದ್ದರು.ಅದರಂತೆ ಸ್ಮಶಾನಕ್ಕೆ ಸಂಪರ್ಕ ರಸ್ತೆಯನ್ನು ಕಲ್ಪಿಸುವ ಸಲುವಾಗಿ ರೈತರಿಂದ ಭೂಮಿಯನ್ನು ಭೂ ಸ್ವಾಧೀನಕ್ಕಾಗಿ ಸುಮಾರು 26 ಲಕ್ಷ ರೂ. ಮೀಸಲಾಗಿದೆ. ಆದರೆ ಅಧಿಕಾರಿಗಳು ಸ್ಮಶಾನಕ್ಕೆ ಸಂಪರ್ಕ ರಸ್ತೆ ನಿರ್ಮಾಣಕ್ಕೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಬನ್ನೂರು ಪುರಸಭಾ ಸದಸ್ಯ ಶಿವಣ್ಣ ಮಾತನಾಡಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಸ್ಥಳ ಪರಿಶೀಲನೆ ನಡೆಸಿ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ಕೊಟ್ಟ ಆಶ್ವಾಸನೆ ಈಡೇರಿಲ್ಲ ಎಂದು ಆರೋಪಿಸಿದರು.

ಈ ವೇಳೆ ಕೇತಹಳ್ಳಿ ಲಿಂಗರಾಜು, ಕೂಲಿಕಾರ್ಮಿಕ ಸಂಘದ ಅಧ್ಯಕ್ಷ ಜಯರಾಮ, ನ್ಯಾಯಬೆಲೆ ಅಂಗಡಿ ಸ್ವಾಮಿ, ಮಲಿಯೂರು ಮಹೇಶ್, ರಂಗಚಾರಿ ಹುಂಡಿ ಚಿಕ್ಕಮಂಟಯ್ಯ, ಯಜಮಾನರಾದ ಚಿಕ್ಕಕಾಳಯ್ಯ, ಶಿವಣ್ಣ, ರವಿ ಶಿವರಾಜು, ಸಿದ್ದ, ಕುಮಾರ ಇದ್ದರು.

ಪಿಯುಸಿ ಪರೀಕ್ಷೆ ಸಿದ್ಧತೆಗೆ ಸೂಚನೆ

ಮೈಸೂರು: ಜಿಲ್ಲೆಯಲ್ಲಿ ಮಾರ್ಚ್ 1ರಿಂದ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಸುಸೂತ್ರವಾಗಿ ಹಾಗೂ ವ್ಯವಸ್ಥಿತವಾಗಿ ಜರುಗಿಸುವಂತೆ ನೋಡಿಕೊಳ್ಳಲು ಅಪರ ಜಿಲ್ಲಾಧಿಕಾರಿ ಡಾ ಪಿ.ಶಿವರಾಜು ಸೂಚಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮೈಸೂರು ಜಿಲ್ಲೆಯಲ್ಲಿ 50 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ವಾರ್ಷಿಕ ಪರೀಕ್ಷೆಗಳು ನಡೆಯಲ್ಲಿದ್ದು, ನಗರದಲ್ಲಿ 27 ಕೇಂದ್ರಗಳು ಹಾಗೂ ಗ್ರಾಮಾಂತರದಲ್ಲಿ 23 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿವೆ ಎಂದು ತಿಳಿಸಿದರು. ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ತಲುಪಿಸಲು ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಪರೀಕ್ಷಾ ದಿನಗಳಂದು ನಿರಂತರ ವಿದ್ಯುತ್ ಸರಬರಾಜು ಮಾಡಲು ಚೆಸ್ಕಾಂಗೆ ತಿಳಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಅಳವಡಿಸಲಾಗಿದ್ದು, ಪರೀಕ್ಷೆ ಕೇಂದ್ರಗಳ ಸುತ್ತ ಸ್ವಚ್ಛತೆ ಕಾಪಾಡಲು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಿದರು. ಮೈಸೂರಿನಲ್ಲಿ 27 ಪರೀಕ್ಷಾ ಕೇಂದ್ರಗಳು, ನಂಜನಗೂಡಿನಲ್ಲಿ 5 , ಟಿ ನರಸೀಪುರದಲ್ಲಿ 4 , ಹುಣಸೂರಿನಲ್ಲಿ 4, ಕೆ ಆರ್ ನಗರದಲ್ಲಿ 2, ಸಾಲಿಗ್ರಾಮದಲ್ಲಿ 3 , ಎಚ್ .ಡಿ ಕೋಟೆಯಲ್ಲಿ 2 ಹಾಗೂ ಪಿರಿಯಾಪಟ್ಟಣದಲ್ಲಿ 4 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ ಎಂದರು.ಸಭೆಯಲ್ಲಿ ಪಿಯು ಇಲಾಖೆಯ ಉಪನಿರ್ದೇಶಕರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಮತ್ತೆ ಪ್ರತಿಪಾದನೆ | ಪ್ರಧಾನಿ ಮೋದಿ ವಿರುದ್ಧ ನಿಲ್ಲದ ವಾಗ್ದಾಳಿ

ದೇಶದ ಅಭಿವೃದ್ಧಿಗಾಗಿ ಗಡ್ಕರಿ ಪ್ರಧಾನಿಯಾಗಲಿ

ದಾವಣಗೆರೆ: ಈ ದೇಶದಲ್ಲಿ ಬಿಜೆಪಿ ಇರಲೇ ಬಾರದು ಎಂಬುದು ನನ್ನ ಅಭಿಪ್ರಾಯ. ಆದರೆ, ಅವರಿಗೆ ಜನಮನ್ನಣೆ ದೊರೆತು ಅಧಿಕಾರ ನಡೆಸುತ್ತಿದ್ದಾರೆ. ಇನ್ನಾದರೂ ದೇಶದ ಅಭಿವೃದ್ಧಿಗಾಗಿ ಉಳಿದ ಅವಧಿಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಪ್ರಧಾನಿಮಂತ್ರಿಯಾಗಲಿ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅಭಿಪ್ರಾಯಪಟ್ಟಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಸ್ತುತ ದೇಶವನ್ನು ಒಬ್ಬರೇ ನಡೆಸುತ್ತಿದ್ದಾರೆ ಎಂಬಂತಾಗಿದೆ. ದೇಶವನ್ನು ಒಬ್ಬರೇ ನಡೆಸುವುದಾದರೆ ತಾಪಂ, ಗ್ರಾಪಂ ಯಾಕೆ? ಎಲ್ಲದಕ್ಕೂ ಪ್ರಧಾನಿ ಮೋದಿಯನ್ನೇ ತೋರಿಸುತ್ತಿದ್ದು, ಜನತೆಗೆ ಕೇಂದ್ರದ ಐವರು ಮಂತ್ರಿಗಳ ಹೆಸರು ಗೊತ್ತಿಲ್ಲದಂತಾಗಿದೆ ಎಂದು ಟೀಕಿಸಿದರು.

ಬಿಜೆಪಿಯನ್ನೇ ಕೇಳಿ: 3 ತಿಂಗಳು ಗೃಹಲಕ್ಷ್ಮಿ ಹಣ ಬರುವುದು ತಡವಾದ್ದನ್ನು ಪ್ರಶ್ನಿಸುತ್ತೀರಿ. ಆದರೆ, 15 ಲಕ್ಷದ ಬಗ್ಗೆ ಯಾಕೆ ಚರ್ಚೆ ಆಗ್ತಿಲ್ಲ? 15 ಲಕ್ಷ ಕೊಡುವುದಾಗಿ ಹೇಳಿ 11 ವರ್ಷವಾಯ್ತು. ಮೇಕ್‌ಇನ್ ಇಂಡಿಯಾ ಎಲ್ಲಿದೆ? ರೈತರ ಆದಾಯ ದ್ವಿಗುಣದ ಬಗ್ಗೆ ಚರ್ಚೆ ಎಲ್ಲಿದೆ? ಬುಲೆಟ್ ಟ್ರೈನ್ ಬಂತಾ? ನೂರು ದಿನದಲ್ಲಿ ಕಾಳಧನ ವಾಪಸ್ ಎಂದಿದ್ರು. ಅದು ಎಲ್ಲಿದೆ? ನೂರು ಸ್ಮಾರ್ಟ್ ಸಿಟಿ ಎಲ್ಲಿದೆ? ಈ ಕುರಿತು ಬಿಜೆಪಿಯವರನ್ನು ಕೇಳಿ ದೇಶದ ಜನತೆಗೆ ತಿಳಿಸುವ ಕಾರ್ಯ ಮಾಧ್ಯಮ ಮಾಡಲಿ ಎಂದು ಸಚಿವ ಲಾಡ್ ಮಾರ್ಮಿಕವಾಗಿ ಸಲಹೆ ಮಾಡಿದರು.

ಮೇಕ್ ಇನ್ ಇಂಡಿಯಾ ಅಂತೀರಾ..? ನಮಗೆ ಒಂದು ಕಡ್ಡಿಪೊಟ್ಟಣವೂ ಚೀನಾದಿಂದ ಬರಬೇಕು, ದೀಪಾವಳಿಗೆ ದೀಪಿಕಾ ಪಟಾಕಿಯೂ ಚೀನಾದಿಂದಲೇ ಬರಬೇಕಾದ ಸ್ಥಿತಿ ಇದೆ ಎಂದು ಕಿಡಿಕಾರಿದರು.

ವಿವಿಗಳಿಗೆ ಸೌಲಭ್ಯ ಒದಗಿಸಬೇಕು: ಬಿಜೆಪಿ ಅವಧಿಯಲ್ಲಿ ಪ್ರಾರಂಭಿಸಿದ ವಿವಿಗಳನ್ನು ಕಾಂಗ್ರೆಸ್ ಸರ್ಕಾರ ಮುಚ್ಚುತ್ತಿದೆ ಎನ್ನುವ ಆರೋಪಕ್ಕೆ ಪ್ರತಿಕ್ರಿಯಿಸಿ, ಬಿಜೆಪಿ ಅವಧಿಯಲ್ಲಿ ವಿವಿ ಪ್ರಾರಂಭಿಸಿದರು.. ಆದರೆ, ಎಷ್ಟು ಹಣವನ್ನು ವಿವಿಗೆ ಮೀಸಲಿಟ್ಟಿದ್ದಾರೆ? ಒಂದು ವಿವಿಗೆ ಎರಡು ಕೋಟಿ ರೂ. ಅನುದಾನ ಬಿಡುಗಡೆ ಮಾಡಿದರೆ ಅದು ಸಾಧ್ಯವೇ? ವಿವಿಗಳನ್ನು ಪ್ರಾರಂಭಿಸುವುದಕ್ಕೆ ರಾಜಕೀಯವಾಗಿ ಯೋಚನೆ ಮಾಡುವುದಕ್ಕಿಂತ ಸೌಲಭ್ಯ ಒದಗಿಸಬೇಕಲ್ಲವೇ ಎಂದರು.

ಬಿಜೆಪಿ ಷಡ್ಯಂತ್ರದಿಂದ ಕೇಸ್

ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಅವರ ಪತ್ನಿಗೂ ಕ್ಲೀನ್ ಚಿಟ್ ಸಿಕ್ಕಿದೆ. ಇದು ನ್ಯಾಯಕ್ಕೆ ಸಂದ ಜಯ. ಬಿಜೆಪಿಯವರ ಷಡ್ಯಂತ್ರದಿಂದ ಕೇಸ್ ಆಗಿತ್ತು. ನ್ಯಾಯಾಂಗ ಬಿಜೆಪಿಗೆ ತಕ್ಕ ಪಾಠ ಕಲಿಸುವ ಮೂಲಕ ಈಗ ಲೋಕಾಯುಕ್ತವೇ ಕ್ಲೀನ್ ಚಿಟ್ ನೀಡಿದೆ. ಕೇವಲ 14 ಸೈಟ್‌ಗಳ ಬಗ್ಗೆ ಮಾತ್ರ ಚರ್ಚೆ ಆಗ್ತಾ ಇದೆ. ಆದರೆ, 125ಕ್ಕೂ ಹೆಚ್ಚು ಸೈಟ್‌ಗಳ ಬಗ್ಗೆ ಮಾತ್ರ ಚರ್ಚೆಯಾಗುತ್ತಿಲ್ಲ ಏಕೆ? ಈ ಸೈಟ್‌ಗಳನ್ನು ನೀಡಿದವರು ಯಾರು? ಯಾವ ಆಧಾರದ ಮೇಲೆ ಕೊಟ್ಟರು ಎನ್ನುವುದು ಚರ್ಚೆಯಾಗಲಿ ಎಂದು ಸಂತೋಷ್ ಲಾಡ್ ಒತ್ತಾಯಿಸಿದರು.

ವಿಚಾರಣೆ ಮುಂದೂಡಿಕೆ

← ಮೊದಲಪುಟದಿಂದ

ಆದರೆ, ಬಿಎನ್‌ಎಸ್‌ಎಸ್ ಸೆಕ್ಷನ್ 223 ಪ್ರಕಾರ, ಬಿಎನ್‌ಎಸ್‌ಎಸ್ ಅಡಿಯಲ್ಲಿ ಕಾಗ್ನಿಜೆನ್ಸ್ ತೆಗೆದುಕೊಳ್ಳುವ ಮುನ್ನ ಆರೋಪಿಗೆ ನೋಟಿಸ್ ಜಾರಿಗೊಳಿಸಿ ಅವರ ವಾದ ಆಲಿಸಬೇಕಾಗುತ್ತದೆ. ಹೀಗಾಗಿ, ಪ್ರಕರಣ ಸಂಬಂಧ ವಿಚಾರಣಾ ನ್ಯಾಯಾಲಯ ವಿಚಾರಣೆಯನ್ನು ಮುಂದುವರಿಸಬಾರದು ಎಂದು ಕೋರಿದರು. ಇದಕ್ಕೆ ಆಕ್ಷೇಪಿಸಿದ ಜಾರಿ ನಿರ್ದೇಶನಾಲಯದ ಪರ ಕೇಂದ್ರ ಸರಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ಬಿಎನ್‌ಎಸ್‌ಎಸ್ ಜಾರಿಗೆ ಬರುವ ಮುನ್ನ 2024ರ ಜೂ.6ರಂದು ಜಾರಿ ನಿರ್ದೇಶನಾಲಯವು ಇಸಿಐಆರ್ ದಾಖಲಿಸಿದೆ. ಬಿಎನ್‌ಎಸ್‌ಎಸ್ 2024ರ ಜು.1ರಿಂದ ಜಾರಿಗೆ ಬಂದಿದೆ. ಅಂದರೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಬಿಎನ್‌ಎಸ್‌ಎಸ್ ಜಾರಿಗೆ ಮುನ್ನ ಜಾರಿ ನಿರ್ದೇಶನಾಲಯ ಕೈಗೊಂಡಿದೆ. ಇದರಿಂದ ವಿಶೇಷ ನ್ಯಾಯಾಲಯವು ಅಪರಾಧ ಪ್ರಕ್ರಿಯಾ ಸಂಹಿತೆ ಅನ್ವಯಿಸಿ ಕಾಗ್ನಿಜೆನ್ಸ್ ತೆಗೆದುಕೊಂಡಿದೆ. ಹಾಗಾಗಿ, ಕಾಗ್ನಿಜೆನ್ಸ್ ಸ್ವೀಕರಿಸಿರುವ ಪ್ರಕ್ರಿಯೆಯಲ್ಲಿ ಲೋಪವಿಲ್ಲ. ಹೀಗಾಗಿ ವಿಚಾರಣಾ ಕೋರ್ಟ್ ವಿಚಾರಣೆ ಮುಂದುವರಿಸಲು ಅನುಮತಿ ನೀಡಬೇಕು ಎಂದು ಕೋರಿದರು.

ಎಚ್‌ಎಸ್‌ಆರ್‌ಪಿ ಡೆಡ್‌ಲೈನ್ ಮಾ.31ರ ವರೆಗೆ ವಿಸ್ತರಣೆ

ಬೆಂಗಳೂರು: ರಾಜ್ಯದ ಎಲ್ಲ ವರ್ಗಗಳ ವಾಹನಗಳಿಗೆ ಎಚ್‌ಎಸ್‌ಆರ್‌ಪಿ (ಅತಿಸುರಕ್ಷಿತ ನೋಂದಣಿ ಫಲಕ) ಅಳವಡಿಕೆ ಕಾಲಮಿತಿಯನ್ನು ಸಾರಿಗೆ ಇಲಾಖೆ ಮತ್ತೊಮ್ಮೆ ವಿಸ್ತರಿಸಿದೆ. ರಾಜ್ಯದಲ್ಲಿ ಎಲ್ಲ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಕೆ ಅವಧಿ ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ. ಆ ಮೂಲಕ ಸಾರಿಗೆ ಇಲಾಖೆ 7ನೇ ಬಾರಿಗೆ ಕಾಲಮಿತಿ ವಿಸ್ತರಿಸಿದಂತಾಗಿದೆ. ಏಪ್ರಿಲ್ 1, 2019ರ ಮುನ್ನ ನೋಂದಣಿಯಾದ ವಾಹನಗಳು ಕಡ್ಡಾಯವಾಗಿ ಎಚ್‌ಎಸ್‌ಆರ್‌ಪಿ ಅಳವಡಿಕೆ ಮಾಡಬೇಕು ಎಂದು ಸರಕಾರ ಆದೇಶಿಸಿದೆ.

ಈ ಮುಂಚೆ ಜನವರಿ 31ರವರೆಗೆ ಕಾಲ ಮಿತಿ ವಿಸ್ತರಿಸಲಾಗಿತ್ತು. ಇದೀಗ ಮತ್ತೆ ಕಾಲಮಿತಿ ಮಾರ್ಚ್ 31, 2025ರ ವರೆಗೆ ವಿಸ್ತರಣೆಯಾಗಿದೆ. ಎಚ್‌ಎಸ್‌ಆರ್‌ಪಿ ಸುರಕ್ಷಿತ ನಂಬರ್ ಪ್ಲೇಟ್ ಆಗಿದ್ದು, ದುರ್ಬಳಕೆ ತಪ್ಪಿಸಲು ವಿನ್ಯಾಸಗೊಳಿಸಲಾಗಿದೆ. ಎಚ್‌ಎಸ್‌ಆರ್‌ಪಿ ವಿಶಿಷ್ಟ 10 ಅಂಕಿಯ ನಂಬರ್ ಆಗಿದ್ದು, ವಾಹನದ ಚಾರ್ಸಿ ಹಾಗೂ ಎಂಜಿನ್ ವಿವರಕ್ಕೆ ಜೋಡಣೆಯಾಗಿದೆ. ಎಚ್‌ಎಸ್‌ಆರ್‌ಪಿ ಅಳವಡಿಕೆ ಡೆಡ್‌ಲೈನ್ ಅನ್ನು ಹಲವು ಬಾರಿ ವಿಸ್ತರಣೆ ಮಾಡಲಾಗಿದೆ. 2023ರಂದು ಸಾರಿಗೆ ಇಲಾಖೆ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಫಲಕ ಅಳವಡಿಕೆ ಕಡ್ಡಾಯಗೊಳಿಸಿ ಆದೇಶ ಹೊರಡಿಸಿತ್ತು. ರಾಜ್ಯ ಸಾರಿಗೆ ಇಲಾಖೆ ಈವರೆಗೆ ಈ ನಂಬರ್ ಪ್ಲೇಟ್ ಅಳವಡಿಕೆಗೆ 6 ಬಾರಿ ಡೆಡ್‌ಲೈನ್ ವಿಸ್ತರಿಸಲಾಗಿದೆ. ಆದರೂ ಸಹ ವಾಹನ ಮಾಲೀಕರು ತಮ್ಮ ವಾಹನಕ್ಕೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಿ ಕೊಂಡಿಲ್ಲ. ಹೀಗಾಗಿ, ರಾಜ್ಯ ಸಾರಿಗೆ ಇಲಾಖೆ ಈಗ ಮತ್ತೊಂದು ಅವಕಾಶ ನೀಡಿದೆ.

ಕ್ಯಾಬಿನೆಟ್ ರ‍್ಯಾಂಕ್: ಹೈ ನೋಟಿಸ್

← ಮೊದಲಪುಟದಿಂದ

ಅರ್ಜಿದಾರರು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು, ಮಂಡಳಿ ಅಧ್ಯಕ್ಷ ಸ್ಥಾನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಅದಕ್ಕೆ ಅವಕಾಶ ಸಿಕ್ಕಿಲ್ಲ ಎಂಬ ಕಾರಣದಿಂದ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯು ವಿಚಾರಣೆಗೆ ಅರ್ಜಿ ಅರ್ಹವಿಲ್ಲ ಎಂಬ ಅಡ್ವೋಕೇಟ್ ಜನರಲ್ ಅವರ ವಾದವನ್ನು ತಳ್ಳಿ ಹಾಕಿದ ನ್ಯಾಯಪೀಠ, ಅರ್ಜಿಯಲ್ಲಿನ ಅಂಶಗಳು ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ಅಂಶಗಳಿದ್ದು, ಅವುಗಳ ಪರಿಹಾರಕ್ಕಾಗಿ ವಿಚಾರಣೆ ಅಗತ್ಯವಿದೆ ಎಂದು ಹೇಳಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲರು, ಸಂಪುಟ ದರ್ಜೆಯ ಸ್ಥಾನಮಾನ ಹೊಂದಿರುವ ಸಚಿವರಿಗೆ ಇರುವ ಸೌಲಭ್ಯಗಳನ್ನು ನಿಗಮ, ಮಂಡಳಿಗಳ ಅಧ್ಯಕ್ಷರು ಮತ್ತು ಸದಸ್ಯರಿಗೆ ವಿತರಣೆ ಮಾಡಿದಂತಾಗಿದೆ. ಸಂವಿಧಾನ ಪರಿಚ್ಛೇದ 164(1)(ಎ)ರ ಪ್ರಕಾರ ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿ ಸೇರಿದಂತೆ ಒಟ್ಟು ಸದಸ್ಯರು ಸೇರಿದಂತೆ ಶೇ.15ರಷ್ಟು ಮಾತ್ರ ಇರಬೇಕು ಎಂದು ಮಿತಿ ಹೇರಲಾಗಿದೆ. ಆದರೆ, ಅಧಿಸೂಚನೆ ಹೊರಡಿಸುವ ಮೂಲಕ ನಿಗಮ ಮಂಡಳಿಗಳ ಅಧ್ಯಕ್ಷ ಮತ್ತು ಸದಸ್ಯರಿಗೂ ಸಂಪುಟ ಸ್ಥಾನಮಾನ ನೀಡಿದ್ದು, ಮಿತಿ ಮೀರಿದೆ ಎಂದು ಪೀಠಕ್ಕೆ ವಿವರಿಸಿದರು.

ನಿಗಮ ಮಂಡಳಿ ಸದಸ್ಯ ಮತ್ತು ಅಧ್ಯಕ್ಷರಿಗೆ ಸಂಪುಟ ಸ್ಥಾನ ಮಾನ ನೀಡಿರುವುದು, ಸುಪ್ರೀಂ ಕೋರ್ಟ್‌ನ ಮಾನದಂಡಗಳಿಗೆ ವಿರುದ್ಧವಾಗಿದೆ. ಲಾಭದಾಯಕ ಹುದ್ದೆ ರಚಿಸುವ ಆಧಾರದ ಮೇಲೆ ನೇಮಕಾತಿ ಮಾಡಿರುವ ನೇಮಕಾತಿ ಅಸಾಂವಿಧಾನಿಕ ಎಂದು ಘೋಷಣೆ ಮಾಡಬೇಕು. ಹೀಗಾಗಿ, ನೇಮಕಗೊಂಡವರನ್ನು ತಕ್ಷಣವೇ ಆಯಾ ಸ್ಥಾನಗಳಿಂದ ತೆಗೆದುಹಾಕಬೇಕು. ಅವರಿಗೆ ವಿತರಿಸುವ ಎಲ್ಲ ಸೌಲಭ್ಯಗಳನ್ನು ಹಿಂಪಡೆಯಬೇಕು ಎಂದು ಕೋರಲಾಗಿದೆ.

ಪ್ರಕರಣದ ಹಿನ್ನೆಲೆ: ಕರ್ನಾಟಕ ವಿಧಾನಸಭೆಯ ಒಟ್ಟು ಸಂಖ್ಯಾಬಲದ ಶೇ.15ರಷ್ಟು ಮಂದಿ ಸಚಿವರಾಗಲು ಅವಕಾಶವಿದೆ. ಅದರಂತೆ 224 ಶಾಸಕರಲ್ಲಿ 34 ಮಂದಿ ಸಚಿವರಾಗಬೇಕು. ಸದ್ಯ ಸಿಎಂ ಸೇರಿ 33 ಮಂದಿ ಸಚಿವರಿದ್ದಾರೆ. ಇದರ ಜತೆಗೆ 34 ಮಂದಿ ಶಾಸಕರನ್ನು ನಿಗಮ, ಮಂಡಳಿಗಳ ಅಧ್ಯಕ್ಷರನ್ನಾಗಿ ನೇಮಿಸಿ, ಅವರಿಗೆ ಸಂಪುಟದ ದರ್ಜೆ ಸ್ಥಾನಮಾನ, ಸೌಲಭ್ಯ, ವೇತನ, ಭತ್ಯೆಗಳನ್ನು ನೀಡಲಾಗಿದೆ. ಇದು ಸಂವಿಧಾನದ ಪರಿಚ್ಛೇದ 164(1)(ಎ) ಇದರ ಸ್ಪಷ್ಟ ಉಲ್ಲಂಘನೆ ಆಗಿದೆ. ಶಾಸಕರಿಗೆ ನಿಗಮ, ಮಂಡಳಿಗಳ ಹುದ್ದೆ ಕೊಡುವುದಕ್ಕೆ ತಕರಾರು ಇಲ್ಲ, ಆದರೆ, ಸಂಪುಟ ದರ್ಜೆ ನೀಡುವುದಕ್ಕೆ ಆಕ್ಷೇಪವಿದೆ. ಅಲ್ಲದೇ, ಲಾಭದಾಯಕ ಹುದ್ದೆಗೆ ಸಂಬಂಧಿಸಿದಂತೆ ಸಂವಿಧಾನದ ಪರಿಚ್ಛೇದ 191ರ ಉಲ್ಲಂಘನೆಯಾಗಿದೆ ಎಂದು ಅರ್ಜಿಯಲ್ಲಿ ದೂರಲಾಗಿದೆ. 34 ಮಂದಿ ಶಾಸಕರಿಗೆ ನಿಗಮ, ಮಂಡಳಿ ಅಧ್ಯಕ್ಷ ಹುದ್ದೆ ನೀಡಿ 2024ರ ಜನವರಿ 26ರಂದು ಸರಕಾರ ಹೊರಡಿಸಿರುವ ಹಾಗೂ 8 ಮಂದಿ ಶಾಸಕರಿಗೆ ಸಂಪುಟ ದರ್ಜೆ ಸ್ಥಾನಮಾನದೊಂದಿಗೆ ವಿವಿಧ ಹುದ್ದೆಗಳಿಗೆ ನೇಮಕ ಮಾಡಿ ವಿವಿಧ ದಿನಾಂಕಗಳಂದು ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸಬೇಕು. ನೇಮಕಾತಿಯನ್ನು ಸಂವಿಧಾನಬಾರವೆಂದು ಘೋಷಿಸಬೇಕು ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಶಾಲೆ ಆವರಣದಲ್ಲಿ ದನಗಳ ಬಿಡಾರ

← ಮೊದಲಪುಟದಿಂದ

ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ಅಥಣಿ, ನಿಪ್ಪಾಣಿ, ಕಾಗವಾಡ, ಚಿಕ್ಕೋಡಿ ಸೇರಿದಂತೆ ವಿವಿಧ ಜಿಲ್ಲೆಗಳ ಕನ್ನಡ ಶಾಲೆಗಳ ಪರಿಸ್ಥಿತಿ ಅಯೋಮಯವಾಗಿದೆ. ಗಡಿ ಭಾಗದ ಕನ್ನಡ ಶಾಲೆಗಳನ್ನು ಯಾವುದೇ ಕಾರಣಕ್ಕೂ ಮುಚ್ಚುವುದಿಲ್ಲ ಎಂದು ಸರಕಾರ ಹೇಳುತ್ತಲೇ ಇದೆ. ಆದರೆ ಇತ್ತ ಅಧಿಕಾರಿಗಳು ಮಾತ್ರ ಮಕ್ಕಳ ಹಾಜರಾತಿ ಕಡಿಮೆ ಇದೆ ಎಂಬ ಕಾರಣ ನೀಡಿ ಶಾಲೆಗಳನ್ನು ಮುಚ್ಚುತ್ತಲೇ ಇದ್ದಾರೆ.

ಗೋಕರ್ಣ, ಮುರುಡೇಶ್ವರಕ್ಕೆ ವಿಶೇಷ ಬಸ್

ಹುಬ್ಬಳ್ಳಿ: ಮಹಾಶಿವರಾತ್ರಿ ಆಚರಣೆಗೆ ತೆರಳುವ ಭಕ್ತರು ಹಾಗೂ ಇತರ ಪ್ರಯಾಣಿಕರ ಅನುಕೂಲಕ್ಕಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಗೋಕರ್ಣ ಹಾಗೂ ಮುರುಡೇಶ್ವರಕ್ಕೆ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಎಚ್. ರಾಮನಗೌಡರ ತಿಳಿಸಿದ್ದಾರೆ. ಫೆ.25 ರಂದು ಮಂಗಳವಾರ ರಾತ್ರಿ ಮತ್ತು 26 ರಂದು ಬುಧವಾರ ಬೆಳಗ್ಗೆ ಹುಬ್ಬಳ್ಳಿಯಿಂದ ಗೋಕರ್ಣ ಹಾಗೂ ಮುರುಡೇಶ್ವರಕ್ಕೆ ನೇರ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದೆ. ವಿಶೇಷ ಬಸ್‌ಗಳು ಗೋಕುಲ ರಸ್ತೆ ನಿಲ್ದಾಣದಿಂದ ಹೊರಡುತ್ತವೆ.

ಅಬಕಾರಿ ಇಲಾಖೆ

ಅಬಕಾರಿ ಇಲಾಖೆ, 2ನೇ ಮಹಡಿ, ಬಿಎಂಟಿಸಿ ಕಟ್ಟಡ, ಟಿಟಿಎಂಸಿ ಎ ಬ್ಲಾಕ್, ಶಾಂತಿನಗರ, ಬೆಂಗಳೂರು – 560027
ದೂರವಾಣಿ: 080–22220302, ಇ–ಮೇಲ್: ecexcise@gmail.com

E-TENDER REF. No.EXCISE/2024-25/SE0119 Dt: 17-02-2025

ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಅಬಕಾರಿ ಆಯುಕ್ತರ ಕಛೇರಿಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆದುರಾಗಿ Non-Technical (ಬೆರಳಚ್ಚುಗಾರರು, ವಾಹನ ಚಾಲಕರು, ಗ್ರೂಪ್–ಡಿ, ಸ್ವಚ್ಛತಾ ಸಿಬ್ಬಂದಿ) ಸೇವೆಯನ್ನು 2025–26 ನೇ ಸಾಲಿನ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ (Two Bid Cover System: Technical & Financial Bid) ಇ–ಟೆಂಡರನ್ನು https://kppp.karnataka.gov.in ಆಹ್ವಾನಿಸಲಾಗಿದ್ದು, ಇಚ್ಛೆಯುಳ್ಳ ಅರ್ಹ ಸಂಸ್ಥೆಗಳು ನಿಬಂಧನೆಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದು, ಸದರಿ ಇ–ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ.

1) ಇ–ಟೆಂಡರ್ ಅಂದಾಜು ವಾರ್ಷಿಕ ಮೊತ್ತ: **76,89,484.82/–(ರೂ. ಎಪ್ಪತ್ತಾರು ಲಕ್ಷದ ಎಂಬತ್ತೊಂಬತ್ತು ಸಾವಿರದ ನಾಲ್ಕು ನೂರ ಎಂಬತ್ತನಾಲ್ಕು ರೂಪಾಯಿಗಳು ಮಾತ್ರ).** 2) ಇ.ಎಂ.ಡಿ ಮೊತ್ತ: **1,53,789.69/–(ರೂ. ಒಂದು ಲಕ್ಷದ ಐವತ್ತಾಮೂರ ಸಾವಿರದ ಏಳುನೂರ ಎಂಬತ್ತೊಂಬತ್ತು ರೂಪಾಯಿಗಳು ಮಾತ್ರ).** 3) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **17–03–2025 ರ ಸಂಜೆ 5:30 ಗಂಟೆಯವರೆಗೆ.** 4) ಟೆಂಡರ್ ತೆರೆಯುವ ದಿನಾಂಕ ಮತ್ತು ಸ್ಥಳ : 20–03–2025 ಬೆಳಿಗ್ಗೆ 11:00 ಗಂಟೆಗೆ, ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು. ದೂರವಾಣಿ ಸಂಖ್ಯೆ : 080–22220302, ಇ–ಮೇಲ್ ವಿಳಾಸ ; ecexcise@gmail.com.

ಹೆಚ್ಚಿನ ಮಾಹಿತಿಯನ್ನು ಅಬಕಾರಿ ಆಯುಕ್ತರ ಕಛೇರಿಯ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ: 080–22220302 ನ್ನು ಸಂಪರ್ಕಿಸಲು ಕೋರಿದೆ.

ಸಹಿ/–
ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಗಳು

ವಾ.ಸಾ.ಸಂ.ಇ/ವಾಪ್ರ/ಆಕಾರ್/2024–25

ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ

ಸಂ. ಸಿ1/ಗೇರು ಹರಾಜು/ವಿವ–19/2024–25 ದಿನಾಂಕ: 14.02.2025

ಟೆಂಡರ ಪ್ರಕಟಣೆ

ಹೊನ್ನಾವರ ಅರಣ್ಯ ವಿಭಾಗದ ಅಧೀನಕ್ಕೊಳಪಟ್ಟಿರುವ ಗೇರು ತೋಟಗಳ ಗೇರು ಬೀಜಗಳನ್ನು 2025–26 & 2026–27 ನೇ ಸಾಲಿನವರೆಗೆ ಸಂಗ್ರಹಿಸಿ ಒಯ್ಯುವ ಕುರಿತು ಒಟ್ಟೂ 32 ಯುನಿಟ್ಟುಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ ರವರ ಕಛೇರಿಯಲ್ಲಿ ದಿನಾಂಕ: 03–03–2025 ರಂದು ಮುಂಜಾನೆ 10.00 ಘಂಟೆಯಿಂದ ಮಧ್ಯಾಹ್ನ 3.00 ಘಂಟೆಯವರೆಗೆ ಟೆಂಡರು ಮತ್ತು 3.00 ಘಂಟೆಯ ನಂತರ ಸವಾಲು ಸ್ವೀಕರಿಸಲಾಗುವುದು. ಒಂದು ವೇಳೆ ಆ ದಿನ ಯಾವುದೇ ಟೆಂಡರ್ / ಸವಾಲು ಸ್ವೀಕೃತವಾಗದಿದ್ದಲ್ಲಿ, ಅಥವಾ ಭಾಗಶ: ಸ್ವೀಕೃತ ವಾದಲ್ಲಿ ಮರು ಟೆಂಡರು /ಸವಾಲನ್ನು ದಿನಾಂಕ: 05–03–2025 ರಂದು ಅದೇ ವೇಳೆಗೆ ನಡೆಸಲಾಗುವುದು. ಈ ಟೆಂಡರಿನಿಂದ ಅಂದಾಜು ರೂ. 10.00 ಲಕ್ಷ ಸರ್ಕಾರಕ್ಕೆ ಆದಾಯ ಬರುವ ನಿರೀಕ್ಷೆಯಿದೆ. ಆಸಕ್ತ ಟೆಂಡರುದಾರರು ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಅಥವಾ ದೂರವಾಣಿ ಸಂಖ್ಯೆ 08387–295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ

DIPR/ADK/KSMCA/912/24-25 Dt.21.02.2025

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ–561 203

ಸಂ.: DPA/TP/ಭೂಉನಿ/16/2024-25 ದಿನಾಂಕ: 21.02.2025

"ತಿದ್ದುಪಡಿ ಪ್ರಕಟಣೆ"

ದಿನಾಂಕ: 28–01–2025 ರಂದು ದಿನಪತ್ರಿಕೆಗಳಲ್ಲಿ ಪ್ರಚುರಪಡಿಸಲಾಗಿರುವ ಪ್ರಕಟಣೆ ಸಂಖ್ಯೆ: DPA/TP/ಭೂಉನಿ/16/2024–25 ರಲ್ಲಿ **'ಉದ್ಯಾನವನ ವಲಯ'** ಎಂದಿರುವುದಕ್ಕೆ ಬದಲಾಗಿ **'ಸಾರ್ವಜನಿಕ ಮತ್ತು ಅರೆಸಾರ್ವಜನಿಕ'** ಎಂದು ತಿದ್ದುಪಡಿ ಅಳವಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು – 560083.
ದೂರವಾಣಿ: 080 29755405. ಇ ಮೇಲ್ ಐಡಿ: acfbnp83@gmail.com

ಸಂಖ್ಯೆ : ಸಅಸಂ/ಬರಾಲು/ಸಿಆರ್–12/2024–25 ದಿನಾಂಕ: 19.02.2025

ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2025–26ನೇ ಸಾಲಿನಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ವಿವಿಧ ವನ್ಯಜೀವಿ ವಲಯಗಳಲ್ಲಿರುವ ಕಳ್ಳಬೇಟೆ ತಡೆ ಶಿಬಿರದಲ್ಲಿ ಕಾರ್ಯ ನಿರ್ವಹಿಸುವ ನೌಕರರುಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಟೆಂಡರ್ ಅನ್ನು ಅಧಿಕೃತ ಮಾರಾಟಗಾರರಿಂದ/ಅರ್ಹ ಗುತ್ತಿಗೆದಾರರಿಂದ (Authorized Distributor) ಮಾತ್ರ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಕರೆಯಲಾಗಿದೆ.

ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **06.03.2025 ಬೆಳಿಗ್ಗೆ 11:00 ಗಂಟೆ.** ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು. 1ನೇ ಕರೆ ಅಂತಿಮವಾಗಿದ್ದು, ಸಿಂಗಲ್ ಬಿಡ್ ಅಥವಾ ನೋ ಬಿಡ್ ಆದ್ದಲ್ಲಿ 2ನೇ ಕರೆಗೆ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಕೆಪಿಪಿ ಪೋರ್ಟಲ್ ಅನ್ನು ನಿಯಮಿತವಾಗಿ ವೀಕ್ಷಿಸಿ ಟೆಂಡರ್‌ನಲ್ಲಿ ಭಾಗವಹಿಸುವುದು.

ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು

ವಾಸಾಸಂಇ/ವಾಪ್ರ/5238/ಆಕಾರ್/2024–25

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ, ಕೊಡಗು ಜಿಲ್ಲೆ

(ಕರ್ನಾಟಕ ಸರ್ಕಾರದ ನೊಂದಾಯಿತ ಸ್ವಾಯುತ್ತಾ ಸಂಸ್ಥೆ)
ದೂರವಾಣಿ: 08272 220606 ವೆಬ್‌ಸೈಟ್:www.kimskodagu.karnataka.gov.in

ಸಂಖ್ಯೆ:DME/2024-25/IND:1107-Call-2 ದಿನಾಂಕ:21.02.2025

ಟೆಂಡರ್ ಅಲ್ಪಾವಧಿ ಪ್ರಕಟಣೆ

ಈ ಸಂಸ್ಥೆಯ ಮೈಕ್ರೋಬಯಲಾಜಿ ವಿಭಾಗದಲ್ಲಿ ವಿ.ಆರ್.ಡಿ.ಎಲ್ ಪ್ರಯೋಗಶಾಲೆಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳ ಪೂರೈಕೆಗಾಗಿ ಇ–ಪ್ರೊಕ್ಯೂರ್ ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ 22.02.2025 ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 07.03.2025 ಹೆಚ್ಚಿನ ವಿವರಗಳನ್ನು ಇ–ಸಂಗ್ರಹಣಾ ವೇದಿಕೆಯಿಂದ https://kppp.karnataka.gov.in ಅಂತರ್ಜಾಲದಲ್ಲಿ ಅಥವಾ ಈ ಕೆಳಗೆ ಸಹಿ 'ಮಾಡಿರುವವರನ್ನು ಸಂಪರ್ಕಿಸಿ ಪಡೆಯಬಹುದು.
ಇ–ಮೇಲ್: directormckodagu@gmail.com

ಸಹಿ/–
ನಿರ್ದೇಶಕರು ಹಾಗೂ ಡೀನ್,
ಕೊವೈವಿಸಂ, ಮಡಿಕೇರಿ,

ಕರ್ನಾಟಕ ಸರ್ಕಾರ
(ಅರಣ್ಯ ಇಲಾಖೆ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಯವರ ಕಛೇರಿ, ಚಾಮರಾಜನಗರ ವನ್ಯಜೀವಿ ಉಪವಿಭಾಗ, ಚಾಮರಾಜನಗರ.

ಸುಲ್ತಾನ್ ಷರೀಫ್ ವೃತ್ತ, ಸತ್ತಿ ರಸ್ತೆ ಚಾಮರಾಜನಗರ–571313
ಕಛೇರಿ:08226–222059 e-mail: acfcnagar@gmail.com

ಸಂಖ್ಯೆ.ಎ1/ಬಿಯುಡಿ/ರೈಲ್ವೆ ಬ್ಯಾನಿ.ಟೆಂ/ಸಿಆರ್–01/2024–25 ದಿನಾಂಕ:18–02–2025

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2024–25ನೇ ಸಾಲಿನಲ್ಲಿ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ವಿಭಾಗದ ಚಾಮರಾಜನಗರ ವನ್ಯಜೀವಿ ಉಪವಿಭಾಗ ವ್ಯಾಪ್ತಿಯಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಗಳನ್ನು 2024–25ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿ ಕೊಂಡಿರುವಂತಹ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP.Karnataka.gov.in) ಮೂಲಕ ದಿನಾಂಕ:01–03–2025ರವರೆಗೆ ಟೆಂಡರ್ ಅಹ್ವಾನಿಸಲಾಗಿದೆ. ಸದರಿ ಟೆಂಡರಿನಲ್ಲಿ ಯಾರು ಭಾಗವಹಿಸದೇ ಇದ್ದಲ್ಲಿ ಮರು ಟೆಂಡರ್ ನಡೆಸಲಾಗುವುದು ಇದಕ್ಕೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಇ–ಪ್ರೋಕ್ಯೂರ್ಮೆಂಟ್ ಪೋರ್ಟಲ್ (KPPP. Karnataka.gov.in) ನಲ್ಲಿ ರೀಕಾಲ್ ಮಾಡಲಾಗುವುದು. ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ಉಪವಿಭಾಗ, ಚಾಮರಾಜನಗರ,

ಸಂ:ವಾಸಾಸಂಇ:ಚಾನಗರ:637:2024–25

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ನೆಲಮಹಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಟ್ಟಡ, ಕೋರ್ಟ್ ಸರ್ಕಲ್ ಹತ್ತಿರ, ಕೋಲಾರ–563 101 ದೂರವಾಣಿ ಸಂಖ್ಯೆ:08152–200010
ಇ–ಮೇಲ್: ddwokolar@gmail.com

ಸಂಖ್ಯೆ:ವಿಹಿನಾಸಇ/ಜಿಅಂಕ/ಕೋ/ಬಾಡಿಗೆ ವಾಹನ/60/2025–26/503
ದಿನಾಂಕ:19.02.2025

ಟೆಂಡರ್ ಪ್ರಕಟಣೆ

2025–26 ನೇ ಸಾಲಿಗೆ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಕೋಲಾರ, ರವರ ಕಛೇರಿ ಉಪಯೋಗಕ್ಕಾಗಿ ಒಂದು ವಾಹನ (CAR) ಚಾಲಕರನ್ನೊಳಗೊಂಡಂತೆ ದ್ವಿಲಕೋಟೆ ಪದ್ದಿತಿಯಲ್ಲಿ ಟೆಂಡರ್ ಆಹ್ವಾನಿಸಿದ್ದು ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ. (1) ಟೆಂಡರ್ ಸಲ್ಲಿಸಲು ಪ್ರಾರಂಭದ **ದಿನಾಂಕ: 19.02.2025.** (2) ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ: 05.03.2025 ಸಂಜೆ 5:00 ವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06.03.2025 ಬೆಳಗ್ಗೆ 11:00 ಗಂಟೆಗೆ.** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 07.03.2025 ಬೆಳಗ್ಗೆ 11:00 ಗಂಟೆಗೆ.** (5) ಸಲ್ಲಿಸಬೇಕಾದ ಇ.ಎಂ.ಡಿ **ಮೊತ್ತ: ರೂ. 10,000/–.** (6) ಟೆಂಂಡರ್ ಅಂದಾಜು ಮೊತ್ತ **: ರೂ. 4,80,000/–.**

ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಕೋಲಾರ ಜಿಲ್ಲೆ, ಕೋಲಾರ ರವರನ್ನು ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ: 08152–200010 ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ
ಕೋಲಾರ ಜಿಲ್ಲೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:487/ಕೆಎಸ್‌ಎಂಸಿಎ/2024–25

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಜೆಇ–2:ಟಿ.ಎನ್.ಡಿ(44ಇ):2024–25 ದಿನಾಂಕ: 20.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೆಕ್ಕಶೀರ್ಷಿಕೆ: 5054–04–337–0–01–154 – ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ರಡಿ ಇಂಡೆಂಟ್ ನಂ.18874, **ಲೆಕ್ಕಶೀರ್ಷಿಕೆ:–5054–04–337–0–01–160 ಜಿಲ್ಲಾ ಮತ್ತು ಇತರೆ ರಸ್ತೆಗಳು – ನವೀಕರಣರಡಿ** ಇಂಡೆಂಟ್ ನಂ.18061 ಮತ್ತು **ಲೆಕ್ಕಶೀರ್ಷಿಕೆ: 5054–03–337–0–17–160 ರಾಜ್ಯ ಹೆದ್ದಾರಿ ರಸ್ತೆಗಳ ನವೀಕರಣ ರಡಿ** ಇಂಡೆಂಟ್ ನಂ.18059 ಈ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 07.03.2025 (ಅಪರಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ: 5054–04–337–0–01–154 – ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ರಡಿ ಇಂಡೆಂಟ್ ನಂ. 18254 ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 28.02.2025 (ಅಪರಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ. ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.99.16 ಲಕ್ಷ, ಗರಿಷ್ಠ ಅಂದಾಜು ಮೊತ್ತ: **ರೂ. 400.00 ಲಕ್ಷ** ಆಗಿರುತ್ತದೆ.

ಕೆ,ಡಬ್ಲೂ–4 ಬಿಡ್ ಡೊಕ್ಯೂಮೆಂಟ್ ಪ್ರಕಾರ ಟೆಂಡರ್ ಕರೆಯಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **kppp.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

DIPR/MNG/KSMCA/1458/24-25 dt.21.02.2025 ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

ಜಿಲ್ಲಾ ಪಂಚಾಯತ್ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು, (ಆಡಳಿತ ಶಾಖೆ)

ದೂರವಾಣಿ: 2272865 ಇಮೇಲ್– dsadm-tumakuru@gov.in

ಸಂಖ್ಯೆ:ಆ(1)ಹೊಗುತ್ತಿಗೆ/ಸೇವೆ/ವಿವ/105/2025–26 ದಿನಾಂಕ: 19.02.2025

ಟೆಂಡರ್ ಪ್ರಕಟಣೆ

ವಿಷಯ : ಜಿಲ್ಲಾ ಪಂಚಾಯತ್/ವ್ಯಾಪ್ತಿಯ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಛೇರಿಗಳು ಸೇರಿದಂತೆ ಅಕ್ಷರ ದಾಸೋಹ ಯೋಜನೆಯಡಿ ಜಿಲ್ಲಾ / ತಾಲ್ಲೂಕು ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ ಪಡೆಯುವ ಬಗ್ಗೆ.

ತುಮಕೂರು ಜಿಲ್ಲಾ ಪಂಚಾಯತ್ / ವ್ಯಾಪ್ತಿಯ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಛೇರಿಗಳು ಸೇರಿದಂತೆ ಅಕ್ಷರ ದಾಸೋಹ ಯೋಜನೆಯಡಿ ಜಿಲ್ಲಾ / ತಾಲ್ಲೂಕು ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಿಬ್ಬಂದಿಗಳ ಸೇವೆ (ಬೆರಳಚ್ಚುಗಾರರು / ಚಾಲಕರು / ಡಿ ಗ್ರೂಪ್ / ಭದ್ರತಾ ಸಿಬ್ಬಂದಿ / ಇತರೆ)ಯನ್ನು ಇ–ಪ್ರಕ್ಯೂರ್ ಮೆಂಟ್ ಮೂಲಕ ಪಡೆಯಲು ಇ–ಪ್ರಕ್ಯೂರ್ ಮೆಂಟ್ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಟೆಂಡರ್ ಮೂಲಕ ಸಂಪರ್ಕಿಸುವ ದಿನಾಂಕ:19–02–2025 ಕೊನೆಯ ದಿನಾಂಕ:20–03–2025 ಟೆಂಡರ್ ತೆರೆಯುವ ದಿನಾಂಕ:24/03/2025 ಬೆಳಗ್ಗೆ 11:00ಗಂಟೆಗೆ ಹಾಗೂ Pre-bid meeting ದಿನಾಂಕ:10–03–2025 ಟೆಂಡರ್ದಾರರು ವಿವರಗಳನ್ನು https://kppp.karnataka.gov.in ನಲ್ಲಿ ಪಡೆದು ಅಪ್ ಲೋಡ್ ಮಾಡಬಹುದಾಗಿದೆ.

ಸಹಿ/–ಉಪಕಾರ್ಯದರ್ಶಿ(ಆಡಳಿತ)
ಜಿಲ್ಲಾ ಪಂಚಾಯತ್, ತುಮಕೂರು.

DIPR/TUM/653/KSMCA/2024-25

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102
Phone /Fax-08532-238488/89
Web.www.rims-raichur.gov.in Email info@rims-raichur.com

ಸಂ. ರಿಮ್ಸ್/ಸರಬರಾಜು/ಟೆಂಡರ್/2024–25 ದಿನಾಂಕ: 20.02.2025

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಉಪಕರಣಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ದತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ Student Microscopes ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಉಪಕರಣ/27/2024–25 DME/2024-25/IND1234	55.00
2	ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ನೇತ್ರ ಚಿಕಿತ್ಸಾ ವಿಭಾಗಕ್ಕೆ ಅವಶ್ಯವಿರುವ ಉಪಕರಣವನ್ನು ಪೂರೈಸುವ ಕುರಿತು.	ರಿಮ್ಸ್/ಸರಬರಾಜು/ಟೆಂಡರ್/ ಉಪಕರಣ/28/2024–25 DME/2024-25/IND1235	31.50
3	ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಸ್ತ್ರೀ & ಪ್ರಸೂತಿ ವಿಭಾಗಕ್ಕೆ ಅವಶ್ಯವಿರುವ ಓ ಟಿ ಲೈಟ್ಸ್ ಪೂರೈಸುವ ಕುರಿತು.	ರಿಮ್ಸ್/ಸರಬರಾಜು/ಟೆಂಡರ್/ ಉಪಕರಣ/29/2024–25 DME/2024-25/IND1236	60.00
4	ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಎಲುಬು & ಕೀಲು ವಿಭಾಗಕ್ಕೆ ಸಲಕರಣೆ / ಪರಿಕರಗಳನ್ನು ಪೂರೈಸುವ ಕುರಿತು.	ರಿಮ್ಸ್/ಸರಬರಾಜು/ಟೆಂಡರ್/ ಉಪಕರಣ/30/2024–25 DME/2024-25/IND1237	80.61

1) ಟೆಂಡರ್‌ಗಳನ್ನು ದಿನಾಂಕ : 21.02.2025 ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08.03.2025 ರ ಸಾಯಂಕಾಲ 5.00 ಗಂಟೆಯ ವರೆಗೆ 3) ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 10.03.2025 ರ ಬೆಳಿಗ್ಗೆ 11.30 ಗಂಟೆಗೆ

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು

DIP/RCR/752/KSMC&A/753/2024-25

ಜಿಲ್ಲಾ ಪಂಚಾಯತ್ ತುಮಕೂರು,

ಕಾರ್ಯಪಾಲಕ ಅಭಿಯಂತರವರ ಕಚೇರಿ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937

ಸಂ:29/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಸಿಇಂ/MVSO&M/2024–25 /6415 ದಿನಾಂಕ: 18.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 29/2024–25
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ ವಿಭಾಗ, ತುಮಕೂರು ಇವರು 2024–25 ನೇ ಸಾಲಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಅನುಮೋದನೆಗೊಂಡಿರುವ ತುರುವೇಕೆರೆ ತಾಲ್ಲೂಕಿನ 01 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ https://kppp.karnataka.gov.in/ ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕಾಮಗಾರಿ ಮೊತ್ತ ರೂ.18.96 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.47,400/– ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : 27–02–2025 ಸಂಜೆ 5:00 ಘಂಟೆ ವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 28–02–2025 ಸಂಜೆ 05.30 ಘಂಟೆಯ ನಂತರ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 03–03–2025 ಬೆಳಿಗ್ಗೆ 11.00 ಘಂಟೆಯ ನಂತರ.

ಸಹಿ/– (ಶ್ರೀ ಕೆ.ಎಂ.ಕುಮಾರಸ್ವಾಮಿ)
ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು

DIPR/TMK/648/KSMCA/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ ಟೆಂಡರ್ ಪ್ರಕಟಣೆ ಸಂಖ್ಯೆ :21/2024–25 ದಿನಾಂಕ : 19.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಇ–ಪ್ರಕ್ಯೂರ್‌ಮೆಂಟ್ ವೇದಿಕೆಯುಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 04 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ. 4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ. 1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 21.02.2025 ರಿಂದ 05.03.2025 ರವರೆಗೆ ಸಂಜೆ 17.30 ಗಂಟೆಗೆ. 2) ಆರ್ಥಿಕ ಬಿಡ್ ತೆರೆಯುವ ದಿನಾಂಕ : 06.03.2025 ರಂದು 17.30 ಗಂಟೆಗೆ (ಕ್ರಮ ಸಂಖ್ಯೆ.1 ರಿಂದ 3). 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06.03.2025 ರಂದು 17.30 ಗಂಟೆಗೆ (ಕ್ರಮ ಸಂಖ್ಯೆ.4). 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : After obtaining approval of technical bid from competent authority (ಕ್ರಮ ಸಂಖ್ಯೆ.4). 5) ಕಾಲಾವಧಿ : (ಕ್ರಮ ಸಂಖ್ಯೆ.1 ರಿಂದ 3) 03 ತಿಂಗಳು & (ಕ್ರಮ ಸಂಖ್ಯೆ.4) 04 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 12.69 ಲಕ್ಷ ದಿಂದ ರೂ.84.58ಲಕ್ಷಗಳು. 7) ಇಎಂಡಿ ಮೊತ್ತ : ರೂ. 32,000/– ಮತ್ತು ರೂ.1,69,500/–

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/–
ಕಾರ್ಯಪಾಲಕ ಇಂಜನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.165–02/ ಝೋಂಕಾರ್/2024–25

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ರಾಜ್ಯದಲ್ಲಿ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಘೋಷಿಸಿದ 5 ಗ್ಯಾರಂಟಿ ಯೋಜನೆಗಳನ್ನು ಅಪಹಾಸ್ಯ ಮಾಡಿ, ಜಾರಿಗೆ ತರಲು ಸಾಧ್ಯವೇ ಇಲ್ಲ ಎಂದಿತ್ತು ಬಿಜೆಪಿ. ಕಾಂಗ್ರೆಸ್ ಸರಕಾರ ರಚನೆಯಾಗಿ ಕೊಟ್ಟ ಮಾತಿನಂತೆ ಎಲ್ಲ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದ ನಂತರವೂ ಬಿಜೆಪಿಯ ಟೀಕೆ, ಅಪಪ್ರಚಾರ ಮುಂದುವರಿದಿತ್ತು. ಕಾಂಗ್ರೆಸ್ ದೆಹಲಿ ಚುನಾವಣೆಯಲ್ಲಿಯೂ ಗೃಹಲಕ್ಷ್ಮಿ ಯೋಜನೆ ಘೋಷಿಸಿತ್ತು. ಆದರೀಗ ದೆಹಲಿಯಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರಕಾರ ಕಾಂಗ್ರೆಸ್ ಗೃಹಲಕ್ಷ್ಮಿ ಯೋಜನೆಯನ್ನು ಮಾದರಿಯಾಗಿಸಿ ಮಹಿಳೆಯರಿಗೆ ಪ್ರತಿ ತಿಂಗಳು ಹಣ ನೀಡುವ ಯೋಜನೆ ಆರಂಭಿಸಲು ಮುಂದಾಗಿದೆ. ಆಡಿಕೊಂಡವರೇ ಅನುಸರಿಸುವಂತೆ ಮಾಡಿದ್ದು ರಾಜ್ಯ ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳ ಯಶಸ್ಸಿಗೆ ಸಾಕ್ಷಿ



ಸತೀಶ್ ಕೆ, ಬೆಂಗಳೂರು

ಮತ್ತೆ ನಿಮಗೆ ಒಬ್ಬರಿಗೆ ಗೊತ್ತಾ ವೋಟ್ ಸಲುವಾಗಿ ತೆರಿಗೆ ಹಣ ಪೋಲು ಮಾಡೋದು..? ಬಡವರು ಕರ್ನಾಟಕದಲ್ಲಿ ಮಾತ್ರ ಇದ್ದಾರಾ..?

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಕಲಬುರಗಿ**

ಸಮಸ್ಯೆಯೇನು..?

- ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ನಿಂಬಾಳದ 4ನೇ ಅಂಗನವಾಡಿ ಕೇಂದ್ರಕ್ಕೆ ವಿದ್ಯುತ್ ಮತ್ತು ನೀರಿನ ಸಂಪರ್ಕ ಕಲ್ಪಿಸುವ ಬಗ್ಗೆ.
- **ಪರಿಹಾರ:** ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ನಿಂಬಾಳದ 4ನೇ ಅಂಗನವಾಡಿ ಕೇಂದ್ರಕ್ಕೆ ಅಧಿಕಾರಿಗಳು ಭೇಟಿ ನೀಡಿ, ಕೇಂದ್ರಕ್ಕೆ ವಿದ್ಯುತ್ ಸಂಪರ್ಕ, ನೀರಿನ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಫೆ.24ಕ್ಕೆ ರನ್ನ ಪ್ರಶಸ್ತಿ ಪ್ರದಾನ

ಬಾಗಲಕೋಟೆ: ಮುಧೋಳದ ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನದ ಕೊಡಮಾಡುವ ರನ್ನ ಹಳಗನ್ನಡ ಪ್ರಶಸ್ತಿಯನ್ನು ಡಾ. ಶಾಂತಿನಾಥ ದಿಬ್ಬದ ಹಾಗೂ ಶಂಕರಯ್ಯ ಉಕ್ಕಲಿ ಅವರಿಗೆ ನೀಡಲಾಗುತ್ತಿದೆ. ಈ ಪ್ರಶಸ್ತಿಯನ್ನು ಮುಧೋಳದಲ್ಲಿ ಫೆ.22 ರಿಂದ ಮೂರು ದಿನ ನಡೆಯುತ್ತಿರುವ ರನ್ನ ವೈಭವದ 24 ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಿಜಯಪುರದ ಕಿತ್ತೂರು ರಾಣಿ ಚನ್ನಮ್ಮ ವಿವಿಯ ನಿವೃತ್ತ ಕುಲಸಚಿವ ಡಾ. ಶಾಂತಿನಾಥ ದಿಬ್ಬದ ಹಾಗೂ ಮುಧೋಳದ ಅನೇಕ ಹಳಗನ್ನಡ ಗ್ರಂಥಗಳ ಕಾವ್ಯಾನುವಾದಗಳನ್ನು ಮಾಡಿದ್ದಾರೆ. ಹಳಗನ್ನಡಕ್ಕೆ ಈ ಇಬ್ಬರ ಕೊಡುಗೆ ಗಮನಿಸಿ ಪ್ರತಿಷ್ಠಾನ ದಿಂದ ರನ್ನ ಹಳಗನ್ನಡ ಪ್ರಶಸ್ತಿ ನೀಡಿ ಸತ್ಕರಿಸಲಾಗುತ್ತಿದೆ.



ಬಾಲಕನ ಬೈಕ್ ಚಾಲನೆ ಪೋಷಕರಿಗೆ ದಂಡ

ದಾವಣಗೆರೆ: ಅಪ್ರಾಪ್ತ ವಯಸ್ಸಿನ ಬಾಲಕ ಬೈಕ್ ಚಾಲನೆ ಮಾಡಿದ ಹಿನ್ನೆಲೆಯಲ್ಲಿ ಚನ್ನಗಿರಿ ಪೊಲೀಸರು ಪೋಷಕರಿಗೆ 25 ಸಾವಿರ ರು. ದಂಡ ವಿಧಿಸಿದ್ದಾರೆ. ಚನ್ನಗಿರಿ ಠಾಣೆಯ ವ್ಯಾಪ್ತಿಯಲ್ಲಿ ಪೊಲೀಸರು ವಾಹನಗಳ ತಪಾಸಣೆ ಮಾಡುತ್ತಿದ್ದಾಗ ಬಾಲಕನೊಬ್ಬ ಬೈಕ್ ಚಲಾಯಿಸುತ್ತಿದ್ದುದು ಗಮನಕ್ಕೆ ಬಂದಿದೆ. ಕೂಡಲೇ ಬೈಕ್ ವಶಕ್ಕೆ ಪಡೆದ ಪೊಲೀಸರು ಪರಿಶೀಲನೆ ನಡೆಸಿದಾಗ ಆತ ಅಪ್ರಾಪ್ತ ವಯಸ್ಸಿನವ ಎಂದು ತಿಳಿದುಬಂದಿದೆ. ಪಾಲಕರನ್ನು ಕರೆಸಿ ಅವರಿಗೆ 25 ಸಾವಿರ ರು. ದಂಡ ವಿಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಗಾವಿಯ ಬಾಳೇಕುಂದ್ರಿಯಲ್ಲಿ ನಡೆದ ಘಟನೆ | ಮರಾಠಿ ಬರುವುದಿಲ್ಲ, ಕನ್ನಡದಲ್ಲಿ ಮಾತನಾಡಿ ಎಂದಿದ್ದಕ್ಕೆ ಥಳಿಸಿದ ದುಷ್ಕರ್ಮಿಗಳು | ಪುಂಡರ ವಿರುದ್ಧ ಕ್ರಮಕ್ಕೆ ರಕ್ಷಣಾ ವೇದಿಕೆ ಆಗ್ರಹ

ಕನ್ನಡ ನೆಲದಲ್ಲೇ ಕಂಡಕ್ಟರ್ ಮೇಲೆ ಮರಾಠಿಗರ ಪುಂಡಾಟ, ಕ್ರೌರ್ಯ

ಬೆಳಗಾವಿ: ಮರಾಠಿ ಮಾತನಾಡಲು ಬರುವುದಿಲ್ಲ ಕನ್ನಡ ಮಾತನಾಡಿ ಎಂದು ಹೇಳಿದ್ದಕ್ಕೆ ಸಿಟ್ಟಿಗೆದ್ದು ಮರಾಠಿ ಭಾಷಿಕ ಯುವಕರ ಗುಂಪೊಂದು ಕರ್ನಾಟಕದ ಸಾರಿಗೆ ಬಸ್ ಚಾಲಕ ಹಾಗೂ ನಿರ್ವಾಹಕನ ಮೇಲೆ ಹಲ್ಲೆ ನಡೆಸಿದ ಘಟನೆ ಶುಕ್ರವಾರ ಬೆಳಗಾವಿಯ ಬಾಳೇಕುಂದ್ರಿ ಗ್ರಾಮದಲ್ಲಿ ನಡೆದಿದೆ.

ನಗರದ ಕೇಂದ್ರ ಬಸ್ ನಿಲ್ದಾಣದಿಂದ ಬಾಳೇಕುಂದ್ರಿಗೆ ತೆರಳುವ ಬಸ್ ನಲ್ಲಿ ಟಿಕೆಟ್ ವಿಚಾರಕ್ಕೆ ನಿರ್ವಾಹಕ ಮಹಾದೇವ ಹುಕ್ಕೇರಿ ಜತೆ ಜಗಳ ಪ್ರಾರಂಭವಾಗಿದೆ. ಕನ್ನಡ ಭಾಷೆಯಲ್ಲಿ ಟಿಕೆಟ್ ತಗೆದುಕೊಳ್ಳಿ ಎಂದು ಹೇಳಿದ್ದಕ್ಕೆ ಸಿಟ್ಟಿಗೆದ್ದ ಯುವಕ ಮರಾಠಿಯಲ್ಲಿ ಮಾತನಾಡುವಂತೆ ಆಗ್ರಹಿಸಿದ್ದಾನೆ. ಇದನ್ನು ನಿರ್ವಾಹಕ ವಿರೋಧಿಸಿದ್ದಕ್ಕೆ ಬಾಳೇಕುಂದ್ರಿ ಗ್ರಾಮದಲ್ಲಿ ಹತ್ತಾರು ಯುವಕರು ಚಾಲಕ ಹಾಗೂ ನಿರ್ವಾಹಕನ ಮೇಲೆ ಮುಗಿಬಿದ್ದು ಹಲ್ಲೆ ಮಾಡಿದ್ದಾರೆ.

ಜಗಳಕ್ಕೆ ನಿಂತ ಯುವಕ: ಹಲ್ಲೆಗೊಳಗಾದ ಬಸ್ ನಿರ್ವಾಹಕ ಮಹಾದೇವ ಹುಕ್ಕೇರಿ ಸದ್ಯ ಬೆಳಗಾವಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ಕುರಿತು ವಿವರಣೆ ನೀಡಿದ ಮಹಾದೇವ್, ಕೇಂದ್ರ ಬಸ್ ನಿಲ್ದಾಣದಲ್ಲಿ ಯುವಕ ಹಾಗೂ ಯುವತಿ ಬಸ್ ಹತ್ತಿದ್ದರು. ಈ ಸಂದರ್ಭದಲ್ಲಿ ಯುವತಿ ಎರಡು ಟಿಕೆಟ್ ಪಡೆದಿದ್ದಾರೆ.

ಪಕ್ಕದಲ್ಲೇ ಇದ್ದ ಯುವಕನಿಗೆ ಟಿಕೆಟ್ ತೆಗೆದುಕೊಳ್ಳಲು ಹೇಳಿದಾಗ ಆತ ಉಚಿತ ಟಿಕೆಟ್ ಇದೆ ಎಂದು ವಾದಿಸಿದ್ದಾನೆ. ಈ ಸಂದರ್ಭದಲ್ಲಿ ಟಿಕೆಟ್ ತೆಗೆದುಕೊಳ್ಳುವಂತೆ ಹೇಳಿದಾಗ ಮರಾಠಿ ಮಾತನಾಡುವಂತೆ ಜಗಳಕ್ಕೆ ನಿಂತ. ಕ್ಷುಲ್ಲಕ ಕಾರಣಕ್ಕೆ ಹಲ್ಲೆ ನಡೆಸಿದರು ಎಂದು ದೂರಿದರು.

ಮರಾಠಿ ಮಾತನಾಡದಿದ್ದರೆ ನೋಡಿಕೊಳ್ಳುವೆ: ಮರಾಠಿ ಮಾತನಾಡಬೇಕು, ಇಲ್ಲವಾದರೆ ಬಾಳೇಕುಂದ್ರಿಯಲ್ಲಿ ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿದ ಯುವಕ ಸುಳೆಬಾವಿ ದಾಟುತ್ತಿದ್ದಂತೆ ಹತ್ತಾರು ಜನಕ್ಕೆ ಬಾಳೇಕುಂದ್ರಿಗೆ ಬರುವಂತೆ ತಿಳಿಸಿದ್ದಾನೆ. ಬಾಳೇಕುಂದ್ರಿಗೆ ಬಸ್ ಬರುತ್ತಿದ್ದಂತೆ ಮರಾಠಿ ಭಾಷಿಕ ಯುವಕರ ಗುಂಪು ನಿರ್ವಾಹಕ ಮತ್ತು ಬಸ್ ಚಾಲಕನ ಮೇಲೆ ಹಲ್ಲೆ ನಡೆಸಿದ್ದಾರೆ. ಮರಾಠಿಗರ ಈ ಪುಂಡಾಟವನ್ನು ವಿವರಿಸಿ ನಿರ್ವಾಹಕ ಮಹಾದೇವ ಹುಕ್ಕೇರಿ ಕಣ್ಣೀರು ಹಾಕಿದರು.

ಬಸ್ ಚಾಲಕ ಹಾಗೂ ನಿರ್ವಾಹಕನ ಮೇಲೆ ಹಲ್ಲೆ ನಡೆದ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಕರವೇ ಕಾರ್ಯಕರ್ತರು ಹಲ್ಲೆಗೊಳಗಾದ ಮಹಾದೇವ ಹುಕ್ಕೇರಿ ಅವರಿಗೆ ಸಾಂತ್ವನ ಹೇಳಿ ಘಟನೆಯನ್ನು ತೀವ್ರವಾಗಿ ಖಂಡಿಸಿ ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ. ಈ ಕುರಿತು ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು ಆರೋಪಿಗಳಿಗೆ ಬಲೆ ಬೀಸಿದ್ದಾರೆ.



ಬಾಳೇಕುಂದ್ರಿಯಲ್ಲಿ ಮರಾಠಿಗರಿಂದ ಹಲ್ಲೆಗೊಳಗಾಗಿ ಗಾಯಗೊಂಡ ನಿರ್ವಾಹಕ ಮಹಾದೇವ್ ಹುಕ್ಕೇರಿ. ಗಾಯಗೊಂಡು ಬೆಳಗಾವಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕರ್ನಾಟಕ ಸಾರಿಗೆ ಬಸ್ ಕಂಡಕ್ಟರ್.

> ಸಾರಿಗೆ ಬಸ್ ನಿರ್ವಾಹಕ ಟಿಕೆಟ್ ಕೊಡುವ ಸಂದರ್ಭದಲ್ಲಿ ಮರಾಠಿ ಭಾಷೆ ಬರುವುದಿಲ್ಲ ಕನ್ನಡದಲ್ಲಿ ಮಾತನಾಡಿ ಎಂದು ಹೇಳಿದ್ದಕ್ಕೆ ಆರೋಪಿಗಳು ಹಲ್ಲೆ ನಡೆಸಿದ್ದಾರೆ. ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು ಆರೋಪಿಗಳನ್ನು ಬಂಧಿಸಿ ಕ್ರಮ ಜರುಗಿಸುತ್ತೇವೆ.
> **ರೋಹನ್ ಜಗದೀಶ್** ಡಿಸಿಪಿ ಬೆಳಗಾವಿ

> ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ. ಕನ್ನಡ ಮಾತನಾಡಿದ್ದಕ್ಕೆ ಸಾರಿಗೆ ಬಸ್ ಚಾಲಕನ ಮೇಲೆ ಹಲ್ಲೆ ಮಾಡಿದ ಪುಂಡರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಕನ್ನಡಿಗರು ಪುಂಡರ ಮನೆಗೆ ನುಗ್ಗಿ ಹೊಡೆಯುತ್ತೇವೆ.
> **ವಾಜೀದ್ ಹಿರೇಕುಡಿ,** ಕರವೇ ಬೆಳಗಾವಿ ಜಿಲ್ಲಾಧ್ಯಕ್ಷ

ಚಿಂತಾಮಣಿಯಲ್ಲಿ ಬೃಹತ್ ರಕ್ತದಾನ ಶಿಬಿರ
ಇಂಡಿಯಾ ಬುಕ್ ಆಫ್ ರೆಕಾರ್ಡ್ ಕಿರೀಟದ ಗರಿಮೆ

ಒಂದೇ ದಿನ 3200 ಯೂನಿಟ್ ರಕ್ತ ಸಂಗ್ರಹ

ಚಿಂತಾಮಣಿಯಲ್ಲಿ ಸ್ವಯಂಪ್ರೇರಣೆ ಯಿಂದ ರಕ್ತದಾನ ಮಾಡಿದ ರಕ್ತದಾನಿಗಳು

ಚಿಂತಾಮಣಿ: ಮಾಜಿ ಗೃಹಸಚಿವ ಎ. ಚೌಡರೆಡ್ಡಿ ಅವರ 88ನೇ ವರ್ಷದ ಜನ್ಮದಿನಾಚರಣೆಗೆ ಆಯೋಜಿಸಿದ ಬೃಹತ್ ರಕ್ತದಾನ ಶಿಬಿರ ಅತ್ಯಂತ ಯಶಸ್ವಿಯಾಗಿ ಮುಗಿದಿದ್ದು ಒಂದೇ ದಿನದಲ್ಲಿ ಒಂದೇ ಸ್ಥಳದಲ್ಲಿ 3200ಕ್ಕೂ ಹೆಚ್ಚು ಯೂನಿಟ್ ರಕ್ತಸಂಗ್ರಹದ ದಾಖಲೆಯೊಂದಿಗೆ ಈವರೆಗೆ ಇದ್ದ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿದ್ದ ದಾಖಲೆಯನ್ನು ಮುರಿದು ಚಿಂತಾಮಣಿಗೆ ಅಗ್ರಸ್ಥಾನ ದೊರೆಯುವಂತೆ ಮಾಡಿದೆ. ಚಿಂತಾಮಣಿಯ ಕಿಶೋರ್ ವಿದ್ಯಾಲಯದ ಆವರಣದಲ್ಲಿ ಶುಕ್ರವಾರ ನಡೆದ ರಕ್ತದಾನ ಶಿಬಿರ ಬೆಳಗ್ಗಿನಿಂದ ಸಂಜೆವರೆಗೆ ನಡೆಯಿತು. 7200 ಮಂದಿ ರಕ್ತದಾನ ಮಾಡಲು ನೋಂದಣಿ ಮಾಡಿಕೊಂಡಿದ್ದು ಆ ಪೈಕಿ 3200 ಮಂದಿ ರಕ್ತದಾನ ಮಾಡಿರುವುದು ಕರ್ನಾಟದ ಮಟ್ಟಿಗೆ ದಾಖಲೆಯಾಗಿದೆ.

ತಂದೆ -ತಾಯಿ ದೇವರಿಗೆ ಸಮ

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಾತನಾಡಿ, ತಂದೆ-ತಾಯಿ ದೇವರಿಗೆ ಸಮ.ಅವರು ತಮ್ಮ ಮಕ್ಕಳಿಗಾಗಿ ಏನೆಲ್ಲಾ ತ್ಯಾಗ ಮಾಡಿದ್ದಾರೆ ಎಂಬುದನ್ನು ಸ್ಮರಿಸಿದರೆ ಸಾಕು. ಮಕ್ಕಳ ಪಾಲಿಗೆ ದೇವರಾಗುತ್ತಾರೆ.ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಕ್ತದ ಕೊರತೆಯಿರುವ ಬಗ್ಗೆ ಅಧ್ಯಕ್ಷ ಜಯರಾಮ್ ಅವರಿಂದ ಮಾಹಿತಿ ಪಡೆದೆ. ನಮ್ಮ ತಂದೆಯ 88ನೇ ಜನ್ಮದಿನಾಚರಣೆಗೆ ಬೃಹತ್ ರಕ್ತದಾನ ಶಿಬಿರ ಆಯೋಜಿಸಿದ್ದೆ ಎಂದರು.

ಮೈಸೂರಿನಲ್ಲಿ ನಡೆದ ಆಗಮ ಘಟಿಕೋತ್ಸವದಲ್ಲಿ ರಾಜ್ಯ ಸರಕಾರಕ್ಕೆ ಡಾ.ಭಾಷ್ಯಂ ಸ್ವಾಮೀಜಿ ಮನವಿ

ಆಗಮ ಸಂಶೋಧನಾ ಸಂಸತ್ ಸ್ಥಾಪಿಸಿ

ಮೈಸೂರು: ಆಗಮಶಾಸ್ತ್ರದ ಸಂಶೋಧನೆಗೆ ಮೀಸಲಾದಂತೆ ಆಗಮ ಸಂಶೋಧನ ಸಂಸತ್ ಎಂಬ ಒಂದು ಸಂಶೋಧನಾ ಸಂಸ್ಥೆಯನ್ನು ರಾಜ್ಯ ಸರಕಾರ ಸ್ಥಾಪಿಸಬೇಕು ಎಂದು ನಾಡೋಜ ಡಾ.ಭಾಷ್ಯಂ ಸ್ವಾಮೀಜಿ ಮನವಿ ಮಾಡಿದರು.

ಹಿಂದೂ ಧಾರ್ಮಿಕ ದತ್ತಿ ಇಲಾಖೆ ಹಾಗೂ ರಾಜ್ಯ ಆಗಮ ಶಿಕ್ಷಣ- ಪರೀಕ್ಷಾ ಸಮಿತಿ ಆಶ್ರಯದಲ್ಲಿ ಶುಕ್ರವಾರ ಜಗನ್ಮೋಹನ ಅರಮನೆಯಲ್ಲಿ ನಡೆದ ಆಗಮ ಘಟಿಕೋತ್ಸವದಲ್ಲಿ ಅವರು ಘಟಿಕೋತ್ಸವ ಭಾಷಣ ಮಾಡಿದರು.

ಆಗಮಶಾಸ್ತ್ರ ಅತ್ಯಂತ ವಿಪುಲವೂ, ಗಾಢವೂ, ವಿಶಾಲವೂ ಆಗಿರುತ್ತದೆ. ಆಧುನಿಕ ವಿಜ್ಞಾನಯುಗಕ್ಕೆ ಹತ್ತಾರು ವಿಷಯಗಳಲ್ಲಿ ತನ್ನ ಕೊಡುಗೆ ನೀಡಲು ಸಮರ್ಥವಾಗಿದೆ. ವೈಜ್ಞಾನಿಕ ದೃಷ್ಟಿಯಿಂದ ಸಂಶೋಧಿಸಿ ಅದರ ಸತ್ಯಾಂಶಗಳನ್ನು ಜಗತ್ತಿಗೆ ಸಾರಬೇಕಾದ ಕಾಲ ಬಂದಿದೆ. ಅಪ್ರಕಟಿತವಾದ ತಾಳೆಗರಿಗಳ ರೂಪದಲ್ಲಿ ಗ್ರಂಥಗಳನ್ನು ಸಂಪಾದಿಸಿ ಭಾಷಾಂತರಿಸಿ ಪ್ರಕಟಿಸುವ ಕಾರ್ಯವೂ ಸಹ ಆಗಬೇಕಾಗಿದೆ. ಇದಕ್ಕಾಗಿ ಸರಕಾರ 'ಆಗಮ ಸಂಶೋಧನ ಸಂಸತ್' ಎಂಬ ಸಂಶೋಧನ ಸಂಸ್ಥೆ ಸ್ಥಾಪಿಸುವುದು ಸೂಕ್ತ ಎಂದು ಕೋರಿದರು.

ಅರ್ಚಕರಿಗೆ ಆಗಮ ಶಾಸ್ತ್ರದ ಜ್ಞಾನ ಅವಶ್ಯ

ದೇವಾಲಯದ ಅರ್ಚಕರು ಕೇವಲ ಅರ್ಚಕರಾಗಿ ಮಾತ್ರ ಇರುವುದಿಲ್ಲ, ಅವಶ್ಯವಾದ ಜ್ಞಾನ ಅರ್ಚಕರು ಪಡೆದಿರಬೇಕಾಗುತ್ತದೆ. ತಿಳಿಯಬೇಕಾದ ಅಂಶವನ್ನು ತಿಳಿದುಕೊಳ್ಳದೆ ಸಾರ್ವಜನಕರಿಗೆ ಸಲಹೆ-ಸೂಚನೆಗಳನ್ನು ಅರ್ಚಕರು ನೀಡಿದರೆ ಅದು ಸಮಾಜಕ್ಕೆ ಮಾಡುವ ವಂಚನೆ. ಆದ್ದರಿಂದ ಅರ್ಚಕರು ಸಂಸ್ಕೃತ ಭಾಷೆ, ವೇದಮಂತ್ರ, ಜ್ಯೋತಿಷ್ಯಗಳ ಯಥೋಚಿತ ಜ್ಞಾನ ಪಡೆದಿರಬೇಕು. ಹೀಗಿದ್ದಾಗ ಮಾತ್ರ ಅರ್ಚಕರು ಸಮಾಜಕ್ಕೆ ಒಳ್ಳೆಯ ಸೇವೆಯನ್ನು ಸಲ್ಲಿಸಲು ಸಾಧ್ಯವಾಗುತ್ತದೆ ಎಂದರು.

ಪ್ರತಿದಿವಸವೂ ಪೂಜೆ ಮಾಡುವ ಮೊದಲು 'ಭೂತಶುದ್ಧಿ'ಯೆಂಬ ಕ್ರಮ ಅನುಸರಿಸಿ ತನ್ನ ಶರೀರವನ್ನು ಲಯಗೊಳಿಸಿ ಮತ್ತೆ ದಿವ್ಯ ಶರೀರವನ್ನು ಪಡೆದು ಅನಂತರದಲ್ಲಿ ಪೂಜೆಯನ್ನು ನಿರ್ವಹಿಸುವುದು ಕ್ರಮ. ಹಾಗೆ ಮಾಡಿದಾಗ ಮಾತ್ರ ದೇವಸ್ಥಾನದಲ್ಲಿ ದೇವರ ಸಾನ್ನಿಧ್ಯ, ದೇವರ ಕೃಪೆ ಎಲ್ಲ ಜನರ ಮೇಲೆ ಹರಿಯಲಿದೆ ಎಂದು ಹೇಳಿದರು.

ಮೇಲುಕೋಟೆ ಕ್ಷೇತ್ರದ ಶ್ರೀಯದುಗಿರಿ ಯತಿರಾಜ ನಾರಾಯಣ ಜೀಯರ್ ಸ್ವಾಮೀಜಿ ಸಾನಿಧ್ಯವಹಿಸಿದ್ದರು. ಸಚಿವ ರಾಮಲಿಂಗಾರೆಡ್ಡಿ, ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಡಾ.ಎಂ.ವಿ.ವೆಂಕಟೇಶ್, ಶಾಸಕ ಶ್ರೀವತ್ಸ, ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪ್ರಶಾಂತ ಪಕ್ಕಲಾ, ರಾಜ್ಯ ಅರ್ಚಕರ ಸಂಘದ ಅಧ್ಯಕ್ಷ ಶ್ರೀವತ್ಸ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ಆಗಮ ಘಟಿಕೋತ್ಸವದಲ್ಲಿ ಯದುಗಿರಿ ಯತಿರಾಜ ನಾರಾಯಣ ಜೀಯರ್, ಸಚಿವ ರಾಮಲಿಂಗಾರೆಡ್ಡಿ, ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಡಾ.ಎಂ.ವಿ.ವೆಂಕಟೇಶ್, ಶಾಸಕ ಶ್ರೀವತ್ಸ ಪಾಲ್ಗೊಂಡಿದ್ದರು.

ರಾಜ್ಯದ ವಿವಿಧ ಸಂಸ್ಕೃತ ಪಾಠಶಾಲೆಗಳಲ್ಲಿ ಅಧ್ಯಯನ ಮಾಡಿದ 1959 ವಿದ್ಯಾರ್ಥಿಗಳು ಆಗಮಶಾಸ್ತ್ರದಲ್ಲಿ ಪದವಿ ಪಡೆದಿದ್ದು, ಆ ಪೈಕಿ 700 ಮಂದಿ ಘಟಿಕೋತ್ಸವದಲ್ಲಿ ಹಾಜರಾಗಿ ಪದವಿ ಸ್ವೀಕರಿಸಿದರು.

ಪ್ರತಿವರ್ಷ ಘಟಿಕೋತ್ಸವ ನಡೆಯಲಿ

ಕರ್ನಾಟಕದಲ್ಲಿ ಆಗಮಗಳ ಅಧ್ಯಯನ-ಅಧ್ಯಾಪನ ನಿರಂತರವಾಗಿ ನಡೆದುಕೊಂಡು ಬಂದಿದೆ. ಈ ವಿಷಯದಲ್ಲಿ ಮೈಸೂರಿನ ರಾಜಮನೆತದವರು ತೋರಿದ ಒಲವು ದೊಡ್ಡದು. ಮಹಾರಾಜ ಸಂಸ್ಕೃತ ಮಹಾಪಾಠ ಶಾಲೆ ಸ್ಥಾಪಿಸಿದರು. ಇದನ್ನು ಸರಕಾರ ಮುಂದುವರಿಸಿಕೊಂಡು ಬಂದಿದ್ದು ಅನೇಕ ವರ್ಷಗಳಿಂದ ನಿಂತು ಹೋದ ಈ ಘಟಿಕೋತ್ಸವವನ್ನು ಮತ್ತೆ ಪ್ರಾರಂಭಿಸಿರುವುದು ಸ್ವಾಗತಾರ್ಹ. ಇನ್ನು ಮುಂದೆ ಪ್ರತಿವರ್ಷವೂ ಸಹ ಘಟಿಕೋತ್ಸವ ಏರ್ಪಡಿಸಬೇಕೆಂದು ಭಾಷ್ಯಂ ಸ್ವಾಮೀಜಿ ಬಯಸಿದರು.

ಚಾಮುಂಡಿ ಬೆಟ್ಟಕ್ಕೆ ಬಿಜೆಪಿ ಶಾಸಕನ ಭೇಟಿ, ಪೂಜೆ

ಮೌನಕ್ಕೆ ಶರಣಾದ ಭಿನ್ನರ ನಾಯಕ ಯತ್ನಾಳ್

ಮೈಸೂರು: ಸದಾ ತೀಕ್ಷ್ಣ ಪ್ರತಿಕ್ರಿಯೆ ನೀಡುತ್ತಿದ್ದ ಬಿಜೆಪಿಯ ಭಿನ್ನಬಣದ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಶುಕ್ರವಾರ ಮೌನಕ್ಕೆ ಜಾರಿದ್ದರು. ಮೈಸೂರಿಗೆ ಆಗಮಿಸಿದ್ದ ಅವರು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ದೇವಿಯ ಪಾದದ ಬಳಿ ಕಡತವೊಂದನ್ನಿರಿಸಿ ಪೂಜೆ ಸಲ್ಲಿಸಿದರು. ಬಳಿಕ ಮಾಧ್ಯಮದವರಿಗೆ ಯಾವುದೇ ಪ್ರತಿಕ್ರಿಯೆ ನೀಡದ ಮೌನವಾಗಿ ಯತ್ನಾಳ್ ಹೊರಟು ಹೋದರು.

ಬಿವೈವಿ ಅಭಿಮಾನಿಗಳಿಂದ ಜಯಘೋಷ: ಯತ್ನಾಳ್ ಆಗಮಿಸುತ್ತಿದ್ದಂತೆ ಬಿಎಸ್ ವೈ, ಬಿವೈವಿ ಅಭಿಮಾನಿಗಳು, ಜೈ ವಿಜಯೇಂದ್ರ, ಜೈ ಯಡಿಯೂರಪ್ಪ ಎಂದು ಕೂಗಿದ ಹಿನ್ನೆಲೆಯಲ್ಲಿ ಭಿನ್ನಬಣದ ನಾಯಕ ಮುಜುಗರಕ್ಕೊಳಗಾದರು. ಆಗಲೂ ಪ್ರತಿಕ್ರಿಯೆ ನೀಡದೆ, ಘೋಷಣೆಗಳಿಗೂ ಪ್ರತಿಕ್ರಿಯಿಸದೇ ಯತ್ನಾಳ್ ಹೊರಟರು. ಬಿಜೆಪಿ ಕೇಂದ್ರ ಶಿಸ್ತು ಸಮಿತಿ ನೋಟಿಸ್ ನೀಡಿದ ಬೆನ್ನಲ್ಲೇ ಬಸನಗೌಡ ಪಾಟೀಲ್ ಯತ್ನಾಳ್ ಮೆತ್ತಗಾಗಿರುವಂತೆ ಕಂಡುಬಂದಿತು.

ಯಾವುದೀ ಕಡತ..?

ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದ ವೇಳೆ ಚಾಮುಂಡೇಶ್ವರಿ ಮುಂದೆ ಕಡತವೊಂದನ್ನು ಇಟ್ಟು ಯತ್ನಾಳ್ ಪೂಜೆ ಸಲ್ಲಿಸಿದ್ದರು. ಆ ಫೈಲ್ ಯಾವ ವಿಚಾರಕ್ಕೆ ಸಂಬಂಧಿಸಿದ್ದು ಎಂಬ ಕುತೂಹಲ ಮನೆಮಾಡಿತ್ತು. ಸ್ವಲ್ಪ ಸಮಯದ ಬಳಿಕ ಯತ್ನಾಳ್ ಅವರೇ ಟ್ವೀಟ್ ಮಾಡಿದ್ದು, ಸುಪ್ರೀಂ ಕೋರ್ಟ್ ಆದೇಶಾನುಸಾರ ತಮ್ಮ ಸಿದ್ಧಸಿರಿ ವಿದ್ಯುತ್ ಹಾಗೂ ಎಥನಾಲ್ ಕಾರ್ಖಾನೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿ ನೀಡಿದೆ. ಈ ಸಂಬಂಧ ನಾಡದೇವತೆ ಚಾಮುಂಡೇಶ್ವರಿ ಅಮ್ಮನವರಿಗೆ ಪ್ರಾರ್ಥನೆ ಮತ್ತು ಪೂಜೆ ಸಲ್ಲಿಸಿದ್ದೇನೆ. ಚಿಂಚೋಳಿ ತಾಲ್ಲೂಕಿನಲ್ಲಿರುವ ಕಾರ್ಖಾನೆ ಆರಂಭವಾಗುವುದರಿಂದ ನೂರಾರು ಉದ್ಯೋಗ ಸೃಷ್ಟಿಯಾಗುತ್ತದೆ ಹಾಗೂ ರೈತರ ಏಳಿಗೆಗೆ ನಾಂದಿಯಾಗುತ್ತದೆ ಎಂದಿದ್ದಾರೆ.

ಸಂಸದ ಯದುವೀರ್ ಒಡೆಯರ್ ಪುತ್ರನಿಗೆ ನಾಮಕರಣ

2ನೇ ಯುವರಾಜನ ಹೆಸರು ಯುಗಾಧ್ಯಕ್ಷ

ಮೈಸೂರು: ಸಂಸದ ಮತ್ತು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ಅವರ ಎರಡನೇ ಪುತ್ರನ ನಾಮಕರಣ ಶಾಸ್ತ್ರ ಅರಮನೆಯ ಕನ್ನಡಿ ತೊಟ್ಟಿಯಲ್ಲಿ ಫೆಬ್ರವರಿ 19ರ ಬುಧವಾರ ನೆರವೇರಿಸಿದ್ದಾರೆ.

ಯದುವಂಶದ ಪರಂಪರೆಯಂತೆ ಎರಡನೇ ಮಗುವಿಗೆ ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್ ಎಂದು ನಾಮಕರಣ ಮಾಡಲಾಗಿದೆ. ಅರಮನೆಯ ಕನ್ನಡಿ ತೊಟ್ಟಿಯಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಸಮ್ಮುಖದಲ್ಲಿ ನಾಮಕರಣ ಶಾಸ್ತ್ರ ಕಾರ್ಯಕ್ರಮ ನಡೆಯಿತು.

ಆಯ್ದ ಸಂಬಂಧಿಕರಿಗೆ ಆಹ್ವಾನ: ಅರಮನೆಯ ಪುರೋಹಿತರು ವಿವಿಧ ಶಾಸ್ತ್ರ ಹಾಗೂ ಧಾರ್ಮಿಕ ಕಾರ್ಯಗಳ ಬಳಿಕ, ಗುರು-ಹಿರಿಯರು ಸೂಚಿಸಿದಂತೆ ಯದುವೀರ್ ಹಾಗೂ ತ್ರಿಷಿಕಾ ಕುಮಾರಿ ಅವರ ಎರಡನೇ ಪುತ್ರನಿಗೆ ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್ ಎಂದು ಕಿವಿಯಲ್ಲಿ ಮೂರು ಬಾರಿ ಹೇಳುವ ಮೂಲಕ ನಾಮಕರಣ ಮಾಡಲಾಯಿತು.

ನಾಮಕರಣ ಶಾಸ್ತ್ರ ರಾಜವಂಶಸ್ಥರ ಖಾಸಗಿ ಕಾರ್ಯಕ್ರಮವಾಗಿದ್ದು, ಕೆಲವೇ ಸಂಬಂಧಿಕರಿಗೆ ಮಾತ್ರ ಆಹ್ವಾನವಿತ್ತು.

ನವರಾತ್ರಿಯಲ್ಲೇ 2ನೇ ಪುತ್ರನ ಜನನ: 2024ರ ಅ. 11 ರಂದು ಸಂಸದ ಯದುವೀರ್ ಒಡೆಯರ್ ನವರಾತ್ರಿ ಮಹೋತ್ಸವದ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಆಯುಧ ಪೂಜೆ ನೇರವೇರಿಸಿ ಕಂಕಣ ವಿಸರ್ಜನೆ ಮಾಡಿದ್ದರು. ಅಂದೇ ಖಾಸಗಿ ಆಸ್ಪತ್ರೆಯಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಗಂಡು ಮಗುವಿಗೆ ಜನ್ಮ ನೀಡಿದ್ದರು.

ಪ್ರಮೋದಾದೇವಿ ಒಡೆಯರ್ ಸಮ್ಮುಖದಲ್ಲಿ ಸಂಸದ ಯದುವೀರ್ ಮತ್ತು ತ್ರಿಷಿಕಾ ಕುಮಾರಿ ಅವರ 2ನೇ ಪುತ್ರನಿಗೆ ನಾಮಕರಣ ನೆರವೇರಿತು.

ಬಿಜೆಪಿ ಆರೋಪಕ್ಕೆ ಸಚಿವ ಬೈರತಿ ತಿರುಗೇಟು | ಲೋಕಾಯುಕ್ತರ ಕ್ರಮಕ್ಕೆ ಸಮರ್ಥನೆ | ಚಾಮುಂಡಿ ಎದುರು ಆಣೆ-ಪ್ರಮಾಣಕ್ಕೆ ಸವಾಲು

ಮುಡಾ ಕಡತ ಕದ್ದೊಯ್ದಿಲ್ಲ: ಬೈರತಿ

ಮೈಸೂರು: ಮುಡಾ ಹಗರಣಕ್ಕೆ ಸಂಬಂಧಿಸಿದ ಕಡತಗಳನ್ನು ತಾವು ಕೊಂಡೊಯ್ದಿಲ್ಲ ಎಂದು ಸಚಿವ ಬೈರತಿ ಸುರೇಶ್ ಸ್ಪಷ್ಟವಾಗಿ ಹೇಳಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮುಡಾ ಪ್ರಮುಖ ಕಡತಗಳನ್ನು ಸಚಿವರು ಕೊಂಡೊಯ್ದಿದ್ದಾರೆಂಬ ಬಿಜೆಪಿ ಶಾಸಕ ಶ್ರೀವತ್ಸ ಆರೋಪವನ್ನು ಅಲ್ಲಗಳೆದರು.

ನಾನು ಮುಡಾದಿಂದ ಯಾವುದೇ ಕಡತ ಒಯ್ದಿಲ್ಲ. ಕೊಂಡೊಯ್ಯಲು ಅವೇನು ಕಡ್ಲೆಪುರಿಯಲ್ಲ. ಸಿಸಿ ಕ್ಯಾಮೆರಾ ಕಣ್ತಪ್ಪಿಸಿ ಏನನ್ನೂ ಕೊಂಡೊಯ್ಯಲು ಸಾಧ್ಯವಿಲ್ಲ. ಮುಡಾ ಪ್ರಕರಣದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಈ ಹಿಂದೆ ಕೂಡ ಹೇಳಿದ್ದೆ. ಈಗಲೂ ತಪ್ಪು ಮಾಡಿಲ್ಲ ಎಂದು ಚಾಮುಂಡಿ ಬೆಟ್ಟದಲ್ಲೇ ಹೇಳುತ್ತಿದ್ದೇನೆ ಎಂದು ಬೈರತಿ ಸುರೇಶ್ ಸ್ಪಷ್ಟಪಡಿಸಿದರು.

ಬಿಜೆಪಿ ಆಕ್ಷೇಪಕ್ಕೆ ತಿರುಗೇಟು: ಮುಡಾ ಹಗರಣ ಕುರಿತು ಲೋಕಾಯುಕ್ತ ನೀಡಿರುವ ಸರಿ ಇದೆ ಎಂದು ಸಮರ್ಥಿಸಿಕೊಂಡ ಸಚಿವರು, ಮುಡಾ ಸಂಬಂಧಿಸಿದಂತೆ ಲೋಕಾಯುಕ್ತದಲ್ಲಿ ಸಿಎಂ ಸಿದ್ದರಾಮಯ್ಯಗೆ ಕ್ಲೀನ್ ಚಿಟ್ ನೀಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು.

ನಾನು ಅವತ್ತೇ ಹೇಳಿದ್ದೆ. ಬಿಜೆಪಿ-ಜೆಡಿಎಸ್ ಅವರಿಗೆ ಮಾನ-ಮರ್ಯಾದೆ ಇಲ್ಲ. ಚಾಮುಂಡಿ ತಾಯಿಯ ಮುಂದೆ ಪ್ರಮಾಣ ಮಾಡಿ ಅಂತ ಕರೆದಿದ್ದೆ. ಶ್ರೀವತ್ಸ ಸೇರಿ ಯಾರೂ ಬರಲಿಲ್ಲ. ಲೋಕಾಯುಕ್ತಕ್ಕಿಂತ ಬಲವಾದ ಸಂಸ್ಥೆ ಯಾವುದಿದೆ ? ಲೋಕಾಯುಕ್ತದವರು ಎಷ್ಟೋ ಪ್ರಕರಣಗಳಲ್ಲಿ ಶಿಕ್ಷೆ ಕೊಡಿಸಿದ್ದಾರೆ. ಈಗ ಕೊಟ್ಟಿರುವ ವರದಿ ಕೂಡ ಸರಿಯಾಗಿದೆ ಎಂದು ನಗರಾಭಿವೃದ್ಧಿ ಸಚಿವರು ತಿಳಿಸಿದರು.

> ಮೈಸೂರಿನ ಬೀಳುವ ಹಂತದಲ್ಲಿರುವ ಪಾರಂಪರಿಕ ಕಟ್ಟಡಗಳನ್ನೂ ಶೀಘ್ರವೇ ಒಡೆದು ಹೊಸ ಕಟ್ಟಡ ಕಟ್ಟುತ್ತೇವೆ. ಈಗ ಅಲ್ಲಿ ವ್ಯಾಪಾರ ಮಾಡುತ್ತಿದ್ದವರಿಗೆ ಮತ್ತೆ ಮಳಿಗೆ ಕೊಡುತ್ತೇವೆ. ಯಾರೂ ಆತಂಕಕ್ಕೆ ಒಳಗಾಗುವ ಅಗತ್ಯ ಇಲ್ಲ.
> **-ಬೈರತಿ ಸುರೇಶ್,** ನಗರಾಭಿವೃದ್ಧಿ ಸಚಿವ

ಮೈಸೂರಿನಲ್ಲಿ ರಸ್ತೆಗಳಿಗೆ ವೈಟ್ ಟಾಪಿಂಗ್

ಮೈಸೂರು ಅಭಿವೃದ್ಧಿ ಸಂಬಂಧ ಅಧಿಕಾರಿಗಳ ಜೊತೆ ಸಭೆ ಮಾಡುತ್ತೇನೆ. ಯುಜಿಡಿ ವರ್ಕ್ ಸಂಬಂಧ 750 ಕೋಟಿ ಹಣ ಬಿಡುಗಡೆ ಆಗಿದೆ. ಇಡೀ ಮೈಸೂರು ನಗರದಲ್ಲಿ 55ಕಿಲೋ ಮೀಟರ್ ವೈಟ್ ಟಾಪಿಂಗ್‌ಗೆ ಆದೇಶಿಸಿದ್ದೇನೆ. 2 ದಿನದಲ್ಲಿ ಡಿಪಿಆರ್ ಆಗಲಿದೆ. ದೇವರಾಜ ಮಾರ್ಕೆಟ್ ಒಡೆದು ಹೊಸದಾಗಿ ಕಟ್ಟುವುದು. ಇವೆಲ್ಲ ಇನ್ನೂ ಮೂರು ನಾಲ್ಕು ತಿಂಗಳಲ್ಲಿ ಕೆಲಸ ಶುರು ಆಗುತ್ತಿದೆ. ಬೆಂಗಳೂರಿನ ರೀತಿ ರಸ್ತೆ ಟಾಪಿಂಗ್ ಮಾಡುತ್ತಿದ್ದೀವಿ. ಈ ಬಗ್ಗೆ ಸಿಎಂ ಸೂಚನೆ ಕೊಟ್ಟಿದ್ದಾರೆ ಎಂದರು.

ಕಡಲ್ಕೊರೆತ ತಡೆಗೆ ಕಾಂಡ್ಲಾ ಗಿಡಗಳ ಅಭಿವೃದ್ಧಿ

ಕಾರವಾರ: ಹಸಿರೀಕರಣಕ್ಕಾಗಿ ಎಲ್ಲೆಡೆ ಗಿಡ-ಮರಗಳನ್ನು ಬೆಳೆಸಲಾಗುತ್ತಿದೆ. ಅದೇ ರೀತಿ ನದಿ ಹಾಗೂ ಸಮುದ್ರತೀರಗಳಲ್ಲಿ ಕಡಲ ಕೊರೆತ ತಪ್ಪಿಸಿ ಭೂಮಿ ಉಳಿಸಲು ಕಾಂಡ್ಲಾ ಗಿಡಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಬರ್ಗಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಘನಾಶಿನಿ ನದಿ ತೀರದಲ್ಲಿ ಶಿರಸಿಯ ಸ್ಕೋಡ್ ವೆಸ್ ಸಂಸ್ಥೆ, ಆಸ್ಟರ್ ಡಿಎಂ ಫೌಂಡೇಷನ್ ಹಾಗೂ ಅರಣ್ಯ ಇಲಾಖೆ ಸಹಯೋಗದಲ್ಲಿ ಇಂತಹದೊಂದು ವಿಶೇಷ ಅಭಿಯಾನ ಕೈಗೊಳ್ಳಲಾಗಿದೆ. ಸ್ಕೋಡ್ ವೆಸ್ ಸಂಸ್ಥೆಯ ನೂರಾರು ಸಿಬ್ಬಂದಿ, ಅರಣ್ಯ ಸಿಬ್ಬಂದಿ ಜತೆ ಕೈಜೋಡಿಸಿ ಅಘನಾಶಿ ನದಿ ದಂಡೆಯಲ್ಲಿ ಸಾವಿರಾರು ಕಾಂಡ್ಲಾ ಸಸಿಗಳನ್ನು ನೆಡುವ ಮೂಲಕ ಕಡಲ್ಕೊರೆತ ತಡೆಗೆ ತಮ್ಮದೇ ವಿಶೇಷ ಕೊಡುಗೆ ನೀಡಿದ್ದಾರೆ.

ಇತ್ತೀಚಿನ ವರ್ಷದಲ್ಲಿ ಭಾರೀ ಮಳೆಯಿಂದಾಗಿ ನದಿ ಹಾಗೂ ಸಮುದ್ರ ಅಂಚಿನಲ್ಲಿರುವ ಅದೆಷ್ಟೋ ಕುಟುಂಬಳಿಗೆ ನದಿ ಹಾಗೂ ಸಮುದ್ರದ ಅಲೆಗಳು ಅಪ್ಪಳಿಸುತ್ತಿರುವ ಕಾರಣ ನದಿ, ಸಮುದ್ರತೀರದ ನಿವಾಸಿಗಳು ಅಪಾಯದಲ್ಲಿಯೇ ಜೀವನ ಕಳೆಯಬೇಕಾದ ಪರಿಸ್ಥಿತಿ ಉಂಟಾಗಿದೆ. ಇದರ ಜತೆಗೆ ಭೂಮಿ ಸವಕಳಿಯಾಗುತ್ತಿದೆ. ಆದರೆ, ಈ ಕಾಂಡ್ಲಾ ಗಿಡ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಜತೆಗೆ ಜಲಚರಗಳ ಸಂರಕ್ಷಣೆಗೂ ಸಹಕಾರಿಯಾಗಲಿದೆ.

ಕಡಲ ಸೈನಿಕ: ಕಾಂಡ್ಲಾ ಗಿಡವನ್ನು ಕರಾವಳಿಯ ಸೈನಿಕಾ ಅಂತಾನೂ ಕೂಡ ಕರೆಯಲಾಗುತ್ತಿದೆ. ಇದೀಗ ಅಘನಾಶಿನಿ ನದಿ ತೀರದಲ್ಲಿ ಒಂದು ಸಾವಿರಕ್ಕೂ ಅಧಿಕ ಕಾಂಡ್ಲಾ ಗಿಡಗಳನ್ನು ನಾಟಿ ಮಾಡಿದ್ದು, ಈ ಮೂಲಕ ಅಭಿಯಾನಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಾಗಿದೆ ಎಂದು ಹೊನ್ನಾವರ ಡಿಎಫ್‌ಒ ಯೋಗೇಶ ಮಾಹಿತಿ ನೀಡಿದರು.

ಇಬ್ಬರು ಪುರುಷರು, ಒಬ್ಬ ಮಹಿಳೆ ಆತ್ಮಹತ್ಯೆ ಶಂಕೆ

ತುಂಗಾ ಹಿನ್ನೀರಿನಲ್ಲಿ 3 ಶವಗಳ ಪತ್ತೆ

ಶಿವಮೊಗ್ಗ: ತುಂಗಾ ನದಿಯ ಹಿನ್ನೀರಿನಲ್ಲಿ ಇಬ್ಬರು ಪುರುಷರು ಹಾಗೂ ಬ್ಬ ಮಹಿಳೆಯ ಮೃತದೇಹ ಕೊಳೆತಸ್ಥಿತಿಯಲ್ಲಿ ಪತ್ತೆಯಾದ ಘಟನೆ ಸಕ್ರೆಬೈಲ್ ಆನೆ ಬಿಡಾರದ 10ನೇ ಮೈಲಿ ಕಲ್ಲಿನ ಬಳಿ ನಡೆದಿದೆ. ಮೂವರು ಆತ್ಮಹತ್ಯೆ ಮಾಡಿ ಕೊಂಡಿ ರುವ ಶಂಕೆ ವ್ಯಕ್ತವಾಗಿದ್ದು, ಗುರುತು ಪತ್ತೆಯಾಗಿಲ್ಲ. ಸ್ಥಳಕ್ಕೆ ತುಂಗಾನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.



ತೆಪ್ಪ ಮುಗುಚಿ ಯುವಕ ಸಾವು: ನಡುನೀರಲ್ಲಿ ತೆಪ್ಪ ಮಗುಚಿ ಯುವಕ ಸಾವನ್ನಪ್ಪಿದ ಘಟನೆ ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ನಾರಿಹಳ್ಳ ಡ್ಯಾಂನಲ್ಲಿ ನಡೆದಿದೆ. ವಡ್ಡು ಗ್ರಾಮದ ನಾಗರಾಜ್ (21) ಮೃತ ಯುವಕ. ಸ್ನೇಹಿತರೊಂದಿಗೆ ಡ್ಯಾಂಗೆ ಸ್ನಾನಕ್ಕೆ ಹೋಗಿದ್ದ ನಾಗರಾಜ್, ಬಳಿಕ ತೆಪ್ಪದಲ್ಲಿ ಡ್ಯಾಂನ ನಡು ನೀರಿಗೆ ಇಳಿದಿದ್ದಾನೆ. ಈ ವೇಳೆ ಏಕಾಏಕಿ ಮಗುಚಿದ ತೆಪ್ಪ, ಡ್ಯಾಂ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

ಇನ್ನೊಬ್ಬ ಯುವಕ ಈಜಿ ದಡ ಸೇರಿದ್ದಾನೆ. 45 ಗಂಟೆಗಳ ಅಗ್ನಿಶಾಮಕ ದಳ ನಿರಂತರ ಕಾರ್ಯಾಚರಣೆ ಮಾಡಿ ಮೃತ ದೇಹವನ್ನು ಹೊರತೆಗೆದಿದ್ದಾರೆ.. ತೋರಣಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಕಸ್ಮಿಕ ಬೆಂಕಿ: ಮೀನುಗಾರಿಕಾ ಬೋಟ್ ಸುಟ್ಟು ಕರಕಲು

ಉಡುಪಿ: ಮಲ್ಪೆ ಬಾಪುತೋಟ ಬಳಿಯ ಮೀನುಗಾರಿಕಾ ಬಂದರಿನ ಸೇತುವೆ ಪಕ್ಕದ ದಕ್ಕೆಯ ಸಮೀಪ ನಿಲ್ಲಿಸಲಾಗಿದ್ದ ಬೋಟ್‌ಗೆ ಗುರುವಾರ ತಡರಾತ್ರಿ ಆಕಸ್ಮಿಕವಾಗಿ ಬೆಂಕಿ ತಗುಲಿ ಸುಟ್ಟು ಕರಕಲಾಗಿದೆ. ಇದರಿಂದಾಗಿ 15 ಲಕ್ಷ ರೂ.ಗಳಷ್ಟು ನಷ್ಟವಾಗಿದೆ ಎಂದು ತಿಳಿದು ಬಂದಿದೆ.

ಮಲ್ಪೆಯ ಜನಾರ್ದನ ಕಾಂಚನ್‌ಗೆ ಸೇರಿದ ರವಿಪ್ರಕಾಶ್ ಸಣ್ಣಟ್ರಾಲ್ ಬೋಟು ಸುಟ್ಟು ಹೋಗಿದೆ. ಬೆಂಕಿ ಕಾಣಿಸಿಕೊಂಡ ವೇಳೆ ಬೋಟಿನ ಸುತ್ತ 25ರಿಂದ 30 ಬೋಟುಗಳು ನಿಂತಿದ್ದವು. ರಾತ್ರಿ ಸಮಯ ಸಮುದ್ರದ ಮಟ್ಟ ಏರಿಕೆ ಇರುವುದರಿಂದ ಇತರ ಬೋಟ್‌ಗಳಿಗೆ ಬೆಂಕಿ ವ್ಯಾಪಿಸಿಲ್ಲ. ಘಟನೆಗೆ ನಿಖರ ಕಾರಣ ತಿಳಿದುಬಂದಿಲ್ಲ.



ಬೆಂಕಿಗಾಹುತಿಯಾದ ಬೋಟಿನಲ್ಲಿ ಬಲೆ, 200 ಲೀ. ಡೀಸೆಲ್, ಜಿಪಿಎಸ್ , ಫಿಶ್ ಫೈಂಡರ್, ಲೈಫ್ ಜಾಕೆಟ್, ನೀರಿನ ಟ್ಯಾಂಕರ್ ಮುಂತಾದ ವಸ್ತುಗಳಿದ್ದವು. ಅಗ್ನಿಶಾಮಕ ದಳದವರು ಸ್ಥಳಕ್ಕೆ ಧಾವಿಸಿ ಸ್ಥಳೀಯರ ನೆರವಿನಿಂದಬೆಂಕಿ ನಂದಿಸಿದರು. ಮಲ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಬಡಿದಾಡಲು ಜನರು ಚುನಾಯಿಸಿಲ್ಲ

ರಾಜ್ಯ ಬಿಜೆಪಿಯ ಒಂದಷ್ಟು ಪ್ರಭೃತಿಗಳಿಗೆ ಜನರ ಸಂಕಟ ಇನ್ನೂ ಅರ್ಥವಾದಂತಿಲ್ಲ, ಜನಪರ ಕಾಳಜಿಯಿಟ್ಟುಕೊಂಡು ಅಹರ್ನಿಶಿ ದುಡಿಯಬೇಕು ಎಂಬ ಸಂಕಲ್ಪ ಅವರಲ್ಲಿ ಇನ್ನೂ ಗಟ್ಟಿಗೊಂಡಂತಿಲ್ಲ. ಒಂದೊಮ್ಮೆ ಹಾಗೆ ಆಗಿದ್ದಿದ್ದರೆ, ಈಗ ಅವರು ವರ್ತಿಸುತ್ತಿರುವ ರೀತಿಯಲ್ಲಿ ಅವರ ಮಾತು ಮತ್ತು ಧೋರಣೆ ಇರುತ್ತಿರಲಿಲ್ಲ. ಸರಕಾರವನ್ನು ನಡೆಸುತ್ತಿರುವವರು ತಮ್ಮ ನಿಗದಿತ ಪಥದಿಂದ ವಿಮುಖರಾಗದೆ ಹೆಜ್ಜೆಹಾಕುವಂತಾಗುವುದಕ್ಕೆ, ಅಭಿವೃದ್ಧಿ ಮತ್ತು ಜನಕಲ್ಯಾಣದ ನಿಟ್ಟಿನಲ್ಲಿ ಅವರನ್ನು ಸದಾ ಸನ್ನದ್ಧರಾಗಿರುವಂತೆ ಚುರುಕು ಮುಟ್ಟಿಸುವುದಕ್ಕೆ ಕಾರಣವಾಗಬೇಕಾದ ರಾಜ್ಯ ಬಿಜೆಪಿಯ ನಾಯಕರು ಸ್ವತಃ ಅಂತಃಕಲಹದಲ್ಲಿ ವ್ಯಸ್ತರಾಗಿಬಿಟ್ಟಿದ್ದಾರೆ. ಇವರಿಗೆ ಜನಕಲ್ಯಾಣಕ್ಕಿಂತಲೂ ವೈಯಕ್ತಿಕ ಹಿತಾಸಕ್ತಿಗಳ ಈಡೇರಿಕೆಯೇ ಹೆಚ್ಚಾಗಿರುವುದು ವಿಷಾದನೀಯ ಎನ್ನಲಡ್ಡಿಯಿಲ್ಲ. ಇಷ್ಟೆಲ್ಲಾ ನಡೆಯುತ್ತಿದ್ದರೂ, ಸಂಬಂಧಪಟ್ಟವರಿಗೆ ಮೂಗುದಾಣ ಹಾಕಿ ಸರಿದಾರಿಗೆ ತರಬೇಕಿದ್ದ ದೆಹಲಿಯಲ್ಲಿನ ಪಕ್ಷದ ವರಿಷ್ಠರು, ರಾಜ್ಯ ಬಿಜೆಪಿಗರ ಹಾರಾಟ ಮತ್ತು ಕೂಗಾಟಗಳನ್ನು ಮನರಂಜನೆ ಎಂದು ಭಾವಿಸಿ ಸುಮ್ಮನಿದ್ದುಬಿಟ್ಟಿದ್ದಾರಾ? ಎಂಬ ಸಂದೇಹ ಒಮ್ಮೊಮ್ಮೆ ಕಾಡುತ್ತದೆ. ಗದ್ದುಗೆಯಲ್ಲಿ ಪ್ರತಿಷ್ಠಾಪನೆಗೊಂಡಿರುವ ಆಡಳಿತ ಪಕ್ಷದಂತೆ, ಕಾಲಾನುಕಾಲಕ್ಕೆ ಅದರ ಕಿವಿಹಿಂಡಿ ಸರಿದಾರಿಯಲ್ಲಿ ನಡೆಸಬೇಕಾದ ಸಮರ್ಥ ಪ್ರತಿಪಕ್ಷವೂ ಇರಬೇಕಾದ್ದು ಪ್ರಜಾಪ್ರಭುತ್ವದ ಆಶಯ ಮತ್ತು ನಿರೀಕ್ಷೆ. ಆದರೆ ಕರ್ನಾಟಕದಲ್ಲಿ ಈ ಆಶಯ ನೆರವೇರುತ್ತಿಲ್ಲ ಎಂಬುದು ಹಸಿಮಣ್ಣಿನ ಮೇಲೆ ಗಾಜಿನಿಂದ ಬರೆದ ಅಕ್ಷರದಷ್ಟೇ ನಿಚ್ಚಳವಾದ ಸಂಗತಿಯಾಗಿದೆ. ಜನರ ಹಿತಾಸಕ್ತಿಯ ರಕ್ಷಣೆಯಲ್ಲಿ ಉದಾಸೀನ ತೋರಿದರೆ ಅಥವಾ 'ಚುನಾವಣೆಗೆ ಇನ್ನೂ ಸಾಕಷ್ಟು ಕಾಲವಿದೆಯಲ್ಲಾ, ಆಮೇಲೆ ನೋಡಿಕೊಂಡರಾಯಿತು' ಎಂಬ ಧೋರಣೆಯಲ್ಲಿ ಅವರನ್ನು ನಿರ್ಲಕ್ಷಿಸಿದರೆ, ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಆದ ಗತಿಯೇ ಭವಿಷ್ಯದಲ್ಲಿ ಕರ್ನಾಟಕದ ಬಿಜೆಪಿಗೂ ಒದಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಈಗಲೂ ಕಾಲ ಮಿಂಚಿಲ್ಲ. ಹೀಗೆ ಬಣ ಬಡಿದಾಟದಲ್ಲಿ ವ್ಯಸ್ತರಾಗಲು ಜನರು ತಮ್ಮನ್ನು ಚುನಾಯಿಸಿಲ್ಲ ಎಂಬ ಸತ್ಯವನ್ನು ರಾಜ್ಯ ಬಿಜೆಪಿಗರು ಇನ್ನಾದರೂ ಅರಿಯಲಿ. ಒಂದು ಕಾಲಕ್ಕೆ 'ಶಿಸ್ತಿನ ಪಕ್ಷ' ಎಂದು ಕರೆಸಿಕೊಳ್ಳುತ್ತಿದ್ದ ಬಿಜೆಪಿಯ ಒಡನಾಡಿಗಳು ಹೀಗೆ ಅಶಿಸ್ತಿಗೆ ಒಡ್ಡಿಕೊಳ್ಳುವುದು ತರವಲ್ಲ.

ಸೊಂಪಾದಕೀಯ

ಅತ್ತೆಗೆ ಕುತ್ತು

ಅತ್ತೆಯಂದಿರ ಮೇಲೆ ಬೆಂಕಿ ಕಾರುತ್ತಿರುವ ಸೊಸೆಯಂದಿರ ಕಥೆಯನ್ನು ನಾವು ಇತ್ತೀಚೆಗೆ ಸಾಕಷ್ಟು ಕೇಳಿದ್ದೇವೆ. ದೇವಸ್ಥಾನದ ಹುಂಡಿಯಲ್ಲಿ ದೇವರಿಗೆ ಮನವಿ ಮಾಡಿ 'ದೇವರೇ ನನ್ನ ಅತ್ತೆಯನ್ನ ಸಾಯಿಸು' ಅಂತ ಚೀಟಿ ಬರೆದು ಹಾಕಿದ ಹಲವು ಉದಾಹರಣೆಗಳನ್ನು ನೋಡಿದ್ದೇವೆ. ದೇವರು ಆ ಸೊಸೆಯಂದಿರ ಮನವಿಯನ್ನು ಪುರಸ್ಕರಿಸಿದ ಉದಾಹರಣೆಗಳು ಇಲ್ಲ. ಹಾಗಾಗಿ ಈ ಮಹಿಳೆ ದೇವರನ್ನು ಬೇಡುವುದರ ಬದಲು ವೈದ್ಯರೊಬ್ಬರ ಬಳಿ ಬೇಡಿಕೊಂಡಿದ್ದಾಳೆ. ನಾವು 'ವೈದ್ಯೋ ನಾರಾಯಣೋ ಹರಿಃ' ಎನ್ನುತ್ತೇವೆ. ಹಾಗಾಗಿ ವೈದ್ಯ ಕೂಡಾ ದೇವರು ಇದ್ದ ಹಾಗೆ ಅಂದುಕೊಂಡು ಈಕೆ ಅತ್ತೆಯನ್ನು ಸಾಯಿಸಲು ವೈದ್ಯರ ಮೊರೆ ಹೋಗಿದ್ದಾಳೆ. ಸಹನಾ ಎಂಬ ಸೊಸೆ 'ನನ್ನ ಸಹನೆ ಮೀರಿದೆ, ಅತ್ತೆಯ ಕಾಟ ಸಹಿಸಲು ಆಗುತ್ತಿಲ್ಲ' ಅಂತ ಡಾಕ್ಟರ್ ಹತ್ರ ಸಾಯಿಸುವ ಮಾತ್ರೆ ಕೇಳಿದ್ದಾಳೆ. ಸುನಿಲ್ ಕುಮಾರ್ ಎಂಬ ವೈದ್ಯರ ಮೊಬೈಲ್ ನಂಬರ್ ಅನ್ನು ಗೂಗಲ್‌ನಲ್ಲಿ ಪಡೆದುಕೊಂಡ ಈಕೆ ವೈದ್ಯರಿಗೆ ಮೆಸೇಜ್ ಕಳಿಸಿ 'ನನ್ನ ಅತ್ತೆಯನ್ನು ಸಾಯಿಸಲು ಸಹಾಯ ಮಾಡಿ' ಎಂದಿದ್ದಾಳೆ. 'ನಾವು ಇರೋದು ಜೀವ ತೆಗೆಯೋಕೆ ಅಲ್ಲ, ಜೀವ ಉಳಿಸೋಕೆ' ಅಂತ ವೈದ್ಯರು ಹೇಳಿದರೂ 'ಅದೇನೋ ಟ್ಯಾಬ್ಲೆಟ್ ಇರುತ್ತಲ್ಲ, ಒಂದೆರಡು ಜಾಸ್ತಿ ಆದ್ರೆ ಹೈ ಡೋಸ್ ಆಗಿ ಪ್ರಾಣ ಹೋಗುವಂಥದ್ದು, ಅಂಥ ಮಾತ್ರೆ ಇದ್ರೆ ಕೊಡಿ ಮಾರ್‍ರೆ' ಅಂತ ಗೋಗರೆದಿದ್ದಾಳೆ. ಈಕೆಯ ವರ್ತನೆ ಕಂಡು ಗಾಬರಿ ಬಿದ್ದ ವೈದ್ಯರು ಪೊಲೀಸರಿಗೆ ಈಕೆಯ ಮೇಲೆ ದೂರು ಕೊಟ್ಟಿದ್ದಾರೆ. ಆದರೆ ಆನಂತರ ಗೊತ್ತಾಗಿದ್ದು ಈ ಸೊಸೆ ಮಾನಸಿಕವಾಗಿ ಅಸ್ವಸ್ಥಳು ಅಂತ. ಪಾಪ ವಿಚಾರಣೆ ವೇಳೆ ಹೆದರಿಸಿ ಕೇಳಿದ ಮೇಲೆ 'ನಿಜ ಹೇಳಬೇಕು ಅಂದ್ರೆ, ಅದು ಅತ್ತೆ ಕೊಲ್ಲುವ ಪ್ಲ್ಯಾನ್ ಅಲ್ಲ, ನಾನು ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದೀನಿ. ಡಾಕ್ಟರ್ ಮಾತ್ರೆ ಕೊಟ್ರೆ ನಾನೇ ತಗೊಂಡು ಸಾಯಬೇಕು ಅಂತ ಮಾಡಿದ್ದೆ. ನಂಗೆ ಬೇಕು ಅಂದ್ರೆ, ಡಾಕ್ಟರ್ ಕೊಡ್ತಾರೋ ಇಲ್ವೋ ಅಂತ ಅನುಮಾನ ಇತ್ತು. ಅದಕ್ಕೆ ಡಾಕ್ಟರ್ ಬಳಿ ಅತ್ತೆಯನ್ನು ಸಾಯಿಸಲು ಅಂತ ಸುಳ್ಳು ಹೇಳಿದೆ' ಎಂದಿದ್ದಾಳೆ. ಒಟ್ಟಿನಲ್ಲಿ ನಮ್ಮ ಜನ ಜೀವ ಉಳಿಸಿಕೊಳ್ಳೋಕೆ ವೈದ್ಯರ ಮೊರೆ ಹೋಗುತ್ತಾರೆ ಅನ್ನೋ ಮಾತನ್ನ ಈಕೆ ಸುಳ್ಳು ಮಾಡಿದ್ದಾಳೆ.

ಸಂಪಾದಕರ ಸದ್ಯಶೋಧನೆ

ವೃದ್ಧರು ಮತ್ತು ಡ್ರೈವಿಂಗ್ ಲೈಸೆನ್ಸ್

ನಾನು ಜಪಾನಿಗೆ ಹೋದ ಸಂದರ್ಭದಲ್ಲಿ ಅಲ್ಲಿನ 'ಜಪಾನ್ ಟೈಮ್ಸ್' ಪತ್ರಿಕೆಯಲ್ಲಿ ಒಂದು ಸುದ್ದಿ ಪ್ರಕಟವಾಗಿತ್ತು. ಡ್ರೈವಿಂಗ್ ಲೈಸೆನ್ಸನ್ನು ಸ್ವಯಂಪ್ರೇರಿತರಾಗಿ ನವೀಕರಿಸದಿರುವ ಮನೋಭಾವ ವಯಸ್ಕರಲ್ಲಿ ಹೆಚ್ಚುತ್ತಿದೆ ಎಂಬುದು ಆ ಸುದ್ದಿಯ ಸಾರಾಂಶವಾಗಿತ್ತು. ಜಪಾನಿನಲ್ಲಿ ವಯೋವೃದ್ಧರ ಸಂಖ್ಯೆ ಹೆಚ್ಚಿರುವುದು ಗೊತ್ತಿರುವ ಸಂಗತಿ. 70-75 ವರ್ಷವಾದರೂ ಅಲ್ಲಿನ ವಯಸ್ಕರು ವಾಹನಗಳನ್ನು ಡ್ರೈವ್ ಮಾಡುವುದು ಸಾಮಾನ್ಯ. ಆದರೆ ಇತ್ತೀಚಿನ ವರ್ಷಗಳಲ್ಲಿ ವಯಸ್ಕರಿಂದಾಗಿ ರಸ್ತೆ ಅಪಘಾತಗಳು ಹೆಚ್ಚುತ್ತಿವೆ. ಸರಾಸರಿ ಹತ್ತು ರಸ್ತೆ ಅಪಘಾತಗಳ ಪೈಕಿ ನಾಲ್ಕರಲ್ಲಿ ವಯಸ್ಕರೇ ಭಾಗಿಯಾಗುತ್ತಿರುವುದು ಕಳವಳಕಾರಿ. 75 ವರ್ಷ ದಾಟಿದವರ ಡ್ರೈವಿಂಗ್ ಲೈಸೆನ್ಸ್ ರದ್ದುಪಡಿಸಲು ಸರಕಾರ ನಿರ್ಧರಿಸಿತ್ತು. ಆದರೆ ಆ ತೀರ್ಮಾನವನ್ನು ಕೈಬಿಟ್ಟಿತು. ಗ್ರಾಮೀಣ ಭಾಗಗಳಲ್ಲಿ 75 ವರ್ಷ ದಾಟಿದವರು ತಮ್ಮ ಮಕ್ಕಳಿಂದ ದೂರವಾಗಿ ಪತ್ನಿಯೊಂದಿಗೆ ಅಥವಾ ಏಕಾಂಗಿಯಾಗಿ ಜೀವನ ನಡೆಸುತ್ತಿರುವುದು ಗಮನಾರ್ಹ. ಅಂಥವರ ಡ್ರೈವಿಂಗ್ ಲೈಸೆನ್ಸನ್ನು ರದ್ದು ಮಾಡಿಬಿಟ್ಟರೆ, ಅವರ ಓಡಾಟಕ್ಕೆ ಸಮಸ್ಯೆ ಆಗುವುದು ಸಹಜ. ಅಲ್ಲದೇ ವೃದ್ಧರು ಇದಕ್ಕಾಗಿ ಬೇರೆಯವರನ್ನು ಅವಲಂಬಿಸುವುದು ಅನಿವಾರ್ಯ. ಈ ಕಾರಣದಿಂದ ಸರಕಾರ ಅಂಥ ಕ್ರಮವನ್ನು ಕೈಬಿಟ್ಟಿತು. ಹಾಗಂತ 75 ವರ್ಷ ದಾಟಿದವರೆಲ್ಲರೂ ಕೆಟ್ಟ ಚಾಲಕರು ಎಂದು ಭಾವಿಸಬೇಕಿಲ್ಲ. ಅವರಲ್ಲಿ ಇಂದಿಗೂ ಅಪಘಾತರಹಿತ ದಾಖಲೆ ಹೊಂದಿರುವವರೇ ಹೆಚ್ಚು. ಆದರೆ ಹೆಚ್ಚಿನ ಅಪಘಾತ ಪ್ರಕರಣಗಳಲ್ಲಿ ವಯಸ್ಕರು ಭಾಗಿಯಾಗುತ್ತಿರುವುದೂ ಸುಳ್ಳಲ್ಲ. ಹೀಗಾಗಿ ವಯಸ್ಸಿನ ಕಾರಣ ನೀಡಿ ಏಕಾಏಕಿ ಲೈಸೆನ್ಸನ್ನು ರದ್ದು ಮಾಡುವ ಬದಲು, ಅಲ್ಲಿನ ಸರಕಾರ ಈ ನಿರ್ಧಾರ ತೆಗೆದುಕೊಳ್ಳುವ ವಿವೇಚನೆಯನ್ನು ವೃದ್ಧರಿಗೇ ಬಿಟ್ಟಿತು. ಸರಿಯಾಗಿ ಡ್ರೈವ್ ಮಾಡಲು ತಾವು ಅಸಮರ್ಥರು ಎಂದು ಅನಿಸಿದರೆ, ಅವರೇ ಲೈಸೆನ್ಸ್ ರದ್ದು ಮಾಡುವಂತೆ ಕೋರುವ ಪದ್ಧತಿಯನ್ನು ಜಾರಿಗೆ ತಂದಿತು. ಇದರಿಂದ ಸ್ವಯಂಪ್ರೇರಿತರಾಗಿ ಲೈಸೆನ್ಸ್ ರದ್ದು ಮಾಡುವಂತೆ ಕೋರುವ ವೃದ್ಧರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಲಾರಂಭಿಸಿತು. ಜಪಾನಿನಲ್ಲಿ ಡ್ರೈವಿಂಗ್ ಲೈಸೆನ್ಸನ್ನು ಐಡೆಂಟಿಟಿ ಕಾರ್ಡ್ ಆಗಿ ಬಳಸುವುದರಿಂದ, ಯಾರು ಡ್ರೈವಿಂಗ್ ಲೈಸೆನ್ಸನ್ನು ರದ್ದುಪಡಿಸುವಂತೆ ಕೋರುತ್ತಾರೋ, ಅವರಿಗೆ ಹೊಸತಾಗಿ ಐಡಿ ಕಾರ್ಡ್ ನೀಡಬೇಕಾಗಿ ಬಂದಿತು. ಆದರೆ ಬೇರೆ ದಾರಿಯೇ ಇರಲಿಲ್ಲ. ಕಳೆದ ಒಂದೇ ವರ್ಷದಲ್ಲಿ ತಮ್ಮ ಡ್ರೈವಿಂಗ್ ಲೈಸೆನ್ಸನ್ನು ರದ್ದುಪಡಿಸುವಂತೆ 4 ಲಕ್ಷಕ್ಕೂ ಅಧಿಕ ವೃದ್ಧರು ಅರ್ಜಿ ಹಾಕಿದರು. ಇವರ ಪೈಕಿ ಹೆಚ್ಚಿನವರು ತಾವು ಡ್ರೈವಿಂಗ್ ಮಾಡಲು ಅಸಮರ್ಥರು ಎಂದು ಭಾವಿಸಿದ್ದಕ್ಕಿಂತ, ತಮ್ಮಿಂದ ಯಾವ ಅಚಾತುರ್ಯವೂ ಸಂಭವಿಸಬಾರದು ಎಂದು ಯೋಚಿಸಿದ್ದರು. ವಯೋಸಹಜ ಜವಾಬ್ದಾರಿಯಿಂದ ಅವರು ಆ ನಿರ್ಧಾರಕ್ಕೆ ಬಂದಿದ್ದರು. ಈ ವಿಷಯದಲ್ಲಿ ಸರಕಾರ ಅತ್ಯಂತ ವಿವೇಚನೆಯಿಂದ ವರ್ತಿಸಿದ್ದನ್ನು ಗಮನಿಸಬಹುದು. ಸರಕಾರ ಮನಸ್ಸು ಮಾಡಿದ್ದರೆ, 70-75 ವರ್ಷ ದಾಟಿದವರ ಡ್ರೈವಿಂಗ್ ಲೈಸೆನ್ಸನ್ನು ರದ್ದುಪಡಿಸಬಹುದಿತ್ತು ಅಥವಾ ನವೀಕರಿಸದಿರಬಹುದಿತ್ತು. ಒಂದು ವೇಳೆ ಹಾಗೆ ಮಾಡಿದ್ದಿದ್ದರೆ, ವಯಸ್ಕರಿಗೆ ಬದಲಿ ಸಂಚಾರ ವ್ಯವಸ್ಥೆಯನ್ನು ಸರಕಾರವೇ ಕಲ್ಪಿಸಬೇಕಾಗುತ್ತಿತ್ತು. ಆದರೆ ಜಪಾನಿನಲ್ಲಿ 75 ವರ್ಷ ದಾಟಿದವರ ಪೈಕಿ ಹೆಚ್ಚಿನವರು ಡ್ರೈವಿಂಗ್ ಲೈಸೆನ್ಸ್ ನವೀಕರಿಸಲು ಬಯಸುವುದಿಲ್ಲ. 2017ರಲ್ಲಿ ಇಡೀ ಪ್ರಕರಣ ಹೊಸ ತಿರುವು ಪಡೆಯಿತು. 82ನೇ ವಯಸ್ಸಿನಲ್ಲಿ ರಾಜಮನೆತನದ ಅಕಿಹಿಟೋ ಅವರು ತಮ್ಮ ಡ್ರೈವಿಂಗ್ ಲೈಸೆನ್ಸನ್ನು ನವೀಕರಿಸಿದ್ದು ದೊಡ್ಡ ಸುದ್ದಿಯಾಯಿತು. ಈ ವಯಸ್ಸಿನಲ್ಲಿ ಅವರಿಗೆ ಡ್ರೈವಿಂಗ್ ಲೆಸೆನ್ಸ್ ನೀಡಿದ್ದು ಎಷ್ಟು ಸರಿ ಎಂಬ ಬಗ್ಗೆ ಚರ್ಚೆ ಹುಟ್ಟಿಕೊಂಡಿತು. ಆಗ ಸ್ವತಃ ಅಕಿಹಿಟೋ ಅವರೇ ಅದಕ್ಕೆ ಸ್ಪಷ್ಟನೆ ನೀಡಿದರು. 'ನಾನು ಯಾವ ಕಾರಣಕ್ಕೂ ಸಾರ್ವಜನಿಕ ಸ್ಥಳಗಳಲ್ಲಿ ಡ್ರೈವ್ ಮಾಡುವುದಿಲ್ಲ. ಅರಮನೆಯೊಳಗೆ ಮಾತ್ರ ಡ್ರೈವ್ ಮಾಡುತ್ತೇನೆ. ಆ ಉದ್ದೇಶಕ್ಕೆ ಲೈಸೆನ್ಸ್ ಪಡೆದಿದ್ದೇನೆ' ಎಂದು ಹೇಳಿದರು. ಅರಮನೆಯೊಳಗೆ ಮಾತ್ರ ಡ್ರೈವ್ ಮಾಡಲು ಲೈಸೆನ್ಸ್ ಪಡೆಯಬೇಕಿರಲಿಲ್ಲ. ಆದರೂ ಅಕಿಹಿಟೋ ಕ್ರಮವನ್ನು ಮೆಚ್ಚಬೇಕು ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

ಬಾಲಿವುಡ್ ಅಂಗಳದಲ್ಲಿ ನೈಜಕಥೆಗಳ ಭೂಕಂಪನ

ಕಾಲ ಬದಲಾಗಿದೆ. ಶಿವಾಜಿಯ ಮಗ ಸಂಭಾಜಿಗೆ ಚಿತ್ರಹಿಂಸೆ ನೀಡಿ ಕೊಂದ ಔರಂಗಜೇಬನ ಕ್ರೌರ್ಯವನ್ನು 'ಛಾವಾ' ಚಿತ್ರದ ಮೂಲಕ ತೋರಿಸಲಾಗಿದೆ. ಶಿವಾಜಿಯ ಸೈನ್ಯದಲ್ಲಿದ್ದ ಸೇನಾಧಿಪತಿ ತಾನಾಜಿಯ ಕುರಿತಾದ ಸಿನಿಮಾವನ್ನು ಅಜಯ್ ದೇವಗನ್ ನಿರ್ಮಾಣ ಮಾಡಿದ್ದರು. ಮುಸ್ಲಿಂ ರಾಜರ ಮೇಲೆ ತಾನಾಜಿಯು ನಡೆಸುವ ದಾಳಿಯ ದೃಶ್ಯಗಳನ್ನು ಈ ಚಿತ್ರದಲ್ಲಿ ಅದ್ಭುತವಾಗಿ ತೋರಿಸಲಾಗಿತ್ತು.

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ಬಾಲಿವುಡ್ ಅಂಗಳಕ್ಕೆ 1980ರ ದಶಕದಲ್ಲಿ ಭೂಗತ ಲೋಕದ ಡಾನ್ ಹಾಜಿ ಮಸ್ತಾನ್ ಕಾಲಿಡುತ್ತಿದ್ದಂತೆ, ಹಿಂದೂ ವಿರೋಧಿ ನಿರೂಪಣೆಯ ಲೆಕ್ಕವಿಲ್ಲದಷ್ಟು ಸಿನಿಮಾಗಳು ತೆರೆಗೆ ಬಂದವು. ಮುಂಬೈ ಭೂಗತ ಲೋಕವನ್ನಾಳಿದ ಮುಸ್ಲಿಂ ಡಾನ್‌ಗಳು ಬೇನಾಮಿ ನಿರ್ಮಾಪಕರ ಮೂಲಕ ಬಾಲಿವುಡ್ ಸಿನಿಮಾಗಳಲ್ಲಿ ಕೋಟಿಗಟ್ಟಲೆ ಹಣವನ್ನು ಹೂಡಿಕೆ ಮಾಡಿದ್ದರು. ನಿರ್ದೇಶಕರನ್ನು ಹೆದರಿಸಿ ತಮಗಿಷ್ಟ ಬಂದಂತೆ ಹಿಂದೂ ವಿರೋಧಿ ಸಿನಿಮಾಗಳನ್ನು ನಿರ್ಮಿಸಿದರು. ಇವರ ಬೆದರಿಕೆಗೆ ಹೆದರಿ ದೊಡ್ಡ ನಟರುಗಳು ಅನೇಕ ಸಿನಿಮಾಗಳನ್ನು ಮಾಡಬೇಕಾಯಿತು. ಪ್ರತಿಯೊಂದು ಸಿನಿಮಾದಲ್ಲೂ ಒಂದಿಲ್ಲೊಂದು ರೀತಿಯಲ್ಲಿ ಹಿಂದೂಗಳನ್ನು ಅವಹೇಳನ ಮಾಡುವ ಸನ್ನಿವೇಶಗಳನ್ನು ಸೃಷ್ಟಿಸಲಾಗುತ್ತಿತ್ತು. ಹಿಂದೂ ನಾಯಕರು ಮೇಲೆ ಬರದಂತೆ ನೋಡಿಕೊಳ್ಳಲಾಯಿತು. ಶಾರುಖ್ ಖಾನ್, ಸಲ್ಮಾನ್ ಖಾನ್ ಮತ್ತು ಆಮಿರ್ ಖಾನ್‌ರಂಥ ನಟರಿಗೇ ಹೆಚ್ಚಿನ ಪ್ರಾಧಾನ್ಯವಿತ್ತು- 1990ರ ದಶಕದಲ್ಲಿ ಬಾಲಿವುಡ್ ಅಂಗಳದಲ್ಲಿ ಈ ಮೂರು ನಾಯಕರ ಚಿತ್ರಗಳೇ ಹೆಚ್ಚಾಗಿ ತೆರೆ ಕಾಣುತ್ತಿದ್ದವು.

ಭೂಗತ ಲೋಕದ ಪಾತಕಿ ದಾವೂದ್ ಇಬ್ರಾಹಿಂ ಮುಂಬೈ ಬಿಟ್ಟು ಪರಾರಿಯಾಗಿ, ದುಬೈನಲ್ಲಿ ಕುಳಿತು ಬಾಲಿವುಡ್ ಮೇಲೆ ಹಿಡಿತವಿಟ್ಟುಕೊಂಡಿದ್ದ. ಬಾಲಿವುಡ್ ನಿರ್ಮಾಪಕರನ್ನು ಹೆದರಿಸಿ ಹಿಂದೂ ವಿರೋಧಿ ಸಿನಿಮಾಗಳನ್ನು ನಿರ್ಮಿಸುವಂತೆ ಹೇಳುತ್ತಿದ್ದ. ನಾವು ಚಿಕ್ಕವರಿದ್ದಾಗ ಈ ವಿಷಯಗಳ ಬಗ್ಗೆ ಚರ್ಚಿಸುವಷ್ಟು ಪ್ರೌಢಿಮೆ ಇರಲಿಲ್ಲ, ಅವರ 'ಹಿಡನ್ ಅಜೆಂಡಾ' ಅಷ್ಟು ಆಳಕ್ಕೆ ಹೋಗಿತ್ತು. ಶಾರುಖ್ ಖಾನ್, ಆಮಿರ್ ಖಾನ್ ಮತ್ತು ಸಲ್ಮಾನ್ ಖಾನ್ ಸಿನಿಮಾಗಳನ್ನು ಇಷ್ಟಪಟ್ಟು ನೋಡುತ್ತಿದ್ದೆವು. ಅವರ ಚಿತ್ರದ ಹಾಡುಗಳು ಮನೆಮನೆಯನ್ನು ತಲುಪಿದ್ದವು. ಮತ್ತೊಂದೆಡೆ ಅಕ್ಷಯ್ ಕುಮಾರ್‌ರಂಥ ಹಿಂದೂ ನಾಯಕ ಈ ಮೂವರ ಪ್ರಾಬಲ್ಯದ ಮುಂದೆ ಮುನ್ನೆಲೆಗೆ ಬರಲಾಗದೆ ಹಿಂದುಳಿಯಬೇಕಾಯಿತು. ನಂತರದ ದಿನಗಳಲ್ಲಿ ಅಕ್ಷಯ್ ಕುಮಾರ್ ಮುನ್ನೆಲೆಗೆ ಬಂದ ಮೇಲೆ, ದೇವರನ್ನೇ ನಂಬದವನ ಕಥೆಯನ್ನು ಒಳಗೊಂಡಿದ್ದ 'ಓ ಮೈ ಗಾಡ್' ಎಂಬ ಸಿನಿಮಾದಲ್ಲಿ ಪಾತ್ರವೊಂದನ್ನು ಮಾಡಬೇಕಾಗಿ ಬಂದದ್ದು ಮತ್ತೊಂದು ಕಥೆ.

ಇನ್ನು, 'ಪಿ.ಕೆ.' ಚಿತ್ರದಲ್ಲಿ ಆಮಿರ್ ಖಾನ್ ಹಿಂದೂ ದೇವರುಗಳಿಗೆ ನಿರಂತರವಾಗಿ ಅವಮಾನ ಮಾಡಿದ ದೃಶ್ಯಗಳನ್ನು ನೋಡಿ ಹೆಚ್ಚು ನಕ್ಕವರು ಹಿಂದೂಗಳೇ. ಬಾಲಿವುಡ್ ಸಿನಿಮಾಗಳಲ್ಲಿ ಸಿಖ್ಖರನ್ನು ನಗೆಪಾಟಲಿಗೆ ಗುರಿಯಾಗಿಸುವಂಥ ದೃಶ್ಯಗಳು ಸಾಮಾನ್ಯವಾಗಿರುತ್ತಿದ್ದವು. ಸಿಖ್ಖರನ್ನು 'ಸರ್ದಾರ್‌ಜಿ' ಹೆಸರಿನಲ್ಲಿ ತಮಾಷೆಯ ವ್ಯಕ್ತಿಗಳನ್ನಾಗಿ ಮಾಡಲಾಯಿತು, ಅನೇಕ ಕಾರ್ಯಕ್ರಮಗಳಲ್ಲಿ ಅವರ ಹೆಸರಿನಲ್ಲಿ ಕಾಮಿಡಿ ಮಾಡಲಾಗುತ್ತಿತ್ತು. ಒಂದು ಕಾಲದಲ್ಲಿ ಸರ್ದಾರ್‌ಜಿ ಜೋಕುಗಳು ಎಲ್ಲರ ಬಾಯಲ್ಲಿಯೂ ಬರುತ್ತಿದ್ದವು. ಬಾಲಿವುಡ್‌ನಲ್ಲಿ ತೆರೆಕಂಡಂಥ ಅನೇಕ ಚಿತ್ರಗಳಲ್ಲಿ ಹಿಂದೂಗಳನ್ನು ಡಾನ್‌ಗಳಾಗಿ ತೋರಿಸಲಾಗುತ್ತಿತ್ತು. 'ವಾಸ್ತವ್' ಚಲನಚಿತ್ರದಲ್ಲಿ ಕುಂಕುಮವಿಟ್ಟುಕೊಂಡ 'ಹಿಂದೂ ಡಾನ್' ಆಗಿ ಸಂಜಯ್ ದತ್ ಅಭಿನಯಿಸಿದ್ದರು.

ನೈಜ ಇತಿಹಾಸ ಹೇಳುವ ಚಿತ್ರಗಳನ್ನು ಬಾಲಿವುಡ್ ಅಂಗಳದಲ್ಲಿ ನಿರ್ಮಿಸಲು ಹಾಜಿ ಮಸ್ತಾನ್ ಮತ್ತು ದಾವೂದ್ ಗ್ಯಾಂಗ್ ಬಿಡುತ್ತಿರಲಿಲ್ಲ. ಪಠ್ಯಪುಸ್ತಕದಲ್ಲಿ ಎಡಚರರು ನಮ್ಮ ತಲೆಗೆ ತುಂಬಿದ್ದ ಸಿದ್ಧಾಂತಗಳು ಬಾಲಿವುಡ್ ಸಿನಿಮಾದ ಕಥೆಗಳಾಗಿದ್ದವು. ಮೊಘಲರ ವಾಸ್ತುಶಿಲ್ಪವನ್ನು ಸಿನಿಮಾಗಳಲ್ಲಿ ವೈಭವೀಕರಿಸಿ ತೋರಿಸಲಾಗುತ್ತಿತ್ತು, ಟಿಪ್ಪು ಸುಲ್ತಾನನ ನೈಜಮುಖವನ್ನು ಪರಿಚಯಿಸಲಿಲ್ಲ. 'ತಾಜ್‌ಮಹಲ್ ಪ್ರೇಮದ ಸಂಕೇತ' ಎಂಬ ಉಲ್ಲೇಖವು ಬಾಲಿವುಡ್ ಸಿನಿಮಾಗಳಲ್ಲಿ ಸಾಮಾನ್ಯವಾಗಿತ್ತು. ಮೊಘಲರು ನೇರವಾಗಿ ಯುದ್ಧಮಾಡಲಾಗದೆ ಬೆನ್ನಿಗೆ ಚೂರಿಹಾಕಿ ಹಿಂದೂ ರಾಜರುಗಳನ್ನು ಕೊಂದ ಕಥೆಯುಳ್ಳ ಐತಿಹಾಸಿಕ ಚಿತ್ರಗಳು ನಿರ್ಮಾಣವಾಗಲಿಲ್ಲ. ಕಾಶ್ಮೀರದಲ್ಲಿ ನಡೆದ ಪಂಡಿತರ ಹತ್ಯಾಕಾಂಡದ ಇತಿಹಾಸವನ್ನು ಸಿನಿಮಾ ಮೂಲಕ ಜನರಿಗೆ ತಿಳಿಸಲು ಬಾಲಿವುಡ್ ಮಂದಿಗೆ 7 ದಶಕ ಬೇಕಾಯಿತು.

ಕಳೆದ ಒಂದು ದಶಕದಲ್ಲಿ ಬಾಲಿವುಡ್ ಚಿತ್ರಣ ಬದಲಾಗಿದೆ, ಇತಿಹಾಸದಲ್ಲಿ ಮುಚ್ಚಿಟ್ಟ ಸತ್ಯಗಳು ಧೈರ್ಯವಾಗಿ ಅನಾವರಣಗೊಳ್ಳುತ್ತಿವೆ. ಒಂದು ಕಾಲದಲ್ಲಿ ನಿರ್ಮಾಣವಾಗುತ್ತಿದ್ದಂಥ ಹಿಂದೂ ವಿರೋಧಿ ಚಿತ್ರಗಳಿಗೆ ಈಗ ಜಾಗವಿಲ್ಲ. ಒಂದೇ ಒಂದು ಹಿಂದೂ ವಿರೋಧಿ ದೃಶ್ಯವು ಚಿತ್ರದಲ್ಲಿ ಕಂಡುಬಂದಲ್ಲಿ ವೀಕ್ಷಕರು ಕೆರಳಿ ಕೆಂಡವಾಗುತ್ತಾರೆ. ಇದು ಕೇವಲ ಬಾಲಿವುಡ್ ಮಾತ್ರವಲ್ಲ, ಸ್ಯಾಂಡಲ್‌ವುಡ್, ಟಾಲಿವುಡ್, ಕಾಲಿವುಡ್ ಮತ್ತು ಮಾಲಿವುಡ್ ಸಿನಿಮಾಗಳಿಗೂ ಅನ್ವಯವಾಗುತ್ತದೆ. ಧ್ರುವ ಸರ್ಜಾ ಅಭಿನಯದ 'ಪೊಗರು' ಸಿನಿಮಾದಲ್ಲಿ ಬ್ರಾಹ್ಮಣರ ಅವಹೇಳನವಾಗಿದೆ ಎಂಬ ಕಾರಣಕ್ಕೆ ದೊಡ್ಡ ಮಟ್ಟದ ವಿರೋಧ ವ್ಯಕ್ತವಾಗಿತ್ತು.

1990ರ ದಶಕದಲ್ಲಿ ಕಾಶ್ಮೀರದಲ್ಲಿ ನಡೆದ ಪಂಡಿತರ ಹತ್ಯೆಯ ಕಥೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟ ಸಿನಿಮಾ 'ಕಾಶ್ಮೀರ್ ಫೈಲ್ಸ್'. ಒಂದು ಕಾಲದಲ್ಲಿ ಶ್ರೀನಗರದ ಲಾಲ್ ಚೌಕ್ ಹೆಸರನ್ನು ಕೇಳಿದರೆ ಭಯವಾಗುತ್ತಿತ್ತು. ಕಾರಣ, ಅಲ್ಲಿ ಪಾಕಿಸ್ತಾನಿ ಧ್ವಜವನ್ನು ಹಾರಿಸಿ ಪ್ರತ್ಯೇಕತಾವಾದಿಗಳು ತಮ್ಮ ಕ್ರೌರ್ಯವನ್ನು ಮೆರೆಯುತ್ತಿದ್ದರು. ಅಷ್ಟೊಂದು ಭಯಾನಕ ವಾತಾವರಣದ ನಡುವೆ ಹಿಂದೂಗಳು ಜೀವಿಸುವುದು ಕಷ್ಟಸಾಧ್ಯವಾಗಿತ್ತು. ಭಯೋತ್ಪಾದಕ ಯಾಸೀನ್ ಮಲಿಕ್ ನಡೆಸಿದ ನರಮೇಧ ಕಂಡು, ಲಕ್ಷಾಂತರ ಪಂಡಿತರು ಕಣಿವೆರಾಜ್ಯ ತೊರೆದು ಚೆಲ್ಲಾಪಿಲ್ಲಿಯಾಗಿದ್ದರು. ಮರ ಕತ್ತರಿಸುವ ಗರಗಸದಲ್ಲಿ ಪಂಡಿತರನ್ನು ಕತ್ತರಿಸಿ ಕ್ರೌರ್ಯ ಮೆರೆಯಲಾಗಿತ್ತು. ಭಯೋತ್ಪಾದಕರಿಗೆ ಹೆದರಿ ಅಕ್ಕಿಮೂಟೆಯೊಳಗೆ ಅವಿತಿದ್ದ ಪಂಡಿತರನ್ನು ಶೂಟ್ ಮಾಡಿ ಸಾಯಿಸಲಾಗಿತ್ತು. ಪಂಡಿತರು ರಾತ್ರೋರಾತ್ರಿ ತಮ್ಮ ಮನೆ ಬಿಟ್ಟು ಕಾಶ್ಮೀರದಿಂದ ಹೊರಬರಬೇಕಾದಂಥ ಪರಿಸ್ಥಿತಿ ಇತ್ತು. ಕಾಶ್ಮೀರದಲ್ಲಿ ನಡೆದ ಇಂಥ ಕರಾಳ ಕೃತ್ಯಗಳ ಇತಿಹಾಸವನ್ನು, ಅಲ್ಪಸಂಖ್ಯಾತರ ಓಲೈಕೆಯ ಹೆಸರಿನಲ್ಲಿ ಮುಚ್ಚಿಡಲಾಗಿತ್ತು. ಆದರೆ, 'ಕಾಶ್ಮೀರ್ ಫೈಲ್' ಚಿತ್ರ ಬಿಡುಗಡೆಯಾದ ನಂತರ, ಕಾಶ್ಮೀರದಲ್ಲಿ ನಡೆದ ನರಮೇಧದ ಇತಿಹಾಸವು ಮನೆಮನೆಯನ್ನೂ ತಲುಪಿತು.

ದಶಕಗಳ ಬಾಲಿವುಡ್ ನಿರೂಪಣೆಯನ್ನು ಸರ್ವನಾಶ ಮಾಡಿದ ಮತ್ತೊಂದು ಸಿನಿಮಾ 'ಕೇರಳ ಫೈಲ್ಸ್'. ಲವ್ ಜಿಹಾದ್ ಮೂಲಕ ಹಿಂದೂ ಯುವತಿಯರನ್ನು ಬಲೆಗೆ ಬೀಳಿಸಿಕೊಂಡು ಇರಾಕ್ ದೇಶದ ಐಸಿಸ್ ಭಯೋತ್ಪಾದಕರಿಗೆ ಮಾರುತ್ತಿದ್ದ ಕೇರಳದ 'ಐಸಿಸ್' ಏಜೆಂಟರ ಕುರಿತಾದ ಸಿನಿಮಾ ಇದು. ಕೇರಳದಲ್ಲಿ 2 ದಶಕದಲ್ಲಿ ಸಾವಿರಾರು ಯುವತಿಯರು ಕಾಣೆಯಾಗಿರುವ ಸುದ್ದಿಯು ಸರಕಾರದ ಬಳಿ ಅಧಿಕೃತವಾಗಿ ಇದ್ದರೂ, ಸರಿಯಾದ ತನಿಖೆ ನಡೆಸದೆ ಅನೇಕ ಪ್ರಕರಣಗಳನ್ನು ಮುಚ್ಚಿಹಾಕಲಾಗಿತ್ತು. ಅಲ್ಲಿನ ಯುವತಿಯರು ಲವ್ ಜಿಹಾದಿಗೆ ಒಳಗಾಗಿ ಐಸಿಸ್ ಭಯೋತ್ಪಾದಕರ ಪಾಲಾಗುತ್ತಿದ್ದರೆಂಬ ಆಘಾತಕಾರಿ ವಿಷಯ ಬೆಳಕಿಗೆ ಬಂದ ನಂತರವೂ ಅಲ್ಲಿನ ಸರಕಾರ ತಲೆಕೆಡಿಸಿಕೊಂಡಿರಲಿಲ್ಲ. ಇಂಥ ವಿಷಯವನ್ನು ಸಿನಿಮಾ ಮೂಲಕ ಧೈರ್ಯವಾಗಿ ಜನರ ಮುಂದಿಡುವ ಕೆಲಸವನ್ನು ಬಾಲಿವುಡ್ ನಿರ್ದೇಶಕರು ಮಾಡಿದ್ದಾರೆ. ಚಿತ್ರ ನೋಡಿದ ಎಡಚರ ಪಟಾಲಂ ಮೈಪರಚಿಕೊಂಡು ಕೂಗಾಡಿದ ಪ್ರಸಂಗಗಳು ನಡೆದರೂ, ಜನರು ಮಾತ್ರ ಈ ಚಿತ್ರವನ್ನು ಸೂಪರ್‌ಹಿಟ್ ಮಾಡಿದರು.

1947ರಲ್ಲಿ ಭಾರತ ಸ್ವತಂತ್ರವಾದಾಗ ಹೈದರಾಬಾದ್ ಪ್ರಾಂತ್ಯವನ್ನಾಳುತ್ತಿದ್ದ ನಿಜಾಮರು ಭಾರತದ ಜತೆಗೆ ವಿಲೀನಗೊಳ್ಳಲು ಒಪ್ಪಲಿಲ್ಲ. ಬದಲಾಗಿ ಪಾಕಿಸ್ತಾನದ ಸಹಾಯ ಪಡೆದು ಮತ್ತೊಂದು ಇಸ್ಲಾಮಿಕ್ ದೇಶ ರಚಿಸುವುದಾಗಿ ಹೇಳಿದ್ದರು. ನಿಜಾಮರ ಆಡಳಿತಾವಧಿಯಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿ ಹಿಂದೂಗಳಿಗೆ ರಕ್ಷಣೆ ಇರಲಿಲ್ಲ. ನರರಾಕ್ಷಸರಾಗಿದ್ದ ರಜಾಕರು ನಿಜಾಮನ ಆಡಳಿತದಲ್ಲಿ ಸೈನ್ಯವನ್ನು ನಡೆಸುತ್ತಿದ್ದರು, ಹಿಂದೂಗಳ ಮೇಲೆ ನಿರಂತರವಾಗಿ ದೌರ್ಜನ್ಯವೆಸಗುತ್ತಿದ್ದರು, ಇಸ್ಲಾಂ ಧರ್ಮಕ್ಕೆ ಮತಾಂತರವಾಗುವಂತೆ ಹಿಂದೂಗಳನ್ನು ಪೀಡಿಸುತ್ತಿದ್ದರು. ಮತಾಂತರಕ್ಕೆ ಒಪ್ಪದವರನ್ನು ಭಯಾನಕವಾಗಿ ಕೊಲ್ಲುತ್ತಿದ್ದರು. ಹಿಂದೂ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವೆಸಗಿ ಕೊಲ್ಲುತ್ತಿದ್ದರು. ಹಿಂದೂಗಳ ಮೇಲೆ ರಜಾಕರು ನಡೆಸಿದ ಕ್ರೌರ್ಯಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಲಿಲ್ಲ. ನೈಜ ಇತಿಹಾಸ ತಿಳಿದವರು ಚಲನಚಿತ್ರದ ಮೂಲಕ ಹೇಳುವ ಧೈರ್ಯ ಮಾಡಿರಲಿಲ್ಲ. ಕಾಂಗ್ರೆಸ್‌ನ ಈಗಿನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಸ್ವಂತ ಕುಟುಂಬವು ರಜಾಕರ ಕ್ರೌರ್ಯಕ್ಕೆ ಬಲಿಯಾಗಿತ್ತು. ರಜಾಕರ ಕ್ರೌರ್ಯವನ್ನು ಬಿಂಬಿಸುವ 'ರಜಾಕರ್ಸ್' ಎಂಬ ತೆಲುಗು ಸಿನಿಮಾ ಕಳೆದ ವರ್ಷ ತೆರೆಕಂಡು ನೈಜ ಇತಿಹಾಸವನ್ನು ಜನರ ಮುಂದಿಟ್ಟಿತ್ತು ಹಾಗೂ ಹಿಂದಿ ಭಾಷೆಗೆ ಡಬ್ ಆಗಿ ಬಾಲಿವುಡ್ ಅಂಗಳದಲ್ಲೂ ದೊಡ್ಡ ಸದ್ದು ಮಾಡಿತ್ತು. ರಜಾಕರ ಕ್ರೌರ್ಯವನ್ನು ಹೀಗೆ ಧೈರ್ಯವಾಗಿ ಜನರ ಮುಂದಿಡುವ ಪ್ರಯತ್ನವನ್ನು ನಿರ್ದೇಶಕರು ಮಾಡಿದ್ದು ಶ್ಲಾಘನೀಯ.

ಇಸ್ಲಾಮಿಕ್ ಸುಲ್ತಾನರುಗಳನ್ನು ಬಾಲಿವುಡ್ ಸಿನಿಮಾಗಳ ದೃಶ್ಯಗಳಲ್ಲಿ ವೈಭವೀಕರಿಸುವಂಥ ಕಸರತ್ತು ಆರು ದಶಕಗಳಿಂದ ಸತತವಾಗಿ ನಡೆದುಕೊಂಡು ಬಂದಿದೆ. ಮತ್ತೊಂದೆಡೆ ಹಿಂದೂ ರಾಜ-ಮಹಾರಾಜರ ವೀರಗಾಥೆಗಳ ಸಿನಿಮಾಗಳು ತೆರೆಕಾಣದಂತೆ ದಾವೂದ್ ಮತ್ತು ಅವನ ಗ್ಯಾಂಗ್ ನೋಡಿಕೊಂಡಿತ್ತು. ಮೊಘಲರು ಬೇರೆ ದೇಶದಿಂದ ಬಂದು ಭಾರತದ ಮೇಲೆ ಆಕ್ರಮಣ ನಡೆಸಿ, ಇಲ್ಲಿನ ದೇವಸ್ಥಾನಗಳನ್ನು ಕೆಡವಿ, ಆ ಜಾಗದಲ್ಲಿ ಮಸೀದಿ ನಿರ್ಮಾಣ ಮಾಡಿದ ಇತಿಹಾಸವಿರುವ ಕಥೆಗಳು ಚಲನಚಿತ್ರಗಳಾಗಲಿಲ್ಲ, ಓಲೈಕೆಯ ಪರಮಾವಧಿ ಎಂಬಂತೆ, ಹಿಂದೂಗಳು ತಪ್ಪು ಮಾಡಿದ್ದಾರೆಂಬ ನಿರೂಪಣೆಯ ಚಿತ್ರಗಳನ್ನೇ ನಿರ್ಮಿಸಲಾಗುತ್ತಿತ್ತು. ವಿಜಯನಗರದ ವಾಸ್ತುಶಿಲ್ಪವನ್ನು ಪರಿಚಯಿಸುವ ಚಿತ್ರವನ್ನು ನಿರ್ಮಿಸಲಿಲ್ಲ, ಕೇವಲ ತಾಜ್‌ಮಹಲ್, ಕುತುಬ್ ಮಿನಾರ್ ತರಹದ ವಿನ್ಯಾಸಗಳನ್ನು ತೆರೆಯ ಮೇಲೆ ತೋರಿಸಲಾಗುತ್ತಿತ್ತು. ಛತ್ರಪತಿ ಶಿವಾಜಿ ಮಹಾರಾಜರು ಮೊಘಲರ ವಿರುದ್ಧ ಹೋರಾಡಿದ 'ಮರಾಠರ ಯುದ್ಧದ' ಸಿನಿಮಾಗಳು ತೆರೆಗೆ ಬರಲಿಲ್ಲ.

ಶಿವಾಜಿ ಮಹಾರಾಜರ 'ಹಿಂದವೀ ಸ್ವರಾಜ್' ಸಂಕಲ್ಪವನ್ನು ನಮ್ಮ ಬಾಲ್ಯದಲ್ಲಿ ಕೇಳದಂತೆ ಮಾಡಲಾಗಿತ್ತು. ಮೊಘಲರನ್ನು ಶಿವಾಜಿ ಮಹಾರಾಜರು ಅಟ್ಟಾಡಿಸಿಕೊಂಡು ಓಡಿಸಿದ ಕಥೆಯುಳ್ಳ ಐತಿಹಾಸಿಕ ಸಿನಿಮಾಗಳು ಬಾಲಿವುಡ್ ಅಂಗಳದಲ್ಲಿ ತೆರೆ ಕಾಣಲಿಲ್ಲ, ಎದುರಿಗೆ ನಿಂತು ಯುದ್ಧಮಾಡಲು ಧೈರ್ಯವಿಲ್ಲದೆ, ಬೆನ್ನಿಗೆ ಚೂರಿ ಹಾಕಿ ಹಿಂದೂ ರಾಜರನ್ನು ಬಂಧಿಸಿ ಚಿತ್ರಹಿಂಸೆ ನೀಡಿದ ಔರಂಗಜೇಬನ ಕ್ರೌರ್ಯದ ಕಥೆಯನ್ನು ನಾವು ಬಾಲ್ಯದಲ್ಲಿ ಓದಲಿಲ್ಲ, ಎಡಚರರು ಪಠ್ಯದಲ್ಲಿ ಮೊಘಲರ ವಾಸ್ತುಶಿಲ್ಪ ಮತ್ತು ಬಿರಿಯಾನಿ ಶೈಲಿಯನ್ನು ಮಾತ್ರ ತಿಳಿಸಿದ್ದರು. ಆದರೆ ಈಗ ಕಾಲ ಬದಲಾಗಿದೆ. ಛತ್ರಪತಿ ಶಿವಾಜಿಯ ಮಗ ಸಂಭಾಜಿಯ ಬೆನ್ನಿಗೆ ಚೂರಿ ಹಾಕಿ ಚಿತ್ರಹಿಂಸೆ ನೀಡಿ ಕೊಂದ ಔರಂಗಜೇಬನ ಕ್ರೌರ್ಯವು ಬಾಲಿವುಡ್ ಅಂಗಳದಲ್ಲಿ ಬಿಂಬಿತಗೊಂಡಿದೆ, ಅಂದರೆ ಈ ಕ್ರೌರ್ಯವನ್ನು 'ಛಾವಾ' ಚಿತ್ರದ ಮೂಲಕ ತೋರಿಸಲಾಗಿದೆ. ಶಿವಾಜಿಯ ಸೈನ್ಯದಲ್ಲಿದ್ದ ಸೇನಾಧಿಪತಿ ತಾನಾಜಿಯ ಕುರಿತಾದ ಸಿನಿಮಾವನ್ನು ನಟ ಅಜಯ್ ದೇವಗನ್ ಬಾಲಿವುಡ್ ಅಂಗಳ ದಲ್ಲಿ ನಿರ್ಮಾಣ ಮಾಡಿದ್ದರು. ಮುಸ್ಲಿಂ ರಾಜರ ಮೇಲೆ ತಾನಾಜಿಯು ನಡೆಸುವ ದಾಳಿಯ ರೋಚಕ ದೃಶ್ಯಗಳನ್ನು ಈ ಚಿತ್ರದಲ್ಲಿ ಅದ್ಭುತವಾಗಿ ತೋರಿಸಲಾಗಿತ್ತು. ಇತಿಹಾಸವನ್ನು ತಿಳಿಯದವ ಇತಿಹಾಸವನ್ನು ಸೃಷ್ಟಿಸಲಾರ. ಹಾಗಾಗಿ, ನೈಜ ಇತಿಹಾಸವನ್ನು ತಿಳಿಯುವ ಹಕ್ಕು ನಮ್ಮೆಲ್ಲರಿಗಿದೆ. ಹಿಂದೂ ವಿರೋಧಿ ಚಿತ್ರಗಳನ್ನೇ ಹೆಚ್ಚಾಗಿ ತೆರೆಯ ಮೇಲೆ ತರುತ್ತಿದ್ದ ದಶಕಗಳ ಹಿಂದಿನ ಬಾಲಿವುಡ್ ಈಗ ಬದಲಾಗಿದೆ. ನೈಜ ಇತಿಹಾಸ ಹೇಳುವ ಸಾಕಷ್ಟು ಸಂಖ್ಯೆಯ ಸಿನಿಮಾಗಳು ಬಾಲಿವುಡ್ ಅಂಗಳದಲ್ಲಿ ಸಾಲುಸಾಲಾಗಿ ತೆರೆ ಕಾಣುತ್ತಿವೆ. ಒಂದು ಕಾಲಕ್ಕೆ ಬಾಲಿವುಡ್ ಅನ್ನು ಆಳಿ ಈಗ ಹಲ್ಲುಕಿತ್ತ ಹಾವಿನಂತಾಗಿರುವ ದಾವೂದ್ ಗ್ಯಾಂಗ್ ಮತ್ತು ಎಡಚರ ಪಟಾಲಂ ಈಗ ಬೇರೆ ದಾರಿಯಿಲ್ಲದೆ ಬಾಯಿಗೆ ಬೀಗ ಹಾಕಿಕೊಳ್ಳಬೇಕಾಗಿ ಬಂದಿದೆ.

ವೈದ್ಯಸಾಹಿತ್ಯ ಯಾಕೆ ಅನಿವಾರ್ಯ?

ಅಲೋಪತಿ ವೈದ್ಯಪದ್ಧತಿಯು ನಿಂತ ನೀರಾಗಿರದೆ, ಹೊಸತನಕ್ಕೆ ನಿರಂತರವಾಗಿ ತೆರೆದುಕೊಳ್ಳುವ ಪದ್ಧತಿಯಾಗಿದೆ. 60-70ರ ದಶಕದಲ್ಲಿ ಇದ್ದಂಥ ರೋಗಗಳು ಈಗ ದುರ್ಬೀನು ಹಾಕಿ ಹುಡುಕಿದರೂ ಸಿಗಲಿಕ್ಕಿಲ್ಲ. ಆದರೆ, ಜಗತ್ತು ದಿನಗಳೆದಂತೆ ಕಿರಿದಾಗುತ್ತಿದ್ದು, ಎಲ್ಲೋ ಹುಟ್ಟಿದ ವೈರಾಣುವು ದಿನ ಬೆಳಗಾಗುವುದರಲ್ಲಿ ಮತ್ತಾವುದೋ ದೇಶದ ಇನ್ನಾವುದೋ ಮೂಲೆಯನ್ನು ತಲುಪಲು ಸಾಧ್ಯವಿದೆ.

ಆರೋಗ್ಯಭಾಗ್ಯ
ಡಾ.ಮುರಲೀ ಮೋಹನ್ ಚೂಂತಾರು
vveditoped@gmail.com

ಇತ್ತೀಚಿನ ದಿನಗಳಲ್ಲಿ ದಿನಕ್ಕೊಂದರಂತೆ ಹೊಸ ರೋಗಗಳು ಮತ್ತು ಹೊಸ ರೋಗಾಣುಗಳು ಹುಟ್ಟಿಕೊಳ್ಳುತ್ತಿವೆ. ಇವುಗಳ ಬಗೆಗಿನ ಅಗತ್ಯಕ್ಕಿಂತ ಹೆಚ್ಚು ಮಾಹಿತಿಯು ಕಂಪ್ಯೂಟರ್ ಅಥವಾ ಮೊಬೈಲ್ ಫೋನುಗಳ ನೆರವಿನಿಂದ, ಗೂಗಲ್ ಮುಖೇನ ಅಂತರ್ಜಾಲದಲ್ಲಿ ಜನರಿಗೆ ಸಿಗುತ್ತಿದೆ. ಇದು ಮಾಹಿತಿ ಮಾತ್ರ. ಆದರೆ ಜನರು ಈ ಮಾಹಿತಿಗಳನ್ನು ಸತ್ಯವೆಂದು ನಂಬಿ ಕೈಕಾಲು ಬಡಿದುಕೊಳ್ಳಲು ಆರಂಭಿಸುತ್ತಾರೆ. ಗೂಗಲ್ ಮೂಲಕ ಸಿಗುವ ಎಲ್ಲ ಮಾಹಿತಿಗಳೂ ಸತ್ಯವಲ್ಲ; ಅವುಗಳಲ್ಲಿ ಹೆಚ್ಚಿನವು ವೈಭವೀಕರಿಸಲ್ಪಟ್ಟು, ಒಬ್ಬರಿಂದ ಮತ್ತೊಬ್ಬರಿಗೆ ಹಬ್ಬಿ, ಕೆಲವೊಮ್ಮೆ ತಿರುಚಲ್ಪಟ್ಟು, ಕೊನೆಗೆ ಸತ್ಯಕ್ಕಿಂತ ಜಾಸ್ತಿ ಸುಳ್ಳೇ ವಿಜೃಂಭಿಸುವಂತಾಗುವ ಸ್ಥಿತಿಯನ್ನು ಅದು ತಲುಪಿರುತ್ತದೆ.

ಈ ಹಿಂದೆ, ಅಂದರೆ ಸುಮಾರು 2 ದಶಕಗಳ ಹಿಂದೆ, ಜನರಿಗೆ ರೋಗಗಳ ಬಗ್ಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಏನೇ ರೋಗ ಬಂದರೂ ರೋಗಿಗಳು ವೈದ್ಯರ ಬಳಿ ಬರಲೇಬೇಕಿತ್ತು. ವೈದ್ಯರಿಂದ ಮಾತ್ರವೇ ರೋಗದ ಬಗೆಗಿನ ಮಾಹಿತಿ ದೊರೆತು ಔಷಧಿ ಪಡೆದು ನಿರಾಳರಾಗುತ್ತಿದ್ದರು. ಆದರೆ ಈಗ ಎಲ್ಲ ಮಾಹಿತಿಗಳು ಬೇಡ ಬೇಡವೆಂದರೂ ಜನರಿಗೆ ಸಿಗುತ್ತಿವೆ. ಈ ಕಾರಣದಿಂದ ಈಗಿನ ಕಾಲಘಟ್ಟದಲ್ಲಿ ಜನರಿಗೆ ಏನಾದರೂ ಅಸೌಖ್ಯ ಕಾಡಿದಾಗ, ತಾವೇ 'ಗೂಗಲ್' ಮಾಡಿ ರೋಗದ ಲಕ್ಷಣಗಳನ್ನು ತಿಳಿದು, ತಾವೇ ರೋಗನಿರ್ಣಯ ಮಾಡಿ, ಸ್ವತಃ ಔಷಧಿ ತೆಗೆದುಕೊಳ್ಳುವ ಹಂತಕ್ಕೆ ಜನರು ತಲುಪಿದ್ದಾರೆ.

ಒಂದೆರಡು ದಿನ ನೋವು ನಿವಾರಕ ಔಷಧಿ, ಜ್ವರದ ಔಷಧಿ ಮತ್ತು ಒಂದೆರಡು ಬಗೆಯ ಆ್ಯಂಟಿಬಯೋಟಿಕ್ ಔಷಧಿಯನ್ನು ತಾವೇ ಫಾರ್ಮಸಿಯಿಂದ ಪಡೆದು, ಸ್ವಯಂ ವೈದ್ಯ ಮಾಡಿಕೊಂಡ ನಂತರ, ರೋಗ ಕಡಿಮೆಯಾಗದಿದ್ದಲ್ಲಿ ಮಾತ್ರವೇ ವೈದ್ಯರ ಬಳಿಗೆ ಹೋಗುವ ತೀರ್ಮಾನ ಮಾಡುವವರೆಗಿನ ಸ್ವೇಚ್ಛೆ ಮತ್ತು ದುಸ್ಸಾಹಸ ಪ್ರವೃತ್ತಿಯು ನಮ್ಮ ಜನರಿಗೆ ಈಗ ಬಂದಿರುವುದು ನಿಜವಾಗಿಯೂ ಅಪಾಯಕಾರಿ ಬೆಳವಣಿಗೆ. ಈ ಹಿಂದೆ ಬೆರಳೆಣಿಕೆಯ ವೈದ್ಯರಿದ್ದರೂ ಜನರು ಕಾದುಕುಳಿತು ವೈದ್ಯರಿಂದಲೇ ಔಷಧಿ ಪಡೆಯುತ್ತಿದ್ದರು. ಈಗ ಕೈಗೊಂದು ಕಾಲಿಗೊಂದು ವೈದ್ಯರಿದ್ದರೂ, ತಮ್ಮ ಅರೆಬರೆ ಜ್ಞಾನ ಮತ್ತು 'ಗೂಗಲ್ ಡಾಕ್ಟರ್' ನೆರವಿನಿಂದ ಸ್ವಯಂವೈದ್ಯ ಮಾಡಿಕೊಂಡು, ಕೊನೆಗೆ ರೋಗ ಉಲ್ಬಣಿಸಿ ಕೈಮೀರಿದಾಗ ಮಾತ್ರವೇ ವೈದ್ಯರಲ್ಲಿಗೆ ತೆರಳುತ್ತಾರೆ ನಮ್ಮ ಕೆಲವಷ್ಟು ಜನ. ಹೀಗೆ ವೈದ್ಯರಲ್ಲಿಗೆ ಒಯ್ದ ರೋಗಿಯು ಒಂದೊಮ್ಮೆ ಗುಣಮುಖನಾಗದಿದ್ದಲ್ಲಿ, ವೈದ್ಯರನ್ನೇ ಹೊಣೆಗಾರರನ್ನಾಗಿಸಿ, ಒಮ್ಮೊಮ್ಮೆ ಅವರಿಗೆ ನಾಲ್ಕು ಬಿಗಿದು, ಅವರನ್ನೇ ರೋಗಿಯನ್ನಾಗಿಸುವ ಹಂತಕ್ಕೆ ಕೆಲ ಜನರು ಬೆಳೆದು ನಿಂತಿರುವುದು ಆರೋಗ್ಯಕರ ಬೆಳವಣಿಗೆಯಲ್ಲ. ಈ ಎಲ್ಲಾ ಹಿನ್ನೆಲೆಯನ್ನು ಗಮನಿಸಿದಾಗ, ವೈದ್ಯಸಾಹಿತ್ಯಕ್ಕೆ ಮತ್ತು ಅದನ್ನು ಪ್ರತಿಪಾದಿಸುವ ವೈದ್ಯರಿಗೆ ಇನ್ನಷ್ಟು ಹೊಣೆಗಾರಿಕೆ ಇರಬೇಕಾದ್ದು ಅರಿವಾಗುತ್ತದೆ.

ರೋಗಕ್ಕೆ ಚಿಕಿತ್ಸೆ ನೀಡುವುದು ವೈದ್ಯರ ಪ್ರಾಥಮಿಕ ಕರ್ತವ್ಯ. ಇದರ ಜತೆಗೆ, ರೋಗವನ್ನು ತಡೆಗಟ್ಟುವ ಬಗ್ಗೆ, ಅದು ಬಾರದಂತೆ ಜೀವನಶೈಲಿಯನ್ನು ಕಾಪಿಟ್ಟುಕೊಳ್ಳುವ ಕುರಿತು ಜಾಗೃತಿ ಮೂಡಿಸಬೇಕಾದ್ದು, ರೋಗ ಬಂದರೂ ಅದರ ಜತೆಗೆ ಬದುಕುವುದರ ಬಗ್ಗೆ ತಿಳಿಹೇಳುವುದು ಅತ್ಯಗತ್ಯ. ಉದಾಹರಣೆಗೆ, ಜಗತ್ತಿನಲ್ಲಿ ಜನರ ಸಾವಿಗೆ ಕಾರಣವಾಗುವ ರೋಗಗಳಲ್ಲಿ ಸಿಂಹಪಾಲು ಸಲ್ಲುವುದು ಹೃದಯಾಘಾತದ ಸಮಸ್ಯೆಗೆ. ಹೆಚ್ಚಿನ ಹೃದಯಾಘಾತಗಳನ್ನು ತಡೆಗಟ್ಟಲು ಸಾಧ್ಯವಿದೆ ಹಾಗೂ ನಮ್ಮ ಆಹಾರಪದ್ಧತಿ, ಜೀವನಶೈಲಿ ಹಾಗೂ ಒತ್ತಡರಹಿತ ಕೆಲಸದ ವಾತಾವರಣಗಳಿಂದ ಹೃದಯಾಘಾತವನ್ನು ತಪ್ಪಿಸಲು ಸಾಧ್ಯವಿದೆ ಎಂಬುದನ್ನು ರೋಗಿಗಳಿಗೆ ಮನವರಿಕೆ ಮಾಡಿಕೊಡಬೇಕು. ಸಮಾಜದ ಎಲ್ಲಾ ಸ್ತರದ ಜನರಿಗೆ ಇದನ್ನು ತಲಪುವಂತೆ ಮಾಡುವುದು ವೈದ್ಯರ ಸಾಮಾಜಿಕ ಹೊಣೆಗಾರಿಕೆ ಆಗಿರುತ್ತದೆ. ವೈದ್ಯಕೀಯ ಸಾಹಿತ್ಯದಿಂದ ಮಾತ್ರವೇ ಇದು ಕೈಗೂಡಬಲ್ಲದು. ಪತ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಜನರಲ್ಲಿ ರೋಗದ ಬಗ್ಗೆ ಅರಿವು ಮತ್ತು ಎಚ್ಚರಿಕೆ ಮೂಡಿಸುವ ಕೆಲಸವು ನಿರಂತರ ಸಾಗುತ್ತಿರಬೇಕು. ರೋಗದ ಬಗೆಗಿನ ಸರಿಯಾದ ಮಾಹಿತಿಗಳು, ಅಂಕಿ-ಅಂಶಗಳು ಮತ್ತಿತರ ವಿಚಾರಗಳನ್ನು ವಿವರಿಸಬೇಕು, ಆದರೆ ಚಿಕಿತ್ಸೆ ಬಗೆಗಿನ ಯಾವುದೇ ವಿಚಾರವನ್ನು ಹಂಚಿಕೊಳ್ಳಬಾರದು. ರೋಗನಿರ್ಣಯ, ಗುರುತಿಸುವಿಕೆ, ತಡೆಗಟ್ಟುವ ಹಾಗೂ ಹರಡದಂತೆ ಮುನ್ನೆಚ್ಚರಿಕೆ ವಹಿಸುವ ಬಗೆ ಇತ್ಯಾದಿಗಳನ್ನು ವೈದ್ಯಸಾಹಿತ್ಯದ ಮೂಲಕ ಜನರಿಗೆ ತಲುಪಿಸಬೇಕು. ತನ್ಮೂಲಕ ಜನರಿಗೆ ತಪ್ಪು ಮಾಹಿತಿ ತಲುಪದಂತೆ ನೋಡಿಕೊಳ್ಳಬೇಕು. ಜನರ ಅಪನಂಬಿಕೆ ಮತ್ತು ಮೌಢ್ಯಗಳನ್ನು ತೊಡೆದುಹಾಕಬೇಕು. ಈ ಹಿನ್ನೆಲೆಯಲ್ಲಿ ವೈದ್ಯರಿಗೆ ಅತಿಹೆಚ್ಚಿನ ಸಾಮಾಜಿಕ ಹೊಣೆಗಾರಿಕೆ ಮತ್ತು ಜವಾಬ್ದಾರಿ ಇರುತ್ತದೆ.

ವೈದ್ಯಸಾಹಿತ್ಯದಿಂದ ಏನು ಲಾಭವಿದೆ?

- ಹತ್ತು ಹಲವು ರೋಗಗಳ ಬಗೆಗಿನ ಸರಿಯಾದ ಮಾಹಿತಿಯನ್ನು ಜನರಿಗೆ ಅರ್ಥವಾಗುವ ರೀತಿಯಲ್ಲಿ ನೀಡಿ, ರೋಗದ ಬಗೆಗೆ ಜನರಲ್ಲಿರುವ ಅನಗತ್ಯ ಭಯವನ್ನು ತಪ್ಪಿಸಬಹುದು.
- ಕೆಲವರು ರೋಗಗಳ ಬಗೆಗೆ ತಪ್ಪಭಿಪ್ರಾಯ/ಮೂಢನಂಬಿಕೆಯನ್ನು ಹೊಂದಿರುತ್ತಾರೆ; ಪರಿಣತ ವೈದ್ಯರು ಸರಿಯಾದ ಮಾರ್ಗದರ್ಶನ ನೀಡಿ ಇದನ್ನು ತೊಡೆದುಹಾಕುವಲ್ಲಿ ವೈದ್ಯಸಾಹಿತ್ಯವು ನೆರವಾಗುತ್ತದೆ.
- ಸ್ವಯಂವೈದ್ಯದಿಂದ/ಸ್ವಯಂ ಮದ್ದುಗಾರಿಕೆಯಿಂದ ಉಂಟಾಗುವ ತೊಂದರೆಗಳ ಮತ್ತು ಅಪಾಯಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ತುರ್ತು ಅಗತ್ಯವಿದೆ. ಸೈಬರ್ ಕಾಂಡ್ರಿಯಾ, ಅಂತರ್ಜಾಲದ ಔಷಧಗಾರಿಕೆ ಮುಂತಾದ ಗೀಳುಗಳನ್ನು ಬುಡಸಮೇತ ಕಿತ್ತುಹಾಕಲು ವೈದ್ಯಸಾಹಿತ್ಯ ಅತ್ಯವಶ್ಯಕ.
- ಕೆಟ್ಟ ಜೀವನಶೈಲಿ ಮತ್ತು ಕೆಟ್ಟ ಆಹಾರ ಪದ್ಧತಿಯಿಂದಾಗಿ ಬರುವ, ಜೀವನಶೈಲಿ ಸಂಬಂಧಿತ ಹಾಗೂ ತಡೆಗಟ್ಟಬಹುದಾದ ರೋಗಗಳನ್ನು (ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯಾಘಾತ, ಖಿನ್ನತೆ ಇತ್ಯಾದಿ) ಬಾರದಂತೆ ತಡೆಯುವಲ್ಲಿ ವೈದ್ಯಸಾಹಿತ್ಯ ಮುಖ್ಯ ಭೂಮಿಕೆ ವಹಿಸುತ್ತದೆ. ಈ ನಿಟ್ಟಿನಲ್ಲಿ ವೈದ್ಯಸಾಹಿತ್ಯದ ಮೂಲಕ ವೈದ್ಯರು ಜನಜಾಗೃತಿ ಮೂಡಿಸುವ ಅವಶ್ಯಕತೆಯಿದೆ.
- ವೈದ್ಯಸಾಹಿತ್ಯವನ್ನು ಪ್ರತಿಪಾದಿಸುವ ವೈದ್ಯರು ನಿರಂತರವಾಗಿ ಅಧ್ಯಯನಶೀಲರಾಗಿರಬೇಕಾಗುತ್ತದೆ. ಹೊಸ ರೋಗ ಮತ್ತು ರೋಗಾಣುಗಳು ಹುಟ್ಟಿದಂತೆ, ಹೊಸ ಔಷಧಿ ಮತ್ತು ಆವಿಷ್ಕಾರಗಳ ಬಗ್ಗೆ ಸಮಗ್ರ ಮಾಹಿತಿ ಪಡೆದು ಅವರು ಜನರಿಗೆ ತಿಳಿಹೇಳಬೇಕಾಗುತ್ತದೆ. ಇದರಿಂದಾಗಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಿಟ್ಟುಕೊಳ್ಳಲು ಸಾಧ್ಯವಾಗುತ್ತದೆ.
- ಹೊಸ ಹೊಸ ರೋಗಗಳು ಅಪ್ಪಳಿಸಿದಾಗ, ಗೂಗಲ್ ಮುಖಾಂತರ ಅವುಗಳ ಕುರಿತಾದ ಅನಗತ್ಯ/ಅಪೂರ್ಣ/ತಪ್ಪಾದ ಮಾಹಿತಿ ಪಡೆಯುವ ಕೆಲಜನರು ವಿನಾಕಾರಣ ಒತ್ತಡಕ್ಕೆ ಸಿಲುಕುತ್ತಾರೆ. ಆದ್ದರಿಂದ ಇಂಥ ಸಂದರ್ಭಗಳಲ್ಲಿ ವೈದ್ಯಸಾಹಿತ್ಯದ ನೆರವಿನಿಂದ ತಮ್ಮ ವಿಚಾರಧಾರೆಗಳನ್ನು ಜನರಿಗೆ ತಲುಪಿಸುವ ಮೂಲಕ ವೈದ್ಯರು ಅನಗತ್ಯ ಗೊಂದಲವನ್ನು ತಪ್ಪಿಸಲು ಸಾಧ್ಯವಿದೆ.

ಕೊನೆಯ ಮಾತು: ಅಲೋಪತಿ ವೈದ್ಯಪದ್ಧತಿಯು ನಿಂತ ನೀರಾಗಿರದೆ, ಹೊಸತನಕ್ಕೆ ನಿರಂತರವಾಗಿ ತೆರೆದುಕೊಳ್ಳುವ ಪದ್ಧತಿಯಾಗಿದೆ. 60-70ರ ದಶಕದಲ್ಲಿ ಇದ್ದಂಥ ರೋಗಗಳು ಈಗ ದುರ್ಬೀನು ಹಾಕಿ ಹುಡುಕಿದರೂ ಸಿಗಲಿಕ್ಕಿಲ್ಲ. ಆದರೆ, ಜಗತ್ತು ದಿನಗಳೆದಂತೆ ಕಿರಿದಾಗುತ್ತಿದ್ದು, ಎಲ್ಲೋ ಹುಟ್ಟಿದ ವೈರಾಣುವು ದಿನ ಬೆಳಗಾಗುವುದರಲ್ಲಿ ಮತ್ತಾವುದೋ ದೇಶದ ಇನ್ನಾವುದೋ ಮೂಲೆಯನ್ನು ತಲುಪಲು ಸಾಧ್ಯ ವಿದೆ. ಈ ಕಾರಣದಿಂದ, ವಿರಳಾತಿವಿರಳ ವೈರಾಣು ರೋಗ ದಿಂದ ಮೊದಲ್ಗೊಂಡು ಅತಿಸಾಮಾನ್ಯ ಸಮಸ್ಯೆಗಳವರೆಗೆ ವೈದ್ಯರಿಗೆ ಮತ್ತು ಜನರಿಗೆ ಸರಿಯಾದ ಮಾಹಿತಿ ಇರಬೇಕಾಗುತ್ತದೆ. ಇದನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ 'ವೈದ್ಯ ಸಾಹಿತ್ಯ' ಅತ್ಯಗತ್ಯ. ಹೀಗಾಗಿ ವೈದ್ಯರು ಕಾಲಾನುಕಾಲಕ್ಕೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡು, ತಮ್ಮ ವಿಚಾರಧಾರೆಯನ್ನೂ ಮತ್ತು ರೋಗಗಳ ಬಗೆಗಿನ ಮಾಹಿತಿಯನ್ನೂ ಜನರಿಗೆ ತಲುಪಿಸುವ ಕೆಲಸವನ್ನು ಮಾಡಬೇಕು. 'ನಾವೇನಿದ್ದರೂ ಔಷಧಿ ನೀಡಿ ರೋಗವನ್ನು ಗುಣಪಡಿಸುವ ಕೆಲಸದಲ್ಲಿ ವ್ಯಸ್ತರಾದವರು' ಎಂಬ ಚಿಂತನೆಯನ್ನು ವೈದ್ಯರು ಬದಿಗಿಟ್ಟು, ಇಡೀ ಸಮಾಜದ ಸ್ವಾಸ್ಥ್ಯವನ್ನು ಗಮನದಲ್ಲಿಟ್ಟುಕೊಂಡು ರೋಗದ ಚಿಕಿತ್ಸೆಯ ಜತೆಜತೆಗೆ ರೋಗವನ್ನು ತಡೆಗಟ್ಟುವ/ತೊಡೆದುಹಾಕುವ ಬಗೆಗಿನ ಮಾಹಿತಿಯನ್ನು ವೈದ್ಯಸಾಹಿತ್ಯದ ಮೂಲಕ ನೀಡಬೇಕು. ರೋಗಿಗೆ ನೀಡುವ ಚುಚ್ಚುಮದ್ದಿನ ಜತೆಗೆ, ಸಮಾಜಕ್ಕೆ ಹೀಗೆ ನಿರಂತರವಾಗಿ ಚುಚ್ಚುಮದ್ದು ನೀಡುವ ಔದಾರ್ಯವನ್ನು ವೈದ್ಯಸಾಹಿತ್ಯದ ಮೂಲಕ ವೈದ್ಯರು ಮಾಡಿದಲ್ಲಿ, ಆರೋಗ್ಯವಂತ ಸಮಾಜದ ನಿರ್ಮಾಣ ಸಾಧ್ಯವಿದೆ.

(ಲೇಖಕರು ವೈದ್ಯರು)

ಒದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಮಯೋಚಿತ ಸಂಪಾದಕೀಯ

ವಿಶ್ವವಾಣಿ ಫೆ.21ರ ಸಂಪಾದಕೀಯವು ಅತ್ಯಂತ ಗಂಭೀರ ಮತ್ತು ಸಮಯೋಚಿತವಾಗಿತ್ತು. ಅರಣ್ಯ ನಮ್ಮೆಲ್ಲರ ಸಂಪತ್ತು. ಅದರ ರಕ್ಷಣೆ ನಮ್ಮೆಲ್ಲರ ಆದ್ಯಕರ್ತವ್ಯ. ಬೇಸಗೆಯಲ್ಲಿ ಅಗ್ನಿ ಅವಘಡಗಳು ಹೆಚ್ಚಾಗುತ್ತವೆ. ಅವುಗಳ ನಿಯಂತ್ರಣಕ್ಕೆ ವಿದೇಶಗಳಲ್ಲಿ ಡ್ರೋನ್, ಹೆಲಿಕಾಪ್ಟರ್‌ನಂಥ ಮಾರ್ಗೋಪಾಯಗಳನ್ನು ಬಳಸುತ್ತಿದ್ದಾರೆ. ಆದರೆ ನಮ್ಮಲ್ಲಿ ಅರಣ್ಯ ಸಿಬ್ಬಂದಿಗಳು ಈಗಲೂ ಗಿಡದ ತೊಪ್ಪಲನ್ನು ಹಿಡಿದು ನಿಲ್ಲುತ್ತಾರೆ. ಅವರಿಗೆ ಅರಿಯಾದ ಅಗ್ನಿನಿರೋಧಕ ಕೈಗವಚ, ದೇಹದ ರಕ್ಷಾ ಕವಚಗಳೂ ಇರುವುದಿಲ್ಲ. ಅರಣ್ಯದ ಮತ್ತು ಅರಣ್ಯ ಸಿಬ್ಬಂದಿಯ ಆರ್ತನಾದವನ್ನು ಕೇಳುವವರಾರು? ರಾಜಕೀಯ ಪಕ್ಷಗಳಲ್ಲಿನ ಭಿನ್ನಾಭಿಪ್ರಾಯಗಳು ಶಮನವಾಗಿ ಮಾಮೂಲು ಸ್ಥಿತಿ ರೂಪುಗೊಳ್ಳಲು ಕೆಲ ದಿನಗಳು ಸಾಕು. ಆದರೆ ಒಮ್ಮೆ ಅರಣ್ಯವು ಸುಟ್ಟುಹೋದರೆ ಆ ಪ್ರದೇಶವು ಮರಳಿ ಜೀವಿಗಳ ತಾಣವಾಗಲು ಹತ್ತಾರು ವರ್ಷಗಳೇ ಬೇಕು. ನಮ್ಮ ಆಳುಗರು ಈ ಕುರಿತು ಗಂಭೀರವಾಗಿ ಆಲೋಚಿಸಿ ಸೂಕ್ತಕ್ರಮವನ್ನು ಕೈಗೊಳ್ಳಬೇಕು.

– ಎಸ್.ನಾಗರಾಜ ನಾಗೂರ, ಬಾಗಲಕೋಟೆ

ಸುಂದರ ಪ್ರಸ್ತುತಿ

ಶಿಶಿರ್ ಹೆಗಡೆಯವರ 'ಶಿಶಿರಕಾಲ' ಅಂಕಣ ಬರಹವು (ವಿಶ್ವವಾಣಿ ಫೆ.21) ಬಹಳ ಹಿಡಿಸಿತು. ವಿಷಯದ ಆಯ್ಕೆ, ಅದರ ಪ್ರಸ್ತುತಿ ಮತ್ತು ನೀಡಿದ ಉದಾಹರಣೆಗಳು ಚೆನ್ನಾಗಿದ್ದವು. ಆಂಗ್ಲಭಾಷಾ ಕವಿ ಜಾನ್ ಕೀಟ್ಸ್‌ನ A thing of beauty is a joy forever ಎಂಬ ಸಾಲು ಸೌಂದರ್ಯಕ್ಕೆ ಸಂಬಂಧಿಸಿದ ವೈಯಕ್ತಿಕ ಅನುಭೂತಿ ಅಲ್ಲವೇ?

– ನಾರಾಯಣ್ ಕಡಿವಾಳ್, ಬೆಂಗಳೂರು

ಗುಣಮಟ್ಟ ಉತ್ತಮಗೊಳ್ಳಲಿ

ಬೆಂಗಳೂರನ್ನು ಕೇವಲ 2-3 ವರ್ಷಗಳಲ್ಲಿ ಬದಲಾಯಿಸಲು ಸಾಧ್ಯವಿಲ್ಲ, ಅದು ಭಗವಂತನೇ ಇಳಿದುಬಂದರೂ ಸಾಧ್ಯವಿಲ್ಲದ ಕೆಲಸ ಎಂದಿದ್ದಾರೆ ರಾಜ್ಯದ ಉಪಮುಖ್ಯಮಂತ್ರಿ ಯವರು. ಅಲ್ಲಿಗೆ, ನಗರವನ್ನು ಈಗಿನ ಸರಕಾರದ ಅವಧಿಯಲ್ಲಿ ಉತ್ತಮಪಡಿಸಲು ಸಾಧ್ಯವಿಲ್ಲ ಎಂದು ನಾವು ಭಾವಿಸಬಹುದೇ? ನಿಗದಿತ ಗಡುವಿನೊಳಗೆ ನಗರದ ಎಲ್ಲ ರಸ್ತೆಗಳನ್ನು ಮುಚ್ಚದಿದ್ದರೆ ಸಂಬಂಧಿತ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾ ಗುವುದು ಎಂದು ಅವರು ಕಳೆದ ವರ್ಷ ಖಡಕ್ ಎಚ್ಚರಿಕೆಯನ್ನು ನೀಡಿದ್ದರು. ಆದರೆ ನಿಗದಿತ ಗಡುವಿನ ನಂತರ ರಸ್ತೆಗಳೂ ಗುಂಡಿ ಮುಕ್ತವಾಗಲಿಲ್ಲ, ಅಧಿಕಾರಿಗಳ ವಿರುದ್ಧ ಕ್ರಮವೂ ಜರುಗಲಿಲ್ಲ. ಗುಂಡಿಯನ್ನು ಮುಚ್ಚಲು ಮಳೆ ಅಡ್ಡಿಯಾಗಿದೆ ಎಂಬ ಅಧಿಕಾರಿಗಳ ಸಬೂಬನ್ನು ಕೇಳುತ್ತಲೇ ಬಂದಿದ್ದ ಮತ್ತು ಈ ಬೇಸಗೆಯಲ್ಲಾದರೂ ರಸ್ತೆಗಳು ಗುಂಡಿಮುಕ್ತವಾಗಬಹುದು ಎಂದು ನಿರೀಕ್ಷಿಸಿದ್ದ ಜನರಿಗೆ ಈಗ ತಣ್ಣೀರು ಎರಚಿದಂತಾಗಿದೆ. ದೇಶದ ಸಿಲಿಕಾನ್ ಸಿಟಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ಬೆಂಗಳೂರಿ ನಲ್ಲಿ ಇತ್ತೀಚೆಗಷ್ಟೇ ಕೋಟ್ಯಂತರ ರುಪಾಯಿ ವೆಚ್ಚದಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಪಾಲ್ಗೊಂಡಿದ್ದ ಉತ್ಸಾಹಿ ಹೂಡಿಕೆದಾರರಿಗೆ, ಉಪಮುಖ್ಯಮಂತ್ರಿಗಳ ಈ ಹೇಳಿಕೆ ನಿರಾಸೆಯನ್ನು ಉಂಟುಮಾಡುವುದಿಲ್ಲವೇ? ಆಳುಗರು ತಮ್ಮ ಆದ್ಯತೆಗಳ ಬಗ್ಗೆ ಮರುಚಿಂತನೆ ನಡೆಸಬೇಕಾದ ಅಗತ್ಯವಿದೆ. ಸುರಂಗ ರಸ್ತೆಗಳ ನಿರ್ಮಾಣಕ್ಕೆ ಮುಂದಾಗುವ ಮೊದಲು, ಉತ್ತಮ ರಸ್ತೆಗಳನ್ನು ನಿರ್ಮಿಸಿ, ಸಾರ್ವಜನಿಕ ಸಾರಿಗೆಯನ್ನು ಉತ್ತಮಪಡಿಸಿ, ಪ್ರಯಾಣಿಕರಿಗೆ ಕೈಗೆಟಕುವ ಪ್ರಯಾಣದರವನ್ನು ನಿಗದಿಪಡಿಸಿದರೆ, ಕೆಳ ಮತ್ತು ಮಧ್ಯಮ ವರ್ಗದವರಾದರೂ ಸ್ವಂತ ವಾಹನಗಳನ್ನು ಹೊಂದುವುದು ಕಡಿಮೆಯಾಗಿ, ರಸ್ತೆಗಳ ಮೇಲಿನ ಒತ್ತಡ ಮತ್ತು ದಟ್ಟಣೆ ತಗ್ಗುತ್ತವೆ. ಆಳುಗರು ಈ ದಿಸೆಯಲ್ಲಿ ಗಂಭೀರವಾಗಿ ಆಲೋಚಿಸಲಿ.

– ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಭಟ್ಟರ್ ಸ್ಕಾಚ್

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಸಿದ್ದರಾಮಯ್ಯನವರಿಗೆ ಲೋಕಾಯುಕ್ತ ಕ್ಲೀನ್ ಚಿಟ್ ಕೊಡ್ತತಂತೆ?
– **ನಿನಗೆ ಅನುಮಾನ ಇತ್ತಾ?!**

- **ಕಾಶಿ ಪ್ರಾಣೇಶ, ವಿದ್ಯಾಪೀಠ**
ಭಟ್ರೇ, ಟ್ರಂಪ್ ಆಡಳಿತದಲ್ಲಿ ಶ್ವೇತಭವನದಲ್ಲಿ ನಡೆಯುವ ವಿದ್ಯಮಾನಗಳೆಲ್ಲ ಭಟ್ಟರಿಗೆ ತಿಳಿದಿರುತ್ತಂತೆ?
– **ನಮ್ಮ ಅಂಕಣಕಾರ ಶ್ರೀವತ್ಸ ಜೋಶಿಯವರು ವಾಷಿಂಗ್ಟನ್ ಡಿಸಿಯಲ್ಲೇ ಇರೋದು ಎಂಬುದು ಗೊತ್ತಿದ್ದೂ ಈ ಪ್ರಶ್ನೆಯಾ?!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಡಾಲಿ ಧನಂಜಯ ತಮ್ಮ ಅಭಿಮಾನಿಗಳಿಗೆಲ್ಲ ಮದುವೆಯ ಪುಷ್ಕಳ ಭೋಜನ ಮಾಡಿಸಿ ಕಡೆಗೆ ಮರೆದಿದ್ದಾದರೂ ಏನು?
– **'ಧನ್ಯ'ತಾಭಾವ!**

- **ಶೀಲಾ ಒಂಟಿಕೊಪ್ಪಲ್, ಮೈಸೂರು**
ಭಟ್ರೇ, ಸಿನಿಮಾ ಕುಟುಂಬದ ರಿಸೆಪ್ಷನ್‌ಗೆ ಕರೆಬಂದಿದೆ. ಹಾಗೇ ಹೋಗಲೋ ಮೇಕಪ್ ಮಾಡಿ ಹೋಗಲೋ?
– **ಮೇಕಪ್‌ಗೆ ಅಡ್ಡಿಯಿಲ್ಲ, ಆದರೆ ನೋಡುವವರಿಗೆ ಸ್ಕ್ರೀನ್ ಟೆಸ್ಟ್‌ಗೆ ಬಂದಿದ್ದಾಳೆ ಎಂಬ ಅನುಮಾನ ಬಾರದಿದ್ದರೆ ಸಾಕು!**

- **ವೈ.ಪುಟ್ಟಯ್ಯ, ಕನ್ನೇಗೌಡನ ಕೊಪ್ಪಲು**
ಭಟ್ರೇ, ಕುಂಭಮೇಳದಲ್ಲಿ ಮುಳುಗಿ ಎದ್ದು ಬಂದಾಗಿನಿಂದ ಡಿಕೆಶಿ ಬದಲಾದಂತೆ ಕಾಣುತ್ತಾರಲ್ಲ?
– **ಅನುಮಾನವಿಲ್ಲ. ಆದರೆ ಇದನ್ನು ನಂಬಬೇಕಾದವರು ಖರ್ಗೆಯವರು!**

- **ರಾಮು, ದಾಸರಹಳ್ಳಿ**
ಭಟ್ರೇ, ಕುಂಭಮೇಳದಲ್ಲಿ ರಾಹುಲ್ ಗಾಂಧಿ ಮುಳುಗಲಿಲ್ಲವಲ್ಲ?
– **ಗಂಗೆ ಮಲಿನವಾಗಬಹುದು ಎಂದು ದೂರ ಉಳಿದಿದ್ದಾರಂತೆ!**

- **ಕಲ್ಮಂಗಿ ಆಚಾರ್ಯ, ಮೈಸೂರು**
ಭಟ್ರೇ, ಮೋದಿಯವರು ಮನಸ್ಸು ಮಾಡಿದರೆ ಯಾರನ್ನು ಬೇಕಾದರೂ ಮುಖ್ಯಮಂತ್ರಿ ಮಾಡ್ತಾರಂತೆ?
– **ರಾಜ್ಯ ಬಿಜೆಪಿ ಖಜಾಂಚಿ ಸುಬ್ಬನರಸಿಂಹ ಹುರುಪಿನಿಂದ ಓಡಾಡುವುದನ್ನು ನೋಡಿದ್ರೆ ಗೊತ್ತಾಗಲ್ಲವಾ?!**

- **ಅರವಿಂದ ಕುಲಕರ್ಣಿ, ಧಾರವಾಡ**
ಭಟ್ರೇ, ನಿಮ್ಮನ್ನು ದ್ವೇಷಿಸಲು ಸಾಧ್ಯವಿಲ್ಲ ಅಂತಾರಲ್ಲ?
– **ಅವರು ನನ್ನ ಬಗ್ಗೆ ಗೊತ್ತಿಲ್ಲದ ಶುದ್ಧ ಅಮಾಯಕರು!**

ಆಂತರಿಕ ರಿಪುಗಳು ಅರಿಷಡ್ವರ್ಗವಾದರೆ, ಬಾಹ್ಯರಿಪುಗಳಾರು ಬಲ್ಲಿರಾ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಮನುಷ್ಯನ ಮನಶ್ಶಾಂತಿಯನ್ನು ಕದಡುವ, ಸ್ವಾಸ್ಥ್ಯಕ್ಕೆ ಪ್ರತಿಬಂಧಕ ರೂಪವಾಗಿರುವ ಭಾವನೆಗಳನ್ನು ಶತ್ರುಗಳು (ಅರಿ) ಎಂದು ಕರೆದು ಅವುಗಳನ್ನು ಆರು ಗುಂಪಾಗಿ ವರ್ಗೀಕರಣ ಮಾಡುತ್ತಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯ ಇವೇ ಆ ಅರಿಷಡ್ವರ್ಗಗಳು. ನಮ್ಮ ವಿಕಾಸಕ್ಕೆ ಅಡ್ಡಿಯಾಗಿ ನಿಂತಿರುವ ರಿಪುಗಳು. ಮನುಷ್ಯಜನ್ಮದ ಮಹತ್ತ್ವವಿರುವುದೇ ಈ ಆರನ್ನೂ ಜಯಿಸುವುದರಲ್ಲಿ. ಇವು ಆರೂ ಅಂತಃಶತ್ರುಗಳು. ಇವನ್ನು ಗೆದ್ದರೆ ಮನುಷ್ಯ ಲೋಕವನ್ನೇ ಗೆದ್ದಂತೆ; ಇವನ್ನು ಗೆಲ್ಲದೆ ಲೋಕವನ್ನೇ ಗೆದ್ದರೂ ಪರಾಜಿತನಾದಂತೆಯೇ. ಇವೆಲ್ಲವೂ ರಜೋ-ತಮೋಗುಣಗಳ ವೈಪರೀತ್ಯದಿಂದ ಉಂಟಾದುವೆಂದೂ ಇವನ್ನು ಧೃತಿಯಿಂದ ಗೆಲ್ಲಬೇಕೆಂದೂ ಶಾಸ್ತ್ರ ಹೇಳುತ್ತದೆ. ಇವು ನಮ್ಮ ಮಾನಸಿಕ ಸ್ವಾಸ್ಥ್ಯದ ಶತ್ರುಗಳಾದರೆ ದೈಹಿಕ ಸ್ವಾಸ್ಥ್ಯವನ್ನು ಕೆಡಿಸುವ ಇನ್ನೂ ಆರು ರಿಪುಗಳಿದ್ದಾರೆ. ಶಾಸ್ತ್ರದಲ್ಲಿ ಅವುಗಳ ಉಲ್ಲೇಖ ಹೀಗಿದೆ- ''ಅತ್ಯಂಬುಪಾನಾತ್ ಅತಿಸಂಗಮಾತ್ ಚ ದಿವಾ ಚ ಸುಪ್ತೇಃ ನಿಶಿಜಾಗರಾತ್ ಚ । ಸಂರೋಧನಾತ್ ಮೂತ್ರಪುರೀಷಯೋಶ್ಚ ಷಡ್ಭಿರ್ನಿದಾನೈಃ ಪ್ರಭವಂತಿ ರೋಗಾಃ ॥ ಹಾಗಾದರೆ ಈ 6 ಶತ್ರುಗಳು ಹೇಗೆ ನಮ್ಮ ಸ್ವಾಸ್ಥ್ಯವನ್ನು ಹಾಳುಮಾಡಬಲ್ಲರು ಎಂಬುದನ್ನು ಅರ್ಥೈಸಿಕೊಳ್ಳೋಣ.

- **ಅತಿ ಅಂಬುಪಾನ:** ಅಂದರೆ ಅತಿಯಾದ ನೀರು ಸೇವನೆ. ನನ್ನ ಕ್ಲಿನಿಕ್ಕಿಗೆ ಬರುವ ಕೆಲವರು, ''ಡಾಕ್ಟ್ರೇ, ನಾನು ವಾಟ್ಸಾಪ್‌ನಲ್ಲಿ ನೋಡಿದೆ, ಬೆಳಗ್ಗೆ ಎದ್ದ ಕೂಡಲೇ ಕನಿಷ್ಠಪಕ್ಷ 2-3 ಲೀಟರ್‌ನಷ್ಟು ನೀರು ಕುಡಿಯಬೇಕೆಂದು ಹೇಳಿದ್ದಾರೆ. ಹಾಗಾಗಿ ಪ್ರತಿನಿತ್ಯವೂ ನಾನು ಆ ಅಭ್ಯಾಸವನ್ನು ತಪ್ಪದೆ ಮಾಡುತ್ತಿದ್ದೇನೆ'' ಎನ್ನುತ್ತಾರೆ. ಇಂಥ ಅಭ್ಯಾಸವನ್ನು ಬಹಳ ಆರೋಗ್ಯಕರ ಎಂದು ಪದೇ ಪದೆ ಬೇರೆ ಬೇರೆ ವೇದಿಕೆಗಳಲ್ಲಿ ಹೇಳಿ ಹೇಳಿ ಜನರ ಮನಸ್ಸಿನಲ್ಲಿಯೂ 'ಹೀಗೆ ಅತಿಯಾಗಿ ನೀರು ಕುಡಿಯುವುದು ಆರೋಗ್ಯವನ್ನು ಪೋಷಿಸುತ್ತದೆ' ಎಂಬ ಭಾವನೆ ಗಾಢವಾಗಿ ಬೇರೂರಿದೆ. ಹಾಗಾಗಿ ನಮಗೆ ಯಾವ ಆರೋಗ್ಯ ಸಮಸ್ಯೆ ಬಂದರೂ, ಅದು ಅತಿಯಾದ ನೀರು ಸೇವನೆಯಿಂದ ಬಂದಿರಬಹುದೇನೋ ಎಂಬ ಕಿಂಚಿತ್ ಸಂಶಯವು ನಮ್ಮ ಮನಸ್ಸಿಗೆ ಬರುವುದಕ್ಕೆ ಮುನ್ನವೇ ಅದನ್ನು ನಾವು ತಳ್ಳಿಹಾಕಿಬಿಡುತ್ತೇವೆ. ಕಾರಣ, ಇದು ಬಹಳ ಒಳ್ಳೆಯ ಅಭ್ಯಾಸ ಎನ್ನುವುದನ್ನು ನಮ್ಮ ಮನಸ್ಸು ಈಗಾಗಲೇ ತೀರ್ಮಾನಿಸಿಬಿಟ್ಟಿದೆ. ಆದರೆ, ವಾಸ್ತವವಾಗಿ ಅತಿಯಾದ ನೀರು ಸೇವನೆ ಆರೋಗ್ಯಕ್ಕೆ ಹಾನಿಕರ. ಹೌದು, ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಅಂಶವೆಂದರೆ, ನೀರು ಒಂದು ಆಹಾರ ದ್ರವ್ಯ, ಅಂದರೆ ಅದು ನಮ್ಮ ದೇಹದಲ್ಲಿ ಜಠರಾಗ್ನಿಯ ಸಂಪರ್ಕಕ್ಕೆ ಬಂದು ಜೀರ್ಣವಾಗಿಯೇ ಮುಂದೆ ಸಾಗಬೇಕು. ಯಾವುದೋ ಒಂದು ಡ್ರೈನೇಜ್ ಪೈಪ್‌ನಲ್ಲಿ ಸರಾಗವಾಗಿ ಹರಿದುಹೋದಂತೆ ನಮ್ಮ ದೇಹದಲ್ಲಿ ಅದು ಹರಿದುಹೋಗಲು ಸಾಧ್ಯವಿಲ್ಲ. ಯಾಕೆಂದರೆ ನಮ್ಮ ದೇಹವು ಒಂದು ಜೈವಿಕ ವ್ಯವಸ್ಥೆ. ನಾವು ನೀರು ಕುಡಿದ ಕೂಡಲೇ ತಕ್ಷಣವೇ ಅದು ಸಂಪರ್ಕಕ್ಕೆ ಬರುವುದು ನಮ್ಮ ಉದರದಲ್ಲಿ ಸ್ಥಿತವಾಗಿರುವ ಅಗ್ನಿಯ ಜತೆ. ಹಾಗಾಗಿ, ನಾವು ಅಕ್ರಮವಾಗಿ ನೀರು ಸೇವಿಸಿದರೆ ಅದು ಮೊದಲು ಹಾಳುಮಾಡುವುದು ನಮ್ಮ ಅಗ್ನಿಯನ್ನು. ಕ್ರಮೇಣ ಈ ತೊಂದರೆ ಇಡೀ ದೇಹಕ್ಕೆ ಪಸರಿಸಿ ಬೇರೆ ಬೇರೆ ರೀತಿಯ ವ್ಯಾಧಿಗಳು ಕಾಣಿಸಿಕೊಳ್ಳುತ್ತವೆ. ಸಣ್ಣದಾದ ಅಲರ್ಜಿ ಇರಬಹುದು ಅಥವಾ ಅಜೀರ್ಣ, ಹೊಟ್ಟೆಉಬ್ಬರ, ಅಸಿಡಿಟಿ, ಸಂಧಿ ಊತದಂಥ ಸಮಸ್ಯೆಗಳವರೆಗೂ ತಪ್ಪಾದ ನೀರು ಸೇವನೆಯೇ ಕಾರಣ. ಹಾಗಾಗಿ, ಸರಳವಾಗಿ ಹೇಳಬೇಕೆಂದರೆ- ಬಾಯಾರಿಕೆಯಾದಾಗ ಮಾತ್ರ ನೀರನ್ನು ಸೇವಿಸತಕ್ಕದ್ದು. ಹಾಗೆಯೇ ನಿಮ್ಮ ಬಾಯಾರಿಕೆ ತಣಿಯುವಷ್ಟು ಮಾತ್ರ ಪ್ರಮಾಣವನ್ನು ಸೇವಿಸುವುದು. ಇಲ್ಲವಾದರೆ ನೀರು ಸೇವನೆಯು ನಿಮ್ಮ ಆರೋಗ್ಯಕ್ಕೆ ಬಹಳ ದೊಡ್ಡ ಶತ್ರುವಾಗಬಹುದು.

2. ಅತಿ ಮೈಥುನ: ಮೈಥುನವೆಂಬುದು ಮಾನವನ ಮೂಲಭೂತ ಕಾಮನೆಗಳಲ್ಲಿ ಒಂದು. ಆಯುರ್ವೇದದ ಪ್ರಕಾರ ಇದು ಸ್ವಾಸ್ಥ್ಯವನ್ನು ಕಾಪಾಡುವ ಬಹಳ ಮುಖ್ಯವಾದ ಅಂಶ. ಹಾಗಾಗಿಯೇ ಮೈಥುನದ ಕ್ರಮ/ಅಕ್ರಮಗಳನ್ನು ಬಿಡಿಬಿಡಿಯಾಗಿ ತಿಳಿಸಿ ಹೇಳಲಾಗಿದೆ. ಮೈಥುನ ಮಾಡುವಾಗ ನಾವು ಕೆಲವು ಸರಳ ನಿಯಮಗಳನ್ನು ಪಾಲಿಸಿದರೆ ಅದರಿಂದ ಉಂಟಾಗುವ ಹಲವಾರು ವೈಪರೀತ್ಯಗಳನ್ನು ತಡೆದು ಸ್ವಾಸ್ಥ್ಯವನ್ನು ಸದಾ ಕಾಪಾಡಿಕೊಳ್ಳಬಹುದು. ಆಯುರ್ವೇದದ ಪ್ರಕಾರ ದಿನಚರ್ಯೆಯ ಆಚರಣೆ ಎಷ್ಟು ಸ್ವಾಸ್ಥ್ಯಪ್ರದವೋ, ಅದೇ ರೀತಿ ಸರಿಯಾದ ರಾತ್ರಿಚರ್ಯೆಯು ಬಹಳ ಅವಶ್ಯಕ. ಮೈಥುನವನ್ನು ಸರಿಯಾದ ಕ್ರಮದಲ್ಲಿ ಮಾಡದಿದ್ದರೆ ಅದು ತೊಂದರೆಯನ್ನುಂಟು ಮಾಡುವುದಲ್ಲದೆ ವೇಗ ಬಂದಾಗ ಅದನ್ನು ಧಾರಣೆ ಮಾಡುವುದು ಸಹ ಆರೋಗ್ಯಕ್ಕೆ ಕಂಟಕ. ಸಾಮಾನ್ಯವಾಗಿ ವಸಂತಋತು ಮತ್ತು ನವರಾತ್ರಿಯ ಕಾಲದ ಶರದೃತುವಿನಲ್ಲಿ ಮೂರು ದಿನಕ್ಕೊಮ್ಮೆ ಮೈಥುನವನ್ನು ಮಾಡತಕ್ಕದ್ದು. ಅಂತೆಯೇ, ನಮ್ಮ ಶಾರೀರಿಕ ಬಲವು ಅತ್ಯಂತ ಕಡಿಮೆ ಇರುವ ವರ್ಷಋತು ಮತ್ತು ಗ್ರೀಷ್ಮ ಋತುವಿನಲ್ಲಿ ಕೇವಲ 15 ದಿನಕ್ಕೆ ಒಮ್ಮೆ ಮಾಡಬೇಕು. ಇನ್ನು ಚಳಿಗಾಲದಲ್ಲಿ, ನಮ್ಮ ಶಾರೀರಿಕ ಬಲ ಅತ್ಯಧಿಕವಿದ್ದಾಗ ಇಚ್ಛೆಗೆ ತಕ್ಕಂತೆ ಮೈಥುನ ಕ್ರಿಯೆಯಲ್ಲಿ ತೊಡಗಬಹುದು. ಆದರೆ ಎಂದಿಗೂ ಸಂಧ್ಯಾಕಾಲದಲ್ಲಿ, ಪೂರ್ಣಿಮೆಯ ರಾತ್ರಿ, ಅಮಾವಾಸ್ಯೆಯ ರಾತ್ರಿ, ಮಧ್ಯಾಹ್ನ ಅಥವಾ ಮಧ್ಯರಾತ್ರಿಯಲ್ಲಿ ಮೈಥುನ ನಿಷಿದ್ಧ. ರಾತ್ರಿ ಊಟವಾದ ನಂತರ ಕನಿಷ್ಠಪಕ್ಷ 3 ಗಂಟೆಗಳನ್ನು ಬಿಟ್ಟು ಮೈಥುನದಲ್ಲಿ ತೊಡಗುವುದು ಸೂಕ್ತ. ಆಹಾರವು ಇನ್ನೂ ಜೀರ್ಣವಾಗುತ್ತಿರುವಾಗ ಮೈಥುನ ಮಾಡಿದರೆ ಆರೋಗ್ಯ ಸಮಸ್ಯೆ ತಪ್ಪಿದ್ದಲ್ಲ. ಅಂತೆಯೇ, ಸ್ತ್ರೀಯರ ಮಾಸಿಕ ಋತುಸ್ರಾವದ ಸಮಯದಲ್ಲಿಯೂ ಮೈಥುನ ಮಾಡಬಾರದು. ಮೈಥುನವಾದ ಕೂಡಲೇ ಸ್ನಾನ ಮಾಡಿ ಒಂದು ಲೋಟ ಬೆಚ್ಚಗಿನ ಹಾಲು ಮತ್ತು ಸಕ್ಕರೆಯನ್ನು ಸೇವಿಸಿ ಸ್ವಲ್ಪ ಸಮಯ ತಂಗಾಳಿಯಲ್ಲಿ ಮೈಮನಗಳನ್ನು ಒಡ್ಡಿ ನಂತರ ನಿದ್ರಿಸಿದರೆ ಅದು ಬಹಳ ಪುಷ್ಟಿಕರ. ವ್ಯಾಧಿಗ್ರಸ್ತರಾದಾಗ ಮತ್ತು ಗರ್ಭಧರಿಸಿದಾಗ ಮೈಥುನ ಮಾಡದಿರುವುದೇ ಉತ್ತಮ. ಇಂಥ ಸರಳ ನಿಯಮಗಳನ್ನು ಪಾಲಿಸಿದರೆ ಮೈಥುನವು ನಮ್ಮ ರಿಪುವಾಗದಂತೆ ಕಾಯ್ದಿರಿಸಿಕೊಳ್ಳಬಹುದು.

- **ಹಗಲು ನಿದ್ದೆ:** ಆಯುರ್ವೇದ ಎಂದರೆ 'ಆಯು'ವಿನ ವೇದ, 'ಆಯು'ವಿನ ಜ್ಞಾನ. 'ಆಯು' ಎಂದರೆ ಶರೀರ, ಇಂದ್ರಿಯ, ಸತ್ವ ಮತ್ತು ಚೈತನ್ಯದ ಸಂಯೋಗ. ಈ ನಾಲ್ಕು ಘಟಕಗಳು ಒಟ್ಟುಗೂಡಿದರೆ ಮಾತ್ರ ಜೀವ-ಜೀವನ. ಹಾಗಾಗಿಯೇ ಆಯುರ್ವೇದವು ಹೀಗೆ ತಿಳಿಸುತ್ತದೆ: ದೇಹ-ಇಂದ್ರಿಯ-ಮನಸ್ಸು-ಆತ್ಮಗಳೆಂಬ 4 ಕಂಬಗಳ ಮೇಲೆ ನಮ್ಮ ಬದುಕು ನಿಂತಿದೆ. ಈ ನಾಲ್ಕು ಒಂದೆಡೆ ಇದ್ದಾಗ ಮಾತ್ರ ಬದುಕು. ಇವುಗಳ ಬೇರ್ಪಡುವಿಕೆಯೇ ಮರಣ. ಈ 4 ಸ್ತಂಭಗಳ ಮೇಲೆ ನಿಂತ ಬದುಕಿಗೆ ಮೂರು ಉಪಸ್ತಂಭಗಳಿವೆ. ಅವೆಂದರೆ, ವಿವೇಚಿತ ಆಹಾರ, ಉತ್ತಮ ನಿದ್ರೆ ಮತ್ತು ನಾವು ಮಾಡುವ ಆರೋಗ್ಯಪೂರಕ ಚಟುವಟಿಕೆಗಳು. ನಾವು ಸೇವಿಸುವ ಆಹಾರವು, ಶರೀರ ಮತ್ತು ಇಂದ್ರಿಯಗಳನ್ನು ಪ್ರಧಾನವಾಗಿ ಪೋಷಿಸುತ್ತದೆ. ನಾವು ಸರಿಯಾಗಿ ಮಾಡುವಂಥ ನಿದ್ರೆಯು ಇಂದ್ರಿಯ ಮತ್ತು ಮನಸ್ಸುಗಳನ್ನು ಕಾಪಾಡಿದರೆ ನಾವು ಮಾಡುವಂಥ ಚಟುವಟಿಕೆಗಳು (ಶಾರೀರಿಕ, ವಾಚಿಕ ಹಾಗೂ ಮಾನಸಿಕ) ನಮ್ಮ ಮನಸ್ಸು ಮತ್ತು ಚೈತನ್ಯವನ್ನು ಪ್ರಭಾವಿಸುತ್ತದೆ. ಹಾಗಾಗಿ, ನಮ್ಮ ಮಾನಸಿಕ ಸ್ವಾಸ್ಥ್ಯವನ್ನು ಸುಧಾರಿಸಿಕೊಳ್ಳಬೇಕಾದರೆ ನಾವು ನಮ್ಮ ನಿದ್ರೆಯನ್ನು ಸುಧಾರಿಸಿಕೊಳ್ಳಲೇಬೇಕು. ನಿದ್ರೆಯನ್ನು ಸರಿಯಾಗಿ ಮಾಡಿದ್ದೇ ಆದರೆ ಮನಸ್ಸಿನ ಆರೋಗ್ಯ, ಶಾಂತಿ, ನೆಮ್ಮದಿ, ವಿವೇಚನಾ ಶಕ್ತಿ ಹಾಗೂ ಚಿಂತನೆಗಳು ತಮ್ಮಷ್ಟಕ್ಕೆ ತಾವೇ ಉತ್ತಮವಾಗುತ್ತವೆ. ನಿದ್ರೆಯನ್ನು ಗಮನಿಸಿಕೊಳ್ಳದೆ, ನಾವು ಎಷ್ಟೇ ಯೋಗ-ಧ್ಯಾನ-ಕೌನ್ಸಿಲಿಂಗ್ ಇತ್ಯಾದಿಗಳನ್ನ ಮಾಡಿಕೊಂಡರೂ ಪ್ರಯೋಜನವಾಗುವುದಿಲ್ಲ. ರಾತ್ರಿ ಮಾಡುವ ನಿದ್ರೆಗೂ ಹಗಲು ಮಾಡುವ ನಿದ್ರೆಗೂ ಬಹಳ ವ್ಯತ್ಯಾಸವಿದೆ. ಈ ಎರಡು ರೀತಿಯ ನಿದ್ರೆಗಳು ಒಂದೇ ಅಲ್ಲ. 'ನಾನು ರಾತ್ರಿ ಕೆಲಸ ಮಾಡುತ್ತೇನೆ, ಅದನ್ನು ಸರಿದೂಗಿಸಲು ಹಗಲು ಹೊತ್ತಿನಲ್ಲಿ ಮಲಗುವ ಅಭ್ಯಾಸವನ್ನು ಮಾಡಿಕೊಂಡಿದ್ದೇನೆ' ಅಂದರೆ ಹಗಲು ಮಾಡುವ ನಿದ್ರೆಯಿಂದ ರಾತ್ರಿ ನಿದ್ರೆಯ ಲಾಭಗಳು, ದೇಹ-ಮನಸ್ಸುಗಳಿಗೆ ಸಿಗುವುದಿಲ್ಲ. ಆಯುರ್ವೇದದ ಪ್ರಕಾರ ಹಗಲು ನಿದ್ರೆಯು ಅನಾರೋಗ್ಯಕರ. ಕಾರಣ, ಇದು 3 ದೋಷಗಳನ್ನು ಅಂದರೆ ವಾತ, ಪಿತ್ತ, ಕಫಗಳನ್ನು ಹಾಳುಮಾಡಿ ವಿವಿಧ ರೀತಿಯ ಕಾಯಿಲೆಗಳನ್ನು ಉಂಟುಮಾಡುತ್ತದೆ. ಉದಾಹರಣೆಗೆ- ಉಬ್ಬಸ, ಕೆಮ್ಮು, ತಲೆಭಾರ, ಪದೇಪದೆ ನೆಗಡಿ, ಆಹಾರದಲ್ಲಿ ರುಚಿ ಕಡಿಮೆ ಎನಿಸುವುದು, ಜೀರ್ಣಶಕ್ತಿ ಕುಂದುವುದು, ಅಂಗಗಳ ಮಾಂಸ ದುಷ್ಟಿ, ಮೇದಸ್ಸಿನ ದುಷ್ಟಿ, ಸ್ಥೌಲ್ಯ, ಮಧುಮೇಹ, ಪದೇ ಪದೆ ಜ್ವರ ಬರುವುದು, ಹುಳಿತೇಗು, ಎದೆ ಉರಿ, ಪಿತ್ತ ವಾಂತಿ ಇತ್ಯಾದಿ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಹಗಲು ನಿದ್ರೆಯನ್ನು ವರ್ಜಿಸಿ ರಾತ್ರಿ ನಿದ್ರೆಯನ್ನು ಪಾಲಿಸಿ. ಇದರಿಂದ ಮಾತ್ರ ಆರೋಗ್ಯದ ಲಾಭ ಸಾಧ್ಯ.

- **ರಾತ್ರಿ ನಿದ್ರೆಗೆಡುವುದು:** 'ನಿದ್ರೆ' ಎಂದರೆ ನಮ್ಮ ದೇಹಕ್ಕೆ ಬೇಕಾದಂಥ ದಿನನಿತ್ಯದ ವಿಶ್ರಾಂತಿ. ಮನುಷ್ಯನು ತಾನು ಮಾಡುವ ಕೆಲಸದ ಶ್ರಮದಿಂದಾದ ದಣಿವನ್ನು ನಿವಾರಿಸಿಕೊಳ್ಳಲು, ಎಲ್ಲಾ ಇಂದ್ರಿಯಗಳು ತಮ್ಮ ಕೆಲಸಕಾರ್ಯದಿಂದ ಮುಕ್ತಿ ಹೊಂದಿ ಪಡೆಯುವ ವಿಶ್ರಾಂತ ಸ್ಥಿತಿಯೇ ನಿದ್ರೆ. ಶರೀರ-ಇಂದ್ರಿಯ-ಮನಸ್ಸುಗಳಲ್ಲಿ ಪೂರ್ತಿ ದಿನ ಆದಂಥ ಏರುಪೇರುಗಳನ್ನು ವ್ಯತ್ಯಾಸಗಳನ್ನು ಸರಿಪಡಿಸಿ, ಅವನ್ನು ದುರಸ್ತಿ ಮಾಡಿ ತಾಜಾಗೊಳಿಸಿ ಮುಂದಿನ ದಿನಕ್ಕೆ ತಯಾರು ಮಾಡುವಂಥ ಪ್ರಕ್ರಿಯೆಗೆ ನಿದ್ರೆ ಎಂದು ಹೆಸರು. ಆದರೆ ಈ ಎಲ್ಲಾ ಲಾಭವನ್ನು ಪಡೆದುಕೊಳ್ಳಬೇಕಾದರೆ ಅದು ಕೇವಲ ರಾತ್ರಿ ನಿದ್ರೆಯ ಮೂಲಕವೇ ಸಾಧ್ಯ. ಹಾಗಾಗಿಯೇ ರಾತ್ರಿಯ ನಿದ್ರೆಯನ್ನು ಆಯುರ್ವೇದವು ಭೂತ ಧಾತ್ರಿ ಎಂದು ಕರೆದಿದೆ. ಅಂದರೆ, ಒಬ್ಬ ತಾಯಿಯು ತನ್ನ ಮಗುವನ್ನು ಹೇಗೆ ಪೋಷಿಸಿ, ರಕ್ಷಿಸುತ್ತಾಳೋ ಅದೇ ರೀತಿ ಸಕಲ ಜೀವಿಗಳ ಆರೋಗ್ಯವನ್ನು ರಾತ್ರಿ ಮಾಡುವ ನಿದ್ರೆಯು ಕಾಪಾಡುತ್ತದೆ. ಇಂಥ ರಾತ್ರಿಯ ನಿದ್ರೆಯನ್ನು ನಾವು ಬಿಟ್ಟು ಎಚ್ಚರವಾಗಿರುವ ಅಭ್ಯಾಸವನ್ನು ಮಾಡಿಕೊಂಡಿರುವುದರಿಂದಲೇ ಅನೇಕ ಕಾಯಿಲೆಗಳನ್ನು ಇಂದು ಅನುಭವಿಸಬೇಕಾಗಿದೆ. ರಾತ್ರಿ 10 ಗಂಟೆಯ ಒಳಗೆ ಮಲಗಿ, 5 ಗಂಟೆಯ ಹೊತ್ತಿಗೆ ಏಳುವುದು ಉತ್ತಮ ಅಭ್ಯಾಸ. ಇದರ ಹೊರತಾಗಿ ಮಾಡುವ ಎಲ್ಲ ರೀತಿಯ ನಿದ್ರೆ ಅಥವಾ ಈ ಸಮಯದಲ್ಲಿ ಮಾಡದಿರುವ ನಿದ್ರೆಯು ನಮ್ಮ ಆರೋಗ್ಯದ ಬಹುದೊಡ್ಡ ಶತ್ರು ಎಂಬುದು ನೆನಪಿರಲಿ. ರಾತ್ರಿ ನಿದ್ರೆಗೆಡುವುದರಿಂದ ದೇಹದಲ್ಲಿ ವಾತ ಮತ್ತು ಪಿತ್ತಗಳು ಪ್ರಕೋಪವಾಗಿ ಮುಪ್ಪಿನ ಲಕ್ಷಣಗಳು ಬೇಗ ಆವರಿಸುತ್ತವೆ ಹಾಗೂ ದೇಹ ಕ್ಷೀಣವಾಗಿ ಎಲ್ಲ ರೀತಿಯ ಕೊರತೆಗಳು ಪ್ರಾರಂಭವಾಗುತ್ತವೆ ಎಂಬುದು ಆಯುರ್ವೇದದ ಖಚಿತ ಮಾತು.

- **ಮೂತ್ರ- ಪುರೀಷ ವೇಗಧಾರಣ:** ನಮ್ಮ ಶರೀರವು, ಉತ್ಪಾದನೆ ಆಗುತ್ತಿರುವ ಮಲಗಳನ್ನು ಹೊರಹಾಕಲು ಬೇರೆ ಬೇರೆ ರೀತಿಯ ಕ್ರಿಯೆಗಳನ್ನು ನಡೆಸುತ್ತದೆ. ಈ ಸಹಜವಾದ ವಿವಿಧ ಕ್ರಿಯೆಗಳಿಗೆ ಆಯುರ್ವೇದದಲ್ಲಿ 'ವೇಗ'ಗಳು ಎಂದು ಕರೆಯುತ್ತಾರೆ. ವೇಗ ಎಂಬ ಶಬ್ದದಲ್ಲಿ 'ವ' ಎಂದರೆ ಸ್ರೋತಸ್ಸು ಅಥವಾ ಪದಾರ್ಥ ಹರಿಯುವ ಮಾರ್ಗ ಎಂದರ್ಥ. 'ಗ' ಎಂದರೆ ಗತಿ ಅಥವಾ ಹರಿಯುವಿಕೆ. ದೇಹದಲ್ಲಿನ ವಿವಿಧ ಮಾರ್ಗಗಳಲ್ಲಿ ಪದಾರ್ಥಗಳು ಹರಿಯಲು ತೊಡಗಿದಾಗ ಉಂಟಾಗುವ ಜ್ಞಾನವೇ ವೇಗ. ಇದನ್ನು 'urge' ಎಂದು ಕರೆಯಬಹುದು. ಇವು ದೇಹದ ಜೈವಿಕ ಗಡಿಯಾರದ ಕರೆಗಂಟೆಗಳು. ಈ ವೇಗಗಳನ್ನು ತಡೆಯುವುದು ಅಥವಾ ಬಲವಂತವಾಗಿ ಉತ್ತೇಜಿಸುವುದು ರೋಗಕ್ಕೆ ಕಾರಣವಾಗುತ್ತದೆ. ಇವುಗಳನ್ನು ಸರಿಯಾಗಿ ಗಮನಿಸಿ, ಸಹಜವಾಗಿ ಅವುಗಳ ಪ್ರವೃತ್ತಿಯನ್ನು ಅನುಸರಿಸುವುದು ಸ್ವಾಸ್ಥ್ಯ ಸಾಧನೆಯ ಮೊದಲ ಹೆಜ್ಜೆ. ಆಯುರ್ವೇದದ ಪ್ರಕಾರ ದೇಹ ನೀಡುವ ಈ ಕರೆಗಳನ್ನು ಸ್ವೀಕರಿಸದೆ, ಸಹಜ ಸೂಚನೆಗಳನ್ನು ತಿರಸ್ಕರಿಸಿ, ಕಾರಣಾಂತರಗಳಿಂದ ಈ ಸಹಜ ಕಾರ್ಯವನ್ನು ಬಲಾತ್ಕಾರವಾಗಿ ತಡೆಯುವುದನ್ನು ವೇಗಧಾರಣೆ ಎಂದು ಕರೆದಿದ್ದಾರೆ. ಅದೇ ರೀತಿ ಸೂಚನೆ ಇಲ್ಲದಿದ್ದಾಗಲೂ ಪ್ರಚೋದಿಸುವ ಪ್ರಯತ್ನಗಳನ್ನು ವೇಗ ಉದೀರಣ ಎಂದು ಹೇಳಿದ್ದಾರೆ. ವೇಗ ಧಾರಣೆ ಮತ್ತು ವೇಗ ಉದೀರಣೆ- ಎರಡೂ ದೇಹದಲ್ಲಿ ರೋಗ ಪ್ರಾರಂಭ ಮಾಡುವ ಬಹಳ ಬಲಿಷ್ಠವಾದ ಕಾರಣಗಳು.

- **ಪುರೀಷ ವೇಗ:** ಹೀಗೆಂದರೆ ಎಂದರೆ ಮಲ ವಿಸರ್ಜನೆ. ತಿಂದ ಆಹಾರದ ಮಲ ಭಾಗವನ್ನು ದೇಹದಿಂದ ಹೊರ ಹಾಕುವ ಪ್ರಯತ್ನವೇ ಪುರೀಷ ವೇಗ. ಇದನ್ನು ತಡೆಯುವುದರಿಂದ ಶರೀರದ ಕ್ರಿಯಾತ್ಮಕ ವಿಕೃತಿ ಅಲ್ಲದೆ ರಚನಾತ್ಮಕ ಶಾರೀರಿಕ ವಿಕೃತಿಗೂ ಕಾರಣವಾಗುತ್ತದೆ. ಮಲ ವೇಗವನ್ನು ತಡೆಯುವುದರಿಂದ ಕ್ರಮೇಣ ಪೈಲ್ಸ್, ಫಿಸ್ಟುಲಾ, ತಲೆನೋವು, ಮೈಗ್ರೇನ್, ಕಣ್ಣಿನ ತೊಂದರೆ, ಕಾಲಿನ ಭಾಗದ ಮೀನಖಂಡಗಳ ತೀವ್ರ ವೇದನೆ, ಹೊಟ್ಟೆ ಉಬ್ಬರ ಇತ್ಯಾದಿಗಳು ಕಾಣಿಸಿಕೊಳ್ಳುತ್ತದೆ.

- **ಮೂತ್ರ ವೇಗ:** ಬಹುಕಾಲ ಅಥವಾ ಪದೇ ಪದೆ ಮೂತ್ರವನ್ನು ತಡೆದರೆ ಚಿಕಿತ್ಸೆಗೆ ಅಸಾಧ್ಯವಾದ ಅನೇಕ ರೋಗಗಳು ಉಂಟಾಗುವುದರಲ್ಲಿ ಸಂಶಯವಿಲ್ಲ. ಮೂತ್ರಕೋಶ, ಶಿಶ್ನ, ಅಂಡಕೋಶ ಮತ್ತು ಸೊಂಟಗಳಲ್ಲಿ ಅತಿಯಾದ ನೋವು, ನಡಿಗೆಯಲ್ಲಿ ತೊಂದರೆ, ಮೂತ್ರ ಮಾಡುವಾಗ ಅಡೆತಡೆ ಉಂಟಾಗುವುದು, ಹೊಟ್ಟೆ ನೋವು, ಮೂತ್ರದಲ್ಲಿ ಕಲ್ಲು, ತಲೆನೋವು. ವೃಕ್ಕಗಳ ಕಾರ್ಯ ಹಾನಿ, ಗ್ರಂಥಿಗಳ ಶೋಥ ಇದರಿಂದ ಕಾಣಿಸಿಕೊಳ್ಳುತ್ತದೆ. ಒಟ್ಟಾರೆ, ಪುರೀಷ ವೇಗದ ತಡೆಯಿಂದ ಉಂಟಾಗುವ ತೊಂದರೆಗಳಿಗಿಂತ ಮೂತ್ರ ವೇಗದ ತಡೆಯಿಂದ ಉಂಟಾಗುವ ತೊಂದರೆಗಳು ಪ್ರಬಲವಾದವುಗಳು.

ಹಸನಾದ ಬೆಳೆಯನ್ನು ನೋಡಿ ಅದರ ಹಿನ್ನೆಲೆಯನ್ನು ಊಹಿಸುವ ರೀತಿಯೇ, ಸರಿಯಾಗಿ ನಡೆಯುತ್ತಿರುವ ವೇಗಗಳಿಂದ ಸ್ವಾಸ್ಥ್ಯವನ್ನು ತಿಳಿಯಬಹುದು. ಹಾಗಾಗಿ, ಸ್ನೇಹಿತರೆ ನಿಮ್ಮ ವೇಗಗಳ ಅರಿವು ಸದಾ ನಿಮಗಿರಲಿ. ಈ ವೇಗಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆದರೂ ಅದನ್ನು ತಕ್ಷಣವೇ ಗುರುತಿಸಿ ಸೂಕ್ತವಾದ ಚಿಕಿತ್ಸೆಯನ್ನು ತೆಗೆದುಕೊಂಡರೆ ಅದರಿಂದ ಬೃಹತ್ತಾಗಿ ಬೆಳೆಯುವ ಅನೇಕ ರೋಗಗಳನ್ನ ನೀವು ತಡೆದು ಸದಾ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬಹುದು. ಆಗಬೇಕಾದರೆ ಸ್ವಾಸ್ಥ್ಯರಕ್ಷಣೆ, ಮಾಡಬೇಡಿ ವೇಗಧಾರಣೆ! ಹಾಗಾಗಿ ಒಳಗಿನ ಅರಿಷಡ್ವರ್ಗವನ್ನು ಜಯಿಸುವುದು, ಹಾಗೆಯೇ ಹೊರಗಿನ ಈ 6 ಕಾರಣಗಳನ್ನು ನಮ್ಮ ಜೀವನದಿಂದ ಹೊರಗಿಡುವುದರಿಂದ ಮಾತ್ರ ಸ್ವಾಸ್ಥ್ಯದ ಸಂಪೂರ್ಣ ಅನುಭವ ಸಾಧ್ಯ!

ರಾಮಕೃಷ್ಣ ಹೆಗಡೆ ಮತ್ತು ನನ್ನ ಅನುಬಂಧ ಪೂರ್ವಜನ್ಮದ ಬಂಧ!

ಪ್ರತಿಭಾ ಪ್ರಹ್ಲಾದ್ ಅವರು ಅಂತಾರಾಷ್ಟ್ರೀಯ ಖ್ಯಾತಿಯ, ಕರ್ನಾಟಕದ ಹೆಮ್ಮೆಯ ಭರತನಾಟ್ಯ ಕಲಾವಿದೆ. ದೆಹಲಿಯ ಇಂಟರ್‌ನ್ಯಾಷನಲ್ ಆರ್ಟ್ ಫೆಸ್ಟಿವಲ್ ಆರಂಭಿಸಿದ ಶ್ರೇಯಸ್ಸು ಇವರದು. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಸದಸ್ಯರಾಗಿ ವಿಭಿನ್ನವಾಗಿ ಕಾರ್ಯ ನಿರ್ವಹಿಸಿದವರು. ಮಾಜಿ ಮುಖ್ಯಮಂತ್ರಿ ದಿ. ರಾಮಕೃಷ್ಣ ಹೆಗಡೆ ಅವರ ಸಂಗಾತಿಯಾಗಿದ್ದ ಪ್ರತಿಭಾ ಪ್ರಹ್ಲಾದ್ ಅವರು ಹೆಗಡೆ ಜತೆಗಿನ 14 ವರ್ಷಗಳ ಸಾಂಗತ್ಯದ ಬಗ್ಗೆ 'ವಿಶ್ವವಾಣಿ' ಜತೆ ಮುಕ್ತವಾಗಿ ಮಾತನಾಡಿದ್ದಾರೆ. ಸಂದರ್ಶನದ ಸಾರ ಇಲ್ಲಿದೆ.

ವಿಶ್ವವಾಣಿ ಸಂದರ್ಶನ

ವೈದೇಹಿ ಬಾಟಿ

ಭಾಗ 1

ಖ್ಯಾತ ನೃತ್ಯಗಾರ್ತಿ ಪ್ರತಿಭಾ ಪ್ರಹ್ಲಾದ್
Super Exclusive Interview
Vishwavani TV Special ಯುಟ್ಯೂಬ್ ಚಾನೆಲ್ ನೋಡಿ...

- **ನೀವು ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರ ಸಂಗಾತಿಯಾಗಿದ್ದವರು. ನಿಮ್ಮ ಮತ್ತು ಅವರ ಮೊದಲ ಭೇಟಿ ಹೇಗಾಯಿತು? ಯಾವಾಗ ಆಯಿತು?**

– ನನಗೆ 26ರ ವಯಸ್ಸಿನಲ್ಲೇ ಭರತನಾಟ್ಯಕ್ಕೆ 'ಎ+' ಗ್ರೇಡ್ ಬಂದಿತ್ತು. 'ಎ+' ಗ್ರೇಡ್ ಬಂದ ಕಲಾವಿದರಿಗೆ ನ್ಯಾಷನಲ್ ಪ್ರೋಗ್ರಾಮ್ ಆಫ್ ಡ್ಯಾನ್ಸ್‌ನಲ್ಲಿ ಪ್ರದರ್ಶನ ನೀಡಲು ಅವಕಾಶ ಸಿಗುತ್ತಿತ್ತು. ಕಾರ್ಯಕ್ರಮವನ್ನು ದೆಹಲಿಯಲ್ಲಿ ಆಯೋಜಿಸುತ್ತಿದ್ದರು. ನಾನು ಮೊದಲ ಬಾರಿಗೆ ಅಲ್ಲಿ ಪ್ರದರ್ಶನ ನೀಡಿದ್ದೆ. ಸಾವಿರಾರು ಜನ ಸೇರಿದ್ದರು. ಆಗ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರು ಕಾರ್ಯನಿಮಿತ್ತ ದೆಹಲಿಗೆ ಬಂದಿದ್ದರು. ಆಕಸ್ಮಿಕವಾಗಿ ನನ್ನ ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. 'ಜಗದೋದ್ಧಾರನ..' ಹಾಡಿಗೆ ನಾನು ನಾಟ್ಯವಾಡಿದ್ದೆ. ಅದನ್ನು ಅವರು ತುಂಬಾ ಇಷ್ಟಪಟ್ಟಿದ್ದರು. ಅಷ್ಟೇ ಅಲ್ಲದೆ ನನ್ನನ್ನು ನೇರ ಕಂಡು ಶುಭ ಹಾರೈಸಿದ್ದರು. ಅಲ್ಲಿಂದ ಬೆಂಗಳೂರಿಗೆ ಹೊರಟವರೇ ತಮ್ಮ ಕಚೇರಿ ಸಿಬ್ಬಂದಿಗೆ ಹೇಳಿ ನನ್ನ ವಿವರ ತರಿಸಿಕೊಂಡರು. ನಮ್ಮ ಮನೆಯ ಲ್ಯಾಂಡ್‌ಲೈನ್‌ಗೆ ಕರೆ ಮಾಡಿದರು. ನನ್ನ ಅಮ್ಮ ಕರೆ ಸ್ವೀಕರಿಸಿದಾಗ ''ನಾನು ರಾಮಕೃಷ್ಣ ಹೆಗಡೆ. ಪ್ರತಿಭಾ ಅವರಿಗೆ ಫೋನ್ ಕೊಡಿ'' ಎಂದರು. ನನ್ನ ಅಮ್ಮ ಮತ್ತು ತಮ್ಮ ಇದೊಂದು ಹುಸಿಕರೆ ಇರಬೇಕು ಎಂದು ತಮಾಷೆ ಮಾಡಿದರು. ನಾನು ಮಾತನಾಡಿದೆ. ನಿಜಕ್ಕೂ ಕರೆ ಮಾಡಿದ್ದು ಹೆಗಡೆ ಅವರೇ ಎಂದು ತಿಳಿಯಿತು. ಅವರು ಮತ್ತೊಮ್ಮೆ ಶುಭಾಶಯ ತಿಳಿಸಿ ನನ್ನ ಕಲೆಗೆ ಮೆಚ್ಚುಗೆ ಸೂಚಿಸಿದರು. ಮೊದಲ ಬಾರಿಗೆ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಪ್ರದರ್ಶನ ನೀಡಲು ಅವಕಾಶ ಕೊಡಿಸಿದರು. ಅಲ್ಲಿಗೆ ಅವರೂ ಬಂದಿದ್ದರು. ನಮ್ಮ ಬಾಂಧವ್ಯ ಬೆಳೆಯುತ್ತಾ ಹೋಯಿತು. ಇದಾದ ಬಳಿಕ ಅವರ ನಿವಾಸಕ್ಕೆ ಸಾಕಷ್ಟು ಬಾರಿ ಔತಣಕೂಟಕ್ಕೆ ಆಹ್ವಾನಿಸಿದರು. ಆಗೆಲ್ಲ ಅವರ ಮನೆಗೆ ಗಿರೀಶ್ ಕಾರ್ನಾಡ್, ಎಂ.ಎಸ್.ಸತ್ಯು, ಅನಂತ ನಾಗ್, ಶಂಕರ್ ನಾಗ್, ಅರುಂಧತಿ ನಾಗ್, ಕ್ರಿಕೆಟಿಗ ಜಿ.ಆರ್.ವಿಶ್ವನಾಥ್ ಹೀಗೆ ತುಂಬಾ ಜನರು ಬರುತ್ತಿದ್ದರು. ನನ್ನನ್ನು ನನ್ನ ತಂದೆಯೇ ಅವರ ಮನೆಗೆ ಡ್ರಾಪ್ ಮಾಡುತ್ತಿದ್ದರು. ಒಂದು ಗಂಟೆಯಾಗುವುದೇ ತಡ ಕರೆದುಕೊಂಡು ಹೋಗಲು ಬಂದುಬಿಡುತ್ತಿದ್ದರು. ಆದರೂ ಬೇರೆ ಬೇರೆ ಸಂದರ್ಭಗಳಲ್ಲಿ ಇಬ್ಬರೂ ಭೇಟಿಯಾಗುತ್ತಿದ್ದೆವು.

- **ನಿಮ್ಮಿಬ್ಬರಿಗೂ 36 ವರ್ಷಗಳ ವಯಸ್ಸಿನ ಅಂತರವಿತ್ತು. ಆ ಕಾಲಕ್ಕೆ ರಾಮಕೃಷ್ಣ ಹೆಗಡೆ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ನೀವೂ ನಿಮ್ಮ ಕಲಾಕ್ಷೇತ್ರದಲ್ಲಿ ಸಕ್ರಿಯರಾಗಿದ್ದಿರಿ. ಕಾರ್ಯದ ಒತ್ತಡಗಳ ಮಧ್ಯೆಯೂ ನಿಮ್ಮ ಭೇಟಿ ಹೇಗೆ ಸಾಧ್ಯವಾಗುತ್ತಿತ್ತು? ನಿಮ್ಮಿಬ್ಬರ ನಡುವೆ ಸಂಬಂಧ ಬೆಳೆದದ್ದು ಹೇಗೆ?**

– ಎಲ್ಲವೂ ಋಣಾನುಬಂಧ. ಹೋದ ಜನ್ಮದಲ್ಲೇ ನಿಶ್ಚಯವಾಗಿತ್ತು ಎಂದು ಕಾಣುತ್ತದೆ. ಹಾಗಾಗಿಯೇ ಅಷ್ಟು ವಯಸ್ಸಿನ ಅಂತರವಿದ್ದರೂ ನಮ್ಮ ನಡುವೆ ಸಂಬಂಧ ಬೆಳೆಯಿತು. ನನ್ನ ಮತ್ತು ಅವರ ನಡುವೆ ಕೊನೆಯವರೆಗೂ ಮನಸ್ತಾಪಗಳಾಗಲಿಲ್ಲ. ಇನ್ನು ನೀವು ಹೇಳಿದಂತೆ ಇಬ್ಬರಿಗೂ ಕಾರ್ಯದ ಒತ್ತಡಗಳಿದ್ದವು. ಅವರು ತಮ್ಮ ರಾಜಕೀಯ ಜೀವನದಲ್ಲಿ ಬ್ಯುಸಿ ಇರುತ್ತಿದ್ದರು. ನಾನು ತಿಂಗಳಲ್ಲಿ ಹತ್ತಾರು ರಾಜ್ಯಗಳಿಗೆ ಪ್ರದರ್ಶನ ನೀಡಲು ಹೋಗಬೇಕಿತ್ತು. ಆದರೆ ನಮ್ಮ ನಡುವೆ ಒಂದು ಒಪ್ಪಂದವಾಗಿತ್ತು. ಅವರ ಹುಟ್ಟುಹಬ್ಬ, ನನ್ನ ಹುಟ್ಟುಹಬ್ಬ ಮತ್ತು ಹೊಸವರ್ಷದ ದಿನ ಇಬ್ಬರೂ ಭೇಟಿಯಾಗಬೇಕೆನ್ನುವುದೇ ಆ ಒಪ್ಪಂದ. ನಾವು ಒಳ್ಳೆಯ ಕ್ಷಣಗಳನ್ನು ಕಳೆಯುತ್ತಿದ್ದೆವು. ಬೇರೆ ಬೇರೆ ಸಂದರ್ಭಗಳಲ್ಲೂ ಭೇಟಿಯಾಗುತ್ತಿದ್ದೆವು. ಬೆಂಗಳೂರು ಮತ್ತು ಮದ್ರಾಸ್‌ನಲ್ಲಿ ನನ್ನ ಪ್ರದರ್ಶನವಿದ್ದರೆ ಅಲ್ಲಿಗೆ ಹೆಗಡೆ ಅವರು ಬರುತ್ತಿದ್ದರು.

- **ನಿಮಗೆ ಹೆಗಡೆ ಅವರು ಅಷ್ಟು ಇಷ್ಟವಾಗಲು ಕಾರಣವೇನು? ಅವರ ಯಾವ ಸ್ವಭಾವ ನಿಮಗೆ ಹಿಡಿಸಿತು?**

– ಅವರ ಸಂಪೂರ್ಣ ವ್ಯಕ್ತಿತ್ವವೇ ನನಗೆ ಇಷ್ಟವಾಗಿತ್ತು. ಅವರು ಯಾರ ಬಗ್ಗೆಯೂ ಕೆಟ್ಟದ್ದು ಮಾತನಾಡುತ್ತಿರಲಿಲ್ಲ. ಕೆಟ್ಟ ಆಲೋಚನೆಯನ್ನೂ ಮಾಡುತ್ತಿರಲಿಲ್ಲ. ಅದೆಂಥ ಕಠಿಣ ಸಂದರ್ಭದಲ್ಲೂ ಯಾರಿಗೂ ಕೇಡು ಬಯಸಲಿಲ್ಲ. ದ್ರೋಹ ಬಗೆಯಲಿಲ್ಲ. ಅವರಿಗೆ ವಂಚನೆ ಗೊತ್ತಿರಲಿಲ್ಲ. ತಮ್ಮ ಸುತ್ತಮುತ್ತಲಿನ ಜನರನ್ನು ಅತ್ಯಂತ ಪ್ರೀತಿ ಮತ್ತು ಗೌರವದಿಂದ ಕಾಣುತ್ತಿದ್ದರು. ದೇವೇಗೌಡರಿಗೂ ಅವರು ಕೇಡು ಬಯಸಲಿಲ್ಲ. ಬಹುಮುಖ್ಯವಾಗಿ ಅವರಿಗೆ ಮಹಿಳೆಯರ ಮೇಲೆ ವಿಶೇಷವಾದ ಗೌರವವಿತ್ತು. ಸಂಬಂಧಗಳಿಗೆ ಬೆಲೆ ಕೊಡುತ್ತಿದ್ದರು. ಅವರು ಜಂಟ್ಲ್‌ಮನ್ ಅಲ್ಲ, ಸೂಪರ್ ಜಂಟ್ಲ್‌ಮನ್. ಆ ಕಾಲಕ್ಕೆ ನಮ್ಮಿಬ್ಬರ ಸಂಬಂಧದ ಬಗ್ಗೆ ಪತ್ರಿಕೆಗಳು ಇಲ್ಲಸಲ್ಲದ್ದು ಬರೆದವು. ನೂರಾರು ಜನರು ಬಾಯಿಗೆ ಬಂದಹಾಗೆ ಮಾತನಾಡಿದರು. ಆದರೆ ಅವರು ನನ್ನನ್ನು ಕುಗ್ಗಲು ಬಿಡಲಿಲ್ಲ. ಕೊನೆಯವರೆಗೂ ನನ್ನನ್ನು ನೋಯಿಸಲಿಲ್ಲ. ನನ್ನ ಯಾವ ಕೆಲಸಗಳಿಗೂ ಅಡ್ಡಿ ಬಂದವರಲ್ಲ, ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು.

- **ರಾಮಕೃಷ್ಣ ಹೆಗಡೆ ಅವರೊಂದಿಗೆ ನೀವು ಕಳೆದ ಅಮೂಲ್ಯ ಮತ್ತು ಜೀವನದಲ್ಲಿ ಎಂದೂ ಮರೆಯಲಾಗದ ಕ್ಷಣವಿದ್ದರೆ ಅದು ಯಾವುದು?**

– ಅವರೊಂದಿಗೆ ಕಳೆದ 14 ವರ್ಷಗಳು ಕೂಡ ನನ್ನ ಜೀವನದ ಅಮೂಲ್ಯ ಕ್ಷಣಗಳು. ಅವರು ನನ್ನನ್ನು ಅತೀವವಾಗಿ ಪ್ರೀತಿಸುತ್ತಿದ್ದರು. ನನ್ನ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಿದ್ದರು. ನನ್ನ ಪ್ರಯತ್ನಗಳಿಗೆ ಜತೆಯಾಗುತ್ತಿದ್ದರು. ಜತೆಗಿರುವವರನ್ನು ಚೆನ್ನಾಗಿ ನೋಡಿಕೊಳ್ಳುವ ಗುಣ ಅವರಿಗೆ ಒಗ್ಗಿತ್ತು. ಅವರೊಂದಿಗೆ ಇದ್ದ ಅಷ್ಟೂ ಕ್ಷಣಗಳನ್ನು ನಾನು ಜೀವನದಲ್ಲಿ ಮರೆಯಲಾರೆ. ಮುಖ್ಯವಾಗಿ ನಾನು ಅವರ ಅಧಿಕಾರ ಮತ್ತು ಹಣಕ್ಕೆ ಆಸೆಪಟ್ಟವಳಲ್ಲ. ನನಗೆ ಅದು ಬೇಕಾಗಿಯೂ ಇರಲಿಲ್ಲ. ಸ್ವತಂತ್ರವಾಗಿ ಬದುಕುತ್ತಿದ್ದೆ. ನನಗೆ ಹೆಗಡೆ ಅವರ ಪ್ರೀತಿಯಷ್ಟೇ ಸಾಕಿತ್ತು. ನನ್ನ ಸ್ವಭಾವ ಅವರಿಗೆ ಹಿಡಿಸಿತ್ತು. ಹಾಗಾಗಿ ನನ್ನನ್ನು ಹೆಚ್ಚು ಗೌರವಿಸುತ್ತಿದ್ದರು.

- **ಚಿರಂತನ್ ಮತ್ತು ಚಿರಾಯು ನಿಮ್ಮ ಅವಳಿ ಮಕ್ಕಳು. ಅವರ ಜತೆಗೆ ರಾಮಕೃಷ್ಣ ಹೆಗಡೆ ಅವರ ಒಡನಾಟ ಹೇಗಿತ್ತು? ಅವರೊಂದಿಗೆ ಹೇಗೆ ಸಮಯ ಕಳೆಯುತ್ತಿದ್ದರು?**

– ಹೆಗಡೆ ಅವರಿಗೆ ಚಿರಂತನ್ ಮತ್ತು ಚಿರಾಯು ಕಂಡರೆ ಸಿಕ್ಕಾಪಟ್ಟೆ ಪ್ರೀತಿಯಿತ್ತು. ಸಾಕಷ್ಟು ಸಮಯವನ್ನು ಮಕ್ಕಳೊಂದಿಗೆ ಕಳೆದಿದ್ದಾರೆ. ನಾನು ಮೂರು ತಿಂಗಳು ಬಾಣಂತಿ ಇದ್ದಾಗಲೇ ಭರತನಾಟ್ಯ ಪ್ರದರ್ಶನ ನೀಡಲು ಪ್ರಯಾಣ ಮಾಡುತ್ತಿದ್ದೆ. ಅದರ ಬಗ್ಗೆ ಅವರಿಗೆ ಅಸಮಾಧಾನವಿತ್ತು. ಆದರೆ ಎಂದೂ ಬೈದವರಲ್ಲ, ಆಗೆಲ್ಲಾ ಮಕ್ಕಳಿಗೆ ಸ್ನಾನ ಮಾಡಿಸಿ, ಬಟ್ಟೆ ಹಾಕಿ ಅವರೇ ಊಟ ಮಾಡಿಸುತ್ತಿದ್ದರು. ಅವರಿಗೆ ಖುಷಿಯಿತ್ತು. ಮಕ್ಕಳನ್ನು ನೋಡಿದಾಗಲೆಲ್ಲ ಭಾವುಕರಾಗುತ್ತಿದ್ದರು. ಕೊನೆಕೊನೆಯಲ್ಲಿ ಅವರ ಆರೋಗ್ಯ ತೀವ್ರ ಹದಗೆಟ್ಟಾಗ ಚಿರಂತನ್-ಚಿರಾಯುವಿಗೆ ಪತ್ರ ಬರೆದಿದ್ದರು. ''ನಿಮ್ಮ ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳಿ. ಅವಳು ನಿಮ್ಮನ್ನು ಸಾಕಲು ತುಂಬಾ ಕಷ್ಟಪಡುತ್ತಿದ್ದಾಳೆ. ನಿಮ್ಮ ಬೆಳವಣಿಗೆಯನ್ನು ಎಲ್ಲೋ ನಿಂತು ನೋಡುತ್ತೇನೆ'' ಎಂದು ಬರೆದಿದ್ದರು. ಆ ಪತ್ರ ಓದಿ ನನಗೆ ಅಳು ಬಂದಿತ್ತು. ಅವರು ಅಷ್ಟುಬೇಗ ನಮ್ಮನ್ನು ಬಿಟ್ಟು ಹೋಗುತ್ತಾರೆ ಎಂದುಕೊಂಡಿರಲಿಲ್ಲ. ಅವರಿಲ್ಲ ಎಂಬುದನ್ನು ಒಪ್ಪಿಕೊಳ್ಳಲು ಈಗಲೂ ಆಗುತ್ತಿಲ್ಲ. ಇರುವಷ್ಟು ದಿನವೂ ಮಕ್ಕಳೊಂದಿಗೆ ಒಳ್ಳೆಯ ಕ್ಷಣಗಳನ್ನು ಕಳೆದಿದ್ದಾರೆ.

- **ರಾಮಕೃಷ್ಣ ಹೆಗಡೆ ಅವರನ್ನು ಅಧಿಕೃತವಾಗಿ ಮದುವೆಯಾಗಬೇಕಿತ್ತು ಎಂದು ನಿಮಗೆ ಅನಿಸಲೇ ಇಲ್ಲವೇ? ಆ ನಿರ್ಧಾರವನ್ನು ಯಾಕೆ ನೀವು ತೆಗೆದುಕೊಳ್ಳಲಿಲ್ಲ?**

– ರಾಮಕೃಷ್ಣ ಹೆಗಡೆ ಅವರಿಗೆ ಈ ಮೊದಲೇ ಮದುವೆಯಾಗಿತ್ತು. ಶಕುಂತಲಾ ಅವರೊಂದಿಗೆ ಸುದೀರ್ಘ ದಾಂಪತ್ಯ ಜೀವನವನ್ನು ನಡೆಸಿದ್ದರು. ಹೆಗಡೆ ಅವರಿಗೆ ಡಿವೋರ್ಸ್ ಕೊಡುವುದು ಸಾಧ್ಯವಿರಲಿಲ್ಲ. ಹಾಗೆ ನೋಡಿದರೆ ನನಗೆ ಅಧಿಕೃತವಾಗಿ ಮದುವೆಯಾಗಲು ಇಷ್ಟವಿರಲಿಲ್ಲ. ಯಾಕೆಂದರೆ ಹಿಂದೂ ವಿವಾಹ ಕಾಯ್ದೆ ಪ್ರಕಾರ ಗಂಡಸು ಒಬ್ಬ ಮಹಿಳೆಯನ್ನು ಮಾತ್ರ ವಿವಾಹವಾಗಬೇಕು. ನಾನು ಮದುವೆಯಾದರೂ ಎರಡನೇ ಹೆಂಡತಿ ಅನ್ನಿಸಿಕೊಳ್ಳುತ್ತೇನೆ. ಕಾನೂನಾತ್ಮಕವಾಗಿಯೂ ಅಷ್ಟು ಹಕ್ಕುಗಳಿರುವುದಿಲ್ಲ. ನಾವು ಮದುವೆಯಾಗದಿದ್ದರೂ ಚೆನ್ನಾಗಿದ್ದೆವು. ಪರಸ್ಪರ ಪ್ರೀತಿ ಮತ್ತು ನಂಬಿಕೆಯಿತ್ತು. ಸಂಬಂಧ ಗಟ್ಟಿಯಾಗಿತ್ತು. ಇಷ್ಟೆಲ್ಲಾ ಇದ್ದಮೇಲೆ ಮದುವೆ ಯಾಕೆ? ಇಷ್ಟಕ್ಕೂ ಮದುವೆ ಎನ್ನುವುದು ಒಂದು ಕರಾರು, ಜವಾಬ್ದಾರಿ ಅಷ್ಟೇ. ಅಧಿಕೃತವಾಗಿ ಮದುವೆ ಆಗುವುದು ಅಂದರೆ ಅದೊಂದು ಲಿಖಿತ ಕಾಗದದ ಚೂರು ಅಷ್ಟೇ. ನನ್ನ ಮತ್ತು ರಾಮಕೃಷ್ಣ ಹೆಗಡೆಯವರ ಸಂಬಂಧ ಇದನ್ನೆಲ್ಲ ಮೀರಿದ್ದು.

- **ನಿಮ್ಮ ಮತ್ತು ರಾಮಕೃಷ್ಣ ಹೆಗಡೆ ಅವರ ಸಂಬಂಧವನ್ನು ಹೆಗಡೆ ಅವರ ವಿರೋಧಿ ಬಣದವರು ರಾಜಕೀಯ ಅಸ್ತ್ರವಾಗಿಸಿಕೊಂಡಿದ್ದರು. ನಿಮ್ಮಿಬ್ಬರ ಬಗ್ಗೆ ಸಾಕಷ್ಟು ಸುದ್ದಿಗಳು ಹರಿದಾಡುತ್ತಿದ್ದವು. ಆಗೆಲ್ಲಾ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುತಿದ್ದಿರಿ?**

– ನನಗೆ ನಗು ಬರುತ್ತಿತ್ತು. ನನಗೆ ಮಾಡಲು ಸಾಕಷ್ಟು ಕೆಲಸಗಳಿದ್ದವು. ಅದರ ಬಗ್ಗೆ ತಲೆಕೆಡಿಸಿಕೊಳ್ಳಲೂ ಆಗುತ್ತಿರಲಿಲ್ಲ. ಅವರಿಗೆಲ್ಲಾ ನಮ್ಮ ಬಗ್ಗೆ ಮಾತನಾಡಲು ಎಷ್ಟೆಲ್ಲಾ ಸಮಯವಿದೆ ಎಂದುಕೊಳ್ಳುತ್ತಿದ್ದೆ. ಮಾಡಲು ಏನೂ ಕೆಲಸವಿಲ್ಲದವರು ಮಾತ್ರ ನಮ್ಮ ಬಗ್ಗೆ ಮಾತನಾಡುತ್ತಾರೆ. ಅಂಥವರ ಬಗ್ಗೆ ಗಮನ ಕೊಡಬಾರದು. ಮಾತನಾಡುವವರು ಬೇಕಾದದ್ದು ಮಾತನಾಡಲಿ ಎಂದು ಸುಮ್ಮನಾಗುತ್ತಿದ್ದೆ. ರಾಮಕೃಷ್ಣ ಹೆಗಡೆ ಅವರು ಕೂಡ ಅಷ್ಟಾಗಿ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ನಮ್ಮ ಸಂಬಂಧಕ್ಕೆ ನಾವಿಬ್ಬರೇ ಜವಾಬ್ದಾರರು ಅಲ್ಲವಾ? ಸಾರ್ವಜನಿಕ ವ್ಯಕ್ತಿಗಳಾಗಿ ನಾವಿಬ್ಬರೂ ಇದಕ್ಕೆ ದುಬಾರಿ ಬೆಲೆ ತೆತ್ತಿದ್ದೇವೆ. ಬೇರೆಯವರಿಗೆ ಏನು ಹಕ್ಕಿದೆ ನಮ್ಮ ಸಂಬಂಧವನ್ನ ಪ್ರಶ್ನಿಸೋಕೆ?

- **ರಾಮಕೃಷ್ಣ ಹೆಗಡೆ ಅವರು ಈ ರಾಜ್ಯ ಕಂಡ ಅತ್ಯಂತ ಜನಪ್ರಿಯ ಮುಖ್ಯಮಂತ್ರಿ. ಅವರ ರಾಜಕೀಯ ಏಳುಬೀಳುಗಳನ್ನ ನೀವು ಹೇಗೆ ವ್ಯಾಖ್ಯಾನಿಸುತ್ತೀರಿ?**

– ಈ ಬಗ್ಗೆ ನಾನು ವಿವರವಾಗಿ ಪುಸ್ತಕ ಬರೆಯುತ್ತಿದ್ದೇನೆ. ಹೆಗಡೆಯವರ ಹಿಂದೆ ಮುಂದೆ ಏನೇನು ಕತೆಗಳು ನಡೀತಾ ಇತ್ತು ಎಂಬ ಬಗ್ಗೆ ವಿವರವಾಗಿ ಬರೆಯಲಿದ್ದೇನೆ. ವಿ.ಪಿ.ಸಿಂಗ್, ಚಂದ್ರಶೇಖರ್, ದೇವೇಗೌಡ, ಐ.ಕೆ.ಗುಜ್ರಾಲ್, ವಾಜಪೇಯಿ ಸೇರಿದಂತೆ ಐದು ಪ್ರಧಾನಮಂತ್ರಿಗಳು ಆ ದಿನಗಳಲ್ಲಿ ನಮ್ಮ ಮನೆಗೆ ಬರುತ್ತಿದ್ದರು. ರಾಷ್ಟ್ರಪತಿ, ಉಪ ರಾಷ್ಟ್ರಪತಿಗಳೂ ಬರುತ್ತಿದ್ದರು. ತಿಂಗಳಲ್ಲಿ ಹತ್ತು, ಹದಿನೈದು ಔತಣಕೂಟಗಳು ನಮ್ಮ ಮನೆಯಲ್ಲಿ ನಡೆಯುತ್ತಿದ್ದವು. ಮೈತ್ರಿಕೂಟ ಸರಕಾರದ ಪ್ರಯೋಗಕಾಲ ಅದು. ರಾಜೀವ್ ಗಾಂಧಿ ಹತ್ಯೆ ನಡೆಯಿತು. ಹೆಗಡೆಯವರು ಬಾಗಲಕೋಟೆ ಲೋಕಸಭೆ ಚುನಾವಣೆಯಲ್ಲಿ ಸೋತರು. ಆ ದಿನಗಳಲ್ಲಿ ಹೆಗಡೆಯವರ ರಾಜಕೀಯ ಜೀವನ ಮತ್ತು ವೈಯಕ್ತಿಕ ಜೀವನದಲ್ಲಿ ಸಾಕಷ್ಟು ಪಲ್ಲಟಗಳಾದವು. ಇವನ್ನೆಲ್ಲ ನಾನು ಹತ್ತಿರದಿಂದ ಕಂಡಿದ್ದೇನೆ. ಈ ಬಗ್ಗೆ ವಿವರವಾಗಿ ಬರೆಯಲಿದ್ದೇನೆ.

- **ರಾಮಕೃಷ್ಣ ಹೆಗಡೆ ಅವರು ಬಹುಮತ ಪಡೆದು ಮುಖ್ಯಮಂತ್ರಿಯಾದರೂ ಎರಡು ಬಾರಿ ರಾಜೀನಾಮೆ ನೀಡಬೇಕಾದ ಪರಿಸ್ಥಿತಿ ಎದುರಾಯಿತು. ಅವರ ಪಕ್ಷವೇ ಅವರನ್ನು ಉಚ್ಚಾಟನೆ ಮಾಡಿತ್ತು. ಆಗೆಲ್ಲಾ ನೀವು ಅವರಿಗೆ ಸಲಹೆಗಳನ್ನು ನೀಡುತ್ತಿದ್ರಾ?**

– ನಾನು ಸಲಹೆಗಳನ್ನು ಕೊಟ್ಟರೂ ಅವರು ಕೇಳುತ್ತಾ ಇರಲಿಲ್ಲ. ಆದರೆ ಫೋನ್ ಟ್ಯಾಪಿಂಗ್ ವಿಷಯವಾಗಿ ಅವರು ರಾಜೀನಾಮೆ ನೀಡಿದಾಗ ಅವರನ್ನು ಪ್ರಶ್ನಿಸಿದ್ದೆ. ಯಾರೋ ಮಾಡಿದ ಕೆಲಸಕ್ಕೆ ಇವರು ರಾಜೀನಾಮೆ ಕೊಟ್ಟಿದ್ದು ನನಗೆ ಸರಿ ಕಂಡಿರಲಿಲ್ಲ. ಕುಲದೀಪ್ ಸಿಂಗ್ ಆಯೋಗದ ವರದಿ ಹಿನ್ನೆಲೆಯಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷ ಹುದ್ದೆಗೆ ಅವರು ರಾಜೀನಾಮೆ ಕೊಟ್ಟರು. ''ಆ ವರದಿಯನ್ನು ಪ್ರಧಾನಿಗೆ ಕೊಟ್ಟಿದ್ದಾರೆ ಅಷ್ಟೇ. ಪ್ರಧಾನಿ ಅದನ್ನು ಸ್ವೀಕರಿಸುವ ಮುನ್ನವೇ ಏಕೆ ರಾಜೀನಾಮೆ ಕೊಡಬೇಕು?'' ಎಂದು ನಾನು ಪ್ರಶ್ನಿಸಿದ್ದೆ. ಆದರೆ ಅವರು ನನ್ನ ಮಾತು ಕೇಳಲಿಲ್ಲ. ಅವರು ಸೂಕ್ಷ್ಮ ಮನಸ್ಸಿನ ವ್ಯಕ್ತಿ. ಸಣ್ಣ ಆಘಾತವನ್ನೂ ಸಹಿಸಿಕೊಳ್ಳುತ್ತಿರಲಿಲ್ಲ. ಜನತಾ ದಳದಿಂದ ಅವರನ್ನ ಯಾಕೆ ಹೊರಗೆ ಹಾಕಿದ್ರು ಅಂತ ನಮಗೆಲ್ಲ ಗೊತ್ತು. ಅದು ಚೀಪ್ ಪಾಲಿಟಿಕ್ಸ್. ಅವರ ಜತೆಗೇ ಇದ್ದ ದೇವೇಗೌಡ, ಲಾಲು ಪ್ರಸಾದ್ ಮುಂತಾದ ನಾಯಕರೇ ಹಿಂದಿನಿಂದ ಇರಿದಿದ್ದರು. ಅದನ್ನು ನಾವು ನಿರೀಕ್ಷಿಸಿರಲಿಲ್ಲ. ಅಂಥ ಮುತ್ಸದ್ದಿ ನಾಯಕನಿಗೆ ಹಾಗಾಗಬಾರದಿತ್ತು. ಆ ದಿನಗಳನ್ನು ನೆನಪು ಮಾಡಿಕೊಂಡರೆ ಈಗಲೂ ಬೇಸರವಾಗುತ್ತದೆ.

- **ರಾಮಕೃಷ್ಣ ಹೆಗಡೆ ಅವರು ಅನಾರೋಗ್ಯ ಸ್ಥಿತಿಯಲ್ಲಿದ್ದಾಗ ನೀವು ದೆಹಲಿಯಲ್ಲಿ ಅವರ ಆರೈಕೆ ಮಾಡುತ್ತಿದ್ದಿರಿ. ಇದ್ದಕ್ಕಿದ್ದ ಹಾಗೆ ಅವರ ಕುಟುಂಬ ಅವರನ್ನು ಕರೆದೊಯ್ದಿತು. ಆಗ ನಿಮ್ಮನ್ನು ನೀವು ಹೇಗೆ ಗಟ್ಟಿ ಮಾಡಿಕೊಂಡಿರಿ?**

– ಅವು ಅತ್ಯಂತ ನೋವಿನ ಕ್ಷಣಗಳು, ಅವನ್ನು ನೆನಪು ಮಾಡಿಕೊಳ್ಳಲೂ ನನಗೆ ಇಷ್ಟವಿಲ್ಲ. ಆದರೆ ಆ ಸಂದರ್ಭವನ್ನೂ ನಾನು ಧೈರ್ಯವಾಗಿ ಎದುರಿಸಿದ್ದೆ. ಅವರು ಚೇತರಿಸಿಕೊಂಡರೆ ಸಾಕಿತ್ತು. ಅಂಥ ಕಠಿಣ ಸಮಯದಲ್ಲಿ ಅವರೊಂದಿಗೆ ನಾನು ಇರಬೇಕಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಇದ್ದಷ್ಟೂ ದಿನ ಆರೈಕೆ ಮಾಡಿದ್ದೇನೆ. ಒಳ್ಳೆಯ ಕ್ಷಣಗಳನ್ನು ಅವರೊಂದಿಗೆ ಕಳೆದಿದ್ದೇನೆ. ಕಷ್ಟ ಕಾಲದಲ್ಲಿ ಹೆಗಡೆ ಜತೆಗಿದ್ದ ತುಂಬಾ ಜನರ ನಿಜಸ್ವರೂಪ ನನಗೆ ಗೊತ್ತಾಯಿತು. ನಾನು ಯಾರಿಗೆ ತುಂಬಾ ಮರ್ಯಾದೆ ಕೊಡುತ್ತಿದ್ದೇನೋ ಅವರ ನಿಜ ವ್ಯಕ್ತಿತ್ವ ನನ್ನ ಕಣ್ಣ ಮುಂದೆ ಬಂತು. ಅಮ್ಮ ಕೂಡ ಆಗಷ್ಟೇ ನಿಧನರಾಗಿದ್ದರು. ಹೆಗಡೆಯವರೂ ಇಲ್ಲದೆ ನಾನು ಏಕಾಂಗಿಯಾಗಿಬಿಟ್ಟೆ. ನನ್ನ ಜೀವನದ ಅತ್ಯಂತ ಕರಾಳ ದಿನಗಳವು.

- **'ಮನದಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ನೀವು ರಾಮಕೃಷ್ಣ ಹೆಗಡೆ ಜತೆಗಿನ ಸಂಬಂಧದ ಬಗ್ಗೆ ಮಾತನಾಡಿದ್ದರ ವಿಡಿಯೊವನ್ನು ರಾಜ್ಯ ಸರಕಾರ ಸೆನ್ಸಾರ್ ಮಾಡಿತ್ತು. ನೀವು ಇದನ್ನ ವಿರೋಧಿಸಿಲ್ಲವಾ?**

– ನಿಜ ಹೇಳಬೇಕೆಂದರೆ ಸೆನ್ಸಾರ್ ಮಾಡಿದ ಆ ವಿಡಿಯೊವನ್ನು ನಾನು ನೋಡಿರಲೇ ಇಲ್ಲ. ಸಂದರ್ಶನ ಮಾಡಿದವರು ಇದನ್ನು ನನ್ನ ಗಮನಕ್ಕೆ ತಂದರು. ನಾನು ಸಂಬಂಧಪಟ್ಟ ಇಲಾಖೆಗೆ ಆ ಬಳಿಕ ಪತ್ರ ಬರೆದೆ. ''ನೀವು ನನ್ನ ಸಂದರ್ಶನವನ್ನು ಯುಟ್ಯೂಬ್‌ಗೆ ಹಾಕಬೇಕು ಅಂದರೆ ಪೂರ್ಣ ಹಾಕಬೇಕು, ಕಟ್ ಮಾಡಬಾರದು'' ಅಂದೆ. ಯಾರನ್ನೋ ಒಲೈಸೋಕೆ ಯಾರೋ ಮಾಡಿರೋ ಕಿತಾಪತಿ ಇದು. ನನ್ನ ಜೀವನ ನನ್ನದು. ನನ್ನ ಜೀವನದ ಸತ್ಯವನ್ನ ನಾನು ಯಾಕೆ ಮುಚ್ಚುಮರೆ ಇಲ್ಲದೇ ಹೇಳಬಾರದು ಅಲ್ಲವಾ?

- **ನೀವು ಈಗಲೂ ರಾಮಕೃಷ್ಣ ಹೆಗಡೆ ಅವರ ಜನ್ಮದಿನ ಮತ್ತು ಪುಣ್ಯಸ್ಮರಣೆಯ ದಿನ ಭಾವನಾತ್ಮಕವಾದ ಪೋಸ್ಟ್‌ಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಶೇರ್ ಮಾಡುತ್ತೀರಿ. ಅವರನ್ನು ಹೇಗೆಲ್ಲಾ ನೆನಪು ಮಾಡಿಕೊಳ್ಳುತ್ತೀರಿ?**

– ಹೆಗಡೆಯವರದು ಮತ್ತು ನನ್ನದು ವಿಶೇಷ ಸಂಬಂಧ. ಅವರೊಂದಿಗೆ ಕಳೆದಿರುವುದು ನನ್ನ ಜೀವನದ ಸುವರ್ಣ ಕ್ಷಣ. ಅವರನ್ನು ಮರೆಯಲು ಸಾಧ್ಯವೇ ಇಲ್ಲ. ನನ್ನ ಮತ್ತು ನನ್ನ ಮಕ್ಕಳ ನೆರಳಾಗಿ ಅವರು ಸದಾ ಇರುತ್ತಾರೆ. ನಾವು ಅವರ ಪ್ರೀತಿ ಮತ್ತು ಹಾರೈಕೆಯಿಂದಾಗಿಯೇ ಜೀವನ ನಡೆಸುತ್ತಿದ್ದೇವೆ. ಅವರು ಕಲಿಸಿದ ಪಾಠ ಮತ್ತು ಬಿಟ್ಟು ಹೋದ ನೆನಪುಗಳೊಂದಿಗೆ ಕಾಲ ಕಳೆಯುತ್ತಿದ್ದೇವೆ. ಅವರು ಕಂಡ ಕನಸುಗಳನ್ನು ನನಸು ಮಾಡುವ ಪ್ರಯತ್ನದಲ್ಲಿ ನಾನಿದ್ದೇನೆ. ಅವರು ಈಗಲೂ ನಮ್ಮ ಸುತ್ತಲೇ ಇದ್ದಾರೆ. ನಮ್ಮನ್ನು ಸದಾ ಕಾಪಾಡುತ್ತಾರೆ.

(ಮುಂದುವರಿಯುತ್ತದೆ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 39

ಸಮಾಚಾರ ಸಣ್ಣದಲ್ಲ

3 ಕೊಳೆತ ಶವ ಪತ್ತೆ

ಕೊಚ್ಚಿ: ಕೇರಳದ ಕೊಚ್ಚಿಯಲ್ಲಿರುವ ಕೇಂದ್ರ ಅಬಕಾರಿ ಅಧಿಕಾರಿಗಳ ವಸತಿ ಸಮುಚ್ಚಯದಲ್ಲಿ ಮೂರು ಕೊಳೆತ ಶವಗಳು ಪತ್ತೆಯಾಗಿವೆ. ಕೊಚ್ಚಿಯ ಕಾಕ್ಕನಾಡ್‌ನಲ್ಲಿರುವ ಸಮುಚ್ಚಯದಲ್ಲಿ ಶವ ಸಿಕ್ಕಿದ್ದು, ಮೃತರನ್ನು ಹಿರಿಯ ಕಸ್ಟಮ್ಸ್ ಅಧಿಕಾರಿ, ಅವರ ಸಹೋದರಿ ಮತ್ತು ತಾಯಿ ಎಂದು ಶಂಕಿಸಲಾಗಿದ್ದು, ಎಲ್ಲರೂ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಭಾವಿಸಲಾಗಿದೆ. ಶವಗಳು ತೀವ್ರವಾಗಿ ಕೊಳೆತ ಸ್ಥಿತಿಯಿಂದಾಗಿ ಗುರುತಿಸುವುದು ಕಷ್ಟಕರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಕುಚಿತ ಮನೋಭಾವ ಬಿಟ್ಟುಬಿಡಿ: ಪ್ರಧಾನ್

ದೆಹಲಿ: ರಾಷ್ಟ್ರೀಯ ಶಿಕ್ಷಣ ನೀತಿಗೆ ವಿರೋಧ ವ್ಯಕ್ತಪಡಿಸುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ತಮಿಳುನಾಡು ಸರಕಾರ ಎನ್ ಇಪಿ–2020ನ್ನು ಸಂಕುಚಿತ ದೃಷ್ಟಿಯಿಂದ ನೋಡುತ್ತಿದೆ, ರಾಜಕೀಯವಾಗಿ ನೋಡುವುದನ್ನು ಬಿಟ್ಟು ಸರ್ಕಾರ ಯೋಜನೆಯ ಪ್ರಗತಿಶೀಲ ಸುಧಾರಣೆಗಳನ್ನು ವಿಶಾಲ ಮನೋಭಾವದಿಂದ ಕಾಣಬೇಕೆಂದು ಒತ್ತಾಯಿಸಿದ್ದಾರೆ. ಈ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಉದ್ದೇಶಿಸಿ ಬರೆದ ಮೂರು ಪುಟಗಳ ಪತ್ರದಲ್ಲಿ, ಪ್ರಧಾನ್ ಅವರು ಯಾವುದೇ ರಾಜ್ಯ ಅಥವಾ ಸಮುದಾಯದ ಮೇಲೆ ಯಾವುದೇ ಭಾಷೆಯನ್ನು ಹೇರುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ಎಂ. ಕೆ ಸ್ಟಾಲಿನ್ ಅವರು ಪ್ರಧಾನಿ ನರೇಂದ್ರ ಮೋದಿಗೆ ಬರೆದ ಪತ್ರಕ್ಕೆ ಧರ್ಮೇಂದ್ರ ಪ್ರಧಾನ್ ಪ್ರತಿಕ್ರಿಯಿಸಿದ್ದಾರೆ.

ಜೋಯಾ ಖಾನ್ ಸೆರೆ

ದೆಹಲಿ: ಗ್ಯಾಂಗ್‌ಸ್ಟರ್ ಹಾಶೀಮ್ ಬಾಬಾ ಪತ್ನಿ ಜೋಯಾ ಖಾನ್‌ಳನ್ನು ಡ್ರಗ್ಸ್ ಹೊಂದಿದ್ದ ಆರೋಪದಲ್ಲಿ ಪೊಲೀಸರು ಬಂಧಿಸಿದ್ದಾರೆ. 33 ವರ್ಷದ ಜೋಯಾ ತನ್ನ ಪತಿ ನಡೆಸುತ್ತಿದ್ದ ಗ್ಯಾಂಗ್‌ನ್ನು ನಿರ್ವಹಿಸುತ್ತಿದ್ದಳು. ಈಕೆಯ ಮೇಲೆ ಹಲವು ಆರೋಪಗಳು ಕೇಳಿ ಬಂದಿದ್ದರೂ, ಯಾವುದೇ ಸಾಕ್ಷಿ ಇರಲಿಲ್ಲ. ಇದೀಗ ಹೆರಾಯಿನ್ ಸಮೇತ ಸಿಕ್ಕಿಬಿದ್ದಿದ್ದಾಳೆ, ಲೇಡಿ ಡಾನ್ ಎಂದೇ ಕುಖ್ಯಾತಿ ಪಡೆದಿದ್ದ ಈಕೆ ಬಳಿ 270 ಗ್ರಾಂ ಹೆರಾಯಿನ್ ಸಿಕ್ಕಿದ್ದು, ಅದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸುಮಾರು 1 ಕೋಟಿ ರು. ಮೌಲ್ಯ ಬೆಲೆ ಬಾಳುತ್ತದೆ.

ದೆಹಲಿಯ ಭಾರತ್ ಮಂಟಪದಲ್ಲಿ ಸೋಲ್ ಸಮ್ಮೇಳನ ನಾಯಕತ್ವ ಸಭೆಯಲ್ಲಿ ಭೂತಾನ್ ಪ್ರಧಾನಿ ಟೋಬ್ಗೆ ಭಾಗಿ

ಭಾರತಕ್ಕೆ ಬಲಿಷ್ಠ ನಾಯಕತ್ವ ಅತ್ಯಗತ್ಯ: ಪ್ರಧಾನಿ ಮೋದಿ

ದೆಹಲಿ: ವಿವಿಧ ಕ್ಷೇತ್ರಗಳಲ್ಲಿ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ನಾಗರಿಕರ ಅಭಿವೃದ್ಧಿ ಬಹಳ ಮುಖ್ಯವಾಗಿದೆ. ಆ ನಿಟ್ಟಿನಲ್ಲಿ ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್‌ಶಿಪ್ (ಸೋಲ್) ಸ್ಥಾಪನೆಯು ವಿಕಸಿತ ಭಾರತದ ಪ್ರಯಾಣದತ್ತ ಒಂದು ಪ್ರಮುಖ ಹೆಜ್ಜೆಯಾಗಿದೆ. ಜಾಗತಿಕ ಶಕ್ತಿಶಾಲಿಯಾಗಿ ಹೊರಹೊಮ್ಮುತ್ತಿರುವ ಭಾರತಕ್ಕೆ ಪ್ರತಿಯೊಂದು ಕ್ಷೇತ್ರದಲ್ಲೂ ಆವೇಗವನ್ನು ಹೆಚ್ಚಿಸಲು ವಿಶ್ವ ದರ್ಜೆಯ ನಾಯಕರು ನಮ್ಮಲ್ಲಿ ಇದ್ದರಷ್ಟೇ ಇನ್ನಷ್ಟು ಪ್ರಗತಿ ಸಾಧ್ಯ ಎಂದು ಪ್ರಧಾನಿ ಮೋದಿ ಹೇಳಿದರು.

ಶುಕ್ರವಾರ ದೆಹಲಿಯ ಭಾರತ್ ಮಂಟಪದಲ್ಲಿ ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್‌ಶಿಪ್ (ಸೋಲ್) ಸಮ್ಮೇಳನದ ಮೊದಲ ಆವೃತ್ತಿಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಕೆಲವು ಕಾರ್ಯಕ್ರಮಗಳು ನಮ್ಮ ಮನಸ್ಸಿಗೆ ಬಹಳ ಹತ್ತಿರವಾಗಿರುತ್ತವೆ, ಈ ಕಾರ್ಯಕ್ರಮವು ಅಂತವುಗಳಲ್ಲಿ ಒಂದಾಗಿದೆ. ರಾಷ್ಟ್ರನಿರ್ಮಾಣಕ್ಕಾಗಿ ಉತ್ತಮ ನಾಗರಿಕರ ಅಭಿವೃದ್ಧಿ ಅತ್ಯಗತ್ಯ. ಯಾವುದೇ ಉನ್ನತ ಸ್ಥಾನವನ್ನು ಏರಲು ಅಥವಾ ವಿಶಾಲತೆಯನ್ನು ಸಾಧಿಸಲು ಆರಂಭದಿಂದಲೇ ಅಡಿಪಾಯ ಹಾಕಬೇಕು. ಪ್ರತಿಯೊಂದು ಕ್ಷೇತ್ರದಲ್ಲೂ ಅಸಾಧಾರಣ ನಾಯಕರ ಅಭಿವೃದ್ಧಿ ನಿರ್ಣಾಯಕ ಮತ್ತು ಸಮಯಾವಕಾಶ ಅವಶ್ಯಕತೆ ಎನಿಸುತ್ತದೆ. ಅದಕ್ಕಾಗಿಯೇ ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್‌ಶಿಪ್ (ಸೋಲ್) ಸ್ಥಾಪನೆಯು ಭಾರತದ ಅಭಿವೃದ್ಧಿ ಹೊಂದಿದ ಭವಿಷ್ಯದ ಪ್ರಯಾಣದಲ್ಲಿ ಮಹತ್ವದ ಮತ್ತು ಪ್ರಮುಖ ಹೆಜ್ಜೆಯಾಗಿದೆ. 'ಸೋಲ್' ಎಂಬ ಹೆಸರು ಕಾಕತಾಳೀಯವಲ್ಲ, ಈ ಸಂಸ್ಥೆಯು ಭಾರತದ ಸಾಮಾಜಿಕ ಜೀವನದ ಆತ್ಮವಾಗಲಿದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಾಯಕತ್ವವನ್ನು ಬೆಳೆಸುವತ್ತ ಸೋಲ್ ಮಹತ್ವದ ಹೆಜ್ಜೆಯಾಗಿದೆ ಎಂದೂ ಮೋದಿ ಹೇಳಿದರು.

ಭೂತಾನಿನ ಪ್ರಧಾನಿ ತ್ಸೆರಿಂಗ್ ಟೋಬ್ಗೆ ಕೂಡ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಟೋಬ್ಗೆ, ಮೋದಿ ಅವರ ನಾಯಕತ್ವವನ್ನು ಶ್ಲಾಘಿಸಿದರು, ಮೋದಿಯವರನ್ನು ಹಿರಿಯ ಸೋದರ ಮತ್ತು ಮಾರ್ಗದರ್ಶಕ ಎಂದು ಬೋಧಿಸಿದರು. 'ನಿಮ್ಮನ್ನು ಭೇಟಿಯಾಗುವ ಅವಕಾಶ ಸಿಕ್ಕಾಗಲೆಲ್ಲಾ ನಾನು ಸಂತೋಷದಿಂದ ತುಂಬಿ ತುಳುಕುತ್ತೇನೆ, ನೀವು ನನ್ನ ಮಾರ್ಗದರ್ಶಕ. ನಿಮ್ಮನ್ನು ಭೇಟಿಯಾದಾಗಲೆಲ್ಲಾ, ಸಾರ್ವಜನಿಕ ಸೇವಕನಾಗಿ ಇನ್ನಷ್ಟು ಬದ್ಧತೆಯಿಂದ ಶ್ರಮಿಸಲು ನನಗೆ ಸ್ಫೂರ್ತಿ ಸಿಗುತ್ತದೆ' ಎಂದು ಮೋದಿಯ ಬಗ್ಗೆ ಅವರು ಹೇಳಿದರು.

ಸೋಲ್ ಉಪಕ್ರಮವನ್ನು ಶ್ಲಾಘಿಸಿದ ಟೋಬ್ಗೆ, ಇದು ನಿಜವಾದ ನಾಯಕರನ್ನು ಬೆಳೆಸುವ ನಿಟ್ಟಿನಲ್ಲಿ ಮೋದಿಯವರಿಗಿರುವ ಅಚಲ ಬದ್ಧತೆಗೆ ಸಾಕ್ಷಿಯಾಗಿದೆ. ಇದು ಒಂದು ಆದರ್ಶ ಅವಕಾಶ, ಇಲ್ಲಿ ನಾನು ವಿಶ್ವದ ಶ್ರೇಷ್ಠ ನಾಯಕ ಪ್ರಧಾನಿ ನರೇಂದ್ರ ಮೋದಿಯವರಿಂದ ನಾಯಕತ್ವದ ಬಗ್ಗೆ ಕಲಿಯಲಿದ್ದೇನೆ ಎಂದರು.

ಶುಕ್ರವಾರ ಮತ್ತು ಶನಿವಾರ ನಡೆಯುವ ಎರಡು ದಿನಗಳ ಸೋಲ್ ಸಮಾವೇಶವು ವಿವಿಧ ಕ್ಷೇತ್ರಗಳ ನಾಯಕರನ್ನು ಒಟ್ಟುಗೂಡಿಸುವ ಗುರಿಯನ್ನು ಹೊಂದಿದೆ. ಅದು ಯುವ ಪ್ರೇಕ್ಷಕರಿಗೆ ಯಶಸ್ಸು ಮತ್ತು ವೈಫಲ್ಯಗಳ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಸ್ಫೂರ್ತಿ ನೀಡುವುದರ ಜೊತೆಗೆ ಸಹಯೋಗ ಮತ್ತು ಚಿಂತನೆಯ ನಾಯಕತ್ವದ ಪರಿಸರ ವ್ಯವಸ್ಥೆಯನ್ನು ರಚಿಸಲು ಪ್ರಯತ್ನಿಸುತ್ತದೆ.

ಸೋಲ್: ವಿಶಿಷ್ಟ ಹಿನ್ನೆಲೆ

ಇದು ಶ್ರೇಣಿ, ಬದ್ಧತೆ ಮತ್ತು ರಾಜಕೀಯ ಮಹತ್ವಾಕಾಂಕ್ಷೆಯನ್ನು ಹೊರತುಪಡಿಸಿ, ಸಾರ್ವಜನಿಕ ಸೇವೆಯಲ್ಲಿ ಇಚ್ಛೆಯಿರುವ ಭವಿಷ್ಯದ ನಾಯಕರುಗಳಿಗೆ ತರಬೇತಿ ನೀಡುವ ಸಂಸ್ಥೆಯಾಗಿದೆ. ಸೋಲ್ ಸಮ್ಮೇಳನದಲ್ಲಿ ರಾಜಕೀಯ, ಕ್ರೀಡೆ, ಉದ್ಯಮ, ಕಲೆ, ಮಾಧ್ಯಮ ಮತ್ತು ಸಾರ್ವಜನಿಕ ನೀತಿಯ ಕ್ಷೇತ್ರಗಳ ನಾಯಕರು ತಮ್ಮ ಒಳನೋಟ ಮತ್ತು ಅನುಭವಗಳನ್ನು ಹಂಚಿಕೊಳ್ಳುತ್ತಾರೆ.

ಗುಜರಾತ್‌ನಲ್ಲಿ ಸೋಲ್ ಕ್ಯಾಂಪಸ್ ನಿರ್ಮಾಣ

ಗುಜರಾತ್ ರಾಜ್ಯದ ಗಾಂಧಿನಗರದಲ್ಲಿ ಸೋಲ್ ಕ್ಯಾಂಪಸ್‌ನ ನಿರ್ಮಾಣ ಕಾರ್ಯ ನಡೆಯುತ್ತಿದ್ದು,

ಗಿಫ್ಟ್ ಸಿಟಿ ರಸ್ತೆಯ ಬಳಿ ಇರುವ ಗುಜರಾತ್ ಜೈವಿಕ ತಂತ್ರಜ್ಞಾನ ವಿಶ್ವವಿದ್ಯಾಲಯದ 22 ಎಕರೆ ಪ್ರದೇಶದಲ್ಲಿ ಇದು ಹರಡಿದೆ. ಸುಮಾರು 150 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕ್ಯಾಂಪಸ್ ಎರಡು ವರ್ಷಗಳಲ್ಲಿ ಪೂರ್ಣವಾಗುವ ನಿರೀಕ್ಷೆಯಿದೆ.

ನನ್ನನ್ನು ನಿರ್ಲಕ್ಷಿಸದಿರಿ: ಏಕನಾಥ್ ಶಿಂಧೆ

ಮುಂಬೈ: ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ತಮ್ಮನ್ನು ಹಗುರವಾಗಿ ಪರಿಗಣಿಸುವವರಿಗೆ ಎಚ್ಚರಿಕೆ ನೀಡಿದ್ದಾರೆ. ಶುಕ್ರವಾರ ಮಹಾರಾಷ್ಟ್ರದ ನಾಗ್ಪುರದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಶಿವಸೇನಾ ಮುಖ್ಯಸ್ಥ ಏಕನಾಥ್ ಶಿಂಧೆ, 'ನನ್ನನ್ನು ಹಗುರವಾಗಿ ಪರಿಗಣಿಸಬೇಡಿ, ನನ್ನನ್ನು ಹಗುರವಾಗಿ ಪರಿಗಣಿಸಿರುವವರಿಗೆ ನಾನು ಈಗಾಗಲೇ ಈ ಮಾತನ್ನು ಹೇಳಿದ್ದೇನೆ. ನಾನು ಸಾಮಾನ್ಯ ಪಕ್ಷದ ಕಾರ್ಯಕರ್ತನೇ ಆಗಿರಬಹುದು, ಆದರೆ ನಾನು ಬಾಳಾ ಸಾಹೇಬರ ಅನುಯಾಯಿ. ಯಾರೂ ನನ್ನನ್ನು ಹಗುರವಾಗಿ ಪರಿಗಣಿಸುವಂತಿಲ್ಲ' ಎಂದಿದ್ದಾರೆ.

'2022ರಲ್ಲಿ ಜನರು ನನ್ನನ್ನು ಹಗುರವಾಗಿ ಪರಿಗಣಿಸಿದಾಗ ಕುದುರೆ ತಿರುಗಿತು, ನಾನು ಸರ್ಕಾರವನ್ನು ಬದಲಾಯಿಸಿದೆ' ಎಂದು ಏಕನಾಥ್ ಶಿಂಧೆ ಹೇಳಿದ್ದಾರೆ. 'ನಾವು ಸಾಮಾನ್ಯ ಜನರ ಆಶಯದ ಸರ್ಕಾರವನ್ನು ತಂದಿದ್ದೇವೆ. ವಿಧಾನಸಭೆಯಲ್ಲಿ ನನ್ನ ಮೊದಲ ಭಾಷಣದಲ್ಲಿ ದೇವೇಂದ್ರ ಫಡ್ನವೀಸ್ ಅವರು 200ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆಯುತ್ತಾರೆ ಎಂದು ನಾನು ಹೇಳಿದ್ದೆ. ನಮಗೆ 232 ಸ್ಥಾನಗಳು ಸಿಕ್ಕಿದವು, ಅದಕ್ಕಾಗಿಯೇ ನನ್ನನ್ನು ಹಗುರವಾಗಿ ಪರಿಗಣಿಸಬೇಡಿ ಎಂದು ನಾನು ಹೇಳುತ್ತಿದ್ದೇನೆ. ಈ ಸುಳಿವನ್ನು ಅರ್ಥಮಾಡಿಕೊಳ್ಳಲು ಬಯಸುವವರು ಅದನ್ನು ಅರ್ಥಮಾಡಿಕೊಳ್ಳಬೇಕು. ನಾನು ನನ್ನ ಕೆಲಸವನ್ನು ಮುಂದುವರಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಬಿಜೆಪಿ ನೇತೃತ್ವದ ಮೂರು ಪಕ್ಷಗಳ ಒಕ್ಕೂಟವು ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಜಯ ಸಾಧಿಸಿ, 288 ಸ್ಥಾನಗಳಲ್ಲಿ 230 ಸ್ಥಾನಗಳನ್ನು ಗೆದ್ದು, ಸರಕಾರ ರಚಿಸಿತ್ತು. ಬಿಜೆಪಿಗೆ ಹೆಚ್ಚು ಸ್ಥಾನಗಳು ಸಿಕ್ಕಿದ್ದರಿಂದ ಮುಖ್ಯಮಂತ್ರಿ ಹುದ್ದೆ ಬಿಜೆಪಿ ನಾಯಕ ದೇವೇಂದ್ರ ಫಡ್ನವೀಸ್ ಪಾಲಾಗಿತ್ತು. ಈ ಮೊದಲು ಸಿಎಂ ಆಗಿದ್ದ ಏಕನಾಥ್ ಶಿಂಧೆ ಡಿಸಿಎಂ ಆಗಿ ಹಿಂಬಡ್ತಿ ಪಡೆದಿದ್ದರು. ಇದೀಗ ಮಹಾರಾಷ್ಟ್ರ ಸರ್ಕಾರದಲ್ಲಿ ಅಸಮಾಧಾನ ಹೆಚ್ಚಾಗಿದೆ ಎನ್ನಲಾಗುತ್ತಿದೆ. ಆದರೆ ಫಡ್ನವೀಸ್ ಮತ್ತು ಶಿಂಧೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದು ಹೇಳಿಕೆ ನೀಡಿದ್ದಾರೆ.

ಭಾರತ-ಪಾಕಿಸ್ತಾನದಿಂದ ಧ್ವಜದಿನ

ಜಮ್ಮು: ಭಾರತ ಮತ್ತು ಪಾಕಿಸ್ತಾನ ಧ್ವಜ ಸಭೆ ನಡೆಸಲು ಮುಂದಾಗಿದ್ದು, ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆ ಸೇರಿದಂತೆ ಕದನ ವಿರಾಮ ಉಲ್ಲಂಘನೆ ಸೇರಿದಂತೆ ಹಲವು ವಿಚಾರಗಳ ಕುರಿತು ಚರ್ಚಿಸ ಲಿದೆ ಎಂದು ಮೂಲಗಳು ಹೇಳಿದೆ.

ಬ್ರಿಗೇಡಿಯರ್ ಮಟ್ಟದ ಅಧಿಕಾರಿಗಳು ಈ ಧ್ವಜದಿನ ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಈ ಸಭೆ ಕುರಿತು ಇನ್ನಷ್ಟು ಮಾಹಿತಿಗಳು ಲಭ್ಯವಾಗ ಬೇಕಿದ್ದು, ಎಲ್‌ಒಸಿ ಬಳಿ ಈ ಸಭೆ ನಡೆಯಲಿದೆ. ಗಡಿ ನಿಯಂತ್ರಣ ರೇಖೆಯ ಬಳಿಕ ಚಟುವಟಿಕೆಗಳು ಹೆಚ್ಚಿರುವ ಪರಿಣಾಮವಾಗಿ ಈ ಸಭೆ ನಡೆಯಲಿದೆ. ಸಭೆಯಲ್ಲಿ ಫೆ.11ರಂದು ಜಮ್ಮು ಪ್ರದೇಶದ ಅಖ್ನೂರ್ ವಲಯದಲ್ಲಿ ಶಂಕಿತ ಉಗ್ರರು ನಡೆಸಿದ ಐಇಡಿ ಸ್ಫೋಟದಲ್ಲಿ ಕ್ಯಾಪ್ಟನ್ ಸೇರಿ ಇಬ್ಬರು ಸೇನಾ ಸಿಬ್ಬಂದಿಗಳ ಹತ್ಯೆ ವಿಚಾರವೂ ಚರ್ಚೆಯಾಗಲಿದೆ ಎನ್ನಲಾಗಿದೆ.

2021ರಲ್ಲಿ ಘೋಷಣೆಯಾಗಿದ್ದ ಕದನ ವಿರಾಮ ಒಪ್ಪಂದ: 2021ರಲ್ಲಿ ಭಾರತ ಮತ್ತು ಪಾಕಿಸ್ತಾನ ಸೇನೆಗಳು ಕದನ ವಿರಾಮವನ್ನು ಘೋಷಿಸಿದವು. ಈ ಕದನ ವಿರಾಮ ಒಪ್ಪಂದದಿಂದಾಗಿ, ಎಲ್‌ಒಸಿ ಮೇಲಿನ ಉದ್ವಿಗ್ನತೆ ಗಮನಾರ್ಹವಾಗಿ ಕಡಿಮೆಯಾಗಿತ್ತು. ಅಷ್ಟೇ ಅಲ್ಲ ಗಡಿಯ ಎರಡು ಬದಿಗಳಲ್ಲಿ ವಾಸಿಸುವ ನೂರಾರು ಕುಟುಂಬಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದವು. ಇತ್ತೀಚೆಗೆ ಪೂಂಚ್ ಮತ್ತು ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿನ ಅಪ್ರಚೋದಿತ ದಾಳಿಯಲ್ಲಿ ಇಬ್ಬರು ಸೇನಾ ಸಿಬ್ಬಂದಿಗಳು ಗಾಯಗೊಂಡಿದ್ದರು. ಈ ವೇಳೆ ಭಾರತೀಯ ಸೇನೆ ನಡೆಸಿದ ಆಕ್ರಮಣಕಾರಿ ದಾಳಿಗೆ ಪಾಕಿಸ್ತಾನದ ಸೇನೆ ಹೆಚ್ಚಿನ ಅಪಾಯವನ್ನು ಎದುರಿಸಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚಿದ ಅಶ್ಲೀಲತೆ | ತಕ್ಷಣವೇ ನಿಯಂತ್ರಿಸಿ

ಒಟಿಟಿ: ಕೇಂದ್ರದ ಮಾರ್ಗಸೂಚಿ

ದೆಹಲಿ: ಯೂಟ್ಯೂಬರ್ ಅಲಹಾಬಾದಿಯಾ ಆಕ್ಷೇಪಾರ್ಹ ಹಾಸ್ಯವು ಭಾರೀ ವಿವಾದಕ್ಕೆ ಕಾರಣವಾಗಿರುವ ನಡುವೆಯೇ, ಒಟಿಟಿಗಳಲ್ಲಿ ಪ್ರಸಾರವಾಗುವ ಅಶ್ಲೀಲ ಕಂಟೆಂಟ್‌ಗಳ ಮೇಲೆ ನಿಯಂತ್ರಣ ಹೇರಲು ಎಲ್ಲ ಸಾಮಾಜಿಕ ಮಾಧ್ಯಮಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ.



ಒಟಿಟಿ ವೇದಿಕೆಗಳಲ್ಲಿ ಕಾನೂನಿನಡಿ ನಿಷೇಧಿತ ಮತ್ತು ಸಮಾಜದ ಮೇಲೆ ಋಣಾತ್ಮಕ ಪರಿಣಾಮ ಬೀರುವ ಕಾರ್ಯಕ್ರಮ, ಕಂಟೆಂಟ್‌ಗಳ ಪ್ರಸಾರ ಮಾಡುವುದರ ವಿರುದ್ಧ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತನ್ನ ರೋಷ ವ್ಯಕ್ತಪಡಿಸಿದೆ. ಯಾವುದೇ ಕಂಟೆಂಟ್ ಪ್ರಸಾರಕ್ಕೂ ಮುನ್ನ ವಯಸ್ಸಿನ ಆಧಾರದ ಮೇಲೆ ವರ್ಗೀಕರಣ ಸೇರಿದಂತೆ ಐಟಿ ನಿಯಮಗಳು 2021ರ ಅಡಿಯಲ್ಲಿ ಸೂಚಿಸಿದ ನೀತಿ ಸಂಹಿತೆಗೆ ಅನುಗುಣವಾಗಿರಬೇಕು ಎಂದು ಒಟಿಟಿ ಪ್ಲಾಟ್‌ಫಾರ್ಮ್‌ಗಳು ಮತ್ತು ಸ್ವಯಂ ನಿಯಂತ್ರಕ ಸಂಸ್ಥೆಗಳಿಗೆ ಮಾರ್ಗಸೂಚಿಯಲ್ಲಿ ಹೇಳಿದೆ. ಹಾಗೊಂದು ವೇಳೆ ನಿಯಮ, ನೀತಿ ಸಂಹಿತೆಗಳನ್ನು ಉಲ್ಲಂಘಿಸಿ ಸದಭಿರುಚಿರಹಿತ ಕಂಟೆಂಟ್‌ಗಳನ್ನು ಪ್ರಸಾರ ಮಾಡಿದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒಟಿಟಿ ಪ್ಲಾಟ್‌ಫಾರ್ಮ್‌ಗಳ ನಿಯಂತ್ರಕ ಸಂಸ್ಥೆಗೆ ಸಲಹೆ ನೀಡಿದೆ.

ಒಟಿಟಿಗಳಲ್ಲಿ ಪ್ರಸಾರವಾಗುವ ಕಂಟೆಂಟ್‌ಗಳಲ್ಲಿ ಅಶ್ಲೀಲತೆ ಇದ್ದಲ್ಲಿ, ಅದಕ್ಕೆ 'ಎ' ಸರ್ಟಿಫಿಕೇಟ್ ಕಾರ್ಯವಿಧಾನ ಅಳವಡಿಸಿ, ಸೂಕ್ತ ಎಚ್ಚರಿಕೆಯನ್ನೂ ನೀಡಬೇಕು. ಅಂತಹ ಕಂಟೆಂಟ್‌ಗಳು ಮಕ್ಕಳ ಗ್ರಹಣಕ್ಕೆ ಸಿಗಬಾರದು ಎಂದೂ ಸಲಹೆ ನೀಡಿದೆ.

ಅಶ್ಲೀಲತೆ ವಿರುದ್ಧ ದೂರು

ಆನ್‌ಲೈನ್ ಕ್ಯುರೇಟೆಡ್ ಕಂಟೆಂಟ್ (ಒಟಿಟಿ ವೇದಿಕೆಗಳು) ಮತ್ತು ಕೆಲವು ಸಾಮಾಜಿಕ ಮಾಧ್ಯಮಗಳು ಪ್ರಕಟಿಸಿದ ಅಶ್ಲೀಲ, ಅಸಹ್ಯಕರ ಮತ್ತು 18+ ಕಂಟೆಂಟ್‌ಗಳ ಕುರಿತಂತೆ ಸಂಸತ್ತಿನ ಸದಸ್ಯರು, ಶಾಸನಬದ್ಧ ಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಹೀಗಾಗಿ, ಸಾಮಾಜಿಕ ಸ್ವಾಸ್ಥ್ಯಕ್ಕೆ ಮಾರಕವಾಗಿರುವ ಯಾವುದೇ ಕಂಟೆಂಟ್‌ಗಳನ್ನು ಪ್ರಸಾರ ಮಾಡುವ ಮುನ್ನ ಕಾನೂನಿನ ವಿವಿಧ ನಿಬಂಧನೆಗಳು ಮತ್ತು 2021 ರ ಐಟಿ ನಿಯಮಗಳಲ್ಲಿ ಸೂಚಿಸಲಾದ ನೀತಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು, ವಯಸ್ಸಿನ ಆಧಾರಿತ ವರ್ಗೀಕರಣವನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ.

ಗಂಗೂಲಿ ಕಾರು ಅಪಘಾತ

ಕೊಲ್ಕತ್ತಾ: ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಸಂಚರಿಸುತ್ತಿದ್ದ ಕಾರು ಅಪಘಾತಕ್ಕೀಡಾಗಿದೆ. ಪಶ್ಚಿಮ ಬಂಗಾಳದ ದುರ್ಗಾಪುರ ಹೈವೇನಲ್ಲಿ ಈ ಘಟನೆ ನಡೆದಿದ್ದು, ಸೌರವ್ ಗಂಗೂಲಿ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಬರ್ಧಮಾನ್ ವಿಶ್ವವಿದ್ಯಾಲಯದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಹೋಗುತ್ತಿದ್ದಾಗ ಅವರ ಕಾರು

ವೇಗವಾಗಿ ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ, ಅದೃಷ್ಟವಶಾತ್ ಪ್ರಾಣಾಪಾಯ ಸಂಭವಿಸಿಲ್ಲ. ಗಂಗೂಲಿ ಬೆಂಗಾವಲು ಪಡೆಯ ಎರಡು ವಾಹನಗಳಿಗೆ ಹಾನಿಯಾಗಿದೆ. ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದಾರೆ.

ಭೋಲೆ ಬಾಬಾ ದೋಷಮುಕ್ತ

ಲಖನೌ: ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ನಡೆದ ಕಾಲ್ತುಳಿತದ ಬಗ್ಗೆ ತನಿಖೆ ನಡೆಸುತ್ತಿರುವ ನ್ಯಾಯಾಂಗ ಆಯೋಗವು ತನ್ನ ಅಂತಿಮ ವರದಿಯನ್ನು ಯೋಗಿ ಆದಿತ್ಯನಾಥ್ ನೇತೃತ್ವದ ಸರ್ಕಾರಕ್ಕೆ ಸಲ್ಲಿಸಿದೆ. ಭೋಲೆ ಬಾಬಾ ನೇತೃತ್ವದಲ್ಲಿ ಜುಲೈ 2, 2024ರಂದು ಧಾರ್ಮಿಕ ಸಭೆಯ ಸಮಯದಲ್ಲಿ ನಡೆದ ಕಾಲ್ತುಳಿತದಲ್ಲಿ 121 ಜನ ಸಾವನ್ನಪ್ಪಿ, ನೂರಾರು ಮಂದಿ ಗಾಯಗೊಂಡಿದ್ದರು. ಸದ್ಯ ಈ ಘಟನೆಯ ಬಗ್ಗೆ ತನಿಖೆ ನಡೆಸಿದ ನ್ಯಾಯಾಂಗ ಸಮಿತಿಯು ತನ್ನ ವರದಿಯನ್ನು ಉತ್ತರ ಪ್ರದೇಶ ಸರ್ಕಾರಕ್ಕೆ ಸಲ್ಲಿಸಿದ್ದು ಭೋಲೆ ಬಾಬಾ ದೋಷಮುಕ್ತ ಎಂಬ ವಿವರಿಸಿದೆ. ವರದಿಯನ್ನು ಅಂಗೀಕರಿಸಿರುವ ಸಚಿವ ಸಂಪುಟ, ಅದನ್ನು ಸದನದಲ್ಲಿ ಮಂಡಿಸಲು ಅನುಮೋದನೆ ನೀಡಿದೆ. ವರದಿಯ ಪ್ರಕಾರ, ಕಾಲ್ತುಳಿತದ ದುರಂತ ಘಟನೆ ನಡೆಯುವುದಕ್ಕೆ ಕಾರ್ಯಕ್ರಮ ಆಯೋಜಕರನ್ನು ಪ್ರಾಥಮಿಕವಾಗಿ ಹೊಣೆಗಾರರನ್ನಾಗಿ ಮಾಡಲಾಗಿದೆ. ಜನಸಂದಣಿಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಮತ್ತು ಅಸಮರ್ಪಕ ಭದ್ರತಾ ಕ್ರಮಗಳು ಕಾಲ್ತುಳಿತದ ಘಟನೆ ನಡೆಯಲು ಮುಖ್ಯ ಕಾರಣಗಳಾಗಿವೆ ಎಂದು ಹೇಳಿರುವ ವರದಿಯು, ಸ್ಥಳೀಯ ಆಡಳಿತ ಮತ್ತು ಉತ್ತರ ಪ್ರದೇಶ ಪೊಲೀಸರ ಗಂಭೀರ ಲೋಪಗಳನ್ನು ಎತ್ತಿ ತೋರಿಸಿದೆ.

ಕಾಶ್ ಪಟೇಲ್: ಎಫ್‌ಬಿಐ ನಿರ್ದೇಶಕ ಭಾರತ ಮೂಲದ ವ್ಯಕ್ತಿಗೆ ಮನ್ನಣೆ

ನ್ಯೂಯಾರ್ಕ್: ಭಾರತೀಯ ಮೂಲದ ಕಾಶ್ ಪಟೇಲ್ ಫೆಡರರ್ ಬ್ಯೂರೋ ಆಫ್ ಇನ್ವೆಸ್ಟಿಗೇಶನ್ (ಎಫ್‌ಬಿಐ) ನಿರ್ದೇಶಕರಾಗಿದ್ದಾರೆ. ಕಾಶ್ ಪಟೇಲ್ ನ್ಯೂಯಾರ್ಕ್‌ನಲ್ಲಿ ನೆಲೆಸಿದ್ದ ಗುಜರಾತಿ ಮೂಲದ ಪೋಷಕರ ಮಗ. ಅವರು ರಿಚ್ಮಂಡ್ ವಿಶ್ವವಿದ್ಯಾಲಯದಿಂದ ಪದವಿ ಪಡೆದು, ನಂತರ ಪೇಸ್ ವಿಶ್ವವಿದ್ಯಾಲಯದ ಕಾನೂನು ಶಾಲೆಯಿಂದ ಜ್ಯೂರಿಸ್ ಡಾಕ್ಟರ್ ಪದವಿ ಪಡೆದರು.

ಕಾಶಿ ಪಟೇಲ್ ವಕೀಲರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು, ಸಾರ್ವಜನಿಕ ರಕ್ಷಕರಾಗಿ ಕೆಲಸ ಮಾಡಿದರು, ಅಲ್ಲಿ ಅವರು ಕೊಲೆ ಮತ್ತು ಮಾದಕವಸ್ತು ಕಳ್ಳಸಾಗಣೆಯಿಂದ ಹಿಡಿದು ರಾಜ್ಯ ಮತ್ತು ಫೆಡರಲ್ ನ್ಯಾಯಾಲಯಗಳಲ್ಲಿನ ತೀರ್ಪುಗಾರರ ವಿಚಾರಣೆಗಳಲ್ಲಿ ಸಂಕೀರ್ಣ ಆರ್ಥಿಕ ಅಪರಾಧಗಳವರೆಗೆ ಅನೇಕ ಪ್ರಕರಣಗಳನ್ನು ನಿರ್ವಹಿಸಿದರು.

ಅಮೆರಿಕಾದಲ್ಲಿ ಹುಟ್ಟಿ ಬೆಳೆದ ಪಟೇಲ್, ತಮ್ಮ ಭಾರತೀಯ ಪರಂಪರೆಯ ಬಗ್ಗೆ ಮತ್ತು ಅದು ಅವರ ಮೌಲ್ಯಗಳು ಮತ್ತು ವೃತ್ತಿಜೀವನವನ್ನು ಹೇಗೆ ರೂಪಿಸಿತು ಎಂಬುದರ ಬಗ್ಗೆ ಆಗಾಗ್ಗೆ ಮಾತನಾಡಿದ್ದಾರೆ. ಭಾರತದೊಂದಿಗಿನ ಅವರ ಪೂರ್ವಜರ ಬಲವಾದ ಸಂಬಂಧಗಳ ಹೊರತಾಗಿಯೂ, ಅವರ ವೃತ್ತಿಪರ ಕೆಲಸವು ಪ್ರಾಥಮಿಕವಾಗಿ ಅಮೆರಿಕದ ರಾಷ್ಟ್ರೀಯ ಭದ್ರತೆ, ಗುಪ್ತಚರ ಮತ್ತು ಕಾನೂನು ಜಾರಿಯ ಮೇಲೆ ಕೇಂದ್ರೀಕೃತವಾಗಿದೆ.

ಭಾರತೀಯ ಮೂಲದ 45 ವರ್ಷದ ವಕೀಲ ಕಾಶಿ ಪಟೇಲ್ ಅಧ್ಯಕ್ಷರ ಉಪ ಸಹಾಯಕ ಮತ್ತು ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ಭಯೋತ್ಪಾದನಾ ನಿಗ್ರಹಕ್ಕಾಗಿ ಹಿರಿಯ ನಿರ್ದೇಶಕ ಸೇರಿದಂತೆ ಹಲವಾರು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ.

ಎನ್‌ಇಪಿ ವಿರುದ್ಧ ಒಂದಾದ ದಕ್ಷಿಣ

ತಿರುವನಂತಪುರ: ಬಿಜೆಪಿಯೇತರ ಆಡಳಿತವಿರುವ ದಕ್ಷಿಣ ಭಾರತದ ರಾಜ್ಯಗಳ ಸಚಿವರು ಭಾಗವಹಿಸಿದ್ದ ಕೇರಳ ಸರ್ಕಾರ ಪ್ರಾಯೋಜಿತ ಯುಜಿಸಿ ಕರಡು ನಿಯಮಗಳು, 2025ರ ರಾಷ್ಟ್ರೀಯ ಸಮಾವೇಶದಲ್ಲಿ, ರಾಜ್ಯ ಸರ್ಕಾರಗಳ ಪಾತ್ರವನ್ನು ಕುಗ್ಗಿಸುವ ಮತ್ತು ಸಂವಿಧಾನದ ಒಕ್ಕೂಟ ಮನೋಭಾವಕ್ಕೆ ವಿರುದ್ಧವಾದ ನಿಯಮಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುವ 15 ಅಂಶಗಳ ನಿರ್ಣಯವನ್ನು ಅಂಗೀಕರಿಸಲಾಯಿತು. ಸಮಾವೇಶವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಈ ನಿಯಮಗಳನ್ನು ಉನ್ನತ ಶಿಕ್ಷಣದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ದುರ್ಬಲಗೊಳಿಸುವ ಪ್ರಯತ್ನದ ಭಾಗವಾಗಿ ಮಾತ್ರ ಇದನ್ನು ನೋಡಬಹುದಾಗಿದೆ ಎಂದರು.

ತೆಲಂಗಾಣ ಉಪಮುಖ್ಯಮಂತ್ರಿ ಮಲ್ಲು ಭಟ್ಟಿ ವಿಕ್ರಮಾರ್ಕ ಅವರು ಕರಡು ನಿಯಮಗಳು ರಾಜ್ಯಗಳನ್ನು ತಮ್ಮ ವಿಶ್ವವಿದ್ಯಾಲಯಗಳಲ್ಲಿ ಕೇವಲ ವೀಕ್ಷಕರನ್ನಾಗಿ ಮಾಡಿಬಿಟ್ಟಿದೆ ಎಂದು ಹೇಳಿದರು. ಕೇಂದ್ರ ಸರ್ಕಾರ ಮತ್ತು ಯುಜಿಸಿಗಳ ನಿಯಮ ಉಲ್ಲಂಘನೆಗಳ ವಿರುದ್ಧ ಇದೇ ರೀತಿಯ ಅಭಿಪ್ರಾಯಗಳನ್ನು ಕ್ರಮವಾಗಿ ಕರ್ನಾಟಕ ಮತ್ತು ತಮಿಳುನಾಡಿನ ಉನ್ನತ ಶಿಕ್ಷಣ ಸಚಿವರಾದ ಎಂ ಸಿ ಸುಧಾಕರ್ ಮತ್ತು ಗೋವಿ ಚೆಝಿಯಾನ್ ಅವರು ಕೂಡ ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರ
ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಕಮಲಾಪುರ.
ದೂರವಾಣಿ: 08394–241661 e-mail.ID- hwhama@gmail.com
ಸಂಖ್ಯೆ:ಹವಿಪಪ್ರನಿಪ್ರಾ/ಹೊ/ಇ–ಟೆಂಡರ್/2024–25 ದಿನಾಂಕ: 20–02–2025

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯಲ್ಲಿ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಈ ಕೆಳಗಿನ ಇ–ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಐ.ಬಿ.ಆವರಣ, ಹಂಪಿ ರೋಡ್, ಕಮಲಾಪುರ ಇವರ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಸ್ಥಳ	ಇ.ಎಂ.ಡಿ. ಮೊತ್ತ ರೂ.ಗಳಲ್ಲಿ	ಕಾಮಗಾರಿ ಅವಧಿ
1	Providing 01 Supervisor & 25 Operators Manpower Service to HWHAMA for Operation of Battery Operated Buggies (Tender No: HWHAMA/2024-25/SE0004)	ಹಂಪಿ ಸ್ಥಳೀಯ ಯೋಜನಾ ಪ್ರದೇಶ	1,23,000.00 Through E-Procurement	12 ತಿಂಗಳು.

ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1. ಇ–ಟೆಂಡರ್ ಅವಧಿ ದಿನಾಂಕ: 20/02/2025 ರಿಂದ 06/03/2025. 2. ಇ–ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 06/03/2025 ಸಂಜೆ 4:30ರ ವರೆಗೆ. 3. ಇ–ಟೆಂಡರ್‌ನ್ನು ತೆರೆಯುವ ದಿನಾಂಕ: 07/03/2025 ಸಂಜೆ 5:30 ಗಂಟೆಗೆ

ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ ಆರ್.ಓ.ಸಂಖ್ಯೆ/540
ಸಹಿ/–ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಕಮಲಾಪುರ

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
ಕಾರ್ಯನಿರ್ವಾಹಕ ಅಭಿಯಂತರ, ಕಾರ್ಯಾಲಯ, ಯೋಜನಾ ವಿಭಾಗ, 171, ಹಾವಣ್ಣವರ ಬಿಲ್ಡಿಂಗ್ ಕ್ಲಬ್ ರೋಡ್, ಬೆಳಗಾವಿ.
ದೂರವಾಣಿ ಸಂ: 0831–2420728, ಫ್ಯಾಕ್ಸ್:0831–2420728, ಇ–ಮೇಲ್:kn-blg1@pmgsy.nic.in
Ref : ಯೋವಿಬೆ/ಕೆಆರ್‌ಆರ್‌ಡಿಎ/ತಾಂ.ಶಾ/ಟೆಂಡರ/ನ.ಗ್ರಾ.ನ.ರ ಹಂತ–3&4/2024–25/553 Date:21.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ – 2ನೇ ಕರೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ಬೆಳಗಾವಿ (ಗ್ರಾಮೀಣ), ಬೆಳಗಾವಿ (ದಕ್ಷಿಣ), ಹುಕ್ಕೇರಿ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–3 ಹಾಗೂ ಹಂತ–4ರಡಿ (ಮರುಡಾಂಬರೀಕರಣ ಕಾಮಗಾರಿ) ರಸ್ತೆಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ ಯೋಜನೆಯ ಮಾನದಂಡಗಳನ್ನು ಅನುಸರಿಸಿ ಅಭಿವೃದ್ಧಿಪಡಿಸಲು ಕರ್ನಾಟಕ ಸರ್ಕಾರದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (KPPP) ಮುಖಾಂತರ ಐಟಂ ರೇಟ್ ಅಲ್ಪಾವಧಿ ಟೆಂಡರಗಳನ್ನು ಕರೆಯಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸುತ್ತದೆ.

ಟೆಂಡರ ಪ್ರಕ್ರಿಯೆಯ ವಿವರಗಳು ಕೆಳಕಂಡಂತಿವೆ

1	ಪ್ಯಾಕೇಜಗಳ ವಿವರ	Category	ಟೆಂಡರಗಿಟ್ಟ ಮೊತ್ತ
1]	ಕೆ.ಎಸ್.04–15ಬಿ–ಬೆಳಗಾವಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರ	Other	ರೂ. 14,52,300.00
2]	ಕೆ.ಎಸ್.04–95ಬಿ–ಬೆಳಗಾವಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರ	Other	ರೂ. 42,06,893.00
3]	ಕೆ.ಎಸ್.04–69ಎ–ಬೆಳಗಾವಿ ದಕ್ಷಿಣ ವಿಧಾನ ಸಭಾ ಕ್ಷೇತ್ರ	SC	ರೂ. 85,60,294.00
4]	ಕೆ.ಎಸ್.04–42ಎ–ಹುಕ್ಕೇರಿ ವಿಧಾನ ಸಭಾ ಕ್ಷೇತ್ರ	Category–1	ರೂ. 59,13,010.00
5]	ಕೆ.ಎಸ್.04–77ಎ–ಹುಕ್ಕೇರಿ ವಿಧಾನ ಸಭಾ ಕ್ಷೇತ್ರ	ST	ರೂ. 83,07,600.00
2	ಮುಂಗಡ ಠೇವಣಿಯ ಮೊತ್ತ	AS KPPP	
3	ಖಾಲಿ ಟೆಂಡರ್ ಫಾರಂಗಳನ್ನು online ಮೂಲಕ Download ಮಾಡಿಕೊಳ್ಳಲು ದಿನಾಂಕ :	21/02/2025	
4	ಭರ್ತಿಮಾಡಿದ ಟೆಂಡರ್‌ಗಳನ್ನು online ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ:	03/03/2025 (17–30 ಗಂಟೆ)	
5	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:	05/03/2025 (11–00ಗಂಟೆ)	
6	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	ನಂತರದಲ್ಲಿ ತಿಳಿಸಲಾಗುವುದು	
	ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ನೋಡಬಹುದು.		

ಸಹಿ/–ಕಾರ್ಯನಿರ್ವಾಹಕ ಅಭಿಯಂತರು, ಯೋಜನಾ ವಿಭಾಗ ಬೆಳಗಾವಿ.
DIPR/BGM/RO-NO-1748/KSMCA/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ.
ಸಂಃಕಾನಿಇಂ/ಲೋಇ/ತಿದ್ದುಪಡಿಇ–ಟೆಂಡರ್/ತಾಂಶಾ–1/2024–25/ 3253, ದಿನಾಂಕ: 18–02–2025

–ಃ ತಿದ್ದುಪಡಿ ಇ–ಟೆಂಡರ್ ಪ್ರಕಟಣೆ ಃ–

ವಿಷಯಃ 2024–25ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆ ಅಡಿಯಲ್ಲಿನ ಕಾಮಗಾರಿಗಳ ತಿದ್ದುಪಡಿ ಇ–ಟೆಂಡರ್ ಪ್ರಕಟಣೆ ಕುರಿತು.
ಉಲ್ಲೇಖಃ ಈ ಕಛೇರಿಯ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂಃಕಾನಿಅ/ಲೋಇ/ಯಾವಿ/ ತಾಂಶಾ–1/2024–25/ 3064, ದಿನಾಂಕಃ 03–02–2025.

ಉಲ್ಲೇಖಿತ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಮೂಲಕ ಆಹ್ವಾನಿಸಲಾದ ಕಾಮಗಾರಿಗಳ ಪೈಕಿ 2024–25ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆ ಅಡಿಯಲ್ಲಿ ಕರೆಯಲಾದ ಕಾಮಗಾರಿಗಳ ಪೈಕಿ (1)17690, (2)17691, (3)17692 ಮತ್ತು (4)16219 ಕಾಮಗಾರಿಗಳಿಗೆ ಇ–ಟೆಂಡರ್ ನೋಟಿಫಿಕೇಶನ್‌ನಲ್ಲಿ ಗುತ್ತಿಗೆದಾರರ ಅರ್ಹತೆ(ಲೈಸೆನ್ಸ್)ಯನ್ನು ತಿದ್ದುಪಡಿ ಮಾಡಲಾಗಿದ್ದು ವಿವರಗಳು ಕೆಳಗಿನಂತೆ ಇರುತ್ತವೆ.

ಕ್ರ.ಸಂ	ಟೆಂಡರ್‌ನಲ್ಲಿ ನಮೂದಿಸಲಾದ ವಿವರ	ತಿದ್ದುಪಡಿ ಮಾಡಲಾದ ವಿವರ
1	3ನೇ ದರ್ಜೆ ಹಾಗೂ ಮೇಲ್ಪಟ್ಟು	MSME Certificate

ಟಿಪ್ಪಣಿಃ 1) ಯಾವುದೇ ಮಾರ್ಪಾಡು ಬದಲಾವಣೆಗಳನ್ನು https://kppp.karnataka.gov.in ರಲ್ಲಿ ಮಾಡಲಾಗುವುದು. 2)ಉಳಿದಂತೆ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/504/ಕೆ.ಎಸ್.ಎಂ.ಸಿ.ಎ/2024–25

ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು.
Office : 08262 – 230420 Fax: 08262 – 232272 Commissioner : 08262 – 232272
Help Line : 08262 – 232222 E-Mail ID: comm_ckg@yahoo.com
Website : www.chickmagalurcity.gov.in
ಸಂಖ್ಯೆ:ಸಿಎಂಸಿ/ಸಿಕೆಎಂ/ಸಿಆರ್/ಎಬಿಸಿ–ಎಆರ್‌ವಿ/01/2024–25 ದಿನಾಂಕ: 20.02.2025.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಕಂಡ ವಿವರದ ಕೆಲಸವನ್ನು ನಿರ್ವಹಿಸುವ ಬಗ್ಗೆ ಅರ್ಹ ಆರೋಗ್ಯ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ಷರತ್ತುಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ ಸಂ.	ಕೆಲಸದ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಠೇವಣಿ ಮೊತ್ತ (ರೂ.ಗಳಲ್ಲಿ)
1	DMA/2024-25/SE3201/CALL-4 ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಗೆ ಬರುವ ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಹಾಗೂ ರೇಬೀಸ್ ಚುಚ್ಚುಮದ್ದು ಮಾಡಿಸುವ ಕುರಿತು.	26.75	53500/-

ಟೆಂಡರ್ ಫಾರಂ ಇ–ಪ್ರೊಕ್ಯೂರ್‌ಮೆಂಟ್‌ನಂತೆ. ಕಾಲಾವಧಿ– 90 ದಿನಗಳು
1. ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 05.03.2025 17.00 ಗಂಟೆಯವರೆಗೆ.
2. ಬಿಡ್ ತೆರೆಯುವ ದಿನಾಂಕ: 06.03.2025 ರ 17.01 ಗಂಟೆಗೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– (ಶ್ರೀಮತಿ ಸುಜಾತ ಶಿವಕುಮಾರ್) ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/– (ಶ್ರೀ ಬಿ.ಸಿ.ಬಸವರಾಜು ಕೆ.ಎಂ.ಎ.ಎಸ್) ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24–25/167/1707

ಸಮಾಚಾರ ಸಣ್ಣದಲ್ಲ

ಮಾದಪ್ಪನ ಹುಂಡಿಗೆ 1.94 ಕೋಟಿ ರು. ಜಮೆ

ಚಾಮರಾಜನಗರ: ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿರುವ ಮಲೆ ಮಹದೇಶ್ವರ ದೇಗುಲದ ಹುಂಡಿ ಎಣಿಕೆ ಕಾರ್ಯ ನಡೆದಿದ್ದು, 1.94 ಕೋಟಿ ರು. ಸಂಗ್ರಹವಾಗಿದೆ. ಅಂದಹಾಗೆ, ಇಷ್ಟು ಮೊತ್ತ ಸಂಗ್ರಹವಾಗಿದ್ದು, 28 ದಿನಗಳಲ್ಲಿ ಎಂಬುದು ಗಮನಾರ್ಹ. ಹರಕೆ ರೂಪದಲ್ಲಿ ಹಣ, ಚಿನ್ನ, ಬೆಳ್ಳಿಯನ್ನು ಅರ್ಪಿಸಿದ್ದು, 63 ಗ್ರಾಂ ಚಿನ್ನ, ಅರ್ಧ ಕೆಜಿ ಬೆಳ್ಳಿ ಸಂಗ್ರಹವಾಗಿದೆ. ಹುಂಡಿ ಎಣಿಕೆ ಕಾರ್ಯವು ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಸ್ವಾಮಿಜಿ ಹಾಗೂ ಪ್ರಾಧಿಕಾರದ ಕಾರ್ಯದರ್ಶಿ ರಘು ಅವರ ನೇತೃತ್ವದಲ್ಲಿ ನಡೆಯಿತು.

ವ್ಹೀಲಿಂಗ್: ಹನ್ನೊಂದು ಆರೋಪಿಗಳ ಬಂಧನ

ಬೆಂಗಳೂರು: ಮಧ್ಯರಾತ್ರಿ ನಡುರಸ್ತೆಯಲ್ಲಿ ಮಾರಕಾಸ್ತ್ರ ಹಿಡಿದು ವ್ಹೀಲಿಂಗ್ ಮಾಡಿದ ಪ್ರಕರಣದ 11 ಆರೋಪಿಗಳನ್ನು ಬೆಂಗಳೂರು ಪೂರ್ವ ವಿಭಾಗದ ಪೊಲೀಸರು ಬಂಧಿಸಿದ್ದಾರೆ. ನಯೀಂ ಪಾಶಾ, ಅರಾಫತ್, ಸಾಹಿಲ್ ಹುಸೈನ್, ನಜ್ಮತ್, ಅದ್ನಾನ್ ಪಾಶಾ, ನಿಯಾಮತುಲ್ಲಾ ಸೇರಿದಂತೆ ಒಟ್ಟು 11 ಆರೋಪಿಗಳನ್ನು ಬಂಧಿಸಲಾಗಿದೆ. 7 ದ್ವಿಚಕ್ರ ವಾಹನಗಳನ್ನ ಜಪ್ತಿ ಮಾಡಲಾಗಿದೆ ಎಂದು ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ಡಿ.ದೇವರಾಜ್ ತಿಳಿಸಿದ್ದಾರೆ. ಫೆಬ್ರವರಿ 13ರಂದು ರೀಲ್ಸ್ ಕ್ರೇಜ್‌ಗಾಗಿ ಮಾರಕಾಸ್ತ್ರ ಹಿಡಿದು, ತ್ರಿಬಲ್ ರೈಡ್, ವ್ಹೀಲಿಂಗ್ ಮಾಡುತ್ತಾ ಕೆ.ಜಿ ಹಳ್ಳಿಯಿಂದ, ಡಿ.ಜೆ ಹಳ್ಳಿ, ರಾಮಮೂರ್ತಿ ನಗರ ಮಾರ್ಗವಾಗಿ ಹೊಸಕೋಟೆ ಟೋಲ್‌ವರೆಗೂ ಆರೋಪಿಗಳು ಹೋಗಿದ್ದರು. ಅದೇ ರೀತಿ ಕೆ.ಜಿ ಹಳ್ಳಿಗೆ ವಾಪಸಾಗಿದ್ದರು. ಹಬ್ಬದ ಹಿನ್ನೆಲೆಯಲ್ಲಿ ಪೂರ್ವ ವಿಭಾಗದಲ್ಲಿ ಪೊಲೀಸರ ಬಿಗಿ ಬಂದೋಬಸ್ತ್ ಕಲ್ಪಿಸಿದ್ದರ ಮಧ್ಯೆಯೂ ಕಿಡಿಗೇಡಿಗಳ ಕೃತ್ಯವನ್ನು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಗಂಭೀರವಾಗಿ ಪರಿಗಣಿಸಿದ್ದರು. ಆರೋಪಿಗಳ ವಿರುದ್ಧ ಶಸ್ತ್ರಾಸ್ತ್ರ ಕಾಯಿದೆಯಡಿ ಡಿ. ಜೆ.ಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಸದ್ಯ 11 ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಟಲ್ ಪ್ರೇರಣಾಶಕ್ತಿ: ಬಿಎಸ್ ಯಡಿಯೂರಪ್ಪ

ಬೆಂಗಳೂರು: ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸಂಘಟನೆ, ಹೋರಾಟ ಇವೆಲ್ಲವೂ ಇವತ್ತಿನ ಕಾರ್ಯಕರ್ತರಿಗೆ ಪ್ರೇರಣಾಶಕ್ತಿಯಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಹೇಳಿದರು. ವಾಜಪೇಯಿ ಶತಮಾನೋತ್ಸವ ಕಾರ್ಯಕ್ರಮದ ಪ್ರಯುಕ್ತ ಅಟಲ್ ಜೀ ಶತಮಾನೋತ್ಸವ ಅಭಿಯಾನದ ಪ್ರಮುಖರು ಬಿ.ಎಸ್.ಯಡಿಯೂರಪ್ಪ ಅವರನ್ನು ಅವರ ನಿವಾಸಕ್ಕೆ ತೆರಳಿ ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯಕ್ಕೆ ಬಂದ ಸಂದರ್ಭದಲ್ಲಿ ಅಟಲ್ ಅವರ ಜೊತೆಯಲ್ಲಿ ಹಲವು ಬಾರಿ ಪ್ರವಾಸ ಮಾಡಿದ್ದೇನೆ. ಆ ಪ್ರವಾಸದ ಸಂದರ್ಭದಲ್ಲಿ ಸಂಘಟನೆ ಬಲಪಡಿಸಲು ಅಟಲ್ ಜೀ ಅವರು ಹಲವಾರು ರೀತಿಯಲ್ಲಿ ಮಾರ್ಗದರ್ಶನ ಮಾಡಿದ್ದರು ಎಂದು ನೆನಪಿಸಿದರು. ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿಯವರು ಗೌರವ ಸಮರ್ಪಣೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಅಟಲ್ ಜೀ ಶತಮಾನೋತ್ಸವ ಅಭಿಯಾನದ ರಾಜ್ಯ ಪ್ರಮುಖರಾದ ಡಾ. ಶಿವಯೋಗಿ ಸ್ವಾಮಿ, ರಾಜ್ಯ ಸಂಚಾಲಕ ಜಗದೀಶ ಹಿರೇಮನಿ, ಜಿಲ್ಲಾ ಅಧ್ಯಕ್ಷ ಎಸ್. ಹರೀಶ್, ರಾಜ್ಯ ಸಮಿತಿ ಸದಸ್ಯರಾದ ಸದಾಶಿವ, ಮಮತಾ ಉದಯ್, ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

ಹಳೆಯ ಅಗ್ನಿಶಾಮಕ ವಾಹನಗಳು ಗುಜರಿಗೆ

ಬೆಂಗಳೂರು: ಕೇಂದ್ರ ಸರಕಾರದ ಗುಜರಿ ನೀತಿಯಡಿ 15 ವರ್ಷಕ್ಕೂ ಹಳೆಯದಾದ ವಾಹನಗಳಿಗೆ ಮುಕ್ತಿ ಕೊಡಲು ರಾಜ್ಯ ಅಗ್ನಿಶಾಮಕ ಇಲಾಖೆಯು ಮುಂದಾಗಿದೆ. ರಕ್ಷಣಾ ಕಾರ್ಯಾಚರಣೆಗೆ ತೊಡಗಿಸಿಕೊಳ್ಳುವ ಅಗ್ನಿಶಾಮಕ ವಾಹನಗಳು ಹಳೆಯದಾಗಿವೆ. ಈ ವಾಹನಗಳು ಚಾಲನೆ ಸ್ಥಿತಿಯಲ್ಲಿದ್ದರೂ ಗುಣಮಟ್ಟ ಹಾಗೂ ಕಾರ್ಯಕ್ಷಮತೆ ಹಂತ-ಹಂತವಾಗಿ ಕ್ಷೀಣಿಸುತ್ತಿವೆ. ಅಲ್ಲದೇ, ಕೇಂದ್ರದ ಗುಜರಿ ನೀತಿಯು ಇದಕ್ಕೆ ಅಡ್ಡಿಯಾಗಿದೆ. ಹೀಗಾಗಿ 15 ವರ್ಷ ಮೇಲ್ಪಟ್ಟ ಹಳೆಯ ಅಗ್ನಿಶಾಮಕ ಸೇರಿದಂತೆ ಇನ್ನಿತರ ಅಗ್ನಿನಂದಕ ವಾಹನಗಳು ನೇಪಥ್ಯಕ್ಕೆ ಸರಿಯಲಿವೆ. ರಾಜ್ಯದಲ್ಲಿ ಒಟ್ಟು 219 ಅಗ್ನಿಶಾಮಕ ಠಾಣೆಗಳಿದ್ದು, ಈ ಪೈಕಿ 19 ಠಾಣೆಗಳು ಬೆಂಗಳೂರು ನಗರದಲ್ಲಿವೆ. 25 ಸಾವಿರ ಲೀಟರ್‌ನಿಂದ 1 ಲಕ್ಷ ಲೀಟರ್ ನೀರು ತುಂಬುವ ಸಾಮರ್ಥ್ಯದ ಅಗ್ನಿಶಾಮಕ ವಾಹನಗಳಿವೆ. ರಾಜಧಾನಿ ಸೇರಿದಂತೆ ಸರಣಿ ಅಗ್ನಿ ಅವಘಡಗಳು ನಡೆದಾಗ ತುರ್ತಾಗಿ ತೆರಳಿ ರಕ್ಷಣಾ ಕಾರ್ಯಾಚರಣೆ ನಡೆಸುವ ಜವಾಬ್ದಾರಿ ಇಲಾಖೆಯದ್ದಾಗಿದೆ. ಇನ್ನು ಆರು ತಿಂಗಳಲ್ಲಿ ಹೊಸ ವಾಹನಗಳು ರಸ್ತೆಗಿಳಿಯಲಿವೆ ಎಂದು ರಾಜ್ಯ ಅಗ್ನಿಶಾಮಕ ಇಲಾಖೆಯ ನಿರ್ದೇಶಕ ಟಿ.ಎಸ್. ಶಿವಶಂಕರ್ ತಿಳಿಸಿದ್ದಾರೆ.

{ ಈಶ್ವರ ಖಂಡ್ರೆ } ಅರಣ್ಯ ಸಚಿವ

ವನ್ಯಜೀವಿ ದಾಳಿ ಮತ್ತು ಕಳ್ಳ ಬೇಟೆಗಾರರ ದಾಳಿಯ ಭೀತಿಯ ನಡುವೆಯೂ ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆ ಮಾಡಲು ಶ್ರಮಿಸುತ್ತಿರುವ ಸಿಬ್ಬಂದಿಗೆ ಅಪಾಯ ಭತ್ಯೆ ನೀಡಲು ರಾಜ್ಯ ಸರಕಾರ ನಿರ್ಧರಿಸಿದೆ. ಇಂದು ಇಡೀ ವಿಶ್ವ ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆಯಂತಹ ಸವಾಲುಗಳನ್ನು ಎದುರಿಸುತ್ತಿದೆ.

ಪ್ರೋರೇಟಾ ಶುಲ್ಕದ ಬಗ್ಗೆ ಇರುವ ಗೊಂದಲಗಳ ಪರಿಹಾರ | ಪ್ರತಿನಿತ್ಯ 200 ಲೀಟರ್ ನೀರು: ಡಾ.ರಾಮ್

ಅಪಾರ್ಟ್‌ಮೆಂಟ್‌ಗಳಿಗೆ ಕಾವೇರಿ ಸಂಪರ್ಕ ಪ್ರಕ್ರಿಯೆ ಸರಳೀಕರಣ

ಬೆಂಗಳೂರು: ಅಪಾರ್ಟ್‌ಮೆಂಟ್‌ಗಳು ಕಾವೇರಿ ನೀರಿನ ಸಂಪರ್ಕ ಪಡೆಯುವ ಪ್ರಕ್ರಿಯೆ ಸರಳೀಕರಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಮುಂಬರುವ ಬೇಸಿಗೆಯಲ್ಲಿ ನೀರಿನ ಸಮಸ್ಯೆಗಳ ಬಗ್ಗೆ ಅಪಾರ್ಟ್‌ಮೆಂಟ್ ನಿವಾಸಿಗಳಲ್ಲಿ ಜಾಗೃತಿ ಮೂಡಿಸುವ ಹಾಗೂ ಕಾವೇರಿ ಸಂಪರ್ಕಕ್ಕೆ ಪಡೆಯುವ ನಿಟ್ಟಿನಲ್ಲಿ ಅವರಲ್ಲಿರುವ ಗೊಂದಲಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಸರಣಿ ಸಭೆಗಳಲ್ಲಿ ಭಾಗವಹಿಸಿ ಈ ಮಾಹಿತಿ ನೀಡಿದರು.

ಮಾಡೆಲ್ ಕ್ಯಾಲ್ಯುಕ್ಯುಲೇಟರ್: ಅಪಾರ್ಟ್‌ಮೆಂಟ್‌ಗಳಿಗೆ ಹೆಚ್ಚಿನ ದರ ವಿಧಿಸಲಾಗುತ್ತಿದೆ ಎನ್ನುವ ನಿವಾಸಿಗಳ ಆತಂಕಗಳನ್ನು ಹಾಗೂ ಇನ್ನಿತರೆ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಳಿ ಅಧ್ಯಕ್ಷ ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಸರಣಿ ಸಭೆಯಲ್ಲಿ ಭಾಗವಹಿಸಿ, ಹಲವಾರು ಗೊಂದಲಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಿದರು.

ಅರ್ಜಿ ಸಲ್ಲಿಕೆಯ ಪ್ರಕ್ರಿಯೆ, ಅದರ ಫಾಲೋಅಪ್ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಇರುವ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವುದು ಅಗತ್ಯವಿದೆ. ಅಲ್ಲದೇ, ಅಪಾರ್ಟ್‌ಮೆಂಟ್‌ಗಳು ಕಾವೇರಿ ಸಂಪರ್ಕ ಪಡೆಯುವ ಸಂದರ್ಭದಲ್ಲಿ ವಿಧಿಸಲಾಗುತ್ತಿರುವ ಶುಲ್ಕದ ಬಗ್ಗೆ ಬಹಳಷ್ಟು ಗೊಂದಲಗಳಿವೆ. ಈ ಗೊಂದಲಕ್ಕೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಜಲಮಂಡಳಿಯ ವೆಬ್‌ಸೈಟ್‌ನಲ್ಲಿ ಶುಲ್ಕವನ್ನು ಪರಿಶೀಲಿಸಲು ಮಾದರಿ ಕ್ಯಾಲ್ಯುಕ್ಯುಲೇಟರ್‌ನ್ನು ಅಳವಡಿಸಲಾಗುವುದು. ಈ ಕ್ಯಾಲ್ಯೂಕ್ಯೂಲೇಟರ್ ಮೂಲಕ ಗ್ರಾಹಕರು ತಮ್ಮ ಅಪಾರ್ಟ್‌ಮೆಂಟ್‌ಗಳಿಗೆ ಅಥವಾ ಮನೆಗಳಿಗೆ ವಿಧಿಸಲಾಗುವ ಶುಲ್ಕದ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ. ಒಟ್ಟಾರೆಯಾಗಿ ಅಪಾರ್ಟ್‌ಮೆಂಟ್‌ಗಳು ಕಾವೇರಿ ಸಂಪರ್ಕ ಪಡೆದುಕೊಳ್ಳುವ ಪ್ರಕ್ರಿಯೆ ಸರಳೀಕರಣಗೊಳಿಸಲಾಗುವುದು ಎಂದರು.

ಅಪಾರ್ಟ್‌ಮೆಂಟ್ ನಿವಾಸಿಗಳಲ್ಲಿ ಜಾಗೃತಿ ಮೂಡಿಸುವ ಸಭೆಯನ್ನು ಜಲಮಂಡಳಿ ಹಮ್ಮಿಕೊಂಡಿತು.

ದೂರು ಪರಿಹಾರಕ್ಕೆ ಸಮಿತಿ: ಶುಲ್ಕ ಸಂಬಂಧಿಸಿದಂತಹ ಯಾವುದೇ ಸಮಸ್ಯೆಗಳು ಹಾಗೂ ಗೊಂದಲಗಳು ಉಂಟಾದಲ್ಲಿ ಅದರ ಬಗ್ಗೆ ಗ್ರಾಹಕರು ದೂರು ನೀಡಲು ಹಾಗೂ ಅದಕ್ಕೆ ಪರಿಹಾರ ಪಡೆದುಕೊಳ್ಳಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಮುಖ್ಯ ಅಭಿಯಂತರರ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು. ಈ ಸಮಿತಿ ದೂರುಗಳನ್ನು ಪರಿಶೀಲಿಸಿ ಅವುಗಳ ಬಗ್ಗೆ ಗ್ರಾಹಕರಲ್ಲಿ ಉಂಟಾಗಿರುವ ಗೊಂದಲಗಳನ್ನು ಪರಿಹರಿಸುವ ಕಾರ್ಯ ನಿರ್ವಹಿಸಲಿದೆ. ಹೆಚ್ಚಿನ ಶುಲ್ಕ ಹಾಗೂ ಅನಗತ್ಯ ವಿಳಂಬಕ್ಕೆ ಈ ಸಮಿತಿಯ ಮೂಲಕ ಪಾರದರ್ಶಕವಾಗಿ ಪರಿಹಾರ ನೀಡುವುದು ನಮ್ಮ ಉದ್ದೇಶವಾಗಿದೆ ಎಂದರು.

ನಿಗದಿತ ಪ್ರಮಾಣದ ನೀರು

ಕಾವೇರಿ ನೀರಿನ ಸಂಪರ್ಕ ಪಡೆದುಕೊಳ್ಳುವ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಪ್ರತಿನಿತ್ಯ ಪ್ರತಿಮನೆಗೂ ಪ್ರತಿನಿತ್ಯ 200 ಲೀಟರ್ ನೀರು ಸರಬರಾಜು ಮಾಡಲಾಗುವುದು. ಕಾವೇರಿ 5ನೇ ಹಂತದ ಯೋಜನೆ ಲೋಕಾರ್ಪಣೆಯ ನಂತರ ಬೆಂಗಳೂರು ಜಲಮಂಡಳಿಯ ಬಳಿ ಸಾಕಷ್ಟು ನೀರು ಲಭ್ಯವಿದೆ. ಹಂತ ಹಂತವಾಗಿ ಎಲ್ಲಾ ಪ್ರದೇಶಗಳಿಗೂ ಈ ನೀರನ್ನು ತಲುಪಿಸುವ ಕಾರ್ಯದಲ್ಲಿ ಬೆಂಗಳೂರು ಜಲಮಂಡಳಿ ತೊಡಗಿಕೊಂಡಿದೆ. ಅಗತ್ಯವಿರುವ ಪ್ರಮಾಣದ ನೀರನ್ನು ನೀಡುವುದು ನಮ್ಮ ಗುರಿಯಾಗಿದೆ ಎಂದರು.

ದುಬಾರಿ ಠೇವಣಿ ತುಂಬಲು ಇಎಂಐ ಸೌಲಭ್ಯ ?

ಬೆಂಗಳೂರು: ಕಾವೇರಿ ನೀರು ಸಂಪರ್ಕಕ್ಕೆ ದೊಡ್ಡ ಮೊತ್ತದ ಠೇವಣಿ ದರ ಭರಿಸಲು ಅಪಾರ್ಟ್‌ಮೆಂಟ್‌ಗಳು ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಇಎಂಐ ಮೂಲಕ ಠೇವಣಿ ಮೊತ್ತ ಪಾವತಿಸಲು ಅವಕಾಶ ಕಲ್ಪಿಸಲು ಜಲಮಂಡಳಿ ಚಿಂತನೆ ನಡೆಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್, ''ಅಪಾರ್ಟ್‌ಮೆಂಟ್ ಸಮುದಾಯಗಳು ಇಎಂಐ ಸೌಲಭ್ಯ ಕಲ್ಪಿಸಲು ಮನವಿ ಮಾಡಿದ್ದವು. ಸುಲಭ ಕಂತುಗಳ ಮೂಲಕ ಠೇವಣಿ ಭರಿಸಲು ಅವಕಾಶ ನೀಡುವ ಸಂಬಂಧ ಸರಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು ಮತ್ತು ಸಿಎಂ ಹಾಗೂ ಡಿಸಿಎಂ ಅವರೊಂದಿಗೆ ಈ ಬಗ್ಗೆ ಚರ್ಚಿಸಲಾಗುವುದು,'' ಎಂದು ಹೇಳಿದ್ದಾರೆ.

2020ರ ಮಾರ್ಚ್‌ನಲ್ಲಿ ಕಾವೇರಿ ನೀರು ಸಂಪರ್ಕದ ಠೇವಣಿ ದರ ಪರಿಷ್ಕರಿಸುವ ಮೂಲಕ ಚದರ ಅಡಿಗೆ 250 ರೂ. ಇದ್ದ ಮೊತ್ತವನ್ನು 400 ರೂ.ಗೆ ಏರಿಕೆ ಮಾಡಲಾಗಿತ್ತು. ಅಲ್ಲದೆ, ನಲ್ಲಿ ಸಂಪರ್ಕ ಹಾಗೂ ಒಳಚರಂಡಿ ಸಂಸ್ಕರಣಾ ಘಟಕ ಸೇರಿಸಿದರೆ ಈ ವೆಚ್ಚ ಶೇ.62ರಷ್ಟು ಏರಿಕೆಯಾಗಿತ್ತು. ಹೀಗಾಗಿ, ಠೇವಣಿ ಮೊತ್ತ ಪಾವತಿಸುವುದೇ ವಸತಿ ಸಮುಚ್ಚಯ ನಿವಾಸಿಗಳಿಗೆ ತಲೆನೋವಾಗಿ ಪರಿಣಮಿಸಿತ್ತು.

2 ಬಿಎಚ್‌ಕೆ, 3 ಬಿಎಚ್‌ಕೆ ಎಂಬ ವ್ಯತ್ಯಾಸವಿಲ್ಲದೆ ಚದರಡಿ ಸಂಪರ್ಕದ ಲೆಕ್ಕಾಚಾರದಲ್ಲಿ ಠೇವಣಿ ಮೊತ್ತ ನಿರ್ಧರಿಸಲಾಗುತ್ತದೆ. ಇದರಿಂದ ಒಂದೊಂದು ಮನೆಗೆ ಕಾವೇರಿ ನೀರಿನ ಸಂಪರ್ಕ ಪಡೆಯಲು 1.2 ಲಕ್ಷ ರೂ. ವೆಚ್ಚ ತಗಲಲಿದೆ. 500 ಫ್ಲ್ಯಾಟ್‌ಗಳಿರುವ ಅಪಾರ್ಟ್‌ಮೆಂಟ್‌ಗಳಿಗೆ 3.6 ಕೋಟಿ ರೂ. ಠೇವಣಿಯಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅಪಾರ್ಟ್‌ಮೆಂಟ್ ಮಾಲೀಕರಿಗೆ ರಿಲೀಫ್ ನೀಡಲು ಜಲಮಂಡಳಿ ಚಿಂತನೆ ನಡೆಸಿದೆ.

ಚುಚ್ಚುಮದ್ದು ನಿರ್ಬಂಧಿಸುವಂತೆ ಕೇಂದ್ರಕ್ಕೆ ಗುಂಡೂರಾವ್ ಪತ್ರ

ಬೆಂಗಳೂರು: ಇತರ ರಾಜ್ಯಗಳಲ್ಲಿ ತಯಾರಾದ ಒಂಬತ್ತು ಇಂಜೆಕ್ಷನ್ ಔಷಧಿಗಳು ಕರ್ನಾಟಕ ಸರಕಾರದ ಪ್ರಯೋಗಾಲಯಗಳಲ್ಲಿ ನಡೆಸಲಾದ ಸ್ಟೆರಿಲಿಟಿ ಟೆಸ್ಟ್‌ನಲ್ಲಿ ವಿಫಲವಾಗಿವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಹೇಳಿದ್ದಾರೆ.

ಈ ಸಂಬಂಧ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರಿಗೆ ಪತ್ರ ಬರೆದಿರುವ ಆರೋಗ್ಯ ಸಚಿವರು, ಈ ಔಷಧಿಗಳನ್ನು ಇನ್ನು ಮುಂದೆ ಕರ್ನಾಟಕದಲ್ಲಿ ಮಾರಾಟ ಮಾಡದಂತೆ ಕ್ರಮ ತೆಗೆದುಕೊಳ್ಳುವಂತೆ ತಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಬರುಯಿಪುರದ ಫಾರ್ಮಾ ಇಂಪೆಕ್ಸ್ ಲ್ಯಾಬೊರೇಟರೀಸ್ ತಯಾರಿಸಿದ ಮೆಟ್ರೋನಿಡಜೋಲ್ ಇಂಜೆಕ್ಷನ್, ಇಂದೋರ್(ಎಂಪಿ) ಆಲ್ಪಾ ಲ್ಯಾಬೊರೇಟರೀಸ್ ತಯಾರಿಸಿದ ಡಿಕ್ಲೋಫೆನಾಕ್ ಸೋಡಿಯಂ ಇಂಜೆಕ್ಷನ್, ಇಂದೋರ್ (ಎಂಪಿ) ರುಸೋಮಾ ಲ್ಯಾಬೊರೇಟರೀಸ್ ತಯಾರಿಸಿದ ಡೆಕ್ಸ್ಟ್ರೋಸ್ ಇಂಜೆಕ್ಷನ್ ಸೇರಿದಂತೆ ಸಂತಾನಹೀನತೆ ಪರೀಕ್ಷೆಯಲ್ಲಿ ವಿಫಲವಾದ 9 ಇಂಜೆಕ್ಷನ್ ಔಷಧಿಗಳನ್ನು ಕೇಂದ್ರ ಸರಕಾರ ನಿರ್ಬಂಧಿಸಬೇಕು ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರವು ಸೆಂಟ್ರಲ್ ಡ್ರಗ್ಸ್ ಸ್ಟ್ಯಾಂಡರ್ಡ್ ಕಂಟ್ರೋಲ್ ಆರ್ಗನೈಸೇಷನ್ ಪ್ರಯೋಗಾಲಯದಲ್ಲಿ ಈ 9 ಔಷಧ ಕಂಪನಿಗಳು ಉತ್ಪಾದಿಸುವ ಡ್ರಗ್‌ಗಳನ್ನು ಪರೀಕ್ಷೆ ಮಾಡಿಸಿ ವರದಿ ಪಡೆಯಬೇಕು. ಅಲ್ಲಿಯವರೆಗೆ ದೇಶಾದ್ಯಂತ ಆ ಔಷಧ ಮಾರಾಟ ನಿರ್ಬಂಧಿಸಬೇಕು. ಈಗಾಗಲೇ ದೇಶದ ಎಲ್ಲಾ ರಾಜ್ಯಗಳ ಮಾರುಕಟ್ಟೆಯಲ್ಲಿರುವ ಔಷಧಗಳನ್ನು ಮಾರಾಟ ಮಾಡಲು ಅವಕಾಶ ನೀಡದೇ, ಅವುಗಳನ್ನು ವಾಪಸ್ ಪಡೆಯಲು ಕ್ರಮ ತೆಗೆದುಕೊಳ್ಳಬೇಕು ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ. ಇತರ ರಾಜ್ಯಗಳಲ್ಲಿ ತಯಾರಾಗುವ ಕಲುಷಿತ ಇಂಜೆಕ್ಷನ್ ಔಷಧಿಗಳು ಕರ್ನಾಟಕದೊಳಗೆ ಪದೇ ಪದೇ ಮಾರಾಟವಾಗುತ್ತಿರುವ ಪ್ರಕರಣಗಳ ಬಗ್ಗೆ ನಿಮ್ಮ ಗಮನಕ್ಕೆ ತರಲು ನಾನು ಈ ಪತ್ರ ಬರೆಯುತ್ತಿದ್ದೇನೆ ಎಂದು ಸಚಿವರು ತಿಳಿಸಿದ್ದಾರೆ.

ವಿದೇಶಿ ವೀಸಾ ವಂಚನೆ: ದಂಪತಿ ಬಂಧನ

ಬೆಂಗಳೂರು: ವಿದೇಶದಲ್ಲಿ ಉದ್ಯೋಗದ ವೀಸಾ ಮಾಡಿಸಿಕೊಡುವುದಾಗಿ ನಂಬಿಸಿ ಹಣ ಪಡೆದು ವಂಚಿಸಿದ್ದರು ಎಂಬ ಆರೋಪದ ಮೇಲೆ ದಂಪತಿಯನ್ನು ಬೆಂಗಳೂರು ಆಗ್ನೇಯ ವಿಭಾಗದ ಸಿಇಎನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಕ್ಲೇನ್ ಸುಲ್ತಾನ್ ಹಾಗೂ ನಿಖಾತ್ ಸುಲ್ತಾನ್ ಬಂಧಿತ ಆರೋಪಿಗಳು. 51 ಜನರಿಗೆ ಕೋಟ್ಯಂತರ ರು. ವಂಚಿಸಿದ್ದ ಆರೋಪ ಎದುರಿಸುತ್ತಿರುವವರಿಂದ 66 ಲಕ್ಷ ರು. ನಗದು, ತಲಾ 2 ಕಾರು ಹಾಗೂ ದ್ವಿಚಕ್ರ ವಾಹನಗಳು, 24 ಗ್ರಾಂ ಚಿನ್ನಾಭರಣಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಇದೇ ವೇಳೆ ಮಾಹಿತಿ ನೀಡಿದ್ದಾರೆ.

ನಂತರ ಒಟ್ಟು 51 ಜನರಿಗೆ ವೀಸಾ ಮಾಡಿಸಿಕೊಡುವುದಾಗಿ ಒಟ್ಟು 2.64 ಕೋಟಿ ರು. ಹಣವನ್ನು ಪಡೆದುಕೊಂಡಿದ್ದರು. ಆದರೆ ವೀಸಾ ಮಾಡಿಸಿಕೊಡದೇ ಆ ಹಣದಲ್ಲಿ ಶ್ರೀಲಂಕಾ, ದುಬೈ, ಗೋವಾ, ಊಟಿ ಇನ್ನಿತರ ಕಡೆಗಳಲ್ಲಿ ಸುತ್ತಾಡಿ ವಿಲಾಸಿ ಜೀವನ ನಡೆಸಿದ್ದರು. ವೀಸಾ ಕುರಿತು ಕೇಳಿದಾಗ ನಕಲಿ ವೀಸಾ ದಾಖಲೆಗಳನ್ನು ನೀಡಿದ್ದರು. ದಾಖಲೆಗಳು ನಕಲಿ ಎಂದು ತಿಳಿದಾಗ ವೀಸಾ ಮಾಡಿಸಿಕೊಡಲು ಮಧ್ಯಸ್ಥಿಕೆ ವಹಿಸಿದ್ದ ವ್ಯಕ್ತಿ ಜನವರಿ 24ರಂದು ಆಗ್ನೇಯ ವಿಭಾಗದ ಸಿಇಎನ್ ಠಾಣೆಗೆ ದೂರು ನೀಡಿದ್ದರು.

ಆರೋಪಿಗಳ ಬಂಧನ: ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ತಿಲಕ್ ನಗರದಲ್ಲಿ ವಾಸವಿದ್ದ ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳಿಂದ ಒಂದು ಎಕ್ಸ್‌ಯುವಿ ಕಾರು, ಒಂದು ಹೋಂಡಾ ಸಿಟಿ ಕಾರು, ಒಂದು ಜಾವಾ ಬೈಕ್, ಒಂದು ಯಮಹಾ ಎಫ್‌ಜೆಡ್ ಬೈಕ್, 24 ಗ್ರಾಂ ಚಿನ್ನಾಭರಣ ಹಾಗೂ 66 ಲಕ್ಷ ರು.

ರಾಜ್ಯಕ್ಕೆ 25 ಟಿಎಂಸಿ ಹಂಚಿಕೆಗೆ ಮನವಿ | ಸುದೀರ್ಘ ಮಾತುಕತೆ

ಕೇಂದ್ರ ಸಚಿವರ ಜತೆ ಎಚ್‌ಡಿಡಿ ಚರ್ಚೆ

ದೆಹಲಿ: ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರೊಂದಿಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಚರ್ಚೆ ನಡೆಸಿದ್ದಾರೆ. ದೆಹಲಿಯಲ್ಲಿರುವ ತಮ್ಮ ನಿವಾಸಕ್ಕೆ ಆಗಮಿಸಿದ ಕೇಂದ್ರ ಸಚಿವರನ್ನು ಆತ್ಮೀಯವಾಗಿ ಬರಮಾಡಿಕೊಂಡ ಮಾಜಿ ಪ್ರಧಾನಿ, ಸಚಿವರ ಜತೆ ಮುಖ್ಯವಾಗಿ ರಾಜ್ಯಕ್ಕೆ ಸಂಬಂಧಪಟ್ಟ ಅಂತಾರಾಜ್ಯ ನೀರಾವರಿ ವಿವಾದಗಳು, ರಾಜ್ಯ ಎದುರಿಸುತ್ತಿರುವ ಜಲ ಸಂಕಷ್ಟ, ರಾಜ್ಯದ ನೀರಾವರಿ ಯೋಜನೆಗಳಿಗೆ ತ್ವರಿತ ಅನುಮೋದನೆ ಮತ್ತು ಅಗತ್ಯ ಅನುದಾನ ನೀಡುವ ವಿಷಯಗಳ ಬಗ್ಗೆ ಸುದೀರ್ಘ ಮಾತುಕತೆ ನಡೆಸಿದರು.

ಮಾಜಿ ಪ್ರಧಾನಿಗಳ ಬೇಡಿಕೆಗಳ ಬಗ್ಗೆ ಅತ್ಯಂತ ಸಕಾರಾತ್ಮಕವಾಗಿ ಸ್ಪಂದಿಸಿದ ಜಲಶಕ್ತಿ ಸಚಿವರು, ಈ ಬಗ್ಗೆ ತಾವೇ ಖುದ್ದು ಪರಿಶೀಲನೆ ನಡೆಸುವುದಾಗಿ ತಿಳಿಸಿದರು. ಅಲ್ಲದೆ, ರಾಜ್ಯದ ಜಲ ವಿವಾದಗಳ ಬಗ್ಗೆ ಸಚಿವರು ಮಾಜಿ ಪ್ರಧಾನಿಗಳಿಂದ ಸಾಕಷ್ಟು ಮಾಹಿತಿ ಪಡೆದುಕೊಂಡರು. ಅಲ್ಲದೆ ಗೋದಾವರಿ- ಕೃಷ್ಣಾ- ಕಾವೇರಿ ನದಿಗಳ ಜೋಡಣೆಯ ಯೋಜನೆ ಯಲ್ಲಿ ರಾಜ್ಯಕ್ಕೆ 25 ಟಿಎಂಸಿ ಅಡಿಯಷ್ಟು ನೀರು ಹಂಚಿಕೆ ಮಾಡಬೇಕು ಎಂದು ದೇವೇಗೌಡ ಅವರು ಮಾಡಿರುವ ಮನವಿಗೂ ಸಕಾರಾತ್ಮಕವಾಗಿ ಸ್ಪಂದಿಸಿದರು.

ಮೆಟ್ರೋ ದರ ಹೆಚ್ಚಳ: ಇಂದು ಪ್ರತಿಭಟನೆ

ಬೆಂಗಳೂರು: ಮೆಟ್ರೋ ಪ್ರಯಾಣ ದರ ಹೆಚ್ಚಳವನ್ನು ವಿರೋಧಿಸಿ ಜನಾಂದೋಲ ಸಂಘಟನಾ ವೇದಿಕೆ ಮತ್ತು ಕೆಐಇಇಎಫ್ ಪಧಾದಿಕಾರಿಗಳು, ಕಾರ್ಮಿಕರು ಮತ್ತು ಸದಸ್ಯರಿಂದ ಫೆ.22 ನಗರದ ಸ್ವಾತಂತ್ರ ಉದ್ಯಾನವನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಚಾಲಕ ಧರಣೇಶ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮನ್ನು ಆಳಿದ ಎಲ್ಲ ಸರಕಾರಗಳ ದೂರ ದೃಷ್ಟಿಯ ಕೊರತೆಯಿಂದಾಗಿ ಬೆಂಗಳೂರು ಮಹಾನಗರಕ್ಕೆ ಉತ್ತಮ ಸಾರ್ವಜನಿಕ ಸಾರಿಗೆ ವ್ಯವಸ್ಥೆ ರೂಪಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿವೆ. ವಾಹನ ಮತ್ತು ಜನದಟ್ಟಣೆಯನ್ನು ಕಡಿಮೆ ಮಾಡಲು ಮೆಟ್ರೋ ರೈಲು ವ್ಯವಸ್ಥೆ ಪ್ರಾರಂಭಿಸಲಾಯಿತು. ಮೆಟ್ರೋನ ಮೂಲ ಉದ್ದೇಶ ಕಡಿಮೆ ದರದಲ್ಲಿ ಪರಿಸರ ಸ್ನೇಹಿಯಾದ ಮತ್ತು ಜನಪರವಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಕಲ್ಪಿಸುವುದಾಗಿತ್ತು. ಇದರಿಂದಾಗಿ ಸ್ವಲ್ಪಮಟ್ಟಿಗೆ ಮಧ್ಯಮ ವರ್ಗ, ಕಾರ್ಮಿಕರು, ಸರಕಾರಿ ಉದ್ಯೋಗಿಗಳು, ಖಾಸಗಿ ನೌಕರರು ಇತ್ಯಾದಿ ಜನರು ನಿಟ್ಟುಸಿರು ಬಿಟ್ಟಿದ್ದರು. ಮೆಟ್ರೋ ರೈಲು ವ್ಯವಸ್ಥೆಯನ್ನು ಬಹುತೇಕ ಅವಲಂಭಿಸಿ ಬದುಕುವಂತಹ ಜೀವನಶೈಲಿಯನ್ನು ಅನಿವಾರ್ಯವಾಗಿ ಅಳವಡಿಸಿಕೊಂಡಿದ್ದರು. ಇದೀಗ ಏಕಾಏಕಿ ಬಿಎಂಆರ್‌ಸಿಎಲ್ ಆಡಳಿತ ಮಂಡಳಿ ಶೇ.100ರಷ್ಟು ಪ್ರಯಾಣ ದರ ಏರಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡು ಪ್ರಯಾಣ ದರದ ಏರಿಕೆಗೆ ರಾಜ್ಯ ಸರಕಾರ ಕಾರಣವೆಂದು ಕೇಂದ್ರ ಹಾಗೂ ಕೇಂದ್ರ ಸರಕಾರ ಕಾರಣವೆಂದು ರಾಜ್ಯ ಸರಕಾರ ತಮ್ಮ ಮೇಲಿನ ಜವಾಬ್ದಾರಿಯನ್ನು ಪರಸ್ಪರ ಹೊರಿಸಲು ಪ್ರಯತ್ನಿಸುತ್ತಿವೆ. ಇದು ಪ್ರಯಾಣಿಕರ ಬದುಕನ್ನು ಕಂಗೆಡಿಸಿದೆ. ತೆರಿಗೆಯ ಮೇಲೆ ತೆರಿಗೆ ಕಟ್ಟಿ ಬದುಕುತ್ತಿರುವ ಜನರು ಈಗಿನ ಸ್ಥಿತಿಯಲ್ಲಿ ಈ ದರ ಏರಿಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಈ ತೀರ್ಮಾನ ವಿವೇಚನ ರಹಿತವಾದುದ್ದು, ಜನವಿರೋಧಿಯಾದುದ್ದು ಹಾಗೂ ಅವೈಜ್ಞಾನಿಕವಾದದ್ದು ಎಂದು ಹೇಳಿದರು.

ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿತವಾಗಿರುವ ಮೆಟ್ರೋ ಯೋಜನೆ ಸಾರ್ವಜನಿಕರ ಬಳಕೆಗೆ ಕೈಗೆಟುಕುವ ದರದಲ್ಲಿ ಸಿಗಬೇಕು. ಈ ದರ ಏರಿಕೆಯ ನಿರ್ಧಾರವನ್ನು ಕೂಡಲೇ ವಾಪಸ್ ಪಡೆದುಕೊಳ್ಳಬೇಕು. ಹೋರಾಟಕ್ಕೆ ಸರ್ಕಾರ ಸ್ಪಂದಿಸದೆ ಇದ್ದರೆ, ಮೆಟ್ರೋ ಪ್ರಯಾಣ ನಿರಾಕರಿಸುವಂತೆ ಅಭಿಯಾನ ರೂಪಿಸುತ್ತೇವೆ ಮತ್ತು ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತೇವೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕೆ.ವಿ. ಗಂಗಣ್ಣ, ಡಿ. ಗಂಗಭೈರಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಎಸ್‌ಸಿ, ಎಸ್‌ಟಿ ನೌಕರರ ಸಮಾವೇಶದಲ್ಲಿ ಸಚಿವ ಮಹದೇವಪ್ಪ ಸಲಹೆ

ವೇತನದ ಶೇ.5ರಷ್ಟು ಸಮಾಜಕ್ಕೆ ನೀಡಿ

ಬೆಂಗಳೂರು: ರಾಜ್ಯದಲ್ಲಿ 2.5 ಲಕ್ಷ ಎಸ್‌ಸಿ, ಎಸ್‌ಟಿ ಸರಕಾರಿ ನೌಕರರಿದ್ದು, ಸಮುದಾಯದ ಶ್ರೇಯೋಭಿವೃದ್ಧಿಗೆ ಶೇ.5ರಷ್ಟು ವೇತನ ನೀಡಿದರೆ ಸಮುದಾಯದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಬಹುದು. ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಸಮ ಸಮಾಜ ನಿರ್ಮಿಸಬಹುದು ಎಂದು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ರಾಜ್ಯ ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ ಮತ್ತು ವರ್ಗಗಳ ನೌಕರರ ಕೇಂದ್ರ ಸಂಘ ಏರ್ಪಡಿಸಿದ್ದ ನೌಕರರ ಸಮಾವೇಶದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಇಲಾಖೆ ಆಯುಕ್ತ ರಾಕೇಶ್, ಸಂಘದ ಅಧ್ಯಕ್ಷ ಡಾ.ದೇವರಾಜ್, ಉಪಾಧ್ಯಕ್ಷ ಎನ್.ಆರ್.ಪುರುಷೋತ್ತಮ್ ಹಾಜರಿದ್ದರು.

ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೌಕರರ ಕೇಂದ್ರ ಸಂಘದ ನೌಕರರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಇದಕ್ಕಾಗಿ ಪ್ರತ್ಯೇಕ ನಿಧಿ ಸ್ಥಾಪಿಸಿ ಸಚಿವರು, ಜನಪ್ರತಿನಿಧಿಗಳು ಒಳಗೊಂಡಂತೆ ಪ್ರತಿಯೊಬ್ಬರು ಶೇ.5ರಷ್ಟು ವೇತನದ ವಂತಿಕೆ ನೀಡಿದರೆ ಸಮಾಜದಲ್ಲಿ ವಿಸ್ಮಯ ಸೃಷ್ಟಿಸಬಹುದು. ನಿಷ್ಠುರತೆ, ದೃಢತೆ, ಬದ್ಧತೆ ಇದ್ದಾಗ ಮಾತ್ರ ಜನಸಾಮಾನ್ಯರಿಗೆ ನ್ಯಾಯ ಒದಗಿಸಲು ಸಾಧ್ಯವಾಗಲಿದೆ. ವಿದ್ಯಾವಂತರಾದ ನಾವು ಅರ್ಥ ಮಾಡಿಕೊಂಡು ತುಳಿತಕ್ಕೆ ಒಳಗಾದವರ ಪರ ನಿಲ್ಲಬೇಕು ಎಂದು ಹೇಳಿದರು.

ದಲಿತ ಮಂತ್ರಿಗಳೇ ಇಲ್ಲದೆ ಸರಕಾರಗಳು ನಡೆದ ನಿದರ್ಶನಗಳಿವೆ. ಪ್ರಜಾಪ್ರಭುತ್ವವನ್ನು ದುರ್ಬಳಕೆ ಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಿದ್ದು, ಪ್ರಜಾತಂತ್ರ ಆಶಯಗಳಿಗೆ ಸೋಲಾಗುತ್ತಿದೆ. ಹೀಗಾಗಿ ಸಮುದಾಯದಲ್ಲಿ ಅರಿವು, ತಿಳಿವಳಿಕೆ ಮೂಡಿಸುವ ಜತೆಗೆ ಸರಕಾರದ ಸೌಲಭ್ಯಗಳನ್ನು ತಲುಪಿಸುವ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ರಾಜ್ಯ ಕಾಂಗ್ರೆಸ್ ಸರಕಾರ ಪರಿಶಿಷ್ಟರ ಶ್ರೇ ಯೋಭಿವೃದ್ಧಿಗೆ ವ್ಯಾಪಕ ಕ್ರಮಗಳನ್ನು ಕೈಗೊಂಡಿದ್ದು, ನಮ್ಮ ಸರಕಾರ ಈ ಹಿಂದೆ ಜಾರಿಗೆ ತಂದ ಬಡ್ತಿಯಲ್ಲಿ ಮೀಸಲಾತಿ ಕಾಯ್ದೆಯನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ಇದು ಮಹತ್ವದ ಬೆಳವಣಿಗೆಯಾಗಿದ್ದು, ಇದು ನಮ್ಮ ನೆಲದ ಕಾನೂನಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೌಕರರ ಕೇಂದ್ರ ಸಂಘದ ರಾಜ್ಯಾಧ್ಯಕ್ಷ ಡಾ.ಜಿ.ಪಿ.ದೇವರಾಜ್ ಮಾತನಾಡಿ, ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಪರಿಶಿಷ್ಟರ ಮೀಸಲಾತಿ ಮೇಲೆ ಕಣ್ಗಾವಲು ಹಾಕಲು ಮೀಸಲಾತಿ ಜಾರಿ ಘಟಕಕ್ಕೆ ಯಾವುದೇ ಶಕ್ತಿಯಿಲ್ಲ. ಇದು ಹಲ್ಲು ಕಿತ್ತ ಹಾವಿನಂತಾಗಿದ್ದು, ಇದನ್ನು ಜಾರಿ ನಿರ್ದೇಶನಾಲಯ ಮಾದರಿಯಲ್ಲಿ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸಿ ಸೂಕ್ತ ಸಿಬ್ಬಂದಿ ನೇಮಿಸಬೇಕು. ಜತೆಗೆ ಬಡ್ತಿ, ಮೀಸಲಾತಿಯಿಂದ ವಂಚಿತ ಸಿಬ್ಬಂದಿಗೆ ನ್ಯಾಯ ಒದಗಿಸಲು ವಸತಿ ನಿಲಯಗಳಲ್ಲಿ ಪ್ರತ್ಯೇಕವಾದ ಕಲ್ಯಾಣಾಧಿಕಾರಿಗಳನ್ನು ನೇಮಿಸಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆಯ ಎಸ್‌ಸಿ ಎಸ್‌ಪಿ/ಟಿಎಸ್‌ಪಿ ನೋಡೆಲ್ ಏಜೆನ್ಸಿ ಸಲಹೆಗಾರರಾದ ಡಾ.ಇ.ವೆಂಕಟಯ್ಯ, ಸಮಾಜ ಕಲ್ಯಾಣ ಇಲಾಖೆ ಆಯುಕ್ತರಾದ ಡಾ.ಕೆ. ರಾಜೇಶ್ ಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ನಮ್ಮನ್ನು ಹತ್ತಿಕ್ಕಲು ಆರ್‌ಎಸ್‌ಎಸ್ ನಿರಂತರ ಯತ್ನ

ಡಾ.ಬಿ.ಆರ್.ಅಂಬೇಡ್ಕರ್ ಅವರು 1924ರಲ್ಲಿ ಶೋಷಿತರ ಹಿತರಕ್ಷಣೆಗೆ ಬಹಿಷ್ಕೃತ ಹಿತಕಾರಿಣಿ ಸಂಸ್ಥೆಯನ್ನು ಸ್ಥಾಪಿಸಿದರು. ಇದಕ್ಕೆ ತದ್ವಿರುದ್ಧವಾಗಿ 1925ರಲ್ಲಿ ಆರ್‌ಎಸ್‌ಎಸ್ ಅಸ್ತಿತ್ವಕ್ಕೆ ಬಂತು. ಇದೇ ಆಶಯಗಳನ್ನು ಮುಂದಿಟ್ಟುಕೊಂಡು ಬಿಜೆಪಿ ಹೋರಾಟ ಮಾಡುತ್ತಿದೆ. ನಾವು ಯಾವುದೇ ರೀತಿಯಲ್ಲಿ ಸಂಘಟನೆ ಮಾಡುತ್ತಿದ್ದರೂ ನಮ್ಮನ್ನು ಹತ್ತಿಕ್ಕಲು ಆರ್‌ಎಸ್‌ಎಸ್ ಪ್ರಯತ್ನಗಳನ್ನು ನಡೆಸುತ್ತಲೇ ಬರುತ್ತಿದೆ. ಶೋಷಿತರಿಗೆ ಬಡ್ತಿ ದೊರೆಯುವಾಗ ಏನಾದರೂ ಕೊಕ್ಕೆ ಹಾಕಲು ಷಡ್ಯಂತ್ರಗಳನ್ನು ಹಣೆಯಲಾಗುತ್ತದೆ. ಸಿದ್ದರಾಮಯ್ಯ ಸರಕಾರದಿಂದ ಸಂವಿಧಾನದ ನಿರ್ದೇಶನ ತತ್ವಗಳನ್ನು ಜಾರಿ ಮಾಡುವ ಪ್ರಯತ್ನ ನಡೆಯುತ್ತಲೇ ಇದೆ ಎಂದು ಸಚಿವ ಮಹದೇವಪ್ಪ ಹೇಳಿದರು.

ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಶಂಭುಲಿಂಗ ಹೇಳಿಕೆ

ಪತ್ರಿಕಾ ವಿತರಕರ 5ನೇ ರಾಜ್ಯ ಸಮ್ಮೇಳನ

ಮೈಸೂರು: ಮೈಸೂರು ಜಿಲ್ಲೆಯಲ್ಲಿ ಐದನೇ ರಾಜ್ಯ ಸಮ್ಮೇಳನವನ್ನು ಎಲ್ಲಾ ಪತ್ರಿಕಾ ವಿತರಕರು ಹಾಗೂ ವಿತರಕರ ಸಂಘಟನೆಗಳೊಂದಿಗೆ ಸಂಸ್ಥೆಯ ಪ್ರತಿನಿಧಿಗಳನ್ನು ಒಳಗೊಂಡಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಮ್ಮೇಳನ ಮಾಡುತ್ತೇವೆ ಎಂದು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಶಂಭುಲಿಂಗ ಅವರು ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಔಪಚಾರಿಕ ಸಭೆಯ ಬಳಿಕ ಮಾತನಾಡಿದ ಅವರು, ಪತ್ರಿಕಾ ವಿತರಕರು ಹಾಗೂ ಸಂಸ್ಥೆಯ ಪ್ರತಿನಿಧಿಗಳು,ಪತ್ರಕರ್ತರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಪತ್ರಿಕಾ ವಿತರಕರಿಗೆ ರಾಜ್ಯ ಸರಕಾರದ ಪ್ರಯೋಜನ ಕೊಡಿಸುವ ನಿಟ್ಟಿನಲ್ಲಿ 4 ಸಮ್ಮೇಳನವನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ ಎಂದರು.

ಎಲ್ಲ ನಿರ್ಧಾರಗಳಿಗೆ ಸಹಮತ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೀಪಕ್ ಮಾತನಾಡಿ, ಸದಾ ಪತ್ರಿಕಾ ವಿತರಕರ ಏಳಿಗೆಗಾಗಿ ನಮ್ಮ ಬೆಂಬಲವೂ ಸದಾ ಇರುತ್ತದೆ. ಮೈಸೂರಿನಲ್ಲಿರುವ ಎಲ್ಲಾ ವಿತರಕರನ್ನು ಒಗ್ಗೂಡಿಸಿಕೊಂಡು ಸಮ್ಮೇಳನ ಮಾಡೋಣ ಎಂದರು. ಸಭೆಯ ಎಲ್ಲ ಮಹತ್ವದ ನಿರ್ಧಾರಗಳಿಗೂ ಸಹಮತ ವ್ಯಕ್ತಪಡಿಸಿದ ಮೈಸೂರು ಮಿತ್ರ ಪ್ರಸಾರಂಗ ವಿಭಾಗದ ಮುಖ್ಯಸ್ಥ ಗೋಪಿನಾಥ್ ವಿತರಕರ ಏಳಿಗೆಗೆ ನಮ್ಮ ಸಂಸ್ಥೆಯ ಸಹಕಾರ ಸದಾ ಸಿದ್ಧ ಎಂದು ತಿಳಿಸಿದರು.

ಟೈಮ್ಸ್ ಆಫ್ ಇಂಡಿಯಾ ಸಂಸ್ಥೆಯ ಪ್ರತಿನಿಧಿಯಾಗಿದ್ದ ಲೋಕೇಶ್ ಮಾತನಾಡಿ, ಶೀಘ್ರದಲ್ಲಿ ಒಂದು ವಾರದ ನಂತರ ಮತ್ತೊಂದು ಸಭೆಯನ್ನು ಕರೆಯಲಾಗುತ್ತದೆ. ಅದರಂತೆ ಎಲ್ಲರನ್ನೂ ಮತ್ತೊಂದು ಸಭೆ ಕರೆಯಲು ರಾಜ್ಯ ಒಕ್ಕೂಟವು ಮನವಿ ಮಾಡಿದಾಗ ಜಿಲ್ಲಾ ಪತ್ರಕರ್ತ ಸಂಘದ ಅಧ್ಯಕ್ಷ ದೀಪಕ್ ರವರು ಸಹಮತ ವ್ಯಕ್ತಪಡಿಸಿ ಶೀಘ್ರದಲ್ಲಿ ತಿಳಿಸಲಾಗುವುದು ಎಂದು ಹೇಳಿದರು.

ಸಿಇಟಿ: ಪಿಯು ಪರೀಕ್ಷೆ ನಂತರವೂ ದಾಖಲೆ ಪರಿಶೀಲನೆ

ಬೆಂಗಳೂರು: ಸಿಇಟಿಗೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ದಾಖಲೆ ಪರಿಶೀಲನೆಗೆ ದ್ವಿತೀಯ ಪಿಯು ಪರೀಕ್ಷೆಯ ನಂತರವೂ ಅವಕಾಶ ಮಾಡಿಕೊಡಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹೇಳಿದೆ.

ಈ ಕುರಿತು ಹೇಳಿಕೆ ನೀಡಿರುವ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಿಇಟಿ ತೆಗೆದುಕೊಳ್ಳುವ ವಿದ್ಯಾರ್ಥಿಗಳು ನಿಗದಿತ ದಿನಾಂಕದ ಒಳಗೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಬೇಕು. ಅಂತಹ ಎಲ್ಲ ವಿದ್ಯಾರ್ಥಿಗಳಿಗೂ ಪ್ರವೇಶ ಪತ್ರ ನೀಡಲಾಗುವುದು. ದಾಖಲೆಗಳ ಪರಿಶೀಲನೆಗೆ ದ್ವಿತೀಯ ಪಿಯು ಪರೀಕ್ಷೆ ನಂತರವೂ ಅವಕಾಶ ನೀಡಲಾಗುತ್ತದೆ. ಯಾರೂ ಆತಂಕ ಪಡಬಾರದು ಎಂದು ಅಭಯ ನೀಡಿದ್ದಾರೆ.

ಹೊರ ರಾಜ್ಯದ ಅಭ್ಯರ್ಥಿಗಳು ಬಿ.ಎಸ್ಸಿ ನರ್ಸಿಂಗ್ ಕೋರ್ಸ್ ಪ್ರವೇಶಕ್ಕೆ ಅರ್ಹತೆ ಪಡೆಯಲು ಸಿಇಟಿಯ ಭೌತವಿಜ್ಞಾನ, ರಸಾಯನವಿಜ್ಞಾನ ಮತ್ತು ಜೀವವಿಜ್ಞಾನ ವಿಷಯಗಳ ಪರೀಕ್ಷೆಗಳಿಗೆ ಹಾಜರಾಗಬೇಕು. ಆದರೆ, ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಅವರು ಅರ್ಹರಾಗುವುದಿಲ್ಲ. ಮೀಸಲಾತಿಯ ಸೌಲಭ್ಯ ಇರುವುದಿಲ್ಲ ಎಂದಿದ್ದಾರೆ.

ಪುರುಷರ ಸೀಟು ಪುರುಷರಿಗೇ ಮೀಸಲು

ಮೈಸೂರು: ಪುರುಷರಿಗೆ ಮೀಸಲಿರುವ ಸೀಟ್‌ನಲ್ಲಿ ಪುರುಷರೇ ಕುಳಿತುಕೊಳ್ಳುವಂತೆ ನೋಡಿಕೊಳ್ಳಿ ಎಂದು ಸಿಬ್ಬಂದಿಗಳಿಗೆ ಕೆಎಸ್‌ಆರ್‌ಟಿಸಿ ಸೂಚನೆ ನೀಡಿದೆ.

ಶಕ್ತಿ ಯೋಜನೆ ಜಾರಿಯಾದ ಬಳಿಕ ಸರಕಾರಿ ಸಾರಿಗೆ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು, ಪುರುಷ ಪ್ರಯಾಣಿಕರಿಗೆ ಸೀಟು ಸಿಗುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತಿವೆ. ಹೀಗಾಗಿ ಪುರುಷ ಪ್ರಯಾಣಿಕರಿಗೆ ಮೀಸಲಿರುವ ಸೀಟುಗಳನ್ನು ಪುರುಷರಿಗೆ ಬಿಟ್ಟುಕೊಡಬೇಕು. ಈ ಬಗ್ಗೆ ಗಮನ ಹರಿಸಬೇಕು ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಚಾಲಕರು ಹಾಗೂ ಸಿಬ್ಬಂದಿಗೆ ಇತ್ತೀಚೆಗೆ ಆದೇಶ ಹೊರಡಿಸಿರುವುದು ಈಗ ಬೆಳಕಿಗೆ ಬಂದಿದೆ.

ಪುರುಷರಿಗೆ ಮೀಸಲಿರುವ ಆಸನಗಳಲ್ಲಿ ಮಹಿಳೆಯರು ಕುಳಿತು ಪ್ರಯಾಣಿಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಈ ಆದೇಶ ಹೊರಡಿಸಲಾಗುತ್ತಿದೆ. ಮೈಸೂರು ನಗರ ಸಾರಿಗೆ ವಾಹನಗಳಲ್ಲಿನ ಮರುಷರಿಗೆ ಮೀಸಲಿರುವ ಆಸನಗಳಲ್ಲಿ ಮಹಿಳಾ ಪ್ರಯಾಣಿಕರು ಕುಳಿತುಕೊಳ್ಳುತ್ತಿದ್ದು, ಪುರುಷ ಪ್ರಯಾಣಿಕರಿಗೆ ಆಸನಗಳು ಸಿಗುವುದಿಲ್ಲವೆಂದು ವಿಷ್ಣುವರ್ಧನ.ಎಸ್ ಎಂಬುವವರು ಕೇಂದ್ರ ಕಚೇರಿಗೆ ದೂರು ಸಲ್ಲಿಸಿದ್ದರು. ಅದರಂತೆ ತಮ್ಮ ಘಟಕಗಳಿಂದ ಕಾರ್ಯಾಚರಣೆಯಾಗುವ ಎಲ್ಲ ವಾಹನಗಳಲ್ಲಿ ಪುರುಷ ಪ್ರಯಾಣಿಕರಿಗೆ ಮೀಸಲಿಸಿರುವ ಆಸನಗಳಲ್ಲಿ ಪುರುಷ ಪ್ರಯಾಣಿಕರು ಕುಳಿತು ಪ್ರಯಾಣ ಮಾಡಲು ಕ್ರಮಕೈಗೊಳ್ಳುವಂತೆ ಎಲ್ಲ ಚಾಲನಾ ಸಿಬ್ಬಂದಿಗೆ ಸೂಕ್ತ ತಿಳಿವಳಿಕೆ ನೀಡಲು ಸೂಚಿಸಲಾಗಿದೆ ಹಾಗೂ ತೆಗೆದುಕೊಂಡ ಕ್ರಮದ ಉರಿತು ಅನುಸರಣಾ ವರದಿ ಕಳುಹಿಸಬೇಕು ಎಂದು ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದ ಹಲವೆಡೆ ಭಾನುವಾರ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ. ಬ್ಯಾಡರಹಳ್ಳಿ, ಶ್ರೀಗಂಧಕಾವಲು ಉಪಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 4 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಬ್ಯಾಡರಹಳ್ಳಿ, ಅಂಜಾನಗರ, ಬಿಇಎಲ್ ಲೇಔಟ್ 2ನೇ ಹಂತ, ಗಿಡ್ಡದಕೋನೇನಹಳ್ಳಿ, ಮುದ್ದಿನಪಾಳ್ಯ, ಬಿಡಿಎ 8ನೇ, 9ನೇ ಬ್ಲಾಕ್, ರೈಲ್ವೆ ಲೇಔಟ್, ಉಪಕಾರ ಲೇಔಟ್, ಬಾಲಾಜಿ ಲೇಔಟ್, ಭವಾನಿಲೇಔಟ್, ಗೊಲ್ಲರಹಟ್ಟಿ, ರತ್ನನಗರ, ಮಾರ್ಡನ್ ಲೇಔಟ್, ಡಿ ಗ್ರೂಪ್ ಲೇಔಟ್, ಹೇರೋಹಳ್ಳಿ, ತುಂಗಾನಗರ, ಕೇಪೇಗೌಡನಗರ, ಪೊಲೀಸ್ ಕ್ವಾಟ್ರಸ್, ಬೈರವೇಶ್ವರನಗರ ಇಂಡಸ್ಟ್ರೀಯಲ್ ಎಸ್ಟೇಟ್, ಹೊಸಹಳ್ಳಿ, ಚಿಕ್ಕ ಗೊಲ್ಲರಹಟ್ಟಿ, ಕಲ್ಲಹಳ್ಳಿ, ಹೊಸಹಳ್ಳಿ, ಬಿಎಂಟಿಸಿ ಡಿಪೋ, ಅನಿಕೇತನನಗರ, ಪಂಮುಖಿ ಲೇಔಟ್, ನಡೇಕೇರಪ್ಪ ಇಂಡಸ್ಟ್ರೀಯಲ್ ಎಸ್ಟೇಟ್, ಮಹದೇಶ್ವರನಗರ, ಮಾರುತಿನಗರ, ನಾಗರಹೊಳೆನಗರ, ಮುನೇಶ್ವರ ನಗರ, ಸಂಜೀವ್ ನಗರ, ಅನ್ನಪೂರ್ಣೇಶ್ವರ ನಗರ , ಹೆಲ್ತ್ ಲೇಔಟ್, ಸುಂಕದಕಟ್ಟೆ ಇಂಡಸ್ಟ್ರೀಯಲ್ ಏರಿಯಾ, ಚಂದನ ಬಡಾವಣೆ, ಕೆಬ್ಬಹಳ್ಳ, ರಾಜೀವ್ ಗಾಂಧಿನಗರ, ಚನ್ನಪ್ಪ ಲೇಔಟ್, ಶ್ರೀನಿವಾಸನಗರ, ಪೈಪ್‌ಲೈನ್ ರೋಡ್, ಮುತ್ತುರಾಯ ಬಡಾವಣೆ, ಪಿಟಿ ಲೇಔಟ್, ರೋಡ್ ರಾಮಣ್ಣ ಕಾಂಪೌಂಡ್, ಬಿ.ಎಂ.ಶಂಕರಪ್ಪ ಎಸ್ಟೇಟ್, ಹೆಗ್ಗನಹಳ್ಳಿ ಮೈನ್‌ರೋಡ್, ಎನ್‌ಜಿಇಎಫ್ ಲೇಔಟ್, ಬಾಲಾಜಿ ಲೇಔಟ್, ಎಂಪಿಎಂ, ಲೇಔಟ್, ಸರ್.ಎಂ.ವಿ. 9ನೇ ಬ್ಲಾಕ್, ಮಲ್ಲತ್ತಹಳ್ಳಿ, ಕೆಂಗುಂಟೆ, ಉಲ್ಲಾಳ ಮೈನ್ ರೋಡ್, ಲಕ್ಷ್ಮಿ ಹಾಸ್ಪಿಟಲ್ ಚನ್ನಿಗಪ್ಪ ಇಂಡಸ್ಟ್ರೀಯಲ್ ಏರಿಯಾ, ಕವಿತ ಹಾಸ್ಪಿಟಲ್, ಒಕ್ಕಲಿಗರ ಸಂಘ ಹಾಸ್ಪಿಟಲ್ ಅನ್ನಪೂರ್ಣೇಶ್ವರಿನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಆರಾಮ

ವಿಶ್ವವಾಣಿ
ಬೆಂಗಳೂರು
ಶನಿವಾರ
22-02-2025

ಪರೀಕ್ಷೆ ಎಂದರೆ ಭಯ ಬೇಡ!

• ರಾಯಲಪಾಡು ರಾಘವೇಂದ್ರ

ಪರೀಕ್ಷೆಗಳೆಂದರೆ ವಿದ್ಯಾರ್ಥಿಗಳಿಗೆ ವಿಶೇಷವಾದಂತಹ ಭಯ! ಮುಖ್ಯವಾಗಿ ಏಳನೆಯ ಮತ್ತು ಹತ್ತನೆಯ ತರಗತಿಯಲ್ಲಿನ ಪಬ್ಲಿಕ್ ಪರೀಕ್ಷೆಗಳೆಂದರೆ ಭಯದಿಂದ ಜ್ವರವೇ ಬಂದು ಬಿಡುತ್ತದೆ. ಈ ಪರೀಕ್ಷೆಗಳನ್ನು ಬರೆಯಲು ಪಟ್ಟಣಪ್ರದೇಶದ ವಿದ್ಯಾರ್ಥಿಗಳು ತಮ್ಮ ಶಾಲೆಯನ್ನು ಬಿಟ್ಟು ಬೇರೊಂದು ಪರೀಕ್ಷಾ ಕೇಂದ್ರಕ್ಕೆ ಹೋಗಬೇಕಾಗಬಹುದು. ಗ್ರಾಮೀಣಭಾಗದ ಮಕ್ಕಳು ಬೇರೆ ಊರಿಗೇ ಹೋಗಬೇಕಾಗಬಹುದು! ಅಲ್ಲಿ ಈವರೆಗೆ ಗೊತ್ತಿರದ ಪರೀಕ್ಷಕರ, ಮೇಲ್ವಿಚಾರಕರ ಹೀಗೆ ಹಲವು ಸ್ತರದಲ್ಲಿನ ಹದ್ದಿನಕಣ್ಣುಗಳ ಭಯ! ಪರಊರುಗಳಿಗೆ ಹೋಗಬೇಕಾದರೆ ನಿತ್ಯ ಪ್ರಯಾಣದ ಶ್ರಮ ಒಂದೆಡೆಯಾದರೆ ಸಾರಿಗೆ ವ್ಯವಸ್ಥೆಯ ಕೊರತೆಯೂ ಬಹು ದೊಡ್ಡ ಸಮಸ್ಯೆ! ಊಟ ತಿಂಡಿಗಳಿಗೂ ಎಡವಟ್ಟು, ಸರಿಯಾದ ಉಪಚಾರ, ಪೋಷಣೆಯ ಕೊರತೆ! ಇವೇ ಮುಂತಾದ ಕಾರಣಗಳಿಂದ ಅನೇಕ ಪ್ರತಿಭಾವಂತ ಮಕ್ಕಳು ಪರೀಕ್ಷೆಯ ಕಾಲಕ್ಕೆ ಕಾಯಿಲೆಗೆ ಒಳಗಾಗುತ್ತಾರೆ. ಇದಕ್ಕೆ ಪರೀಕ್ಷೆ ಜ್ವರ ಎಂತಲೂ ಹಿರಿಯರು ಕರೆಯುವುದುಂಟು.

ಇಷ್ಟೇ ಅಲ್ಲದೆ ಪರೀಕ್ಷೆಗೆ ಯಾವ ರೀತಿಯಲ್ಲಿ ಅಭ್ಯಾಸ ಮಾಡಬೇಕು, ಯಾವ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡರೆ ಯಾವುದೇ ಗೊಂದಲ ಭೀತಿಗಳಿಲ್ಲದೆ ಪರೀಕ್ಷೆಗಳನ್ನು ಎದುರಿಸಬಹುದು ಎನ್ನುವುದನ್ನೂ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕಾದುದು ಅಗತ್ಯ!

- ವಿದ್ಯಾರ್ಥಿಗಳು ಪ್ರತಿದಿನ ನಿಯಮಿತವಾಗಿ ಅಭ್ಯಾಸ ಮಾಡಬೇಕು. ಅಭ್ಯಾಸ ಮಾಡಲು ಕೂರುವ ಮುನ್ನ ಬೆಚ್ಚನೆ ನೀರಲ್ಲಿ ಸ್ನಾನ ಮಾಡಿ ಇಷ್ಟದೇವರಿಗೆ ಕೈಮುಗಿದು ಪ್ರಾರ್ಥನೆ ಮಾಡಿ ಅಭ್ಯಾಸ ಆರಂಭಮಾಡುವುದು ಉತ್ತಮ! ಬ್ರಾಹ್ಮಿಮುಹೂರ್ತ ಅಭ್ಯಾಸಕ್ಕೆ ಸೂಕ್ತವಾದ ಸಮಯ. ಈ ಸಮಯದಲ್ಲಿ ಶಬ್ದ ಮಾಲಿನ್ಯ, ವಾಯುಮಾಲಿನ್ಯ ಮಿತಿಯಲ್ಲಿ ಇರುತ್ತವೆ; ವಿದ್ಯಾರ್ಥಿಗಳಿಗೆ ಓದು ಮತ್ತು ಕಲಿಕೆಯತ್ತ ಗಮನ ಹರಿಸುವುದು ಸುಲಭ.
- ಓದುವ ಕೊಠಡಿಯಲ್ಲಿ ಉಚಿತರೀತಿಯಲ್ಲಿ ಗಾಳಿ ಬೆಳಕುಗಳು ಬರುವಂತೆ ನೋಡಿಕೊಳ್ಳಬೇಕು. ಅತಿಯಾದ ಶೀತವಾಗಲಿ, ಸೆಕೆಯಾಗಲಿ ಇರಬಾರದು. ನೇರ ಕುಳಿತು ಓದಿ ಬರೆಯಲು ಒಂದು ಟೇಬಲ್ ಹಾಗೂ ಕುರ್ಚಿ ಇದ್ದರೆ ಉತ್ತಮ.
- ಅಭ್ಯಾಸದಲ್ಲಿ ಪ್ರತಿ ವಿಷಯಕ್ಕೂ (ಸಬ್ಜೆಕ್ಟ್) ಅಗತ್ಯವಾದ ಸಮಯ ನಿಗದಿ ಮಾಡಿಕೊಳ್ಳಬೇಕು. ಪ್ರತಿ ವಿಷಯಕ್ಕೆ ಒಮ್ಮೆಗೆ ಕನಿಷ್ಟ ಒಂದು ಗಂಟೆಯಾದರೂ ಸಮಯ ನೀಡಬೇಕು. ಓದುವಾಗ ಟಿಪ್ಪಣಿ ಮಾಡಿಕೊಳ್ಳುವುದು ಅಗತ್ಯ. ಪಠ್ಯದ ಮೈಂಡ್ ಮ್ಯಾಪಿಂಗ್ ಅಭ್ಯಾಸ ಮಾಡಿಕೊಂಡರೆ ಅನುಕೂಲ.
- ಅಭ್ಯಾಸದ ನಡುನಡುವೆ ಎದ್ದು ಹೋಗಿ ಬಂದು ಮಾಡುವುದು ಕೂಡದು! ಇದರಿಂದ ಕಲಿಕೆಗೆ ಭಂಗ! ಮೊದಲೇ ಮನೆಯಲ್ಲಿರುವ ಹಿರಿಯರಿಗೆ-ಕಿರಿಯರಿಗೆ ಮನದಟ್ಟು ಮಾಡಿ ಅಭ್ಯಾಸದ ಸಮಯದಲ್ಲಿ ತೊಂದರೆ ಉಂಟುಮಾಡದಂತೆ ಮನವಿ ಮಾಡಿಕೊಳ್ಳುವುದು ಸೂಕ್ತ!

ನಿಧಾನವಾಗಿ ನಮ್ಮ ರಾಜ್ಯದಲ್ಲಿ ಪರೀಕ್ಷೆಯ ಜ್ವರ ಏರುತ್ತಿದೆ! ಅಧ್ಯಯನ ನಡೆಸುತ್ತಿರುವ ಕೆಲವು ವಿದ್ಯಾರ್ಥಿಗಳು ಪರೀಕ್ಷೆಯ ಕುರಿತು ಸಣ್ಣಗೆ ಭಯಪಡುವುದೂ ಉಂಟು. ಪರೀಕ್ಷೆ ಎಂದರೆ ಭಯ ಬೇಡ; ಸೂಕ್ತ ಸಿದ್ಧತೆ ನಡೆಸಿದ್ರೆ ಪರೀಕ್ಷಾ ಜ್ವರ ದೂರವಾಗುತ್ತದೆ.

ಏಕಾಗ್ರತೆ

ಇನ್ನು, ಓದಿದ ವಿಷಯ ತಲೆಗೆ ಹತ್ತುವುದೇ ಇಲ್ಲ, ಎರಡನೆಯ ಸಾಲಿಗೆ ಬರುತ್ತಿದ್ದ ಹಾಗೇ ಮೊದಲ ಸಾಲು ಮರೆತು ಹೋಗಿರುತ್ತದೆ ಎನ್ನುವ ವಿದ್ಯಾರ್ಥಿಗಳೂ ಇದ್ದಾರೆ! ಇದಕ್ಕೆ ಮನಸ್ಸಿನ ಏಕಾಗ್ರತೆಯ ಕೊರತೆ ಮುಖ್ಯ ಕಾರಣ. ಮನಸ್ಸಿನ ಏಕಾಗ್ರತೆಯು ಕೇವಲ ವಿದ್ಯಾರ್ಥಿಗಳಿಗೆ ಮಾತ್ರ ಅಗತ್ಯವಾಗಿಲ್ಲ. ಜೀವನದಲ್ಲಿ ಔನ್ನತ್ಯ ಸಾಧಿಸಲು ಪ್ರತಿಯೊಬ್ಬರೂ ಮನಸ್ಸಿನ ಮೇಲೆ ನಿಯಂತ್ರಣವನ್ನು ಹೊಂದಬೇಕು! ಮನಸ್ಸನ್ನು ಒಂದೇ ವಿಷಯದಲ್ಲಿ ಸ್ಥಿರಗೊಳಿಸುವುದಕ್ಕೆ ಪುನಃ ಪುನಃ ಮಾಡುವ ಪ್ರಯತ್ನವೇ ಅಭ್ಯಾಸ. ಮನಸ್ಸಿನ ಆಲೋಚನೆಗಳನ್ನು ಸತತವಾಗಿ ಕಲಿಕೆಯತ್ತ ಹರಿಸಬೇಕು. ಪತಂಜಲಿ ಮಹರ್ಷಿಗಳು ಅಷ್ಟಾಂಗಯೋಗದಲ್ಲಿ ಹೇಳಿರುವ ಯಮ, ನಿಯಮ, ಆಸನ, ಪ್ರಾಣಾಯಾಮಗಳ ಅಭ್ಯಾಸ ಇದಕ್ಕೆ ಸಹಕಾರಿ. ಓದಲು ಕುಳಿತ ವಿದ್ಯಾರ್ಥಿಗೆ ಮೊಬೈಲ್ ನೋಡುವುದು, ಆಟ ಆಡುವುದು ಮುಂತಾದವುಗಳು ಪ್ರಿಯವೆನಿಸುತ್ತವೆ; ಅವುಗಳೆಡೆಗೆ ಆಕರ್ಷಿತನಾಗುತ್ತಾನೆ. ಆಗ ಆ ವಿಷಯಗಳ ಬಗೆಗಿನ ದೋಷವನ್ನು ಕುರಿತು ವಿದ್ಯಾರ್ಥಿಯು ಚಿಂತಿಸಬೇಕು. ಉದಾಹರಣೆಗೆ ಓದುವುದನ್ನು ಬಿಟ್ಟು ಆಟವಾಡಲು ಹೋಗಬೇಕು ಎನಿಸಿದಾಗ ಹೀಗೆ ಚಿಂತಿಸಬೇಕು: ನಾನು ಆಟವಾಡಿದರೆ ಮೈಕೈ ನೋವಾಗುತ್ತದೆ, ಪೆಟ್ಟಾಗಲೂ ಬಹುದು; ಇದರಿಂದ ದಣಿವಾಗಿ ಹೆಚ್ಚು ನಿದ್ದೆ ಮಾಡಬೇಕಾಗುತ್ತದೆ; ಓದಿನ ಸಮಯ ಕಡಿಮೆಯಾಗುತ್ತದೆ. ಇದರಿಂದ ನಾನು ಬಯಸಿದ ಹಾಗೆ ಉತ್ತಮ ರೀತಿಯಲ್ಲಿ ಅಂಕಗಳನ್ನು ಗಳಿಸಲು ಸಾಧ್ಯವಾಗುವುದಿಲ್ಲ! ಮುಂದಿನ ವಿದ್ಯಾಭ್ಯಾಸಕ್ಕೆ ಇದರಿಂದ ಹಾನಿಯಾಗುತ್ತದೆ.... ಹೀಗೆ ಆಡಲು ಹೋಗದೆ ಇರಲು ಅಗತ್ಯವಾದ ಚಿಂತನೆಯನ್ನು ಮಾಡಬೇಕು! ಇದರಿಂದ ಮನಸ್ಸು ಓದಿಗೆ ಕಡೆಗೇ ತಿರುಗುತ್ತದೆ. ಆಟದ ಬಗ್ಗೆ ವೈರಾಗ್ಯ ಭಾವ ಮೂಡುತ್ತದೆ!

ಎಲ್ಲೆಡೆ ಈಗ ಪರೀಕ್ಷೆಗಳ ಕುರಿತು ಚರ್ಚೆ ನಡೆಯುತ್ತಿದೆ; ಸದ್ಯದಲ್ಲೇ ನಡೆಯಲಿರುವ ಹಲುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಸಿದ್ಧರಾಗುತ್ತಿದ್ದಾರೆ. ಶಿಸ್ತಿನಿಂದ ಅಧ್ಯಯನ ನಡೆಸಿ, ವಿದ್ಯಾಭ್ಯಾಸದ ಗುರಿಯನ್ನು ಮುಟ್ಟುವುದು ಎಲ್ಲಾ ವಿದ್ಯಾರ್ಥಿಗಳ ಆದ್ಯಯತೆಯಾಗಬೇಕು; ಮತ್ತು ಅದಕ್ಕೆ ಪೋಷಕರ ಸಹಕಾರವೂ ಅಗತ್ಯ. ನಿಗದಿತ ವೇಳಾಪಟ್ಟಿ ಮಾಡಿಕೊಂಡು, ಎಲ್ಲಾ ವಿಷಯಗಳನ್ನು ಸೂಕ್ತವಾಗಿ, ಸಮಪ್ರಮಾಣದಲ್ಲಿ ಅಧ್ಯಯನ ನಡೆಸಲು ಪೋಷಕರು ಸಹಕರಿಸುವುದು ವಿಹಿತ.

ಕಾಮದ ಬಗ್ಗೆ ಎಚ್ಚರದಿಂದಿರು

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ತನ್ನನ್ನು ಯಾರೋ ಬಲವಂತ ಪಡಿಸಿದ ಹಾಗೆ ತನ್ನ ಮನಸ್ಸಿನ ವಿರುದ್ಧ ಒಬ್ಬ ವ್ಯಕ್ತಿ ಹೇಗೆ ಕೆಡುಕನ್ನು ಮಾಡಲು ಸಾಧ್ಯ? ಎಂದು ಅರ್ಜುನ ಪ್ರಶ್ನಿಸುತ್ತಾನೆ. (3.36) ತನ್ನಲ್ಲಿ ಜಾಗೃತಿಯ ಅಂಶ ಮೊಟ್ಟಮೊದಲು ಉದ್ಭವಿಸಿದಾಗ ವ್ಯಕ್ತಿ ಕೇಳುವ ಸಾಮಾನ್ಯ ಪ್ರಶ್ನೆ ಇದು.

ಕೃಷ್ಣ ಹೇಳುತ್ತಾನೆ : ಕಾಮ ಮತ್ತು ಕ್ರೋಧಗಳು ರಜೋಗುಣದಿಂದ ಹುಟ್ಟುತ್ತವೆ ಹಾಗೂ ಅವು ಸಂತೃಪ್ತಗೊಳಿಸ ಲಾಗದ ಹಂಬಲದಿಂದ ತುಂಬಿದ ಬಹುದೊಡ್ಡ ಅನಿಷ್ಟಗಳಾಗಿವೆ. (3.37) ಭೂಮಿಯಲ್ಲಿ ಅತ್ಯಂತ ಕೀಳು ಶತ್ರುಗಳಾದ ಅವುಗಳ ಬಗ್ಗೆ ಎಚ್ಚರದಿಂದಿರಬೇಕು. ಭೋಗಾಸಕ್ತಿಯ ಹಾಗೆ ಮಿತಿಮೀರಿದ ಆಸೆಯನ್ನು ಹೊಂದಿದ ಇದನ್ನು ಕೃಷ್ಣ ಕಾಮವೆಂದು ಕರೆಯುತ್ತಾನೆ.

ಕಾರ್ಯದ ಬಗ್ಗೆ ಇರುವ ಮೋಹವು ಆಸೆಯಿಂದ ಉದ್ಭವಿಸುವ ರಜೋಗುಣದ ಲಕ್ಷಣವಾಗಿದೆ. ಕಾರಿನ ವಿಷಯ ತೆಗೆದುಕೊಳ್ಳುವದಾದರೆ ಚಲನೆ ಮತ್ತು ವೇಗ ರಜೋಗುಣದಿಂದ ಉಂಟಾಗುತ್ತವೆ ಇದನ್ನು ಪೂರೈಸಲು ವೇಗವರ್ಧಕವು (ಎಕ್ಸಲೇಟರ್) ಒಂದು ಸಾಧನವಾಗಿದೆ. ಅದೇ ರೀತಿ ನಿಧಾನಗತಿ ಮತ್ತು ಜಡತ್ವವು ತಮೋಗುಣದ ಲಕ್ಷಣಗಳಾಗಿವೆ. ಬ್ರೇಕ್ ಒಂದು ಸಾಧನವಾಗಿದೆ. ಚಾಲಕನು ಸತ್ವ ಗುಣದ ಪ್ರತೀಕ. ಇದು ಸುರಕ್ಷಿತ ಮತ್ತು ಸುಗಮ ಚಾಲನೆಗೆ ಬ್ರೇಕ್ ಮತ್ತು ವೇಗವರ್ಧಕ (ಎಕ್ಸಲೇಟರ್) ಗಳಲ್ಲಿ ಸಮತೋಲನವನ್ನು ಕಾಪಾಡುತ್ತದೆ. ವೇಗ ಮಾಪಕ (ಸ್ಪೀಡೋಮೀಟರ್) ನಮ್ಮನ್ನು ಎಚ್ಚರಿಸುವ ಉಪಕರಣವಾಗಿದೆ. ಸಮತೋಲನ ತಪ್ಪಿದರೆ ಅಪಘಾತ ನಿಶ್ಚಿತ.

ನಮ್ಮ ಜೀವನದಲ್ಲಿ ಸಮತೋಲನ ತಪ್ಪುವುದೇ ಕಾಮವಾಗಿದೆ. ಇಲ್ಲಿ ಸಂತೋಷ ಪಡೆಯಲು ಯಾವುದನ್ನಾದರೂ ಪಡೆಯಲು ಅಥವಾ ಯಾರನ್ನಾದರೂ ವಶಪಡಿಸಿಕೊಳ್ಳಲು ಅಥವಾ ಅಧಿಕಾರ ಹಾಗೂ ಕೀರ್ತಿ ಸಂಪಾದಿಸಲು ನಾವು ನಮ್ಮ ಶಕ್ತಿಯನ್ನು ಎಷ್ಟೆಲ್ಲಾ ಹಾಕುತ್ತೇವೆ. ನಮ್ಮ ಈ ಆಸೆಗಳನ್ನು ಬಲಪಡಿಸಿಕೊಳ್ಳುವಾಗ ಮುಂದಿನ ಪರಿಣಾಮಗಳ ಬಗ್ಗೆ ತಿಳಿದುಕೊಳ್ಳುವುದೇ ಇಲ್ಲ. ಒಮ್ಮೆ ಇದು ಅಪಾಯದ ಹಂತ ತಲುಪಿದಾಗ ನಮಗೆ ಯಾವ ನಿಯಂತ್ರಣವೂ ಇರುವುದಿಲ್ಲ. ಸಂತೋಷದ ಹಿಂದೆ ಬರುವ ನೋವು ಅಥವಾ ನೆರವೇರದ ಆಸೆಯ ನೈಜ ಪರಿಣಾಮವೇ ಕ್ರೋಧ. ಆಸೆಯನ್ನು ನೆರವೇರಿಸಲು ಸಾಧ್ಯವಿಲ್ಲ ಎಂದು ಈ ಶ್ಲೋಕ ಹೇಳುತ್ತದೆ. ಇದನ್ನು ಪೂರೈಸಲು ನಾವು ಹೆಚ್ಚು ಹೆಚ್ಚು ಪ್ರಯತ್ನ ಮಾಡಿದಂತೆ ಅದು ಇನ್ನೂ ಹೆಚ್ಚಾಗುತ್ತಾ ಹೋಗುತ್ತದೆ ಎನ್ನುವುದು ಇದರ ತಾತ್ಪರ್ಯ. ಸಂಪತ್ತು ಇನ್ನೂ ಬೇಕೆನಿಸುತ್ತದೆ ಹಾಗೂ ಅಧಿಕಾರ ಪರಮಾಧಿಕಾರ ಬೇಕೆನ್ನುತ್ತದೆ. ಉಪಾಯವೆಂದರೆ ಅವನ್ನು ಹತ್ತಿಕ್ಕಲೂ ಬಾರದು ಹಾಗೂ ನೆರವೇರಿಸಲೂ ಬಾರದು. ನಾವು ಕಾಮ ಅಥವಾ ಭಯದ ಹಿಡಿತದಲ್ಲಿದ್ದಾಗ ಅವುಗಳ ಬಗ್ಗೆ ತುಂಬಾ ಎಚ್ಚರಿಕೆಯಿಂದ ಇರಬೇಕು ಎಂದು ಕೃಷ್ಣ ತಿಳಿಸುತ್ತಾನೆ. ಈ ಜಾಗೃತಿಯೇ ಅವುಗಳ ಹಿಡಿತದಿಂದ ನಮ್ಮನ್ನು ಪಾರುಮಾಡುತ್ತದೆ.

ಆವೆ ಮಣ್ಣಿನ ಶಿಲ್ಪಕಲಾ ಕೃತಿಗಳು

• ಪ್ರೊ. ವಿ. ಎಸ್. ನಾಯಕ ಬಳಕೂರು

ಚಿಂತನಾಶೀಲ ಜನರು, ಗೆಳತಿಯೊರೊಡನೆ ಬಾಂಧವ್ಯ ಸಾರುವ ಶಿಲ್ಪಗಳು, ಅಧ್ಯಯನಶೀಲ ವಿದ್ಯಾರ್ಥಿಗಳ ಶಿಲ್ಪ, ಮೀನುಗಾರಿಕೆಯಲ್ಲಿ ತಲ್ಲಿನರಾದ ಜನರು, ಸಂತೆ ಮೀರಾಬಾಯಿ, ಗೆಳೆಯರ ಗುಂಪು, ಆಲೋಚನಮಗ್ನ ಜನರಶಿಲ್ಪ, ಕರಾವಳಿಯ ಭೂತ ಕೋಲದ ಶಿಲ್ಪಗಳು, ತೆಂಕು ಮತ್ತು ಬಡಗುತಿಟ್ಟಿನ ಯಕ್ಷಗಾನದ ಮನಮೋಹಕ ಶಿಲ್ಪ, ನಾಗಸಾಧುಗಳು, ಹಳ್ಳಿಯ ಹೆಣ್ಣಿನ ವೇಷ ಭೂಷಣ ಪ್ರತಿಬಿಂಬಿ ಸುವ ಶಿಲ್ಪ, ವಿಘ್ನ ವಿನಾಶಕ ಗಣಪನ ಶಿಲ್ಪ, ಹಳ್ಳಿಯ ಮುಗ್ಧ ಜನರ ಚಿಂತನೆ, ನಿಸರ್ಗ ನಾಶದ ಬಗ್ಗೆ ಚಿಂತನಾಶೀಲ ಮಗುವಿನ ಶಿಲ್ಪ, ಈ ರೀತಿಯ ಒಂದಕ್ಕಿಂತ ಒಂದು ವಿಭಿನ್ನ ಆವೆ ಮಣ್ಣಿನಿಂದ ತಯಾರಿಸಿದ ಮನರಂಜಿಸುವ ಶಿಲ್ಪಕಲಾ ಕೃತಿಗಳು ರಚಿಸಿದವರು ಪಲಿಮಾರಿನ ವೆಂಕಿ ಪಲಿಮಾರ್.

ಇವರು ದಕ್ಷಿಣ ಕನ್ನಡ ಜಿಲ್ಲೆಯ ಪಡುಬಿದ್ರಿಯ ಅಡವೆ ಎಂಬ ಗ್ರಾಮದವರು. ಇವರು ಚಿತ್ರಾಲಯ ಎಂಬ ಕಲಾ ಗ್ಯಾಲರಿಯನ್ನು ಆರಂಭಿಸಿ ನಮ್ಮ ನಾಡಿನ ವಿಭಿನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಆವೆ ಮಣ್ಣಿನ ಶಿಲ್ಪಗಳನ್ನು ರಚಿಸುವಲ್ಲಿ ಚತುರರು. ಇವರಿಗೆ ಬಾಲ್ಯದಿಂದಲೂ

ಮಣ್ಣಿನ ಗಂಟು. ಬಾಲ್ಯದಿಂದಲೂ ತಮ್ಮ ಮನಸ್ಸಿಗೆ ಬಂದ ಶಿಲ್ಪಗಳನ್ನು ಮಣ್ಣಿನಿಂದ ರಚಿಸಿ ಸಂಭ್ರಮಿಸುತ್ತಿದ್ದರು. ನಂತರದ ದಿನಗಳಲ್ಲಿ ಕಲೆಯಲ್ಲಿ ಅಪಾರವಾದ ಅಸಕ್ತಿಯನ್ನು ಹೊಂದಿದವರಾಗಿ ಎಲ್ಲರೂ ಅಚ್ಚರಿ ಪಡುವಂತಹ ಅವೇ ಮಣ್ಣಿನ ಕಲಾ ಕೃತಿಗಳನ್ನು ರಚಿಸಿ ಜನಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ಕರಾವಳಿಯಲ್ಲಿ ಸಾಮಾನ್ಯವಾಗಿ ಹೆಂಚನ್ನು ತಯಾರಿಸಲು ಬಳಸುವ ಮಣ್ಣನು ತಂದು ಅದರಲ್ಲಿ ವಿಭಿನ್ನ ವಿನೂತನ ಆಕರ್ಷಣೀಯ ಶಿಲ್ಪಗಳನ್ನು ರಚಿಸಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ.

ಇವರು 'ಚಿತ್ರಾಲಯ' ಎಂಬ ಕಲಾಗ್ಯಾಲರಿಯ ಮೂಲಕ ತಾವು ರಚಿಸಿರುವ ವಿಭಿನ್ನ ಶಿಲ್ಪಗಳನ್ನು ಇಲ್ಲಿ ಪ್ರದರ್ಶಿಸುವುದರ ಮೂಲಕ ಜನಮನವನ್ನು ಗೆದ್ದಿರುವುದು ವಿಶೇಷ. ಇವರು ರಾಜ್ಯ ರಾಷ್ಟ್ರಮಟ್ಟದಲ್ಲಿ ಹಲವಾರು ರೀತಿಯ ಕಲಾ ಪ್ರದರ್ಶನಗಳನ್ನು ಏರ್ಪಡಿಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಸಾಮಾನ್ಯವಾಗಿ ಇವರು ರಚಿಸಿರುವ ಕಲಾಕೃತಿಗಳು ನಮ್ಮ ನಿಜ ಜೀವನವನ್ನು ಪ್ರತಿಬಿಂಬಿಸುವಂತೆ ಕಾಣುತ್ತದೆ.

ಶಿಲ್ಪಗಳನ್ನು ರಚಿಸುವುದು ಮುಖ್ಯವಲ್ಲ ಅವರು ಮಾಡಿರುವ ಕಲಾ ಕೃತಿಗಳು ಜನ ಮಾನಸವನ್ನು ತಲುಪುವಂತಿರಬೇಕು. ಇಂದಿನ ಕಾಲಘಟ್ಟಕ್ಕೆ ಸಮಂಜಸವಾದ ಶಿಲ್ಪಗಳನ್ನು ರಚಿಸುವಲ್ಲಿ ಕಲಾವಿದ ವೆಂಕಿ ಪಲಿಮಾರ್‌ರವರು ಸಿದ್ಧ ಹಸ್ತರು. ಮಣ್ಣಿನಿಂದಲೂ ಎಲ್ಲರನ್ನು ಆಕರ್ಷಿಸುವ, ಸಮಾಜಕ್ಕೆ ಸಂದೇಶ ಸಾರುವ ಶಿಲ್ಪ ಕಲಾಕೃತಿಗಳ ಗುಚ್ಛವನ್ನು ನೀಡಿದ ಇವರಿಗೆ ಅಭಿನಂದನೆಗಳ ಮಹಾ ಪುರವೇ ಹರಿದು ಬಂದಿದೆ.

• ಮಣ್ಣೆ ಮೋಹನ್

ಕರ್ನಾಟಕದಿಂದ ಸಾಕಷ್ಟು ಜನ ಈಗ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಭಾಗವಹಿಸುತ್ತಿದ್ದಾರೆ; ಪವಿತ್ರ ಸ್ನಾನ ಮಾಡುತ್ತಿದ್ದಾರೆ. ತ್ರಿವೇಣಿ ಸಂಗಮಕ್ಕೆ ಹೋಗಿದ್ದ ಕನ್ನಡಿಗರ ತಂಡವೊಂದು, ಮಹಾ ಕುಂಭಮೇಳದಲ್ಲಿ, ನಾಗಸಾಧುಗಳ ಸಾನಿಧ್ಯದಲ್ಲಿ, ಕನ್ನಡ ಪುಸ್ತಕವೊಂದನ್ನು ಲೋಕಾರ್ಪಣೆಗೊಳಿಸಿದ ವಿಶೇಷ ವಿದ್ಯಮಾನ ನಡೆದಿದೆ.

ಈಗಾಗಲೇ ಕುಪ್ಪಳ್ಳಿ, ಹಂಪಿ, ಕಾಶಿ, ಅಯೋಧ್ಯೆ, ಗಯಾ, ಚಿತ್ರಕೂಟ, ಪ್ರಯಾಗ್ರಾಜ್, ಕನ್ಯಾಕುಮಾರಿ, ರಾಮೇಶ್ವರ, ಶಬರಿಮಲೆ ಗಳಲ್ಲದೆ ನೇಪಾಳದಲ್ಲಿಯೂ ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿದ್ದ ಜ್ಞಾನ ಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗ, ಇದೀಗ ಮಹಾ ಕುಂಭಮೇಳದಲ್ಲಿಯೂ ಪುಸ್ತಕ ಬಿಡುಗಡೆ ಮಾಡಿದೆ.

ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯ, ಪವಿತ್ರ ಮಹಾ ಕುಂಭಮೇಳದಲ್ಲಿ ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ಲೇಖಕ ಮಣ್ಣೆ ಮೋಹನ್ ಅವರು

ಕುಂಭಮೇಳದಲ್ಲಿ ಪುಸ್ತಕ ಬಿಡುಗಡೆ!

ರಚಿಸಿರುವ 'ಕುಂಭಮೇಳ: ಜಗತ್ತಿನ ಸಾಂಸ್ಕೃತಿಕ ಹಬ್ಬ' ಕೃತಿ ಲೋಕಾರ್ಪಣೆಗೊಂಡಿತು.

ನಾಗಾ ಸಾಧುಗಳು ಮತ್ತು ಕನ್ನಡಿಗರು ಭಾಗವಹಿಸಿದ್ದ ಸರಳ ಸಮಾರಂಭದಲ್ಲಿ ಈ ಕೃತಿ ಬಿಡುಗಡೆಯಾಯಿತು. ಆ ಸಂದರ್ಭದಲ್ಲಿ ಪ್ರಯಾಗ್ ರಾಜ್‌ನಲ್ಲಿದ್ದ ಲೇಖಕ ಮಣ್ಣೆ ಮೋಹನ್ ಅವರು 'ಮಹಾ ಕುಂಭಮೇಳದಂತಹ ಜಗತ್ತಿನ ಸಾಂಸ್ಕೃತಿಕ ಮಹಾಮೇಳದಲ್ಲಿ ನನ್ನ ಪುಸ್ತಕವೊಂದನ್ನು ಬಿಡುಗಡೆಗೊಳಿಸುವ ಸುಕೃತಕ್ಕೆ ಭಾಜನನಾಗಿದ್ದೇನೆ ಎಂಬುದು ನನ್ನ ಜೀವನದ ಹೆಮ್ಮೆಯ ವಿಷಯಗಳಲ್ಲೊಂದಾಗಿದೆ. ಬಹುಶಃ ಕನ್ನಡದ ಪುಸ್ತಕವೊಂದು ಇದೇ ಮೊದಲಬಾರಿಗೆ ಕುಂಭಮೇಳದ ಸಮಯದಲ್ಲಿ ಪ್ರಯಾಗ್‌ರಾಜ್‌ನಲ್ಲಿ ಲೋಕಾರ್ಪಣೆಗೊಂಡಿದೆ. ಇದರ ಸಂಪೂರ್ಣ ಶ್ರೇಯಸ್ಸು ಸಮಸ್ತ ಕನ್ನಡಿಗರಿಗೆ ಸೇರುವಂತದ್ದು' ಎಂದರು.

ಯೋಗೇಂದ್ರ ಟ್ರಾವೆಲ್ಸ್ ವತಿಯಿಂದ ಆಯೋಜಿಸಲಾಗಿದ್ದ ಕುಂಭಮೇಳ ಯಾತ್ರೆಯಲ್ಲಿ, ಭಾಗವಹಿಸಿದ್ದ 80ಕ್ಕೂ ಹೆಚ್ಚು ಯಾತ್ರಿಕರನ್ನೊಳಗೊಂಡ ಕರ್ನಾಟಕದ ತಂಡ ಕಾರ್ಯಕ್ರಮದಲ್ಲಿ ಉಪಸ್ಥಿತವಿತ್ತು. ಈ ತಂಡವು ಪ್ರಯಾಗರಾಜ್‌ನಲ್ಲಿನ ಕುಂಭಮೇಳದಲ್ಲಿ ಭಾಗವಹಿಸಿದ ನಂತರ, ಇತರ ಪುಣ್ಯಕ್ಷೇತ್ರಗಳಲ್ಲಿ ತಮ್ಮ ಯಾತ್ರೆಯನ್ನು ಮುಂದುವರಿಸಿತು.



ಕಾಯಕ ಪ್ರೀತಿ



ವೃತ್ತಿಯೇ ಇರಬಹುದು, ಪ್ರವೃತ್ತಿಯೇ ಇರಬಹುದು, ಅವನ್ನು ಬಹಳವೇ ಇಷ್ಟಪಟ್ಟು ಮಾಡುತ್ತೇವೆ ಅನ್ನುವವರನ್ನು ನೋಡಿದ್ದೇವೆ. ಆದರೂ ಅವರಲ್ಲೂ ಅನೇಕರು ಆ ಕೆಲಸವನ್ನು ಆನಂದಿಸುತ್ತಿದ್ದಾರೆ ಎನಿಸುವುದೇ ಇಲ್ಲ. ಕಾರಣ ಅವರು ಆ ಕೆಲಸವನ್ನು ಇಷ್ಟಪಡುವುದಕ್ಕಿಂತ ಕೆಲಸದಿಂದ ಸಿಗಬಹುದಾದ ಫಲವನ್ನೇ ಹೆಚ್ಚಾಗಿ ಇಷ್ಟಪಡುತ್ತಿರುತ್ತಾರೆ. ಆ ಕೆಲಸದ ಬಗ್ಗೆ ತೀವ್ರವಾದ ಆಸಕ್ತಿ, ಪ್ರೀತಿ ಯಾವುದೂ ಅವರಲ್ಲಿ ಇರುವುದಿಲ್ಲ. ಅಂತಹ ಒಬ್ಬರು ಇಂಜಿನಿಯರ್ ಆಗಲು ಬಹಳ ಆಸಕ್ತಿ ಇದೆ ಎನ್ನುತ್ತಾ, ಓದು ಮುಗಿಸಿ ಇಂಜಿನಿಯರ್ ಹುದ್ದೆ ಏರಿದರೂ, ಆ ಕುರ್ಚಿ ಅವರಿಗೆ ಸಂತೋಷ ನೀಡಲಾರದು. ಆ ಕುರ್ಚಿಯಲ್ಲಿ ಕುಳಿತು ಮಾಡುವ ಕೆಲಸ ಸಹ ಖುಷಿ ಕೊಡಲಾರದು. ಆ ಹುದ್ದೆ ನೀಡುವ ದೊಡ್ಡ ಮೊತ್ತದ ಸಂಬಳ ಮಾತ್ರ ಅವರ ಗುರಿಯಾಗಿರುತ್ತದೆ. ಅಂತಹವರು ಅವರ ಕೆಲಸವನ್ನು ಜೀವನ ಪೂರ್ತಿ ಇಷ್ಟವಿಲ್ಲದೆ ಮಾಡುತ್ತಿರುತ್ತಾರೆ.

ತನ್ಮಯತೆ ಬಾರದ ಕಾರಣ ಅವರು ತಮ್ಮ ಕೆಲಸಕ್ಕೆ ಹೆಚ್ಚು ಗಮನ ನೀಡಬೇಕಾಗುತ್ತದೆ. ಒಳಗಿನಿಂದಲೇ ಸ್ಫೂರ್ತಿ ದೊರೆಯದ ಕಾರಣ ಹೊರಗಿನಿಂದ ಸ್ಫೂರ್ತಿ ಪಡೆಯುವ ನಿರೀಕ್ಷೆ ಬಲವಾಗುತ್ತಾ ಹೋಗುತ್ತದೆ. ಆ ಕೆಲಸ ಮಾಡಲು ಹೆಚ್ಚು ಶ್ರಮವಹಿಸಿ ಏಕಾಗ್ರತೆ ತಂದುಕೊಂಡು ಪರಿಶ್ರಮಿಸಬೇಕಾಗುತ್ತದೆ. ಇಷ್ಟ ಎನ್ನುವುದು ಫಲಿತಾಂಶದ ಕಡೆಗಲ್ಲದೆ ತಾವು ಮಾಡುವ ಕೆಲಸದ ಮೇಲೆ ಮೂಡಿದಾಗ ಮಾತ್ರ, ಹೆಚ್ಚು ಆಯಾಸವಿಲ್ಲದೆ ಆ ಕೆಲಸವನ್ನು ಪೂರೈಸಲು ಸಾಧ್ಯ. ಆಗ ಯಶಸ್ಸಿನ ಮಟ್ಟವೂ ಎತ್ತರದ್ದಾಗಿರುತ್ತದೆ. ತಮಗೆ ದೊರೆತ ಕೆಲಸದಲ್ಲಿ ತಾವೆಷ್ಟು ತೊಡಗಿಕೊಳ್ಳಬಹುದು? ತಮ್ಮ ಸಾಮರ್ಥ್ಯವನ್ನು ಯಾವ ಎತ್ತರದವರೆಗೂ ಕೊಂಡೊಯ್ಯಬಹುದು? ತಮ್ಮನ್ನು ತಾವು ಹೇಗೆ ಕಂಡುಕೊಳ್ಳಬಹುದು? ಎನ್ನುವತ್ತ ಗಮನಹರಿಸಿದರೆ, ಆ ಕೆಲಸಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳಲ್ಲೂ ಕ್ಷಮತೆ ಗಳಿಸಲು ಆರಂಭಿಸಿಬಿಡುತ್ತಾರೆ. ತಮ್ಮ ವೈಯಕ್ತಿಕ ಜೀವನದಲ್ಲಿ ಶಾರೀರಿಕ, ಮಾನಸಿಕ, ಭಾವನಾತ್ಮಕ ಸ್ವಾಸ್ಥ್ಯವನ್ನು ಅದಕ್ಕನುಗುಣವಾಗಿಯೇ ಸಾಧಿಸಿ ಬಿಡುತ್ತಾರೆ. ಇವೆಲ್ಲವೂ ಒಟ್ಟಾಗಿ ಅವರಲ್ಲಿ ಜೀವನ ಪ್ರೀತಿಯನ್ನು ಹೆಚ್ಚಿಸಿ ಬಿಡುತ್ತದೆ.

• ಮಾಯಾ ಬಾಲಚಂದ್ರ

ಹೊಸ ರುಚಿ

• ಕೆ.ಶ್ರೀನಿವಾಸರಾವ್. ಹರಪನಹಳ್ಳಿ

ಬಾಳೆಕಾಯಿ ಕಾಪು

ಬೇಕಾಗುವ ಸಾಮಗ್ರಿಗಳು: ಒಂದು ಬಾಳೆಕಾಯಿ (ತರಕಾರಿ ಬಾಳೆ), ಎಣ್ಣೆ ,ಅಕ್ಕಿಹಿಟ್ಟು 1 1/2 ಲೋಟ, ತುರಿದ ತೆಂಗಿನಕಾಯಿ 1 ಲೋಟ, ಒಣಮೆಣಸು 6, ಅರಿಶಿಣ 1/2 ಚಮಚ, ಉದ್ದಿನಕಾಳು 2 ಚಮಚ, ಕೊತ್ತಂಬರಿ ಬೀಜ 1/2 ಚಮಚ, ಚಿಟಿಕೆ ಇಂಗು, ಸ್ವಲ್ಪ ಬೆಲ್ಲ, ಉಪ್ಪು ಹುಣಸೆಹಣ್ಣು.

ತಯಾರಿಸುವ ವಿಧಾನ: ಬಾಳೆಕಾಯಿಗಳನ್ನು ಉದ್ದುದ್ದ ತೆಳ್ಳಗೆ ಹೆಚ್ಚಿಕೊಳ್ಳಬೇಕು. ಅಕ್ಕಿಹಿಟ್ಟಿನ ಹೊರತಾಗಿ ಉಳಿದ ಎಲ್ಲವನ್ನೂ ಒಟ್ಟಾಗಿಸಿ ನುಣ್ಣಗೆ ನೀರು ಬೆರೆಸಿ ತಿರುವಿಕೊಳ್ಳಬೇಕು. ಅಕ್ಕಿಹಿಟ್ಟನ್ನು ಕೊಂಚ ಹುರಿದು ರುಬ್ಬಿದ ಮಸಾಲೆಗೆ ಬೆರೆಸಿ ವಡೆ ಹಿಟ್ಟಿನ ಹದಕ್ಕೆ ಕಲಸಿಕೊಳ್ಳಬೇಕು. ಇದರಲ್ಲಿ ಉದ್ದ ಹೆಚ್ಚಿದ ಬಾಳೆಕಾಯಿ ತುಂಡುಗಳನ್ನು ಅದ್ದಿ ಕಾದ ಹೆಂಚಿನ ಮೇಲಿಟ್ಟು ದೋಸೆಯ ರೀತಿಯಲ್ಲಿ ಎರಡೂ ಬದಿ ಹದವಾಗಿ ಬೇಯಿಸಬೇಕು. ಚಟ್ನಿಯ ಜೊತೆ, ನೀರುಳ್ಳಿಯೊಂದಿಗೆ ಅಥವಾ ಹಾಗೆಯೇ ತಿನ್ನಬಹುದು.

ಸ್ವೀಟ್ ಕಾರ್ನ್ ವಡಾ

ಅಗತ್ಯವಿರುವ ಸಾಮಗ್ರಿ

ಸ್ವೀಟ್ ಕಾರ್ನ್ 1 ಲೋಟ, ಹೆಚ್ಚಿದ ಈರುಳ್ಳಿ 2 ಲೋಟ, ಕತ್ತರಿಸಿದ ಮೆಂತ್ಯಸೊಪ್ಪು 1 ಲೋಟ, ಪುದಿನಾ ಸೊಪ್ಪು 1/2 ಲೋಟ, ಗರಂಮಸಾಲಾ 1/2 ಚಮಚ , ಕಾರದಪುಡಿ 1/2 ಚಮಚ ಮೆಣಸಿನಕಾಯಿ 5, ಶುಂಠಿ ಬೆಳ್ಳುಳ್ಳಿ ಪೇಸ್ಟ್ 1 ಚಮಚ ,ಕೊತ್ತಂಬರಿ ಸೊಪ್ಪು 1/2 ಲೋಟ, ಅಕ್ಕಿಹಿಟ್ಟು 3 ಚಮಚ, ಕಡ್ಲೆಹಿಟ್ಟು 2 ಲೋಟ, ಆಲೂಗಡ್ಡೆ 2, ಉಪ್ಪು, ಎಣ್ಣೆ.

ತಯಾರಿಸುವ ವಿಧಾನ

ಸ್ವೀಟ್ ಕಾರ್ನನ್ನು ಬೇಯಿಸಿ ತರಿತರಿಯಾಗಿ ರುಬ್ಬಿ ಬಾಣಲೆಯಲ್ಲಿ ಕೊಂಚ ಹುರಿದುಕೊಳ್ಳಿ. ಅದನ್ನು ತಣ್ಣಗಾಗಿಸಿ ಮೆಂತ್ಯೆಸೊಪ್ಪು, ಈರುಳ್ಳಿ, ಪುದಿನಾಗಳನ್ನು ಸೇರಿಸಿ ಹುರಿದುಕೊಂಡು ಕೆಳಗಿಳಿಸಿ. ತಣ್ಣಗಾದ ನಂತರ ಉಳಿದ ಎಲ್ಲ ಸಾಮಗ್ರಿಗಳನ್ನು ಒಟ್ಟಾಗಿಸಿ ಸ್ವಲ್ಪ ನೀರಿನೊಂದಿಗೆ ಕಲಸಿ, ವಡೆ ಗಾತ್ರದ ಉಂಡೆಗಳನ್ನು ಮಾಡಿಕೊಂಡು ಕಾದ ಎಣ್ಣೆಗೆ ಹಾಕಿ ಕರಿಯಿರಿ. ಸ್ವೀಟ್ ಕಾರ್ನ್ ವಡಾ ಸಿದ್ಧ.

ಅವರವರ ಭಾವವೇ ಹಿರಿದು

• ಹೆಚ್.ಕೆ.ಮಧು, ದೋಹಾ, ಕತಾರ್

ವಿಶ್ವದೆಲ್ಲೆಡೆಯಿಂದ ಬಂದಿಳಿದ ಜನ ಸಾಗರ
ಜಾತಿ, ಮತ, ಮೇಲು- ಕೀಳುಗಳಿಂದ ಬಹು ದೂರ ||

ಪ್ರಯಾಗರಾಜಕ್ಕೆ ಕೋಟ್ಯಂತರ ಶ್ರದ್ಧಾಳುಗಳ ಲಗ್ಗೆ
ಕಾಲ್ನಡಿಗೆಯಲ್ಲಿ ತ್ರಿವೇಣಿ ಸಂಗಮಕ್ಕೆ ಸಾಗುವ ಬಗ್ಗೆ||

ನದಿಯಲ್ಲಿ ಮುಳುಗೇಳುವ ಭಾವದ ದಿವ್ಯ ಪರಾಕಾಷ್ಠೆ
ಮಹಾಕುಂಭ ಸ್ನಾನಕ್ಕೆ ಅಭೂತಪೂರ್ವ ಒಲವಿನ ನಿಷ್ಠೆ||

'ಮಿಂದರೆ ಪಾಪ ಹೋದೀತೇ?' ಎಂಬ ಮಂದಿಯ ಕುಹಕ
ವ್ಯರ್ಥ, ಅನರ್ಥವಿದು, ಡೋಂಗಿಯೆಂದು ಸಾರುವ ತವಕ||

ಅವರವರ ಭಾವಕ್ಕೆ, ಅವರವರ ಭಕುತಿಯೇ ಆಗಿದೆ ಹಿರಿದು
ಅರ್ಥವಿರದ ವಾದಗಳಿಂದ ಆಗದಿರಲಿ ಬುದ್ಧಿಮತ್ತೆ ಬರಿದು!

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಮಾಘ ಮಾಸ, ನವಮೀ ತಿಥಿ, ಕೃಷ್ಣ ಪಕ್ಷ, ಜ್ಯೇಷ್ಠ ನಕ್ಷತ್ರ, ಹರ್ಷಣ ಯೋಗ, ರಾಹುಕಾಲ ಬೆಳಗ್ಗೆ 9.36ರಿಂದ ಮಧ್ಯಾಹ್ನ 11.05ರವರೆಗೆ, ಅಭಿಜಿತ್ ಮುಹೂರ್ತ ಮಧ್ಯಾಹ್ನ 12.10ರಿಂದ 12.57ರವರೆಗೆ.

ಮನೆಮದ್ದು

ಮಕ್ಕಳಲ್ಲಿ ಯಕೃತ್ತಿನ ವಿಕಾರ ಕಂಡುಬಂದರೆ, ತುಳಸಿಯ ಒಣಗಿದ ಎಲೆಗಳನ್ನು, ತೂಕದಲ್ಲಿ ಅವುಗಳಿಗಿಂತ 4 ಅಂಶದಷ್ಟು ಬಿಸಿನೀರಿನಲ್ಲಿ 2 ಗಂಟೆಯವರೆಗೆ ಮಣ್ಣಿನ ಪಾತ್ರೆಯಲ್ಲಿ ನೆನೆಸಿಟ್ಟು, ಆಮೇಲೆ ಕಿವುಚಿ, ಸೋಸಿ, ಕುಡಿಯಲಿಕ್ಕೆ ಕೊಟ್ಟರೆ, ಸಮಸ್ಯೆ ನಿವಾರಣೆಯಾಗುತ್ತದೆ.

ಸೌಂದರ್ಯ ಸೂತ್ರ

ದೈನಂದಿನ ಆಹಾರ ಕ್ರಮದಲ್ಲಿ ನೆಲ್ಲಿಕಾಯಿಯನ್ನು ಯಥೋಚಿತ ಪ್ರಮಾಣದಲ್ಲಿ ಬಳಸುವುದರಿಂದ ಹಾಗೂ ನೆಲ್ಲಿಕಾಯಿಯ ಕಣಕ ಅಥವಾ ಪುಡಿಯಿಂದ ಪ್ರತಿದಿನವೂ ಹಲ್ಲುಗಳನ್ನು ಉಜ್ಜಿದರೆ, ಅವಕ್ಕೆ ಹೊಳಪು ಬರುತ್ತದೆ ಮತ್ತು ಅವು ಕೊಳೆತು ಕ್ಷಯಿಸುವುದು ತಪ್ಪುತ್ತದೆ.

ದಿನ ಭವಿಷ್ಯ

ಮೇಷ
ಚಾಡಿಮಾತನ್ನು ಹೇಳುವವರು ನಿಮ್ಮ ಪ್ರಯೋಜನಕ್ಕಿಂತ ತಮ್ಮ ಸ್ವಾರ್ಥಸಾಧನೆಯ ಉದ್ದೇಶವನ್ನಷ್ಟೇ ಇಟ್ಟುಕೊಂಡಿರುತ್ತಾರೆ. ಇಂಥವರನ್ನು ದೂರವಿಡಿ. ಸಜ್ಜನರ ಸಂಗವು ಹೆಜ್ಜೇನು ಸವಿದಂತೆ ಎಂಬ ಮಾತನ್ನು ಮರೆಯದಿರಿ.

ವೃಷಭ
ಉದ್ಯಮವನ್ನು ವಿಸ್ತರಿಸಬೇಕೆಂಬ ನಿಮ್ಮ ಬಯಕೆ ಸಹಜವೇ ಆಗಿದ್ದರೂ ಅದಕ್ಕಿದು ಸಕಾಲವಲ್ಲ. ಕೆಲ ದಿನಗಳವರೆಗೆ ಈಗಿರುವ ನೆಲೆಯಲ್ಲೇ ವ್ಯಾಪಾರೋದ್ದಿಮೆಯನ್ನು ಮುಂದುವರಿಸಿಕೊಂಡು ಹೋದರೆ ಒಳಿತು.

ಮಿಥುನ
ಮನೆಗೆ ಇಲೆಕ್ಟ್ರಾನಿಕ್ ಉಪಕರಣಗಳು ಬರುವುದರಿಂದ ನಿಮ್ಮ ಮನಸ್ಸಿಗೆ ಖುಷಿಯಾಗಲಿದೆ. ಮನೆಯಲ್ಲಿ ಸದ್ಯದಲ್ಲೇ ಶುಭಕಾರ್ಯ ನಡೆಯಲಿದ್ದು, ಬಂಧು-ಮಿತ್ರರು ಜಮಾಯಿಸಲಿದ್ದಾರೆ. ಈ ಸಂದರ್ಭವನ್ನು ಮನದುಂಬಿ ಆಸ್ವಾದಿಸಿ.

ಕಟಕ
ಮನೆಯಿಂದ ಹೊರಗಡೆ ಆಹಾರ ಸೇವಿಸಿದ ಪ್ರಯುಕ್ತ ನಿಮ್ಮ ಆರೋಗ್ಯದಲ್ಲಿ ಕೊಂಚ ವ್ಯತ್ಯಯವಾಗಬಹುದು. ಇದನ್ನು ನಿರ್ಲಕ್ಷಿಸದೆ ಸೂಕ್ತ ಔಷಧೋಪಚಾರವನ್ನು ಮಾಡಿಕೊಳ್ಳಿ. ಇಲ್ಲದಿದ್ದರೆ ಹೆಚ್ಚಿನ ಬೆಲೆ ತೆರಬೇಕಾದೀತು.

ಸಿಂಹ
ಹಾರ್ಡ್‌ವೇರ್, ಸಿಮೆಂಟ್, ಪೇಂಟ್ ಹಾಗೂ ಪೀಠೋಪಕರಣಗಳ ವ್ಯವಹಾರಗಳಲ್ಲಿ ತೊಡಗಿಸಿಕೊಂಡವರಿಗೆ ಇಂದು ಶುಭದಿನ. ಬಹಳ ದಿನಗಳಿಂದ ಬಾಕಿ ಉಳಿದಿದ್ದ ದುಡ್ಡು-ಕಾಸು ಇಂದು ಕೈಸೇರುವುದರಿಂದ ಸಂತಸಗೊಳ್ಳುವಿರಿ.

ಕನ್ಯಾ
ಕಾರನ್ನು ಖರೀದಿಸಬೇಕೆಂಬ ನಿಮ್ಮ ಬಯಕೆಯನ್ನು ಕೆಲ ಕಾಲ ಮುಂದೂಡಿದಲ್ಲಿ ಒಳಿತು. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಎಂಬ ಜಾಣನುಡಿಯನ್ನು ಮರೆಯದಿರಿ. ಗುರುಪೀಠಕ್ಕೆ ಭೇಟಿ ನೀಡಿ ನಮಸ್ಕರಿಸಿ.

ತುಲಾ
ದುಂದುವೆಚ್ಚಕ್ಕೆ ಮುಂದಾಗಬೇಡಿ. ನೀವು ಇಂದು ಉಳಿಸಿದ ಹಣವೇ ಗಳಿಸಿದ ಹಣ ಎಂಬುದನ್ನು ಮರೆಯದಿರಿ. ಮತ್ತೊಬ್ಬರ ಸಾಲದ ಜಾಮೀನು ಪತ್ರಕ್ಕೆ ಸಹಿ ಹಾಕುವ ಮುನ್ನ ಸಾಕಷ್ಟು ಆಲೋಚಿಸಿ. ಗಣೇಶನನ್ನು ಆರಾಧಿಸಿ.

ವೃಶ್ಚಿಕ
ಮನೆಯಲ್ಲಿ ಮಂಗಳಕಾರ್ಯ ನಡೆಯಲಿದೆ. ಸರಕಾರಿ ಉದ್ಯೋಗಕ್ಕಾಗಿ ಪ್ರಯತ್ನಿಸುತ್ತಿರುವವರು ಹಾಗೂ ಬಡ್ತಿಯ ನಿರೀಕ್ಷೆಯಲ್ಲಿರುವವರು ಶುಭ ಸುದ್ದಿಯನ್ನು ಕೇಳುವ ದಿನವಿದು. ದುರ್ಗಾಮಾತೆಯನ್ನು ಪ್ರಾರ್ಥಿಸಿ.

ಧನು
ನಿಮ್ಮ ನೌಕರಿಯಲ್ಲಿ ಎಷ್ಟೇ ವ್ಯಸ್ತರಾಗಿದ್ದರೂ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನ ನೀಡುವುದನ್ನು ಮರೆಯಬೇಡಿ. ಉದ್ಯೋಗ ಸಂಬಂಧವಾಗಿ ಕೆಲ ಕಾಲ ಮನೆಯಿಂದ ದೂರ ಉಳಿಯಬೇಕಾಗಿ ಬರಬಹುದು. ಸವಾಲು ಸ್ವೀಕರಿಸಿ. ನೆಮ್ಮದಿಗಾಗಿ ಕುಟುಂಬ ಸದಸ್ಯರೊಂದಿಗೆ ಪ್ರವಾಸ ಕೈಗೊಳ್ಳಿ.

ಮಕರ
ದೇವರನ್ನು ನಂಬುವುದು ಅಥವಾ ಬಿಡುವುದು ನಿಮ್ಮ ವೈಯಕ್ತಿಕ ವಿಚಾರ/ಅಭಿಪ್ರಾಯ. ಆದರೆ ಮನುಷ್ಯನನ್ನೂ ಮೀರಿದ ಮಹಾನ್ ಶಕ್ತಿಯೊಂದಿದ್ದು, ಅದು ಸಕಲ ಜೀವಸಂಕುಲವನ್ನೂ ಕಾಪಾಡುತ್ತಿದೆ ಎಂಬುದನ್ನು ಮರೆಯದಿರಿ.

ಕುಂಭ
ವಯಸ್ಸಿಗೆ ಬಂದ ಮಕ್ಕಳಿಗೆ ಸ್ವಾತಂತ್ರ್ಯವನ್ನು ನೀಡಬೇಕು ಎಂಬುದೇನೋ ಒಪ್ಪುವಂಥ ಮಾತೇ. ಆದರೆ 'ಸ್ವಾತಂತ್ರ್ಯ' ಎಂಬುದು 'ಸ್ವೇಚ್ಛೆ' ಆಗಬಾರದು. ನಿಮ್ಮ ಬುದ್ಧಿ ನಿಮ್ಮ ಕೈಯಲ್ಲಿರಲಿ. ಗಣೇಶನನ್ನು ಆರಾಧಿಸಿ.

ಮೀನ
ಸ್ವಂತ ಉದ್ಯಮ ಸ್ಥಾಪಿಸಲು ಮುಂದಾಗುವುದಕ್ಕಿಂತ ನೀವು ಯಾವುದಾದರೂ ಉದ್ಯೋಗವನ್ನು ನೆಚ್ಚುವುದು ಮೇಲು. ದುಂದುವೆಚ್ಚಕ್ಕೆ ಕಡಿವಾಣ ಹಾಕಿ, ನೆರೆಹೊರೆಯವರನ್ನು ಪ್ರೀತಿಸಿ. ಮಾರುತಿಯನ್ನು ಆರಾಧಿಸಿ.

• ಕೆ.ಬಿ.ಸಂತೋಷ್ ಗುರೂಜಿ

ಮಧುರ ಸ್ಮೃತಿ

ಶುರುವಿನಲ್ಲಿ ಸಿನಿಮಾ ಪತ್ರಕರ್ತರಾಗಿ, ತರುವಾಯ ಚಲನಚಿತ್ರ ನಿರ್ಮಾಣ ನಿರ್ವಾಹಕರಾಗಿ ದುಡಿದು, ನಂತರ ಚಿತ್ರಕಥೆ-ಸಂಭಾಷಣೆಯ ರಚನೆಗೂ ಇಳಿದು, ಮುಂದೆ ಚಿತ್ರ ನಿರ್ದೇಶನಕ್ಕೂ ಅಡಿಯಿಟ್ಟವರು ಕೃಷ್ಣ ನಾಡಿಗ್. ಇವರು ದಿಗಂತ್ ಅಭಿನಯದ 'ಕರೆಯೇ ಕೋಗಿಲೆ ಮಾಧವನಾ...' ಎಂಬ ತಮ್ಮ ಮೊದಲ ಚಿತ್ರದ ನಿರ್ದೇಶನಕ್ಕಿಳಿದಾಗ ಅದಕ್ಕೆ ಒತ್ತಾಸೆಯಾದವರು ಪ್ರಸಿದ್ಧ ಹಿನ್ನೆಲೆ ಗಾಯಕ ಡಾ. ಎಸ್.ಪಿ.ಬಾಲ ಸುಬ್ರಹ್ಮಣ್ಯಂ. ಖ್ಯಾತ ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿಯವರ ಸಂಗೀತ ನಿರ್ದೇಶನದಲ್ಲಿ ಈ ಚಿತ್ರಕ್ಕೆ ಹಾಡಲೆಂದು ಬೆಂಗಳೂರಿಗೆ ಬಂದಿದ್ದ 'ಎಸ್‌ಪಿಬಿ', ಕೃಷ್ಣ ನಾಡಿಗ್ ಜತೆಗೆ ರಸಮಯ ಕ್ಷಣಗಳನ್ನು ಹಂಚಿ ಕೊಳ್ಳುತ್ತಿದ್ದಾಗಿನ ಚಿತ್ರವಿದು. ಕೋವಿಡ್ ಕಾಲಘಟ್ಟವು ಈ ಇಬ್ಬರೂ ಪ್ರತಿಭಾವಂತರನ್ನು ಆಪೋಶನ ತೆಗೆದುಕೊಂಡಿದ್ದು ದುರದೃಷ್ಟಕರ..

ಸೀತಾಮಾತೆಯ ಸಹೋದರ ಯಾರು ಗೊತ್ತೇ?

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಸೀತಾಮಾತೆಯು ಅವತರಿಸಿದ್ದು ಜನಕನ ನೆಲೆಯಾದ ನೇಪಾಳದಲ್ಲಿ. ಪುಷ್ಯ ಮಾಸದ, ಕೃಷ್ಣ ಪಕ್ಷದ ಅಷ್ಟಮಿಯ ದಿನದಂದು ಜನಕ ಮಹಾರಾಜನು ಭೂಮಿಯನ್ನು ಉಳುತ್ತಿದ್ದ ಸಮಯದಲ್ಲಿ ಅಲ್ಲಿ ದೊರೆತವಳು ಸೀತೆ. ನೇಪಾಳದಲ್ಲಿ ಈ ದಿನವನ್ನು 'ಜಾನಕಿ ಜಯಂತಿ', 'ಸೀತಾಷ್ಟಮಿ' ಎಂದು ಆಚರಿಸುತ್ತಾರೆ.

ಸೀತಾ-ರಾಮರ ಕಲ್ಯಾಣದ ಸಮಯದಲ್ಲಿ, ವಧುವನ್ನು ಮಂಟಪಕ್ಕೆ ಕರೆತರುವ ಸಂದರ್ಭ ಎದುರಾಯಿತು. ಈ ವೇಳೆ ಸೋದರನು ವಧುವಿನ ರೂಪದಲ್ಲಿರುವ ತನ್ನ ಸೋದರಿಗೆ ಸುಗಂಧ ದ್ರವ್ಯವನ್ನು ಸಿಂಪಡಿಸುತ್ತಾ, ಆಕೆಯ ಕೈಹಿಡಿದು ಮದುವೆಯ ಮಂಟಪಕ್ಕೆ ಕರೆತರಬೇಕು. ಅಂತೆಯೇ ಧಾರೆಯ ಸಮಯ ಬಂತು. "ಶಾಸ್ತ್ರಕ್ಕನುಸಾರವಾಗಿ ಮದುಮಗಳನ್ನು ಆಕೆಯ ಸೋದರ ಮಂಟಪಕ್ಕೆ ಕರೆತರಲಿ" ಎಂದರು ಪುರೋಹಿತರು. ಆದರೆ ಜನಕ ಮಹಾರಾಜನಿಗೆ ಗಂಡು ಸಂತಾನವಿರಲಿಲ್ಲ.

ಅಂದಿನ ಸೀತಾ-ರಾಮರ ಕಲ್ಯಾಣೋತ್ಸವದ ಸಂಭ್ರಮವನ್ನು ಕಣ್ತುಂಬಿಕೊಳ್ಳಲು 'ಮಂಗಳ ಗ್ರಹ' ಅಲ್ಲಿ ಬಂದು ಕುಳಿತಿದ್ದ. ಕಾರಣ, ಭೂಮಿಗೆ ಸೀತೆ ಹೇಗೆ ಪುತ್ರಿಯೋ, ಹಾಗೆ ಮಂಗಳನೂ ಭೂಮಿಪುತ್ರನೇ. ವಿವಾಹ ಸಂಬಂಧಿತ ಅಗತ್ಯ ಶಾಸ್ತ್ರ-ಸಂಪ್ರದಾಯಗಳ ಅರಿವಿದ್ದ ಭೂಮಿತಾಯಿ ತನ್ನ ಮಗನಾದ ಮಂಗಳನಿಗೆ, "ಸೀತೆ ನಿನ್ನ ಸಹೋದರಿ, ಆಕೆಯ ವಿವಾಹ ಸಂದರ್ಭದಲ್ಲಿ ಇಂಥದೊಂದು ಶಾಸ್ತ್ರವಿದ್ದು ಅದನ್ನು ನೆರವೇರಿಸಬೇಕಾಗುತ್ತದೆ" ಎಂದು ಸೂಚಿಸಿದ್ದಳು. ಅವಳ ಸೂಚನೆಯ ಮೇರೆಗೆ ಹಾಗೆ ಅಲ್ಲಿ ಉಪಸ್ಥಿತನಿದ್ದ ಮಂಗಳನು ಪುರೋಹಿತರ ಮಾತು ಕೇಳುತ್ತಿದ್ದ ಹಾಗೆ ಥಟ್ಟನೆ ಎದ್ದು ನಿಂತು, "ನಾನು ಸೀತೆಯ ಸಹೋದರ. ಆಕೆಯ ವಿವಾಹಕ್ಕೆ ಸಂಬಂಧಿಸಿದ ಈ ಶಾಸ್ತ್ರವನ್ನು ನಾನು ನಿರ್ವಹಿಸುತ್ತೇನೆ" ಎನ್ನುತ್ತಾ ಮುಂದೆ ಬಂದ. ಅಂದಿನ ತನಕ ಕಂಡು-ಕೇಳರಿಯದ ಈ ಸಹೋದರ ಈಗ ಎಲ್ಲಿಂದ ಬಂದನೆಂದು ಅಲ್ಲಿದ್ದವರಿಗೆಲ್ಲಾ ಆಶ್ಚರ್ಯವಾಯಿತು. ಅಂತೆಯೇ ಜನಕ ಮಹಾರಾಜನೂ, 'ಕುಲ-ಗೋತ್ರ-ಧರ್ಮ-ವಂಶಗಳ ಸಂಬಂಧವಿಲ್ಲದ ಈ ವ್ಯಕ್ತಿ ಈಗ ಎಲ್ಲಿಂದ ಬಂದ?' ಎಂದು ಕಸಿವಿಸಿಗೊಂಡಾಗ ಅವನಲ್ಲಿಗೆ ಬಂದ ಮಂಗಳನು, "ಓ ಜನಕ ಮಹಾರಾಜರೇ, ನಿಮಗೆ ಈ ವಿಷಯದಲ್ಲಿ ಸಂದೇಹವಿದ್ದರೆ, ಮಹರ್ಷಿಗಳಾದ ವಸಿಷ್ಠರು ಮತ್ತು ವಿಶ್ವಾಮಿತ್ರರನ್ನು ಕೇಳಿ" ಎಂದ.

ಹಠಾತ್ತನೆ ಉದ್ಭವಿಸಿದ ಈ ಸಂದೇಹವನ್ನು ಪರಿಹರಿಸುವಂತೆ ವಸಿಷ್ಠ-ವಿಶ್ವಾಮಿತ್ರರನ್ನು ಜನಕ ಮಹಾರಾಜ ಕೇಳಿದ. ಮಂಗಳನು ಭೂಮಿಪುತ್ರ ಎಂಬ ಸಂಗತಿಯನ್ನು ಮೊದಲೇ ತಿಳಿದಿದ್ದ ಆ ಮಹರ್ಷಿಗಳು 'ಹೌದು, ಇದು ನಿಜ' ಎಂಬಂತೆ ತಲೆಯಾಡಿಸಿದರು. ಅವರ ಅನುಮತಿಯ ಮೇರೆಗೆ ಜನಕ ಮಹಾರಾಜನು ಸೀತಾ-ರಾಮರ ಕಲ್ಯಾಣ ಮಹೋತ್ಸವವನ್ನು ಸಕಲ ವಿಧಿ-ವಿಧಾನಗಳೊಂದಿಗೆ ಮತ್ತು ವೈಭವೋಪೇತವಾಗಿ ನೆರವೇರಿಸಿದ. ನಂತರ, ಸೀತೆಯನ್ನು ಗಂಡನ ಮನೆಗೆ ಕಳಿಸುವಾಗ ಗೋಸಂಪತ್ತಿನ ಜತೆಗೆ ಮುತ್ತು-ರತ್ನಗಳು, ದಾಸ-ದಾಸಿಯರು, ಕುದುರೆ-ಕಾಲಾಳುಗಳು, ರಥ-ಸಾರಥಿ ಎಲ್ಲವನ್ನೂ ಬಳುವಳಿಯಾಗಿ ಕೊಡಲು ಮುಂದಾದ. ಆದರೆ ಅವೆಲ್ಲವನ್ನೂ ನಿರಾಕರಿಸಿದ ಸೀತೆ, ತಾನು ಆರಾಧಿಸುತ್ತಿದ್ದ ಪಾರ್ವತಿಯ ರೂಪವಾದ 'ಕಾಳಿ ಮಾತೆ' ವಿಗ್ರಹವನ್ನು ತನ್ನೊಂದಿಗೆ ಅಯೋಧ್ಯೆಗೆ ತಂದಳು. ಮಹಾರಾಜ ದಶರಥನು ಈ ವಿಗ್ರಹವನ್ನು ಅಲ್ಲಿನ ಈಶಾನ್ಯ ಮೂಲೆಯಲ್ಲಿ ಪ್ರತಿಷ್ಠಾಪಿಸಿದ. ತರುವಾಯದಲ್ಲಿ ಸೀತೆಯು ತನ್ನ ಸಖಿಯರೊಂದಿಗೆ ಈ ದೇಗುಲಕ್ಕೆ ಬಂದು ಪೂಜೆ ಸಲ್ಲಿಸುತ್ತಿದ್ದಳು. ಅಯೋಧ್ಯೆಯ ಚೌಟಿ ದೇವಾಲಯದಲ್ಲಿ ಇಂದಿಗೂ ಈ ವಿಗ್ರಹವಿದೆ. ಕಾಳಿ ಇಲ್ಲಿ ಸರ್ವಮಂಗಳೆಯಾಗಿ ಶೋಭಾಯಮಾನವಾಗಿದ್ದು, 'ದೇವಕಾಳಿ' ಹೆಸರಿನಲ್ಲಿ ಪೂಜಿಸಲ್ಪಡುತ್ತಾಳೆ. ಅಂತೆಯೇ, ದಶರಥನಂದನ ರಾಮನ ಕುಲದೇವರ ಹೆಸರು 'ಬಡಾ ಕಾಳಿ' ಎಂದಿದ್ದು, ಈ ಮಂದಿರವೂ ಅಯೋಧ್ಯೆಯಲ್ಲಿದೆ.

ನೇಪಾಳದಲ್ಲಿ ಪ್ರಚಲಿತವಿರುವ ಈ ಕಥಾಪ್ರಸಂಗವು, ಸೀತೆಯ ಸೋದರನ ಸ್ಥಾನದಲ್ಲಿ ನಿಂತು ಮದುವೆ ಮಾಡಿಕೊಟ್ಟ ಮಂಗಳ ಗ್ರಹದ ಭ್ರಾತೃ ಪ್ರೀತಿಯನ್ನು ತೋರುತ್ತದೆ, ತನ್ಮೂಲಕ ಒಂದು ಅನುಪಮ ಸಂದೇಶವನ್ನೂ ಸಾರುತ್ತದೆ. 'ಸ್ವಂತ ಅಕ್ಕ ತಂಗಿಯರು ಇಲ್ಲದಿದ್ದರೇನಂತೆ? ನಿಮ್ಮ ಕುಟುಂಬದಲ್ಲಿ, ಸ್ನೇಹಿತರ ಬಳಗದಲ್ಲಿ ಅಂಥವರಿದ್ದರೆ ಅವರ ವಿವಾಹಕ್ಕೆ ನೆರವಾಗಿ' ಎಂಬುದೇ ಆ ಸಂದೇಶ. ಇದು ನಮ್ಮ ಭಾರತೀಯ ಸಂಸ್ಕೃತಿಯು ನಮಗೆ ಕಲಿಸುವ ದೊಡ್ಡ ಸಂಸ್ಕಾರ.

ವಿವಿಧ ವಿನೋದಾವಳಿ...

ಹೀಗೊಬ್ಬ ಮಹಾನ್ ಜ್ಞಾನಿ!

ಯಗಟಿ ರಘು ನಾಡಿಗ್

ಅದೊಂದು ಹುಚ್ಚಾಸ್ಪತ್ರೆ. ಡಾ. ಪ್ರಕೋಪ ರಾವ್ ಅಲ್ಲಿನ ಮುಖ್ಯ ವೈದ್ಯರು. ತಮ್ಮ ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳಿಗೆ ನೀಡಲಾದ ನಿರಂತರ ಚಿಕಿತ್ಸೆಯ ನಂತರ, ಹಿಡಿದಿರುವ ಹುಚ್ಚು ಬಿಟ್ಟಿದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಡಾ. ಪ್ರಕೋಪ ರಾವ್ ತಮ್ಮದೇ ಆದ ವಿಭಿನ್ನ ಅಳತೆಗೋಲನ್ನು ಸಿದ್ಧಪಡಿಸಿಕೊಂಡಿದ್ದರು. ಅದೇನೆಂದರೆ, ಟ್ರೀಟ್‌ಮೆಂಟ್ ಮುಗಿದ ಹುಚ್ಚರಲ್ಲಿ ಒಬ್ಬೊಬ್ಬನನ್ನೂ ಕರೆದು, ತಮ್ಮ ಕಣ್ಣು-ಮೂಗು-ಕಿವಿ ಇತ್ಯಾದಿಗಳನ್ನು ಮುಟ್ಟಿಕೊಂಡು ತೋರಿಸುತ್ತಾ, ಮಕ್ಕಳನ್ನು ಕೇಳುವ ರೀತಿಯಲ್ಲಿ, "ಇದೇನ್ ಹೇಳು ನೋಡೋಣಾ?" ಅಂತ ಕೇಳುವುದು; ಅವರು ಸರಿಯಾಗಿ ಗುರುತಿಸಿ ಹೇಳಿದರೆ ಅವರ ಹುಚ್ಚು ಬಿಟ್ಟುಹೋಗಿದೆ ಎಂದೂ, ಸರಿಯಾಗಿ ಹೇಳದಿದ್ದರೆ ಹುಚ್ಚು ಇನ್ನೂ ಠಿಕಾಣಿ ಹೂಡಿದೆಯೆಂದೂ ನಿರ್ಧರಿಸುವುದು ಅವರ ವಿಧಾನವಾಗಿತ್ತು.

ಅಂದು ಡಾ.ಪ್ರಕೋಪರಾವ್ ಒಂದಷ್ಟು ರೋಗಿಗಳನ್ನು ಹೀಗೆಯೇ 'ತಾಳೆ ನೋಡಿ', 'ಒರೆಹಚ್ಚಿ' ಪರೀಕ್ಷಿಸಿ ತೀರ್ಮಾನ ಕೈಗೊಳ್ಳುವುದಿತ್ತು. ಸರಿ, ಅವರು ಮೊದಲನೆಯವನನ್ನು ಕರೆದರು. ತಮ್ಮ ಮೂಗು ಮುಟ್ಟಿಕೊಂಡು ತೋರಿಸಿ, "ಇದೇನು ಹೇಳು ನೋಡೋಣಾ?" ಎಂದು ಕೇಳಿದರು.

"ಕಿವಿ" ಎಂದುತ್ತರಿಸಿದ ಆ ಬ್ರಹ್ಮಜ್ಞಾನಿ! (ಪ್ರಾಯಶಃ ಆ ವೈದ್ಯರ ಮೂಗು ಅಷ್ಟೊಂದು ಅಗಲವಾಗಿತ್ತು ಅನ್ಸುತ್ತೆ... ಪಾಪ ಅವನದ್ದೂ ತಪ್ಪಿಲ್ಲ ಬಿಡಿ..!). ಈ ಮಾತು ಕೇಳಿ ಹಣೆ ಚಚ್ಚಿಕೊಂಡ ಡಾ.ಪ್ರಕೋಪರಾವ್, "ಇವನಿಗಿನ್ನೂ ಹುಚ್ಚು ಬಿಟ್ಟಿಲ್ಲ; ವಾಪಸ್ ವಾರ್ಡಿಗೆ ಸೇರಿಸಿ" ಅಂತ ತಮ್ಮ ಸಹಾಯಕರಿಗೆ ಹೇಳಿದರು.

ಮತ್ತೊಬ್ಬ ಹುಚ್ಚ ಮುಂದೆ ಬಂದು ನಿಂತ. ಡಾ.ಪ್ರಕೋಪರಾವ್ ತಮ್ಮ ಮೀಸೆಯನ್ನು ಅವನಿಗೆ ತೋರಿಸಿ, "ಇದೇನು ಅಂತ ಹೇಳು ನೋಡೋಣಾ...?" ಅಂದ್ರು. ಅದಕ್ಕೆ ಆ ಮಹಾನುಭಾವ, "ಹೆ... ಹ್ಹೆ... ಹ್ಹೇ... ನಂಗೇನು ಅಷ್ಟೂ ಗೊತ್ತಿಲ್ವಾ? ಮೂಗಿನ ಎರಡೂ ತೂತಿನಿಂದ ಎರಡು ಕಂಬಳಿಹುಳಗಳು ಹೊರಗ್ಬಂದು, ಆ ಕಡೆ ಒಂದು ಈ ಕಡೆ ಪಾಚ್ಕೊಂಡಿವೆ" ಎಂದು ಉತ್ತರಿಸಿದ! ಈ ಮಾತು ಕೇಳಿ, "ಇವನನ್ನು ಸ್ಪೆಷಲ್ ವಾರ್ಡಿಗೆ ಹಾಕ್ರೀ ಬೇಗಾ" ಎಂದು ಉದ್ವೇಗಕ್ಕೊಳಗಾದ ನಮ್ಮ 'ವೈದ್ಯೋ ನಾರಾಯಣೋ ಹರಿಃ' ಜೋರುದನಿಯಲ್ಲಿ "ನೆಕ್ಸ್ಟ್‌ ನೆಕ್ಸ್ಟ್" ಎಂದರು.

ಮಗದೊಬ್ಬ ರೋಗಿ 'ಶೋಲೆ' ಚಿತ್ರದ ಗಬ್ಬರ್‌ಸಿಂಗ್ ಸ್ಟೈಲ್‌ನಲ್ಲಿ ಬಂದು ನಿಂತ, "ಕಿತನೇ ಕ್ವೆಶ್ಚನ್ ಹೈ ರೇ?" ಎಂದು ಕೇಳುವ ಶೈಲಿಯಲ್ಲಿ! ವೈದ್ಯರು ತಮ್ಮ ತಲೆಗೂದಲನ್ನು ಅವನಿಗೆ ತೋರಿಸಿ, "ಇದೇನು ಹೇಳು ನೋಡೋಣಾ?" ಎಂದು ಕೇಳಿದರು. ಅದಕ್ಕೆ ಆ ಹುಚ್ಚ ಗಬ್ಬರ್‌ಸಿಂಗ್ ಶೈಲಿಯಲ್ಲೇ ಗಹಗಹಿಸಿ ನಗುತ್ತಾ, "ನಾನು ಸಾವಿರ ಸಲ ಬಡ್ಕೊಂಡೆ, ಜಾಸ್ತಿ ತಲೆಬಿಸಿ ಮಾಡ್ಕೋಬೇಡೀ ಡಾಕ್ಟರ್ರೇ ಅಂತ. ಕೇಳಿದ್ರಾ ನನ್ ಮಾತೂ? ಈಗ ನೋಡಿ, ನೀವು ಹೊಸದು ಹೊಸದು ತಲೆಮೇಲೆ ಹಾಕ್ಕೊಂಡಿದ್ದ 'ಒತ್ತುಶಾವಿಗೆ' ಎಲ್ಲಾ ಹ್ಯಾಗೆ ಕರ್ರಗೆ ಸೀದುಹೋಗಿದೆ ಅಂತ.." ಎಂದು ಹೇಳುತ್ತಾ ತನ್ನ ಸಾಮಾಜಿಕ ಕಳಕಳಿಯನ್ನೂ, ವೈದ್ಯರೆಡೆಗಿನ ತನ್ನ ಭ್ರಾತೃಪ್ರೇಮವನ್ನೂ ಒಟ್ಟೊಟ್ಟಿಗೇ ಪ್ರದರ್ಶಿಸಿದ. ಒತ್ತುಶಾವಿಗೆಗೆ ಹೋಲಿಸಿದ್ದರಿಂದ ವೈದ್ಯರ ತಲೆಗೂದಲುಗಳೆಲ್ಲಾ 'ರೋಮಾಂಚನ'ಗೊಂಡು ನೆಟ್ಟಗೆ ನಿಂತವು. "ಮೊದ್ಲು ಇವನನ್ನ ಇಂಟೆನ್ಸಿವ್ ಕೇರ್ ಯುನಿಟ್‌ಗೆ ದಬ್ರೀ..." ಅಂತ ಎದೆ ಹಿಡಿದುಕೊಂಡು ಗೋಡೆಗೆ ಒರಗಿಕೊಂಡರು ಡಾ. ಪ್ರಕೋಪರಾವ್!

ಈ ಪರಿಪಾಠ ಹೀಗೇ ಮುಂದುವರಿಯಿತು. ನಂತರ ಡಾ. ಪ್ರಕೋಪರಾವ್, "ಇನ್ನೂ ಎಷ್ಟು ಜನ ಇದ್ದಾರ್ರೀ?" ಎಂದು ಕೇಳಿದರು ತಮ್ಮ ಬಿ.ಪಿ. ಚೆಕ್ ಮಾಡುತ್ತಿದ್ದ ಸಹಾಯಕ ವೈದ್ಯ ಡಾ. ಆವೇಶರಾವ್ ಅವರನ್ನು. "ಇನ್ನು ಒಬ್ನೇ ಒಬ್ಬ ಉಳ್ಕಂಡಿದ್ದಾನೆ ಸಾರ್..." ಎಂದರು ಡಾ. ಆವೇಶರಾವ್. ಸರಿ, ಅವನನ್ನೂ ಕರೆಯಲಾಯಿತು. ಎಂದಿನ ವರಸೆ ಶುರುಮಾಡಿಕೊಂಡ ಡಾ. ಪ್ರಕೋಪರಾವ್ ತಮ್ಮ ಮೂಗನ್ನು ಮುಟ್ಟಿಕೊಂಡು ಅವನನ್ನುದ್ದೇಶಿಸಿ, "ಇದೇನು?" ಅಂತ ಕೇಳಿದ್ರು. "ಮೂಗು" ಅಂದ ಆ ಹುಚ್ಚ. ಗೆಲುವಾದ ವೈದ್ಯರು ತಮ್ಮ ಕಿವಿಯನ್ನು ಮುಟ್ಟಿಕೊಂಡು, "ಇದೇನು ಅಂತ ಹೇಳು ನೋಡೋಣಾ?" ಅಂತ ಕೇಳಿದ್ದಕ್ಕೆ ಆತ "ಕಿವಿ" ಅಂತ ಉತ್ತರಿಸಿದ. ಮತ್ತೂ ಗೆಲುವಾಗಿ ಬಿ.ಪಿ.ಯನ್ನು ನಾರ್ಮಲ್‌ಗೆ ತಂದುಕೊಂಡ ಡಾ. ಪ್ರಕೋಪರಾವ್ ರಿಪೀಟೆಡ್ಡಾಗಿ ಹೀಗೆ ಒಂದೊಂದು ಅಂಗವನ್ನೂ ಮುಟ್ಟಿಕೊಂಡು ತೋರಿಸುತ್ತಾ ಕೇಳುತ್ತಲೇ ಹೋದರು. ಆತನೂ ಅಷ್ಟೇ ವೇಗವಾಗಿ ಉತ್ತರಿಸುತ್ತಲೇ ಹೋದ.

ಡಾ. ಪ್ರಕೋಪರಾವ್‌ಗೆ ತಡೆಯಲಾರದಷ್ಟು ಖುಷಿಯಾಯ್ತು. "ಅಬ್ಬಾ.... ಇಷ್ಟು ದಿನದ ತಪಸ್ಸಿಗೆ ಇವತ್ತು ಫಲ ಸಿಕ್ಕಿದಂತಾಯ್ತು..." ಎಂದು ಹೇಳಿಕೊಂಡು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು, ಎಲ್ಲದಕ್ಕೂ ಸರಿಯಾದ ಉತ್ತರ ಹೇಳಿದ ಆ ಕೊನೆಯ ಹುಚ್ಚನ ಬಳಿಗೆ ಬಂದು ಕೇಳಿದರು: "ಅಲ್ಲಾ ಮಾರಾಯಾ... ನಾನು ತೋರಿಸಿದ ನನ್ನ ಪ್ರತಿಯೊಂದು ಅಂಗವನ್ನೂ ಎಷ್ಟು ಕರೆಕ್ಟಾಗಿ ಗುರುತಿಸಿ ಹೇಳಿದೆ; ಇದು ನಿನಗೆ ಹೇಗೆ ಸಾಧ್ಯವಾಯಿತು?"

ವೈದ್ಯರ ಈ ಮೆಚ್ಚುಗೆ ಮಾತನ್ನು ಕೇಳಿದ್ದೇ ಕೇಳಿದ್ದು, ತನ್ನ ಕಾಲಿನ ಮೇಲೆ ಕಾಲುಹಾಕಿಕೊಂಡು ಕೂತ ಆ ಹುಚ್ಚ ತನ್ನ ಎಡಗೈಯನ್ನು ಸೊಂಟದ ಮೇಲಿಟ್ಟುಕೊಂಡು, ಬಲಗೈನ ತೋರುಬೆರಳಿನಲ್ಲಿ ತನ್ನ ತಲೆಯನ್ನು ತೋರಿಸುತ್ತಾ ಹೇಳಿದ: "ಹಾಗೆ ಸರಿಯುತ್ತರ ಹೇಳೋದು ಅಷ್ಟು ಸುಲಭವಲ್ಲಾರೀ... ಅದಕ್ಕೂ ಬೇಕ್ರೀ ಕಿಡ್ನೀ..!!"

ಈ ಮಾತು ಕೇಳಿ ಕುಸಿದು ಬಿದ್ದ ಡಾ. ಪ್ರಕೋಪರಾವ್‌ರವರನ್ನು ಎಮರ್ಜೆನ್ಸಿ ವಾರ್ಡಿಗೆ ಸೇರಿಸಲಾಯಿತು...!

ಇಲ್ಲೊಂಚೂರು ಕೇಳ್ರೀ...

• ಆನೆಯ ದಂತದಿಂದ ತಯಾರಿಸಿದ ಕಲಾತ್ಮಕ ವಸ್ತುಗಳನ್ನು ಹಾಗೂ ಸೂಕ್ಷ್ಮ ಕುಸುರಿಯಿರುವ ಕಲಾಕೃತಿಗಳನ್ನು ಕಾಲಾನುಕಾಲಕ್ಕೆ, ಅಂದರೆ ತಿಂಗಳಿನಲ್ಲಿ ಕನಿಷ್ಠಪಕ್ಷ 2 ಸಲ, ಬಿಸಿಹಾಲಿನಲ್ಲಿ ನೆನೆಯಿಸಿದ ಬಟ್ಟೆಯಿಂದ ಉಜ್ಜಿ ಒರೆಸಬೇಕು. ಹೀಗೆ ಮಾಡುವುದರಿಂದ ಆ ವಸ್ತುಗಳು ಹಳದಿ ಬಣ್ಣಕ್ಕೆ ತಿರುಗುವುದಿಲ್ಲ. ಆನೆಯ ದಂತದಿಂದ ತಯಾರಿಸಿದ ಅಲಂಕಾರಿಕ ಆಭರಣಗಳಿಗೆ ಮಿಥಿಲೇಟೆಡ್ ಸ್ಪಿರಿಟ್ ಅನ್ನು ಪ್ರಯೋಗಿಸುವುದರಿಂದಲೂ ಅವು ಹಳದಿ ಬಣ್ಣಕ್ಕೆ ತಿರುಗುವುದು ತಪ್ಪುತ್ತದೆ.

ಕಾರ್ಟೂನ್ ಕಚಗುಳಿ

ವ್ಯಂಗ್ಯಚಿತ್ರ ಕೃಪೆ: ಸುಧೀರ್ ತೈಲಾಂಗ್

ಇವರೆಲ್ಲಾ ಬೋ ವರ್ಸದಿಂದ ನಮ್ಮನ್ನ ಮಂಗ್ಯಾ ಮಾಡ್ತಾನೇ ಬಂದವ್ರೇ... ಇನ್ ಮ್ಯಾಕೆ ಚುನಾವಣಾ ಪ್ರಣಾಳಿಕೆ ಅನ್ನೋದು ಇಲ್ದೇ ಇರೋ ಪಕ್ಸಕ್ಕೇ ವೋಟ್ ಆಕ್ಬೇಕು ಕಣಮ್ಮೀ...!

ಇಲ್ಲೊಂಚೂರು ಕೇಳ್ರೀ...

• ಬಣ್ಣದ ಬಟ್ಟೆಯ ಮೇಲೆ ಹಣ್ಣು-ಹಂಪಲುಗಳ ಕಲೆಯಾದರೆ, ಬಟ್ಟೆಯ ಬಣ್ಣವು ಹೋಗದಂತೆ ಕಲೆಗಳನ್ನು ತೆಗೆಯುವುದು ತಲೆನೋವಿನ ಕೆಲಸವಾಗುತ್ತದೆ. ಚಿಂತಿಸದಿರಿ, ಅಂಥ ಕಲೆಯ ಮೇಲೆ ಮೊದಲು ಅಮೋನಿಯಾವನ್ನು ಪ್ರಯೋಗಿಸಿ, ನಂತರ ಕೊಂಚ ಪೆಟ್ರೋಲನ್ನು ತಟ್ಟಿ, ಸ್ಪಂಜ್‌ನಿಂದ ಒರೆಸಿದರೆ ಕಲೆ ಮಾಯವಾಗುತ್ತದೆ.

ಪದಬಂಧ

1			■	2	■	3		4
	■	■	5		6	■	■	
7		8	■	■	9			
	■	10		11		■	■	
■	12		■		■	13		■
14	■	■	15				■	16
17				■	■	18		
	■	■	19	20		■	■	
21			■		■	22		

ಎಡದಿಂದ ಬಲಕ್ಕೆ
1. ಅರೆ! ಇದೊಂದು ಬಗೆಯ ದ್ವಿದಳ ಧಾನ್ಯ (3)
3. ಬಹು ವಿಧವಾಗಿ ನಮ್ಮ ಹಣೆಬರಹ ಬರೆದಿರುವ ಬ್ರಹ್ಮ (3)
5. ತನಗಿಂತ ಮೊದಲು ಹುಟ್ಟಿದವನು ಎಂಬರ್ಥದಲ್ಲಿ ಅಣ್ಣ (3)
7. ಬೆಳಗಿನ ಜಾವದ ಸಮಯ (3)
9. ಸಂಸ್ಕೃತ ಪಂಡಿತರ ಬಾಯಿಯಲ್ಲಿ ಬಂದ ಬೆಣ್ಣೆ (4)
10. ತಪ್ಪುಗಳನ್ನು ಸರಿಪಡಿಸುವವನು (4)
12. ಎಡ ಎಂದರ್ಥ (2)
13. ತಮಾಷೆ ಅಥವಾ ವಿನೋದಕ್ಕೆ ಮತ್ತೊಂದು ಹೆಸರು (2)
15. ದುಂಬಿಯು ಹೂವಿನಿಂದ ಹೀರುವ ರಸ (4)
17. ಉದಾಹರಣೆ ಅಥವಾ ದೃಷ್ಟಾಂತ (4)
18. ತುಂಡರಿಸುವ ಸಾಧನ (3)
19. ದುರ್ಲಭವಾದುದು (3)
21. ತಂಟೆಗೆ ಮತ್ತೊಂದು ಹೆಸರು (3)
22. ಈ ಕುದುರೆಯಲ್ಲಿ ಕೊನೆಗೆ ಗರ ತಿರುಗಿ ಬಂದಿದೆ (3)

ಮೇಲಿನಿಂದ ಕೆಳಕ್ಕೆ
1. ಕೀಳುದೆಸೆಗೆ ಮತ್ತೊಂದು ಹೆಸರು (4)
2. ಕೋಪಿಷ್ಠ ಅಥವಾ ಶಿವ (2)
4. ಹೆಚ್ಚು ಕಡಿಮೆ ಎನ್ನುವುದು (4)
6. ಸೀತಾದೇವಿಯ ತಂದೆ (3)
8. ಹೂವು ಅಥವಾ ಒಂದು ಛಂದಸ್ಸು ಕೂಡಾ ಹೌದು (3)
11. ಬಟ್ಟೆ ಒಗೆದು ಶುಚಿಮಾಡುವವನು (3)
13. ಗಣೇಶನಿಗೆ ಪ್ರಿಯವಾದ ಒಂದು ಸಿಹಿತಿನಿಸು (3)
14. ಮನೆಯಿಲ್ಲದವನು ಎಂದರ್ಥ (4)
15. ವಿನಮ್ರವಾಗಿ ಮಾಡಿಕೊಂಡ ಅರಿಕೆ (3)
16. ಮೊಮ್ಮಗನ ಅಥವಾ ಮೊಮ್ಮಗಳ ಮಗ (4)
20. ವಾಹನ ಹೋಗುವ ಹಾದಿ (2)

ಸರಿಯುತ್ತರಗಳು

[illegible]

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ಎಳಿ, ಎದ್ದೇಳಿ, ಜಾಗೃತರಾಗಿ...

ಕಲಬೆರಕೆಯನ್ನು ಕಿತ್ತೊಗೆಯೋಣ

'ಆರೋಗ್ಯವೇ ಭಾಗ್ಯ' ಎಂಬುದು ಬಲ್ಲವರ ಮಾತು. ಉತ್ತಮವಾದ ಆಹಾರವನ್ನು ಸೇವಿಸುವುದರಿಂದ ಆರೋಗ್ಯ ಕಾಪಿಟ್ಟುಕೊಳ್ಳಲು ಸಾಧ್ಯವಿದೆ. ಆದರೆ, ನಿಮ್ಮ ಅಡುಗೆ ಮನೆಯ ಡಬ್ಬಿಯಲ್ಲಿರುವ ದಿನಸಿ ಮತ್ತು ಸಾಂಬಾರ ಪದಾರ್ಥಗಳು ಒಳ್ಳೆಯ ಗುಣಮಟ್ಟದವು, ಪರಿಶುದ್ಧವಾದಂಥವು ಎಂಬುದಕ್ಕೆ ಖಾತ್ರಿಯೇನು? ಕೆಲವರ ದುಷ್ಟ ಹಿತಾಸಕ್ತಿ ಮತ್ತು ದುರಾಸೆಗಳಿಂದಾಗಿ ಆಹಾರ ಪದಾರ್ಥಗಳೂ ಕಲಬೆರಕೆಯಾಗುತ್ತಿರುವುದನ್ನು ತಳ್ಳಿಹಾಕುವಂತಿಲ್ಲ. ಅಕ್ಕಿಗೆ ಬಿಳಿಯ ಕಲ್ಲು, ಮಣ್ಣಿನ ಹೆಂಟೆ, ಹೂವಿನ ಬೀಜಗಳನ್ನು ಬೆರಕೆ ಮಾಡಿ ಮಾರಾಟ ಮಾಡುವುದು ಇಂಥ ಕೆಲವರ ಜಾಯಮಾನ. ಅದೇ ರೀತಿಯಲ್ಲಿ ಖಾದ್ಯತೈಲಕ್ಕೆ ಮಿನರಲ್ ಆಯಿಲ್, ತೊಗರಿಬೇಳೆಗೆ ಕೇಸರಿಬೇಳೆ, ಬೆಣ್ಣೆಗೆ ಮೈದಾ, ಸಾಸಿವೆಗೆ ರಾಗಿ, ಕರಿಮೆಣಸಿಗೆ ಪಪ್ಪಾಯಿ ಬೀಜ ಇತ್ಯಾದಿಯನ್ನು ಬೆರಕೆ ಮಾಡಿ ಟೋಪಿ ಹಾಕುವುದೂ ಇದೆ.

ಇನ್ನು ಹಾಲಿಗೆ ನೀರು ಬೆರೆಸಿ ಮಾರುವುದು ಬಹಳ ಕಾಲದಿಂದ ಬೆಳೆದುಬಂದಿರುವ 'ಅಲಿಖಿತ ಸಂಪ್ರದಾಯ'. ಇಂಥ ಕೆಲವು ಕಲಬೆರಕೆಗಳನ್ನು ಪತ್ತೆಹಚ್ಚುವ 'ಪತ್ತೇದಾರಿ ಕೆಲಸ'ವನ್ನು ಮಾಡೋಣ...

ಅಡುಗೆಯಲ್ಲಿ ಬಳಸಲಾಗುವ ಪುಡಿ ಉಪ್ಪಿಗೆ ಮರಳಿನ ರಾಡಿಯನ್ನು ಕೆಲವರು ಬೆರೆಸುವುದುಂಟು. ಇಂಥ ಸಂದೇಹ ಬಂದಾಗ, ಒಂದು ಪುಟ್ಟ ಗಾಜಿನ ಲೋಟದಲ್ಲಿ ನೀರನ್ನು ತೆಗೆದುಕೊಂಡು ಅದಕ್ಕೆ ಒಂದಿಷ್ಟು ಉಪ್ಪನ್ನು ಹಾಕಿ ಚೆನ್ನಾಗಿ ಕಲಕಿ. ನಿಜದ ಉಪ್ಪು ಕರಗಿದರೆ, ಮರಳಿನ ರಾಡಿಯು ಲೋಟದ ತಳಭಾಗದಲ್ಲಿ ನೆಲೆ ನಿಲ್ಲುವುದನ್ನು ಗಾಜಿನ ಲೋಟ ತೋರಿಸುತ್ತದೆ.

ಇನ್ನು, ದೇಹ-ಮನಸ್ಸುಗಳ ಆಹ್ಲಾದತೆಗೆಂದು ದಿನದಲ್ಲಿ ಹಲವು ಬಾರಿ ಚಹಾವನ್ನು ಚಪ್ಪರಿಸಿಕೊಂಡು ಕುಡಿಯುವುದು ಹಲವರ ಜಾಯಮಾನ. ಆದರೆ ಚಹಾ ಪುಡಿಗೆ ಕಬ್ಬಿಣದ ಪುಡಿಯ ಸಾರವನ್ನು ಬೆರೆಸುವವರು ಮತ್ತು ಈಗಾಗಲೇ ಚಹಾವನ್ನು ತಯಾರಿಸಿ ಎಸೆಯಲಾಗಿರುವ ಚಹಾ ಎಲೆಗೆ ಕೃತಕ ಬಣ್ಣವನ್ನು ಮೆತ್ತಿ ಚಹಾ ಪುಡಿ ಎಂದೇ ಮಾರುವವರು ನಮ್ಮಲ್ಲೇನೂ ಕಮ್ಮಿಯಿಲ್ಲ. ಇದನ್ನು ಪತ್ತೆ ಮಾಡಲು ಮೇಜಿನ ಮೇಲೆ ಒಂದು ಕಾಗದವನ್ನು ಹರವಿಟ್ಟು ಅದರ ಮೇಲೆ ಚಹಾಪುಡಿ ಅಥವಾ ಎಲೆಗಳನ್ನು ಹರಡಿ. ಅಯಸ್ಕಾಂತವನ್ನು ಚಹಾಪುಡಿಯ ಮೇಲೆ ಆಡಿಸಿ. ಕಬ್ಬಿಣದ ಪುಡಿ ಅದರಲ್ಲಿ ಬೆರಕೆಯಾಗಿದ್ದರೆ ಅದು ಅಯಸ್ಕಾಂತಕ್ಕೆ ಮೆತ್ತಿಕೊಳ್ಳುತ್ತದೆ. ಇದರಂತೆಯೇ, ಒಂದು ಕಾಗದವನ್ನು ಒದ್ದೆ ಮಾಡಿ, ಅದರ ಮೇಲೆ ಚಹಾಪುಡಿಯನ್ನು ಹರಡಿ. ಕಾಗದದ ಮೇಲೆ ಹಳದಿ, ಕೆಂಪು ಚುಕ್ಕೆಗಳು ಕಂಡುಬಂದರೆ ಚಹಾ ಪುಡಿಗೆ ಕೃತಕ ಬಣ್ಣ ಲೇಪಿಸಿ ಮಾರಾಟ ಮಾಡಲಾಗಿದೆ ಎಂದೇ ಅರ್ಥ!

ವಿಶ್ವಯೋಗ

ಬೆನ್ನುಮೂಳೆಯನ್ನು ಚುರುಕಾಗಿಸುವ ಉಪಾಯ

ಡಾ. ಪತಂಜಲಿ ಆಚಾರ್ಯ

ಪಾಶ್ಚಾತ್ಯ ವ್ಯಾಯಾಮ ಪದ್ಧತಿಗಳು ಅಂಗಸೌಷ್ಠವ, ಸೌಂದರ್ಯದ ಕಡೆಗೇ ಒತ್ತುನೀಡಿ ಅದಕ್ಕನುಗುಣವಾದ ದೇಹ ದಂಡನೆಯನ್ನು ಬಿಂಬಿಸುತ್ತವೆ. ಇಂಥ ಅಂಗ ಸಾಧನೆಗಳಿಂದ ಮಾಂಸಖಂಡಗಳ ಬೆಳವಣಿಗೆಯಷ್ಟೇ ಸಾಧ್ಯ. ಆದರೆ ಯೋಗಾಸನಗಳು ವ್ಯಕ್ತಿಯ ದೈಹಿಕ-ಮಾನಸಿಕ-ಆಧ್ಯಾತ್ಮಿಕ ಬೆಳವಣಿಗೆಗೂ ಕಸುವು ತುಂಬುತ್ತವೆ. ಅಂಥ ಆಸನಗಳನ್ನು ಕಲಿಯೋಣ. ಇಲ್ಲಿರುವುದು ಪೂರಕ ಮಾಹಿತಿಯಷ್ಟೇ; ಯೋಗಾಭ್ಯಾಸಕ್ಕೆ ಮುಂದಾಗುವವರು ಅದನ್ನು ಗುರುಮುಖೇನ ಕಲಿಯಬೇಕಾದುದು ಅಪೇಕ್ಷಣೀಯ.

ಪಶ್ಚಿಮೋತ್ತಾಸನ

ಸೊಂಟ ಮತ್ತು ಹೊಟ್ಟೆಯನ್ನು ಆವರಿಸಿಕೊಂಡಿರುವ ಕೊಬ್ಬಿನಂಶವನ್ನು ಕರಗಿಸುವ ನಿಟ್ಟಿನಲ್ಲಿ ಈ ಆಸನವು ಮಹಾನ್ ಪ್ರಯೋಜನಕಾರಿ. ಪ್ರತಿದಿನವೂ ಐದಾರು ಕಿಲೋ ಮೀಟರುಗಳಷ್ಟು ದೂರವನ್ನು ಓಡಿದಾಗ ದೇಹಕ್ಕೆ ಸಿಗುವಷ್ಟೇ ವ್ಯಾಯಾಮವು, ಈ ಆಸನವನ್ನು ಎಡೆಬಿಡದೆ ಆಚರಿಸುವುದರಿಂದ ಸಿಗುತ್ತದೆ.

ಅಭ್ಯಾಸಕ್ರಮ: ಪದರಗಳಲ್ಲಿ ಮಡಚಿಟ್ಟುಕೊಂಡಿರುವ ದಪ್ಪನೆಯ ಬಟ್ಟೆ ಅಥವಾ ಜಮಖಾನದ ಮೇಲೆ ಅಂಗಾತವಾಗಿ ನಿರಾಳರಾಗಿ ಮಲಗಿಕೊಳ್ಳಿ. ತರುವಾಯದಲ್ಲಿ ತಲೆ ಹಾಗೂ ಎದೆಯ ಭಾಗವನ್ನು ಮೇಲಕ್ಕೆತ್ತುತ್ತಾ ಬಂದು ನೇರವಾಗಿ ಕುಳಿತುಕೊಳ್ಳಿ. ಉಸಿರುಬಿಡುತ್ತಾ ತಲೆ ಮತ್ತು ಎದೆಯನ್ನು ಮುಂದಕ್ಕೆ ಬಾಗಿಸುತ್ತಾ, ಎರಡೂ ಕೈಗಳ ತೋರುಬೆರಳುಗಳಿಂದ ಕಾಲಿನ ಹೆಬ್ಬೆರಳುಗಳನ್ನು ಹಿಡಿಯುವ ಯತ್ನ ಮಾಡಿರಿ. ಹಣೆಯನ್ನು ಮೊಣಕಾಲುಗಳಿಗೆ ತಾಗಿಸಬೇಕು ಮತ್ತು ಮೊಣಕಾಲನ್ನು ಬಾಗಿಸದಂತೆ ನೇರವಾಗಿ ಇಟ್ಟುಕೊಂಡಿರಬೇಕು (ಶುರುವಿನಲ್ಲಿ ಇದು ಕೈಗೂಡದಿರಬಹುದು, ದಿನಗಳೆದಂತೆ ಮತ್ತು ಅಭ್ಯಾಸವನ್ನು ನಿರಂತರವಾಗಿಸಿದಂತೆ ಈ ಹಂತಗಳನ್ನು ಸಾಧಿಸಬಹುದು). ಈ ಭಂಗಿಯಲ್ಲಿ ಸುಮಾರು ಐದು ಸೆಕೆಂಡುಗಳವರೆಗಿದ್ದು, ನಂತರ ತಲೆಯನ್ನು ಮೊಣಕಾಲಿನ ಭಾಗದಿಂದ ಮೇಲಕ್ಕೆತ್ತಿ ಉಸಿರನ್ನು ಎಳೆದುಕೊಳ್ಳಿ. ಅಭ್ಯಾಸವಾದಂತೆ ಈ ಆಸನದ ಭಂಗಿಯನ್ನು 5 ಸೆಕೆಂಡುಗಳಿಂದ 1 ನಿಮಿಷದವರೆಗೂ ವಿಸ್ತರಿಸಬಹುದು.

ಪ್ರಯೋಜನಗಳು: ಈ ಆಸನದ ಅಭ್ಯಾಸದಿಂದಾಗಿ ಬೆನ್ನೆಲುಬಿನ ಸ್ನಾಯು, ಅಸ್ತಿರಜ್ಜುವಿನ ಶಕ್ತಿ ಹೆಚ್ಚುತ್ತದೆ, ಜಠರದ ಸ್ನಾಯುಗಳೂ ಬಲಗೊಳ್ಳುತ್ತವೆ, ಜಠರದ ಕೆಳ ಭಾಗದಲ್ಲಿ ಇರಬಹುದಾದ ಎಲ್ಲ ತೆರನಾದ ವಾಯುವೂ (ಗ್ಯಾಸ್) ಶರೀರದಿಂದ ಹೊರ ದೂಡಲ್ಪಡುತ್ತದೆ. ರಕ್ತ ಸಂಚಾರವು ಹೆಚ್ಚುವುದರಿಂದ ಬೆನ್ನು ಮೂಳೆಯ ಸಾಮರ್ಥ್ಯವು ಚುರುಕಾಗುತ್ತದೆ.

ಸಮಾಚಾರ ಸಣ್ಣದಲ್ಲ

ಶುಭಮನ್, ಶಮಿ ಹೊಸ ದಾಖಲೆ

ದುಬೈ: ಭಾರತ ಚಾಂಪಿಯನ್ಸ್ ಟ್ರೋಫಿಯ ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಸೋಲಿಸಿ ಗೆಲುವಿನ ಖಾತೆ ತೆರೆದಿದೆ. ಈ ಪಂದ್ಯದಲ್ಲಿ ಭಾರತ ಹಲವು ದಾಖಲೆಗಳನ್ನು ಮಾಡಿದೆ. ಬಾಂಗ್ಲಾ ವಿರುದ್ಧ ಅಜೇಯ 101 ರನ್ ಬಾರಿಸಿದ ಶುಭಮನ್ ಗಿಲ್ ಈಗ ಅತಿ ಕಡಿಮೆ ಪಂದ್ಯದಲ್ಲಿ ಎಂಟು ಏಕದಿನ ಶತಕಗಳನ್ನು ಗಳಿಸಿದ ಭಾರತೀಯ ಬ್ಯಾಟ್ಸ್‌ಮನ್ ಎನಿಸಿದ್ದಾರೆ. ಗಿಲ್ 51 ಇನ್ನಿಂಗ್ಸ್‌ಗಳಲ್ಲಿ ಈ ಸಾಧನೆ ಮಾಡಿದ್ದು, ಶಿಖರ್ ಧವನ್, ವಿರಾಟ್ ಕೊಹ್ಲಿ, ಸಚಿನ್ ತೆಂಡೂಲ್ಕರ್ ಅವರಂತಹ ದಿಗ್ಗಜರನ್ನು ಹಿಂದಿಕ್ಕಿದ್ದಾರೆ. ನಾಯಕ ರೋಹಿತ್ ಶರ್ಮಾ 41 ರನ್ ಗಳಿಸುವ ಮೂಲಕ ವಿರಾಟ್ ಕೊಹ್ಲಿ ನಂತರ ಅಂತಾರಾಷ್ಟ್ರೀಯ ಏಕದಿನ ಪಂದ್ಯದಲ್ಲಿ 11000 ರನ್ ಗಳಿಸಿದ ಎರಡನೇ ಅತಿ ವೇಗದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಇದರೊಂದಿಗೆ ಅವರು ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಮತ್ತು ಸೌರವ್ ಗಂಗೂಲಿ ಅವರ ಸಾಲಿಗೆ ಸೇರಿದ್ದಾರೆ. ವಿರಾಟ್ ಕೊಹ್ಲಿ ಈಗ 156 ಏಕದಿನ ಕ್ಯಾಚ್‌ಗಳನ್ನು ಪಡೆದು ಏಕದಿನ ಪಂದ್ಯಗಳಲ್ಲಿ ಅತಿ ಹೆಚ್ಚು ಕ್ಯಾಚ್‌ಗಳನ್ನು ಪಡೆದ ವಿಶ್ವದ ಮೂರನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಮೊಹಮ್ಮದ್ ಅಜರುದ್ದೀನ್ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ. ಐದು ವಿಕೆಟ್ ಪಡೆದ ಮೊಹಮ್ಮದ್ ಶಮಿ, ಏಕದಿನ ಕ್ರಿಕೆಟ್‌ನಲ್ಲಿ 200 ವಿಕೆಟ್‌ಗಳನ್ನು ಪೂರ್ಣಗೊಳಿಸಿದ್ದು, ಅತಿ ಕಡಿಮೆ ಎಸೆತಗಳಲ್ಲಿ 200 ವಿಕೆಟ್ ಪಡೆದ ವಿಶ್ವದಾಖಲೆ ಬರೆದಿದ್ದಾರೆ.

ಚಹಲ್-ಧನಶ್ರೀ ವಿಚ್ಛೇದನ

ಮುಂಬಯಿ: ಕ್ರಿಕೆಟಿಗ ದಂಪತಿ ಯಜುವೇಂದ್ರ ಚಹಲ್ ಮತ್ತು ಧನಶ್ರೀ ವರ್ಮಾ ಅವರು ವಿಚ್ಛೇದನ ಕೋರಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯ ಮಂಜೂರು ಮಾಡಿದೆ ಎನ್ನಲಾಗಿದೆ. ಚಹಲ್ ವಿಚ್ಛೇದನ ಸಂಬಂಧ ಎಕ್ಸ್ ಖಾತೆಯಲ್ಲಿ ಸಂದೇಶವೊಂದನ್ನು ಹಂಚಿಕೊಂಡಿದ್ದು, ಈ ನಿಟ್ಟಿನಲ್ಲಿ ಕುತೂಹಲಕ್ಕೆ ಕಾರಣವಾಗಿದೆ. 2020ರಲ್ಲಿ ಇವರಿಬ್ಬರೂ ಪ್ರೀತಿಸಿ ವಿವಾಹವಾಗಿದ್ದರು. ಕಳೆದ ವರ್ಷ ಇಬ್ಬರೂ ಇನ್ ಸ್ಟಾಗ್ರಾಂನಲ್ಲಿ ಪರಸ್ಪರ ಅನ್ ಫಾಲೋ ಮಾಡಿದಾಗ ವಿಚ್ಛೇದನದ ಬಗ್ಗೆ ಊಹಾಪೋಹಗಳು ಹುಟ್ಟಿಕೊಂಡಿದ್ದವು. ಬಹಳ ಸಮಯದಿಂದ ಬೇರೆ ಬೇರೆಯಾಗಿ ವಾಸಿಸುತ್ತಿದ್ದ ಇಬ್ಬರು ಡಿಸೆಂಬರ್‌ನಲ್ಲಿ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. ಗುರುವಾರ ಮುಂಬಯಿಯ ನ್ಯಾಯಾಲಯ ದಂಪತಿಗೆ ವಿಚ್ಛೇದನ ಜಾರಿ ಮಾಡಿದೆ ಎನ್ನಲಾಗಿದೆ. ಆದರೆ ಈ ಸುದ್ದಿಗಳನ್ನು ಧನಶ್ರೀ ಕುಟುಂಬ ಅಲ್ಲಗೆಳೆದಿದೆ. ಧನಶ್ರೀ 60 ಕೋಟಿ ರೂಪಾಯಿ ಜೀವನಾಂಶಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಎಲ್ಲೆಡೆ ಸುದ್ದಿಯಾಗಿತ್ತು.

ಹೆಲ್ಮೆಟ್ ರನ್ ನೆರವಿನಿಂದ ಮೊದಲ ಬಾರಿಗೆ ರಣಜಿ ಫೈನಲ್ ತಲುಪಿದ ಕೇರಳ
ಬಲಿಷ್ಠ ಮುಂಬೈ ವಿರುದ್ಧ ಗೆದ್ದು ಮೂರನೇ ಬಾರಿ ಫೈನಲ್ ಪ್ರವೇಶಿಸಿದ ವಿದರ್ಭ

ಕೇರಳ, ವಿದರ್ಭ ರಣಜಿ ಫೈನಲ್‌ಗೆ

ದೇಶೀ ಟೂರ್ನಿ ರಣಜಿ ಟ್ರೋಫಿ ಅಂತಿಮ ಹಂತ ತಲುಪಿದೆ. ನಾಲ್ಕು ತಂಡಗಳ ನಡುವೆ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಬಲಿಷ್ಠ ಮುಂಬೈ ತಂಡವನ್ನು ಮಣಿಸಿದ ವಿದರ್ಭ ತಂಡ ಮೂರನೇ ಬಾರಿಗೆ ಫೈನಲ್‌ಗೇರುವಲ್ಲಿ ಯಶಸ್ವಿಯಾಗಿದೆ. ಇತ್ತ ಮೊದಲ ಇನ್ನಿಂಗ್ಸ್‌ನ 2 ರನ್ ಮುನ್ನಡೆ ಆಧಾರದಲ್ಲಿ ಗುಜರಾತ್ ತಂಡವನ್ನು ಮಣಿಸಿದ ಕೇರಳ ತಂಡ ಮೊದಲ ಬಾರಿಗೆ ರಣಜಿ ಟ್ರೋಫಿ ಫೈನಲ್ ತಲುಪಿದೆ. ರಣಜಿಯ 74 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕೇರಳ ತಂಡ ಈ ಸಾಧನೆ ಮಾಡಿದೆ.

ಅಹಮದಾಬಾದ್: ಕ್ರೀಡೆಯಲ್ಲಿ ಪರಿಶ್ರಮ, ಸಾಧನೆಯ ಜತೆ ಕೆಲವೊಮ್ಮೆ ಅದೃಷ್ಟವೂ ಬೇಕು. ರಣಜಿ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಫೈನಲ್ ತಲುಪಿರುವ ಕೇರಳದ ಮಟ್ಟಿಗೆ ಈ ಮಾತು ನಿಜವಾಗಿದೆ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜಮ್ಮು-ಕಾಶ್ಮೀರ ವಿರುದ್ಧ ಕೇವಲ ಮೊದಲ ಇನ್ನಿಂಗ್ಸ್‌ನ ಒಂದು ರನ್ ಮುನ್ನಡೆ ಆಧಾರದಲ್ಲಿ ಕೇರಳ ಸೆಮಿಫೈನಲ್ ಪ್ರವೇಶಿಸಿತು. ಇದೀಗ ಸೆಮಿಫೈನಲ್ ವಿರುದ್ಧದ ಪಂದ್ಯದಲ್ಲಿ ಮೊದಲ ಇನ್ನಿಂಗ್ಸ್‌ನ ಎರಡು ರನ್‌ಗಳ ಮುನ್ನಡೆ ಆಧಾರದಲ್ಲಿ ಫೈನಲ್ ಪ್ರವೇಶಿಸಿದೆ. ಇದರೊಂದಿಗೆ 74 ವರ್ಷಗಳ ರಣಜಿ ಇತಿಹಾಸದಲ್ಲಿ ಕೇರಳ ಮೊದಲ ಬಾರಿಗೆ ಪ್ರಶಸ್ತಿ ಸುತ್ತು ಪ್ರವೇಶಿಸಿದೆ.

ಗೆಲುವಿಗೆ ನೆರವಾದ ಹೆಲ್ಮೆಟ್

ಕೊನೇ ಕ್ಷಣದಲ್ಲಿ ಹೆಲ್ಮೆಟ್ ಸಹಾಯದಿಂದ ಸಿಕ್ಕ ಕ್ಯಾಚ್ ಕೇರಳ ತಂಡವನ್ನು ಫೈನಲ್ ತಲುಪುವಂತೆ ಮಾಡಿದೆ. 2 ರನ್‌ಗಳ ಹಿನ್ನಡೆಯಿಂದಾಗಿ ಗುಜರಾತ್ ತಂಡದ ಫೈನಲ್ ಕನಸು ಭಗ್ನವಾಗಿದೆ.

ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ಸೆಮಿ ಫೈನಲ್ ಪಂದ್ಯದಲ್ಲಿ ಮೊದಲ ಇನ್ನಿಂಗ್ಸ್‌ನಲ್ಲಿ ಕೇರಳ ತಂಡ 187 ಓವರ್‌ಗಳಲ್ಲಿ 457 ರನ್ ಗಳಿಸಿತ್ತು. 174.3 ಓವರ್‌ಗಳಲ್ಲಿ 455 ರನ್ ಗಳಿಸಿದ್ದ ಗುಜರಾತ್ 9 ವಿಕೆಟ್ ಕಳೆದುಕೊಂಡಿತ್ತು. ಇನ್ನಿಂಗ್ಸ್ ಮುನ್ನಡೆ ಕಾಯ್ದುಕೊಳ್ಳಲು ಕೇವಲ 2 ರನ್ ಬೇಕಿತ್ತು. ಕೇರಳ ಪರ ಆದಿತ್ಯ ಸರ್ವತೇ ಬೌಲಿಂಗ್‌ನಲ್ಲಿದ್ದರೆ, ಬ್ಯಾಟರ್ ಅರ್ಜಾನ್ ನಾಗ್ವಾಸ್ವಾಲ್ಲಾ ಕ್ರೀಸ್‌ನಲ್ಲಿದ್ದರು. 175ನೇ ಓವರ್‌ನ 4ನೇ ಎಸೆತವನ್ನು ಬೌಂಡರಿ ಬಾರಿಸಲು ಅರ್ಜಾನ್ ಯತ್ನಿಸಿದರು. ಈ ವೇಳೆ ಮುಂಭಾಗದಲ್ಲಿದ್ದ ಶಾರ್ಟ್ ಲೆಗ್ ಫೀಲ್ಡರ್‌ನ ಹೆಲ್ಮೆಟ್‌ಗೆ ಬಡಿದ ಚೆಂಡು ನೇರವಾಗಿ ಸ್ಲಿಪ್ ಫೀಲ್ಡರ್ ಕೈ ಸೇರಿತು. ಅಂತಿಮವಾಗಿ ಗುಜರಾತ್ 174.4 ಓವರ್‌ಗಳಲ್ಲಿ ಆಲೌಟ್ ಆಗಿ ಫೈನಲ್‌ನಿಂದ ಹೊರಗುಳಿಯಿತು.

ಸೆಮಿ ಫೈನಲ್‌ನ 5ನೇ ದಿನವಾದ ಶುಕ್ರವಾರ ಉಭಯ ತಂಡಗಳಿಗೆ 2ನೇ ಇನ್ನಿಂಗ್ಸ್ ಬಾಕಿಯಿತ್ತು. ತನ್ನ ಸರದಿಯ 2ನೇ ಇನ್ನಿಂಗ್ಸ್ ಆರಂಭಿಸಿದ ಕೇರಳ ದಿನದ ಅಂತ್ಯಕ್ಕೆ 46 ಓವರ್‌ಗಳಲ್ಲಿ 4 ವಿಕೆಟ್‌ಗೆ 114 ರನ್ ಗಳಿಸಿತ್ತು. ಗುಜರಾತ್‌ಗೆ ಬ್ಯಾಟಿಂಗ್ ಮಾಡಲು ಅವಕಾಶ ಸಿಗದೇ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿತು. ಹಾಗಾಗಿ ಮೊದಲ ಇನ್ನಿಂಗ್ಸ್‌ನಲ್ಲಿ 2 ರನ್‌ಗಳ ಮುನ್ನಡೆ ಸಾಧಿಸಿದ ಕೇರಳ ತಂಡ ರಣಜಿ ಫೈನಲ್ ಪ್ರವೇಶಿಸಿತು. ಫೆಬ್ರವರಿ 26ರಿಂದ ನಾಗ್ಪುರದಲ್ಲಿ ನಡೆಯಲಿರುವ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಕೇರಳ ಟೀಮ್ ವಿದರ್ಭ ತಂಡದನ್ನು ಎದುರಿಸಲಿದೆ.

ಫಲಿಸಿದ ಕೇರಳ ತಂತ್ರ

ಪ್ರಥಮ ಇನ್ನಿಂಗ್ಸ್‌ನಲ್ಲಿ ಕೇರಳ ತಂಡ ಬಹಳ ನಿಧಾನಗತಿಯ ಬ್ಯಾಟಿಂಗ್ ನಡೆಸಿತ್ತು. 187 ಓವರ್‌ಗಳಷ್ಟು ದೀರ್ಘಕಾಲ ಬ್ಯಾಟಿಂಗ್ ನಡೆಸಿ 2.44 ರನ್ ರೇಟ್ ಪ್ರಕಾರ 457 ಗಳಿಸಿತು. ಪಂದ್ಯ ಡ್ರಾಗೊಂಡರೆ ಪ್ರಥಮ ಇನ್ನಿಂಗ್ಸ್ ಮುನ್ನಡೆ ಆಧಾರದಲ್ಲಿ ಫಲಿತಾಂಶ ನಿರ್ಧಾರ ಆಗುತ್ತದೆ ಎಂಬ ಕಾರಣಕ್ಕೆ ಈ ರೀತಿಯ ರಣತಂತ್ರ ಹೂಡಿದ್ದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಕೇರಳ ಪರ ಅಜರುದ್ದೀನ್ 177 ರನ್ ಬಾರಿಸಿ ಗೆಲುವಿನ ರೂವಾರಿಯಾದರು.

ಮುಂಬೈ ವಿರುದ್ಧ ಸೇಡು ತೀರಿಸಿಕೊಂಡ ವಿದರ್ಭ

ನಾಗ್ಪುರ: ಇಲ್ಲಿನ ವಿದರ್ಭ ಕ್ರಿಕೆಟ್ ಅಸೋಸಿಯೇಷನ್ ಮೈದಾನದಲ್ಲಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ ವಿದರ್ಭ ತಂಡವು ಮುಂಬೈ ತಂಡವನ್ನು 80 ರನ್‌ಗಳಿಂದ ಸೋಲಿಸಿ ರಣಜಿ ಫೈನಲ್ ಪ್ರವೇಶಿಸಿದೆ. ವಿದರ್ಭ ನೀಡಿದ್ದ 406 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಮುಂಬೈ 325 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಸೋಲು ಕಂಡಿತು. ಇದರೊಂದಿಗೆ ಕಳೆದ ಋತುವಿನ ಫೈನಲ್‌ನಲ್ಲಿ ಮುಂಬೈ ವಿರುದ್ಧದ ಸೋಲಿಗೆ ವಿದರ್ಭ ಸೆಮಿಫೈನಲ್‌ನಲ್ಲಿ ಸೇಡು ತೀರಿಸಿಕೊಂಡಿದೆ.

ವಿದರ್ಭ ಪರ ಹರ್ಷ್ ದುಬೆ 5 ವಿಕೆಟ್ ಪಡೆದರೆ, ಯಶ್ ಠಾಕೂರ್ ಮತ್ತು ಪಾರ್ಥ್ ರೇಖಾ ತಲಾ ಎರಡು ವಿಕೆಟ್ ಪಡೆದು ಮುಂಬೈ ತಂಡವನ್ನು ಮಣಿಸಿದರು.

ಮುಂಬೈಗೆ ಕೈಕೊಟ್ಟ ಸ್ಟಾರ್ ಬ್ಯಾಟರ್ಸ್: ಮುಂಬೈ ತಂಡದ ಸೋಲು ಖಚಿತವಾದ ನಂತರ 8ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ಶಾರ್ದೂಲ್ ಠಾಕೂರ್ (66) ಅರ್ಧಶತಕ ಗಳಿಸಿ ತಂಡದ ಮತ್ತೊಮ್ಮೆ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಸ್ಟಾರ್ ಬ್ಯಾಟ್ಸ್‌ಮನ್‌ಗಳಾದ ಅಜಿಂಕ್ಯ ರಹಾನೆ (12), ಶಿವಂ ದುಬೆ (12) ಮತ್ತು ಸೂರ್ಯಕುಮಾರ್ ಯಾದವ್ (23) ಅಲ್ಪ ಮೊತ್ತಕ್ಕೆ ಔಟಾಗಿದ್ದು ಮುಂಬಯಿಗೆ ದುಬಾರಿಯಾಯಿತು. ಮೊದಲ ಇನ್ನಿಂಗ್ಸ್ ಶತಕ ವೀರ ಆಕಾಶ್ ಆನಂದ್ 39 ರನ್ ಗಳಿಸಿದರೆ, ಯುವ ಆಟಗಾರರಾದ ಆಯುಷ್ ಮಾತ್ರೆ (18) ಮತ್ತು ಸಿದ್ದೇಶ್ ಲಾಡ್ (2) ನಿರಾಸೆ ಮೂಡಿಸಿದರು. ಕೊನೆಯಲ್ಲಿ ಶಮ್ಸ್ ಮುಲಾನಿ 46, ತನುಷ್ ಕೊಟ್ಯಾನ್ 26 , ಮೋಹಿತ್ ಅವಸ್ಥಿ 26 , ಮತ್ತು ರಾಯ್‌ಸ್ಟನ್ ಡಯಾಸ್ 23 ಕಿರು ಕಾಣಿಕೆ ನೀಡಿ ಸೋಲಿನ ಅಂತರವನ್ನು ತಗ್ಗಿಸಿದರು.

ಮೊದಲ ಇನ್ನಿಂಗ್ಸ್‌ನಲ್ಲಿ ವಿದರ್ಭ 383 ರನ್: ಈ ಪಂದ್ಯದಲ್ಲಿ ವಿದರ್ಭ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 383 ರನ್‌ಗಳಿಗೆ ಆಲೌಟ್ ಆಗಿತ್ತು. ಧ್ರುವ್ ಶೋರೆ (74), ದಿನೇಶ್ ಮಾಲೇವಾರ್ (79), ಮತ್ತು ಯಶ್ ರಾಥೋಡ್ (54) ಅರ್ಧಶತಕ ಸಿಡಿಸಿದ್ದರು. ಕನ್ನಡಿಗ ಕರುಣ್ ನಾಯರ್ (45) ಮತ್ತು ನಾಯಕ ಅಕ್ಷಯ್ ವಾಡ್ಕರ್ (34) ಕೂಡ ತಂಡಕ್ಕೆ ಕಿರು ಕಾಣಿಕೆ ನೀಡಿದ್ದರು. ಮುಂಬೈ ಬೌಲರ್‌ಗಳಲ್ಲಿ ಶಿವಂ ದುಬೆ ಐದು ವಿಕೆಟ್‌ಗಳೊಂದಿಗೆ ಅತ್ಯುತ್ತಮ ಪ್ರದರ್ಶನ ನೀಡಿದರೆ, ಶಮ್ಸ್‌ಮುಲಾನಿ ಮತ್ತು ರಾಯ್‌ಸ್ಟನ್ ಡಯಾಸ್ ತಲಾ ಎರಡು ವಿಕೆಟ್‌ಗಳನ್ನು ಮತ್ತು ಶಾರ್ದೂಲ್ ಠಾಕೂರ್ ಒಂದು ವಿಕೆಟ್ ಪಡೆದರು.

ರಹಾನೆ, ಸೂರ್ಯ ವಿಫಲ

ಮುಂಬೈ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 270 ರನ್ ಗಳಿಗೆ ಆಲೌಟ್ ಆಗುವ ಮೂಲಕ ಮೊದಲ ಇನ್ನಿಂಗ್ಸ್ ಹಿನ್ನಡೆ ಅನುಭವಿಸಿತ್ತು. ಸ್ಟಾರ್ ಬ್ಯಾಟ್ಸ್‌ಮನ್‌ಗಳು ಮತ್ತು ಟೀಮ್ ಇಂಡಿಯಾ ಆಟಗಾರರಾದ ಅಜಿಂಕ್ಯ ರಹಾನೆ (18), ಸೂರ್ಯಕುಮಾರ್ ಯಾದವ್ (0), ಮತ್ತು ಶಿವಂ ದುಬೆ (0) ಸಂಪೂರ್ಣ ವಿಫಲರಾದರು. ಆಕಾಶ್ ಆನಂದ್ (106) ಅದ್ಭುತ ಹೋರಾಟದ ಮನೋಭಾವ ಪ್ರದರ್ಶಿಸಿ ಸೂಪರ್ ಶತಕದೊಂದಿಗೆ ಮುಂಬೈ ತಂಡದ ಗೌರವವನ್ನು ಉಳಿಸಿದರು.

ವಿದರ್ಭ ಬೌಲರ್‌ಗಳಲ್ಲಿ ಪಾರ್ಥ್ ರೇಖಾಡೆ 4 ವಿಕೆಟ್ ಪಡೆದರೆ, ಯಶ್ ಠಾಕೂರ್ ಮತ್ತು ಹರ್ಷ್ ದುಬೆ ತಲಾ 2 ವಿಕೆಟ್ ಪಡೆದರು, ಮತ್ತು ದರ್ಶನ್ ನಲ್ಕಂಡೆ ಮತ್ತು ಭೂಟೆ ತಲಾ ಒಂದು ವಿಕೆಟ್ ಪಡೆದರು.

ಮೊದಲ ಇನ್ನಿಂಗ್ಸ್‌ನಲ್ಲಿ 113 ರನ್ ಗಳ ಮುನ್ನಡೆಯೊಂದಿಗೆ ಎರಡನೇ ಇನ್ನಿಂಗ್ಸ್ ಆರಂಭಿಸಿದ ವಿದರ್ಭ ತಂಡ 292 ರನ್‌ಗಳಿಗೆ ಆಲೌಟ್ ಆಗಿ 406ರನ್‌ಗಳ ಬೃಹತ್ ಗುರಿ ನೀಡಿತು. ಯಶ್ ರಾಥೋಡ್ 151 ರನ್ ಗಳಿಸಿ ವಿದರ್ಭ ತಂಡದ ಬೃಹತ್ ಗುರಿಗೆ ನೆರವಾಗಿದ್ದರು. ಈ ಇನ್ನಿಂಗ್ಸ್‌ನಲ್ಲಿ ಮುಂಬೈ ಪರ ಮುಲ್ಲಾನಿ ಆರು ವಿಕೆಟ್‌ಗಳನ್ನು ಪಡೆದರೆ, ತನುಷ್ ಕೋಟ್ಯಾನ್ 3 ವಿಕೆಟ್ ಮತ್ತು ಶಾರ್ದೂಲ್ ಠಾಕೂರ್ ಒಂದು ವಿಕೆಟ್ ಪಡೆದಿದ್ದರು.

ಹರ್ಮನ್ ಕೌರ್ ಅರ್ಧ ಶತಕ | ತವರು ನೆಲದಲ್ಲಿ ಸೋತ ಆರ್‌ಸಿಬಿ

ಮುಂಬೈಗೆ 4 ವಿಕೆಟ್ ಗೆಲುವು

ಬೆಂಗಳೂರು: ನಾಯಕಿ ಹರ್ಮನ್ ಪ್ರೀತ್ ಕೌರ್ ಅವರ ಆಕರ್ಷಕ ಅರ್ಧ ಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವನ್ನು ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯೂಪಿಎಲ್) ಟೂರ್ನಿಯಲ್ಲಿ ನಾಲ್ಕು ವಿಕೆಟ್‌ಗಳಿಂದ ಸೋಲಿಸಿತು.

ಟಾಸ್ ಗೆದ್ದ ಮುಂಬೈ ನಾಯಕಿ ಹರ್ಮನ್ ಪ್ರೀತ್ ಕೌರ್ ಬೌಲಿಂಗ್ ಆಯ್ದುಕೊಂಡರು. ಬ್ಯಾಟಿಂಗ್ ಆರಂಭಿಸಿದ ಆರ್‌ಸಿಬಿ ನಾಯಕಿ ಸ್ಮೃತಿ ಮಂದಾನ ಬಿರುಸಿನ ಆರಂಭ ನೀಡಿದರು. ಕೇವಲ 13 ಎಸೆತಗಳನ್ನು ಎದುರಿಸಿದ ಅವರು ನಾಲ್ಕು ಬೌಂಡರಿ, 1 ಸಿಕ್ಸರ್‌ನೊಂದಿಗೆ 26 ರನ್ ಬಾರಿಸಿ ಔಟಾದರು. ಡ್ಯಾನಿಲ್ ವ್ಯಾಟ್ ಹಾಜ್ (9 ರನ್) ರಾಘ್ವಿ ಬಿಸ್ತ್ (1 ರನ್) ಮತ್ತು ಕನಿಕಾ ಅಹುಜಾ (3 ರನ್) ಗಳಿಸಿ ಒಬ್ಬರ ಹಿಂದೆ ಒಬ್ಬರಂತೆ ಪೆವಿಲಿಯನ್ ಸೇರಿಕೊಂಡರು. ಹೀಗಾಗಿ ಆರ್‌ಸಿಬಿಯ ರನ್ ವೇಗ ತಗ್ಗಿತು. ಈ ಹಂತದಲ್ಲಿ ಜೊತೆಯಾದ ಪೆರ್ರಿ ಮತ್ತು ರಿಚಾ ಘೋಷ್ (28 ರನ್) ಐದನೇ ವಿಕೆಟ್‌ಗೆ ಅರ್ಧ ಶತಕದ ಜತೆಯಾಟವಾಡಿದರು. ರಿಚಾ ಔಟಾದ ಬಳಿಕ ಜವಾಬ್ದಾರಿಯುತ ಆಟವಾಡಿದ ಪೆರ್ರಿ, ಆರ್‌ಸಿಬಿ ತಂಡದ ಮೊತ್ತ 160ರ ರನ್ ದಾಟಲು ನೆರವಾದರು. ಅಂತಿಮವಾಗಿ ಆರ್‌ಸಿಬಿ ನಿಗಧಿತ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 167 ರನ್ ಕಲೆ ಹಾಕಿತು.

ಗೆಲ್ಲಲು 168 ರನ್‌ಗಳ ಗುರಿ ಪಡೆದ ಮುಂಬೈ ಇಂಡಿಯನ್ಸ್‌ನ ಆರಂಭ ಉತ್ತಮವಾಗಿರಲಿಲ್ಲ. ಆದರೆ ಸ್ಕಿವರ್ ಬ್ರಂಟ್ 21 ಬಾಲ್‌ಗಳಲ್ಲಿ 42 ರನ್ ಸಿಡಿಸಿದರು. ಆ ನಂತರ ಕ್ರೀಸ್‌ಗೆ ಬಂದ ಹರ್ಮನ್ ಪ್ರೀತ್ ಕೌರ್ 38 ಬಾಲ್‌ಗಳಲ್ಲಿ 50 ರನ್ ಬಾರಿಸಿ ಮುಂಬೈಗೆ ಆಸರೆಯಾದರು. ಅಮಜೋತ್ ಕೌರ್ 27 ಬಾಲ್‌ಗಳಲ್ಲಿ 34 ರನ್ ಸಿಡಿಸಿ ಮುಂಬೈ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿದರು. 19.5 ಓವರ್‌ಗಳಲ್ಲಿ 6 ವಿಕೆಟ್‌ಗೆ 170 ರನ್ ಗಳಿಸಿದ ಮುಂಬೈ ಇಂಡಿಯನ್ಸ್ ಕೊನೆಗೂ ಜಯದ ನಗೆ ಬೀರಿತು.

ಆಫ್ಘನ್ನರ ವಿರುದ್ಧ ಹರಿಣಗಳಿಗೆ ಜಯ

ಕರಾಚಿ: ಇಲ್ಲಿನ ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ ಪಂದ್ಯದಲ್ಲಿ ದ.ಆಫ್ರಿಕಾ ತಂಡ ಅಫ್ಘಾನಿಸ್ತಾನ ವಿರುದ್ಧ 107 ರನ್‌ಗಳಿಂದ ಗೆಲುವು ದಾಖಲಿಸಿ ಶುಭಾರಂಭ ಮಾಡಿದೆ. ಚಾಂಪಿ ಯನ್ಸ್ ಟ್ರೋಫಿಯ 3ನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 50 ಓವರ್‌ಗಳಲ್ಲಿ 6 ವಿಕೆಟ್‌ಗೆ 315 ರನ್ ಗಳ ಬೃಹತ್ ಮೊತ್ತ ದಾಖಲಿ ಸಿತು. ಆದರೆ ಈ ಮೊತ್ತ ಬೆನ್ನಟ್ಟಲಾ ಗದ ಅಫ್ಘಾನಿಸ್ತಾನ ಸೋಲೊಪ್ಪಿಕೊಂಡಿತು.

ಈ ಬಾರಿಯ ಐಪಿಎಲ್ ಮೆಗಾ ಹರಾಜಿನಲ್ಲಿ ಮುಂಬೈ ಇಂಡಿಯನ್ಸ್ ಸೇರಿರುವ ರಿಯಾನ್ ರಿಕಲ್ಟನ್ 106 ಎಸೆತಗಳಲ್ಲಿ 103 ರನ್ ಗಳಿಸಿ ತಂಡಕ್ಕೆ ಆಸರೆಯಾದರು. ಟೆಂಬಾ ಬವುಮಾ (58). ರಾಸ್ಸಿ ವ್ಯಾನ್ ಡೆರ್ ಡಸೆನ್ (52) ಮತ್ತು ಐಡೆನ್ ಮಾರ್ಕ್ರಾಮ್(52) ಅರ್ಧಶತಕ ಸಿಡಿಸಿ ದೊಡ್ಡ ಮೊತ್ತಕ್ಕೆ ನೆರವಾದರು. ಅಫ್ಘಾನಿಸ್ತಾನದ ಪರ ರಹಮತ್ ಷಾ 66 ಬಾಲ್‌ಗಳಲ್ಲಿ 53 ರನ್ ಗಳಿಸಿದ್ದು ಬಿಟ್ಟರೆ ಉಳಿದ ಬ್ಯಾಟರ್‌ಗಳು ದ. ಆಫ್ರಿಕಾ ಪರ ಪರ ಲುಂಗಿ ಎನ್‌ಗಿಡಿ (2 ವಿಕೆಟ್) ಮತ್ತು ಕಗಿಸೋ ರಬಾಡೋ (3 ವಿಕೆಟ್) ದಾಳಿಯನ್ನು ಎದುರಿಸಲು ಶಕ್ತರಾಗಲಿಲ್ಲ. ಆಫ್ಘನ್ನರ ಪರ ಮೊಹಮ್ಮದ್ ನಬಿ 2 ವಿಕೆಟ್ ಪಡೆದರೆ, ಫಜ್ಲಹಾಕ್ ಫಾರೂಕಿ, ಅಜ್ಮತುಲ್ಲಾ ಒಮರ್ಜೈ ಮತ್ತು ನೂರ್ ಅಹ್ಮದ್ ತಲಾ 1 ವಿಕೆಟ್ ಪಡೆದರು.

ದುಬೈನಲ್ಲಿ ವೀರ ಕಂಬಳ

ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನೀಡಿರುವ ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ವೀರ ಕಂಬಳ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಅರುಣ್ ರೈ ತೋಡರ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ವೀರ ಕಂಬಳ ಕನ್ನಡ ಹಾಗೂ ತುಳು ಭಾಷೆಗಳಲ್ಲಿ ಮೂಡಿಬರುತ್ತಿದೆ. ವೀರ ಕಂಬಳ ಚಿತ್ರಕ್ಕೆ ದೂರದ ದುಬೈನಲ್ಲಿ ಚಿತ್ರೀಕರಣ ನಡೆಸಲಾಗಿದೆ. ನಟ ಆದಿತ್ಯ, ಶೋಭರಾಜ್ ಮುಂತಾದವರು ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು.

ಕಂಬಳ ದಕ್ಷಿಣ ಕನ್ನಡದ ಪ್ರಸಿದ್ಧ ಕ್ರೀಡೆ. ಇದನ್ನೇ ಮುಖ್ಯವಾಗಿಟ್ಟುಕೊಂಡು ರಾಜೇಂದ್ರ ಸಿಂಗ್ ಬಾಬು ವೀರ ಕಂಬಳ ಚಿತ್ರದ ಕಥೆ ಬರೆದ್ದಾರೆ. ಈ ಚಿತ್ರ ಕನ್ನಡದಲ್ಲಿ ವೀರ ಕಂಬಳ ಎಂದು ಹಾಗೂ ತುಳುವಿನಲ್ಲಿ ಬಿರ್ದುದ ಕಂಬಳ ಎಂಬ ಶೀರ್ಷಿಕೆಯಲ್ಲಿ ತೆರೆಗೆ ಬರಲಿದೆ. ಪ್ರಕಾಶ್ ರೈ, ರವಿಶಂಕರ್, ನವಿನ್ ಪಡಿಲ್, ಗೋಪಿನಾಥ್ ಭಟ್, ರಾಧಿಕಾ ಚೇತನ್, ಅರುಣ್ ರೈ ಮುಂತಾದವರು ತಾರಾಗಣದಲ್ಲಿದ್ದಾರೆ.

ವಿಜಯ್ ಕುಮಾರ್ ಕೆಡಿಯಾಲ್ ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದು, ಮಣಿಕಾಂತ್ ಕದ್ರಿ ಸಂಗೀತ ಸಂಯೋಜಿಸಿದ್ದಾರೆ. ಆರ್.ಗಿರಿ ಛಾಯಾಗ್ರಹಣ, ಶ್ರೀನಿವಾಸ್.ಪಿ.ಬಾಬು ಸಂಕಲನ, ಮದನ್, ಹರಿಣಿ ನೃತ್ಯ ನಿರ್ದೇಶನ, ಡಿಫರೆಂಟ್ ಡ್ಯಾನಿ, ಮಾಸ್ ಮಾದ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಚಿತ್ರ: ಒಲವಿನ ಪಯಣ
ನಿರ್ದೇಶನ: ಕಿಶನ್ ಬಲ್ನಾಡ್
ನಿರ್ಮಾಣ: ನಾಗರಾಜ್.ಎಸ್.ಮುಳಗುಂದ
ತಾರಾಗಣ: ಸುನಿಲ್, ಕುಶಿ, ಪ್ರಿಯಾ ಹೆಗ್ಡೆ, ಪದ್ಮಜಾ ರಾವ್, ನಾಗೇಶ್ ಮಯ್ಯ, ಬೇಬಿ ರಿಧಿ ಮುಂತಾದವರು.
ರೇಟಿಂಗ್ : ★★★

ಸಮರಸವೇ ಬದುಕಿನ ಸೂತ್ರ ಯಾರಿಗೂ ಗೊತ್ತಾಗದಂತೆ

ಪ್ರೀತಿಸುತ್ತಿದ್ದವರು, ಮುಂದೆ ಮನೆಯವರನ್ನು ಧಿಕ್ಕರಿಸಿ ಮದುವೆಯಾಗುತ್ತಾರೆ. ಅಲ್ಲಿವರೆಗೂ ಒಲವೆ ಜೀವನ ಸಾಕ್ಷಾತ್ಕಾರ ಎನ್ನುತ್ತಿದ್ದವರು, ಗೃಹಸ್ಥಾಶ್ರಮ ಸೇರಿದ ಬಳಿಕ ಹೇಗಿರುತ್ತಾರೆ.. ಮದುವೆಗೆ ಮುನ್ನ ಇದ್ದ ಪ್ರೀತಿ, ಆನಂತರವೂ ಇರುತ್ತದಯೆ, ಮದುವೆಯ ಬಗ್ಗೆ ಸಂಸಾರದಲ್ಲಿ ಸರಸ ವಿರಸ ಹೇಗಿರುತ್ತದೆ ಎಂಬುದನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಜೀವನಪೂರ್ತಿ ಸಂತೋಷವಾಗಿದ್ದವರ ಬಾಳಿನಲ್ಲಿ ಸುಂಟರಗಾಳಿ ಬೀಸಿದರೆ ಬದುಕು ಏನಾಗಬಹುದು, ಅವರಿಬ್ಬರ ಒಲವಿಗೆ ಸಾಕ್ಷಿಯಾಗಿದ್ದ ಪುಟ್ಟ ಕಂದಮ್ಮನ ಪಾಡೇನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಸುನೀಲ್, ಕುಶಿ, ಪ್ರಿಯಾ ಹೆಗ್ಡೆ ತಮ್ಮ ಪಾತ್ರಕ್ಕೆ ಜೀವತುಂಬಿ ಅಭಿನಯಿಸಿದ್ದಾರೆ. ಪದ್ಮಜಾ ರಾವ್, ನಾಗೇಶ್ ಮಯ್ಯ, ಪೃಥ್ವಿರಾಜ್, ಬೇಬಿ ರಿಧಿ ತಮ್ಮ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ.

ಜೀವನದ ಅರ್ಥ ತಿಳಿಸುವ ಸುಂದರ ಕಥೆಯನ್ನು ಹೆಣೆದು ಎಲ್ಲರಿಗೂ ಇಷ್ಟವಾಗುವಂತೆ ಕಟ್ಟಿಕೊಡುವಲ್ಲಿ ನಿರ್ದೇಶಕ ಕಿಶನ್ ಬಲ್ನಾಡ್ ಯಶಸ್ವಿಯಾಗಿದ್ದಾರೆ. ಸಿನಿಮಾದಲ್ಲಿ ಹಾಡಿಗೆ ಕೊರತೆಯಿಲ್ಲ ಮಲೆನಾಡಿನ ಸುಂದರ ಪರಿಸರದಲ್ಲಿ ಸೆರೆಯಾಗಿರುವ ದೃಶ್ಯಗಳು ಮನಸಿಗೆ ಮುದನೀಡುತ್ತವೆ. ಸಂಗೀತಕ್ಕೂ ಪೂರ್ತಿ ಅಂಕ ನೀಡಬಹುದು. ಒಲವೆ ಪಯಣ ಎಲ್ಲರೂ ನೋಡಬೇಕಾದ ಸುಂದರ ಕೌಟುಂಬಿಕ ಸಿನಿಮಾವಾಗಿದೆ.



ಶುರುವಾಯ್ತು ನೀಲ್ ಹೈವೋಲ್ಟೇಜ್ ಸಿನಿಮಾ

ಕೆಜಿಎಫ್ ಸಿನಿಮಾ ಮೂಲಕ ಇಡೀ ಭಾರತೀಯ ಚಿತ್ರವೇ ಸ್ಯಾಂಡಲ್‌ವುಡ್‌ನತ್ತ ತಿರುಗಿ ನೋಡುವಂತೆ ಮಾಡಿದ ನಿರ್ದೇಶಕ ಪ್ರಶಾಂತ್ ನೀಲ್, ಸಲಾರ್ ಮೂಲಕವೂ ಕಮಾಲ್ ಮಾಡಿದರು. ಈಗ ಸಲಾರ್ 2 ಚಿತ್ರದಲ್ಲಿಯೂ ಬ್ಯುಸಿಯಾಗಿದ್ದಾರೆ. ಈ ನಡುವೆಯೇ ಜೂ.ಎನ್‌ಟಿಆರ್ ಅಭಿನಯದ ಹೊಸ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದ ಶೂಟಿಂಗ್ ಶುರುವಾಗಿದ್ದು, ಎರಡು ಸಾವಿರಕ್ಕೂ ಹೆಚ್ಚು ಸಹ ಕಲಾವಿದರು ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ಇದನ್ನು ನೋಡಿದರೆ ಇದು ಭರ್ಜರಿ ಆ್ಯಕ್ಷನ್ ಸಿನಿಮಾ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಆ್ಯಕ್ಷನ್ ಜತೆಗೆ ಪೊಲಿಟಿಕಲ್ ಡ್ರಾಮಾ ಕೂಡ ಇದೆ ಎಂಬುದು ತಿಳಿಯುತ್ತದೆ.

ಸದ್ಯ ಮೊದಲ ಹಂತದ ಶೂಟಿಂಗ್ ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಯಲ್ಲಿ ಭರದಿಂದ ಸಾಗಿದ್ದು, ಬಳಿಕ ಎರಡನೇ ಹಂತದ ಚಿತ್ರೀಕರಣ ಆರಂಭವಾಗಲಿದೆ. ಈ ಹಂತದಲ್ಲಿ ಜೂ.ಎನ್‌ಟಿಆರ್ ಚಿತ್ರತಂಡ ಸೇರಲಿದ್ದಾರೆ. ಇದು ಹೈಬಜೆಟ್‌ನಲ್ಲಿ ಮೂಡಿಬರುತ್ತಿದ್ದು, ಮೈತ್ರಿಮೂವಿ ಮೇಕರ್ಸ್‌ನಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ. ಈ ಹೊಸ ಸಿನಿಮಾ ಮುಂದಿನ ವರ್ಷದ ಜನವರಿ 9 ರಂದು ತೆರೆಗೆ ಬರಲಿದೆ. ಆರ್‌ಆರ್‌ಆರ್ ಸಿನಿಮಾದ ಬಳಿಕ ಭರ್ಜರಿ ಬೇಡಿಕೆ ಪಡೆದಿರುವ ಜೂ.ಎನ್‌ಟಿಆರ್ ಬಾಲಿವುಡ್‌ನಲ್ಲಿಯೂ ಡಿಮ್ಯಾಂಡ್ ಪಡೆದಿದ್ದಾರೆ. ಹೃತಿಕ್ ರೋಷನ್ ಅಭಿನಯದ ವಾರ್ 2 ಚಿತ್ರದಲ್ಲಿ ಜೂ.ಎನ್‌ಟಿಆರ್ ಅಭಿನಯಿಸುತ್ತಿದ್ದಾರೆ. ವಾರ್ 2ನಲ್ಲಿ ಹದಿನೈದು ನಿಮಿಷಗಳ ಭರ್ಜರಿ ಸಾಹಸ ಸನ್ನಿವೇಶವಿದೆ.

ಜನ ಮೆಚ್ಚಿದ ಫಾರೆಸ್ಟ್

ಅಡ್ವೆಂಚರ್ಸ್ ಕಾಮಿಡಿ ಕಥಾಹಂದರ ಒಳಗೊಂಡಿರುವ ಹಾಗೂ ತಮ್ಮ ಅಭಿನಯದ ಮೂಲಕ ಅಭಿಮಾನಿಗಳ ಮನ ಗೆದ್ದಿರುವ ಚಿಕ್ಕಣ್ಣ, ಅನೀಶ್ ತೇಜೇಶ್ವರ್, ಗುರುನಂದನ್, ರಂಗಾಯಣ ರಘು ಅವರಂಥ ಸ್ಟಾರ್ ಕಲಾವಿದರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ ಮಲ್ಟಿ ಸ್ಟಾರರ್ ಫಾರೆಸ್ಟ್ ಚಿತ್ರ ಬಿಡುಗಡೆಯಾಗಿ 25 ದಿನಗಳಾಗಿದೆ. ಕರ್ನಾಟಕದ ಕೆಲವು ಚಿತ್ರಮಂದಿರಗಳಲ್ಲಿ ಯಶಸ್ವಿ 25 ದಿನಗಳನ್ನು ಪೂರೈಸಿದ ಈ ಚಿತ್ರ 50 ದಿನಗಳತ್ತ ಹೆಜ್ಜೆ ಹಾಕುತ್ತಿದೆ. ಕಲಾವಿದರ ಅದ್ಭುತ ನಟನೆಗೆ ಅಭಿಮಾನಿಗಳು ಫಿದಾ ಆಗಿದ್ದಾರೆ.

ಸಿನಿಮಾ ಬಗ್ಗೆ ಅಪಾರ ಪ್ರೀತಿ ಹೊಂದಿರುವ ಎನ್‌ಎಂ ಕಾಂತರಾಜ್ ಅವರು ಎನ್.ಎಂ.ಕೆ. ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ಫಾರೆಸ್ಟ್ ಚಿತ್ರವನ್ನು ನಿರ್ಮಿಸಿದ್ದು, ಚಿತ್ರ 25 ದಿನಗಳನ್ನು ಪೂರೈಸಿರುವ ಸಂದರ್ಭದಲ್ಲಿ ಸಂತಸಗೊಂಡಿರುವ ನಿರ್ಮಾಪಕರು ಚಿತ್ರತಂಡಕ್ಕೆ ಹಾಗೂ ನಾಡಿನ ಜನತೆಗೆ ಧನ್ಯವಾದ ತಿಳಿಸಿದ್ದಾರೆ. ಮುಂದೆ ಕೂಡ ಸದಭಿರುಚಿಯ ಚಿತ್ರಗಳನ್ನು ನಿರ್ಮಿಸುವುದಾಗಿಯೂ ಎನ್ ಎಂ ಕಾಂತರಾಜ್ ತಿಳಿಸಿದ್ದಾರೆ. ಚಂದ್ರಮೋಹನ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರಕ್ಕೆ ಸತ್ಯಶೌರ್ಯ ಸಾಗರ್ ಹಾಗೂ ಚಂದ್ರಮೋಹನ್ ಕಥೆ, ಚಿತ್ರಕಥೆ ರಚಿಸಿದ್ದಾರೆ. ಸತ್ಯಶೌರ್ಯ ಸಾಗರ್ ಅವರೆ ಸಂಭಾಷಣೆಯನ್ನೂ ಬರೆದಿದ್ದಾರೆ.

ಧರ್ಮವಿಶ್ ಸಂಗೀತ ನಿರ್ದೇಶನ, ಆನಂದ್ ರಾಜಾ ವಿಕ್ರಮ್ ಅವರ ಹಿನ್ನೆಲೆ ಸಂಗೀತ, ರವಿಕುಮಾರ್ ಛಾಯಾಗ್ರಹಣ, ಅರ್ಜುನ್ ಕಿಟ್ಟು ಅವರ ಸಂಕಲನ, ಅಮರ್ ಅವರ ಕಲಾ ನಿರ್ದೇಶನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಚಿಕ್ಕಣ್ಣ, ಅನಿಶ್ ತೇಜೇಶ್ವರ್, ಗುರುನಂದನ್, ರಂಗಾಯಣ ರಘು, ಶರಣ್ಯ ಶೆಟ್ಟಿ, ಅರ್ಚನಾ, ಅವಿನಾಶ್, ಪ್ರಕಾಶ್ ತುಮ್ಮಿನಾಡು, ದೀಪಕ್ ರೈ, ಪಾಣಂಜೆ, ಸೂರಜ್ ಪಾಪ್ಸ್, ಸನೀಲ್‌ಕುಮಾರ್ ಮುಂತಾದರು ತಾರಾಗಣದಲ್ಲಿದ್ದಾರೆ,

ಕಿರುತೆರೆಯಲ್ಲಿ ಭರ್ಜರಿ ಬ್ಯಾಚುಲರ್ಸ್

ಕಿರುತೆರೆಯಲ್ಲಿ ರಿಯಾಲಿಟಿ ಶೋಗಳದ್ದೇ ಸದ್ದು, ವಾರಾಂತ್ಯದಲ್ಲಿ ಸಾಲು ಸಾಲು ಸಾಲು ರಿಯಾಲಿಟಿ ಶೋಗಳು ಪ್ರಸಾರವಾಗುತ್ತವೆ. ಅವುಗಳಲ್ಲಿ ಭರ್ಜರಿ ಬ್ಯಾಚುಲರ್ಸ್ ಕಾರ್ಯಕ್ರಮವೂ ಒಂದು. ಭರ್ಜರಿ ಬ್ಯಾಚುಲರ್ಸ್ ಸಿಸನ್ 1 ರ ಯಶಸ್ಸಿನ ಬಳಿಕ ಮತ್ತಷ್ಟು ವಿಭಿನ್ನವಾಗಿ, ಎಂಟರ್‌ಟೇನಿಂಗ್ ಆಗಿ ಬರುತ್ತಿದೆ. ಬ್ಯಾಚುಲರ್ಸ್‌ಗೆ ಭರ್ಜರಿ ಆಗಿ ಪ್ರೀತಿ ಪಾಠ ಮಾಡಲು ಸ್ಯಾಂಡಲ್‌ವುಡ್‌ನ ಕ್ರೇಜಿಸ್ಟಾರ್ ವಿ. ರವಿಚಂದ್ರನ್ ಜತೆಗೆ ನಟಿ ರಚಿತಾ ರಾಮ್ ಇರಲಿದ್ದಾರೆ. ವಿಭಿನ್ನ ನಿರೂಪಣಾ ಶೈಲಿಯಿಂದ ಕನ್ನಡಿಗರ ಮನಗೆದ್ದ ನಿರಂಜನ್ ದೇಶಪಾಂಡೆ ಕಾರ್ಯಕ್ರಮದ ನಿರೂಪಣಾ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಡ್ರೋನ್ ಪ್ರತಾಪ್, ಹುಲಿ ಕಾರ್ತಿಕ್, ಪ್ರವೀಣ್ ಜೈನ್, ಭುವನೇಶ್, ಸುನಿಲ್, ದರ್ಶನ್ ನಾರಾಯಣ್, ಸೂರ್ಯ, ಉಲ್ಲಾಸ್, ರಕ್ಷಕ್ ಬುಲೆಟ್ ಬ್ಯಾಚುಲರ್‌ಗಳಾಗಿ ಕಾಣಿಸಿಕೊಳ್ಳಲಿದ್ದಾರೆ. ಭರ್ಜರಿ ಬ್ಯಾಚುಲರ್ಸ್ ಇಂದಿನಿಂದ ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿದೆ.